


ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು

# ಶುಭಘಳಿಗೆ

ಕೌಂಡಿನ್ಯ

**ಬಿನಕ ಪಬ್ಲಿಕೇಷನ್**

ನಂ. 390/ಎ, 5ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ,
ಬನಶಂಕರಿ ಮೊದಲನೇಹಂತ, 2ನೇ ಘಟ್ಟ, ಬೆಂಗಳೂರು - 560 050

**SHUBHA GALIGE :** A novel by Koundinya, Published by, Benaka Publication, No. 390/A, 5th Main Road, 1St Cross, B.S.K. 1st Stage, 2nd Block, Bangalore - 50

ಹಕ್ಕುಗಳು : **ಕೌಂಡಿನ್ಯ**

ಪುಟಗಳು : 168

9034 03CR

ಮೊದಲ ಮುದ್ರಣ : 2000

ಬೆಲೆ. ರೂ : **80-00**

ಮುಖ ಪುಟ : ಶ್ರೀ ಪಾದ

ಮುದ್ರಣ :
ಚಂದನ ಪ್ರಿಂಟರ್ಸ್
ರಾಮಾಂಜನೆಯ ಮುಖ್ಯರಸ್ತೆ
ಶ್ರೀನಗರ ಬೆಂಗಳೂರು - 19

# ಶುಭ ಘಳಿಗೆ

ಬೆಳಗಿನ ಆರು ಗಂಟೆಯ ಸಮಯ!

ತುಂಬಾ ಮೆಲು ಧ್ವನಿಯಲ್ಲಿ ಜೇಸುದಾಸ್ ಸಂಗೀತ ಕೇಳಿ ಬರುತ್ತಿದೆ. ಮಂಚದ ಪಕ್ಕದಲ್ಲಿ ಇರುವ ಟೇಬಲ್ಲಿನ ಮೇಲೆ ಟೇಪ್‌ರೆಕಾರ್ಡರ್ ಇದೆ.

ಅವನು ಮಂಚದ ಮೇಲೆ ಮಲಗಿಕೊಂಡಿದ್ದಾನೆ. ನಿದ್ರಿಸುತ್ತಿಲ್ಲ. ಸಂಗೀತ ಸುಧೆಯನ್ನು ಅನುಭವಿಸುತ್ತಿದ್ದಾನೆ. ಇದೊಂದು ಅಪರೂಪದ ರಸಾನುಭವ.

ಅವನೇ ಸೂರ್ಯ!

ಪ್ರೊಫೆಸರ್ ಸೂರ್ಯ!

ಪ್ರೊಫೆಸರ್ ಎಂದ ತಕ್ಷಣ ಅವನಿಗೆ ಐವತ್ತರ ಪ್ರಾಯ ಆಗಿರುತ್ತದೆ. ತಲೆಯ ಕೂದಲು ಬೆಳ್ಳಗಾಗಿರುತ್ತದೆ. ಒಂದು ರೀತಿಯ ಆ್ಯಬ್‌ಸಂಟ್ ಮೈಂಡ್ ಎಂದು ನಾವು ಊಹಿಸುತ್ತೇವೆ ಇವನು ಆ ಸೂರ್ಯ ಅಲ್ಲ!

ಇವನ ಪ್ರಾಯ ಮೂವತ್ತು!

ದಿನ ನಿತ್ಯ ವ್ಯಾಯಾಮ ಮಾಡಿರುವ ಕಟ್ಟುಮಸ್ತಾದ ಆರೋಗ್ಯವಂತ ಶರೀರ!

ಮುಖದಲ್ಲಿ ಕಿರುನಗೆ ಇರುತ್ತದೆ. ಅದರೊಂದಿಗೆ ವೃತ್ತಿಗೆ ಸಹಜವಾದ ಗಾಂಭೀರ್ಯತೆ ಇದೆ!

ತುಂಬಾ ಚಿಕ್ಕ ವಯಸ್ಸಿಗೆ ಸತತ ಪರಿಶ್ರಮ ಮತ್ತು ಪ್ರತಿಭೆಯಿಂದ ಪ್ರೊಫೆಸರ್ ಆಗಿದ್ದನು. ಇವನನ್ನು ಕಂಡರೆ ಕಾಲೇಜಿನಲ್ಲಿ ಎಲ್ಲರಿಗೂ ಗವರವ!

ಸೂರ್ಯ ಎದ್ದನು. ತನ್ನ ಟೇಪ್ ರೆಕಾರ್ಡರ್‌ಅನ್ನು ಎತ್ತಿಕೊಂಡೇ ಬಂಗಲೆಯ ಬಿಸಿಲು ಮಚ್ಚಿಗೆ ಬಂದು ಯೋಗಾಸನ ಪ್ರಾರಂಭಿಸಿದನು.

ಸಂಗೀತ ಕೇಳಿ ಬರುತ್ತಿದೆ.

ಸೊಗಸಾದ ಸಂಗೀತ!

ತಂಪಾಗಿ ಬೀಸುತ್ತಿರುವ ಗಾಳಿ!

ಬೆಳಗಿನ ಹಿತವಾದ ವಾತಾವರಣ!

ಇದನ್ನು ಎಂಜಾಯ್ ಮಾಡಬೇಕು. ಮೊದಲು ಅಂತಹ ಮನಸ್ಸನ್ನು ಬೆಳೆಸಿಕೊಳ್ಳಬೇಕು.

ಸೂರ್ಯ ಹನುಮನಾನ್ ಚಡ್ಡಿ ಧರಿಸಿಕೊಂಡು ಸುಮಾರು ಒಂದು ಗಂಟೆಯ ಕಾಲ ವ್ಯಾಯಾಮ ಮಾಡಿದನು. ದೇಹ ನವುರಾಗಿ ಬೆವರುತ್ತಿದೆ.

ಆಗ ಕೇಳಿ ಬಂದಿತು ಬಂಗಲೆಯ ಒಳಗಿನಿಂದ ಇವನ ತಾಯಿಯ ಧ್ವನಿ!

''ಸೂರ್ಯ...ಆಯ್ತೇನೋ...''

''ಹಾಂ...ಊಂ...ಬಂದೇ...'' ಎನ್ನುತ್ತಾ ಲುಂಗಿ ಸುತ್ತಿಕೊಂಡು ಒಳಗೆ ಬಂದನು.

ಅಡುಗೆ ಮನೆಯಲ್ಲಿ ಕುಳಿತು ತರಕಾರಿಯನ್ನು ಹೆಚ್ಚುತ್ತಿದ್ದ ಮಂಗಳಮ್ಮ ಮಗನ ಕಡೆ ನೋಡಿದರು. ಪೈಲ್ವಾನನಂತಹ ದೇಹದ ಮಗನನ್ನು ಕಂಡು ಅವರ ಮುಖ ಅರಳಿತು. ಅವರು ಕೂಡಲೇ ಸಾವರಿಸಿಕೊಂಡು, ''ನನ್ನ ಕಣ್ಣೇ ನಿನಗೆ ತಗುಲುತ್ತೆ ಮೊದಲು ಹೋಗಿ ಬಟ್ಟೆ ಹಾಕಿಕೊಳ್ಳೋಸೂರ್ಯ''

ಸೂರ್ಯ ನಗುತ್ತಾ ತಾಯಿಯ ಹತ್ತಿರ ಬಂದು ಆಕೆಯನ್ನು ಬಿಗಿಯಾಗಿ ತಬ್ಬಿಕೊಂಡನು.

ಮಂಗಳಮ್ಮ ಗಾಬರಿಯಿಂದ ''ಲೋ...ಲೋ ಈಳಿಗೆ ಮಣೆ ಇದೆ ಕಣೋ...ಏನೋ ನಿನ್ನ ಹುಡುಗಾಟ...ಕಾಲೇಜಿಗೆ ಹೇತ್ತಾಗುತ್ತೆ ಹೇರಡೋ...''

ಸೂರ್ಯ ಗಾಬರಿಯಿಂದ ''ಓ...ಹೌದಲ್ವ'' ಎನ್ನುತ್ತಾ ಬಾತ್‌ರೂಮಿನ ಕಡೆ ನಡೆದನು.

ತಣ್ಣೀರಿನ ಸ್ನಾನ ಮಾಡುತ್ತಿದ್ದಾನೆ!

ಆರೋಗ್ಯಕ್ಕೆ ಒಳ್ಳೆಯದು ಅಂತ ನಿತ್ಯವೂ ಇದೇ ಅಭ್ಯಾಸ ರೂಢಿಸಿಕೊಂಡು ಬಂದಿದ್ದಾನೆ. ವಾರಕ್ಕೆ ಒಂದು ಸಲ ಅಭ್ಯಂಜನಕ್ಕೆ ಬಿಸಿ ನೀರು.

ಸೂರ್ಯ ಸ್ನಾನ ಮುಗಿಸಿ ಡ್ರೆಸ್ ಮಾಡಿಕೊಂಡು ಹೊರಗೆ ಬಂದನು.

ಗ್ರೇ ಕಲರ್ ಸೂಟ್ ಧರಿಸಿದ್ದನು ಸೂರ್ಯನಿಗೆ ಸೂಟ್ ಧರಿಸುವುದೆಂದರೆ ಮೊದಲಿನಿಂದಲೂ ಇಷ್ಟ. ಆದರೆ ಅವರ ಸ್ಟೂಡೆಂಟ್ಸ್ ಗೇಲಿ ಮಾಡುತ್ತಿದ್ದರು.

ಈಗಿನ ಕಾಲದಲ್ಲಿ ಯಾರು ಸೂಟ್ ಧರಿಸುತ್ತಾರೆ. ಇದು 1950ನೇ ಇಸವಿಯ ಮಾಡೆಲ್, ಓಲ್ಡ್‌ಗಾಡಿ ಎಂದು ಹುಡುಗಿಯರು ರೇಗಿಸುತ್ತಿದ್ದರು.

ಆದರೆ ಇನ್ನು ಕೆಲವರು ಈ ತ್ರೀಪೀಸ್ ಸೂಟ್‌ನಲ್ಲಿ ಪ್ರೊಫೆಸರ್ ತುಂಬಾ ಮುದ್ದಾಗಿ ಕಾಣುತ್ತಾರೆ, ಸೊಗಸಾದ ಕಾಂಬಿನೇಷನ್! ಎನ್ನುತ್ತಿದ್ದರು.

ಸೂರ್ಯನನ್ನು ಮೆಚ್ಚಿಕೊಳ್ಳದವರೇ ಇಲ್ಲ. ಕೆಲವು ಹುಡುಗಿಯರಂತೂ ಕಾಲೇಜಿಗೆ ಬರುತ್ತಿದ್ದುದೇ ಸೂರ್ಯನ ಅಂದ ಕಂಡು ಆನಂದಿಸಲು.

ಸೂರ್ಯನ ಕೊಲ್ಲಿಗ್ಸ್ ಹಾಸ್ಯ ಮಾಡುತ್ತಿದ್ದರು. 'ಸಾರ್...ನೀವು ಬೇಗ

ಮದುವೆ ಆಗದೆ ಇದ್ದರೆ ಈ ಕಾಲೇಜಿನ ಹುಡುಗಿಎರು ನಿದ್ದೆ ಮತ್ತು ನೆಮ್ಮದಿ ಹಾಳು ಮಾಡಿಕೊಳ್ಳುತ್ತಾರೆ'

ಮುಗುಳು ನಗೆಯೇ ಸೂರ್ಯನ ಉತ್ತರ!

ಸೂರ್ಯ ಡೈನಿಂಗ್ ಟೇಬಲ್ ಕಡೆ ಬಂದನು. ಅವನ ತಾಯಿ ತಿಂಡಿಗೆ ರೆಡಿ ಮಾಡಿದ್ದನು. ಅಂದು ರಾಗಿಯ ರೊಟ್ಟಿ, ಕಾಯಿ ಚಟ್ನಿ ಮತ್ತು ಮೊಸರು. ಅದರೊಂದಿಗೆ ನಂಚಿಕೊಳ್ಳಲು ಈರುಳ್ಳಿ! ಕ್ಯಾಬೇಜ್‌ತುರಿ, ಜೀರಿಗೆ, ಸಂಬಾರ ಸೊಪ್ಪು ಮತ್ತು ಈರುಳ್ಳಿಯನ್ನು ಸಣ್ಣಗೆ ಹೆಚ್ಚಿ ರೊಟ್ಟಿಗೆ ಹಾಕಿದ್ದರು. ಸೊಗಸಾದ ಮಸಾಲೆ ರಾಗಿ ರೊಟ್ಟಿ.

ಸ್ರ್ರ್ಯಯ ತಿನ್ನಲು ಕುಳಿತರೆ ಆರರಿಂದ ಏಳು ರೊಟ್ಟಿಗಳನ್ನು ತಿನ್ನುತ್ತಿದ್ದನು. ಒಂದು ದಿನ ಅರ್ಧ ಕಡಿಮೆಯಾದರೂ ಸಹ ಈ ತಾಯಿಗೆ ಗಾಬರಿಯಾಗುತ್ತಿತ್ತು.

ಸೂರ್ಯ ರೆಡಿಯಾದನು!

ಆಗ ಅವನ ದೂಷ್ಟಿ ಟೇಬಲ್ಲಿನ ಮೇಲೆ ಇದ್ದ ಫೋಟೋದ ಮೇಲೆ ಹರಿಯಿತು.

ಅದು ಯುವತಿಯೊಬ್ಬಳ ಫೋಟೋ!

ತುಂಬಾ ವರ್ಷಗಳ ಹಿಂದೆ ತೆಗೆದಿದ್ದ ಫೋಟೋ ಅದು. ಈಗಲೂ ಅವಳು ಯುವತಿಯಾಗಿರಲು ಸಾಧ್ಯವಿಲ್ಲ!

ಮಂಗಳಮ್ಮ ಸಹ ಅದನ್ನು ನೋಡಿದರು ನಿಟ್ಟುಸಿರು ಹೊರಬಂದಿತು!

ಕಣ್ಣುಗಳು ಹನಿಗೂಡಿದವು.

ಸೂರ್ಯ ತಾಯಿಯ ಕಡೆ ತಿರುಗಿ ಮೃದುವಾಗಿ ಆಕೆಯ ಕೈಯನ್ನು ಅದುಮಿ ''ಅಮ್ಮಾ...ನಿನಗೆ ಮಗಳ ನೆನಪು ಕಾಡುತ್ತಿರುವುದೆ?''

ಅಳುತ್ತಲೇ ತಲೆಯಾಡಿಸಿದರು.

ಸೂರ್ಯ ''ನನಗೂ ಸಹ ನನ್ನ ಅಕ್ಕನನ್ನು ನೋಡಬೇಕು ಅಂತ ಆಸೆ ಇದೆ''

ಮಂಗಳಮ್ಮ ''ಸೂರ್ಯ...ಅವಳು ಇದೇ ಊರಿನಲ್ಲಿ ಇದ್ದಾಳೆ ಅಂತ ಸುದ್ದಿ ಬಂದಿದೆ. ನಾವು ಈ ಊರಿಗೆ ಬಂದು ಹದಿನೈದು ದಿನಗಳಾದರೂ ಸಹ ಕಂಡು ಬಂದಿಲ್ಲ. ನೀನು ಒಂದೆರಡು ದಿನ ರಾಜ ಹಾಕಿ ಹುಡುಕೋ...''

ಸೂರ್ಯ ನಗುತ್ತಾ ''ಅಮ್ಮಾ...ಒಂದೆರಡು ದಿನದಲ್ಲಿ ಹುಡುಕಲು ಇದೇನು ಹೊಳೆನರಸೀಪುರ ಅಲ್ಲ. ನೋಡು...ಈ ಮಾಯಾನಗರದಲ್ಲಿ ಅಡ್ರೆಸ್ ಇದ್ದರೂ ಹುಡುಕಲು ಸರ್ಕಸ್ ಮಾಡಬೇಕು. ಅಂದಮೇಲೆ ಎಲ್ಲೋ ಇರುವ ನಿನ್ನ ಮಗಳನ್ನು ಒಲೀಂತ ಹುಡುಕಲು ಸಾಧ್ಯ ಕಾಲ ಕೂಡಿ ಬಂದಾಗ ಸೂರ್ಯ.

ಅವಳಾಗಿಯೇ ನಮಗೆ ಕಾಣಿಸುತ್ತಾಳೆ ಬಿಡು...''

ಮಂಗಳಮ್ಮ ದುಃಖ, ಕೋಪದಿಂದ ''ನೀವು ಗಂಡಸರು ಸುಲಭವಾಗಿ ಅಂದು ಬಿಡುತ್ತೀರಿ. ಆದರೆ ಹೆತ್ತ ಕರುಳಿನ ಸಂಕಟ ನಿನಗೆ ಹೇಗೆ ಅರ್ಥವಾಗಬೇಕು''

ಸೂರ್ಯ ''ಹಾಗಲ್ಲ ಅಮ್ಮಾ...ಲಕ್ಷಾಂತರ ಜನಗಳಿರುವ ಈ ನಗರದಲ್ಲಿ ಎಲ್ಲಿ ಅಂತ ಹುಡುಕಲು ಸಾಧ್ಯ? ಪೋಲೀಸರಿಗೆ ಕಂಪ್ಲೇಟ್ ಕೊಡೋಣ ಅಂದರೆ ಇದು ಈ ರೀತಿಯ ಪ್ರಕರಣ ಅಲ್ಲ''

ಮಂಗಳಮ್ಮ ಮಂಕಾದರು.

ಇದು ಇಪ್ಪತ್ತು ವರ್ಷಗಳ ಹಿಂದಿನ ಪ್ರಕರಣ ಮಂಗಳಮ್ಮನ ಮಗಳು ಪಂಕಜ ಬೇರೆ ಜಾತಿಯ ಯುವಕನನ್ನು ಪ್ರೀತಿಸಿ ಅವನೊಂದಿಗೆ ಹೇಳದೆ ಕೇಳದೆ ಓಡಿ ಹಿಗಿದ್ದಳು. ಅಂದಿನಿಂದ ಸುದ್ದಿ ಬರುತ್ತಲೇ ಇತ್ತು.

ಪಂಕಜಳಿಗೆ ಮದುವೆಯಾದ ಸುದ್ದಿ. ಅವಳಿಗೆ ಒಂದು ಮಗು ಆಗಿರುವ ಸುದ್ದಿ!

ಪಂಕಜ ಮದುವೆಯಾಗಿರೋದು ಶ್ರೀಮಂತ ಮನೆತನದ ಯುವಕನನ್ನು!

ಅವಳೇನೋ ಸುಖವಾಗಿದ್ದಳು. ಆದರೆ ಒಂದೇ ಒಂದು ಸಲವೂ ತಾಯಿಯನ್ನು ನೋಡಲು ಬಂದಿರಲಿಲ್ಲ! ಅದಕ್ಕೆ ಕಾರಣ ಮಂಗಳಮ್ಮ!

ತನ್ನ ತಪ್ಪು ಅರಿವಾಗಿ ಪಂಕಜ ತನ್ನ ಗಂಡನನ್ನು ಕರೆದುಕೊಂಡು ಬಂದಿದ್ದಳು. ಆದರೆ ಕೋಪ ಆವೇಶದಿಂದ ಮಂಗಳಮ್ಮ ಬೈದಿದ್ದರು!

ಅಳಿಯನಿಗೆ ಅವಮಾನ ಮಾಡಿದ್ದರು!

ಪಂಕಜ ಅಂದೇ ತನ್ನ ತಾಯಿಯ ಎದುರಿಗೆ ಪ್ರತಿಜ್ಞೆ ಮಾಡಿದ್ದಳು. ಇನ್ನಾವತ್ತೂ ನಿನ್ನನ್ನು ನೋಡಲು ಬರುವುದಿಲ್ಲ ಅಂತ!

ಆಗ ಸೂರ್ಯ ಇನ್ನೂ ಚಿಕ್ಕವನು. ಅವನಿಗೆ ಅಕ್ಕ ಎಂದರೆ ಪ್ರಾಣ. ಅವಳನ್ನು ತಬ್ಬಿಕೊಂಡು ಅತ್ತಿದ್ದನು. ಮಂಗಳಮ್ಮ ಅದಕೂಮ್ಮ ಸಹ ಅವಕಾಶ ನೀಡಿರಲಿಲ್ಲ!

ಈಗ ಎಲ್ಲ ನೆನಪಾಗುತ್ತಿದೆ!

ಸೂರ್ಯ ''ಅಮ್ಮಾ...ಅಕ್ಕ ಬೇರೆ ಜಾತಿಯವನನ್ನು ಮದುವೆ ಆಗಿದ್ದಾಳೆ ಅಂತ ಅಂದು ಆ ರೀತಿ ನಡೆದುಕೊಳ್ಳಬಾರದಿತ್ತು. ಗಂಡನಿಗೆ ತವರು ಮನೆಯಲ್ಲಿ ಅವಮಾನ ಆದರೆ ಹೆಣ್ಣು ಸಹಿಸುವುದಿಲ್ಲ...''

ಮಂಗಳಮ್ಮ ಅಳುತ್ತಲೇ ''ಅಂದು ನನಗೆ ವಿವೇಕ ಇರಲಿಲ್ಲ ಕಣೋ

ಏನೋ ಸಿಟ್ಟಿನಿಂದ ಅಂದ್ಬಿಟ್ಟೆ. ತಾಯಿ ನಾಲ್ಕು ಮಾತು ಅಂದಳು ಅಂತ ಈ ರೀತಿ ಸಂಬಂಧವನ್ನೇ ತೊರೆದು ಬಿಡುವುದೆ. ಮಾತು ಬರುತ್ತೆ ಹೋಗುತ್ತೆ. ಈ ರೀತಿ ಹಟ ಸಾಧನೆ ಮಾಡುತ್ತಾರೆಯೇ?''

ಸೂರ್ಯ ''ಅಮ್ಮ...ನೀನು ಅಕ್ಕನನ್ನು ಅಂದಿದ್ದರೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ನೀನು ಅಂದಿರುವುದು ಭಾವನನ್ನು! ಅದಕ್ಕೇ ಅಕ್ಕ ಈ ರೀತಿ ನಡೆದುಕೊಂಡಿದ್ದಾಳೆ. ನನಗೊಂದು ನಂಬಿಕೆ ಇದೆ. ಅಕ್ಕನಿಗೆ ಈಗ ಮೊದಲಿನ ಸಿಟ್ಟು ಇರುವುದಿಲ್ಲ. ಅವಳು ಬದಲಾಗಿರುತ್ತಾಳೆ. ನಮ್ಮನ್ನೆಲ್ಲಾ ನೋಡಬೇಕು ಅಂತ ಹಂಬಲಿಸುತ್ತಿರುತ್ತಾಳೆ''

ಆಸೆ, ಆತುರದಿಂದ ''ಹೌದಾ...! ನಿನ್ನ ಮಾತು ನಿಜವೇ ಸೂರ್ಯ...ನನ್ನ ಮಗಳನ್ನು ನಾನು ನೋಡಬೇಕು ಕಣೋ...''

''ಅಮ್ಮಾ...ಎಲ್ಲೋ ಕೆಲಸ ಮಾಡಿಕೊಂಡಿದ್ದ ನಾನು ಅಕ್ಕ ಇರುವ ಊರಿಗೇ ಬಂದಿದ್ದೇನೆ. ಇದು ಶುಭ ಸೂಚನೆ. ಅಂದಮೇಲೆ ಅಕ್ಕ ಖಂಡಿತಾ ಸಿಗುತ್ತಾಳೆ'' ಎಂದು ಕಾಫಿ ಕುಡಿದು ಹೊರಬಂದನು.

ಬೈಕ್ ಸ್ಟಾರ್ಟ್ ಮಾಡಿ ಹೋಗುತ್ತಿರುವ ಮಗನನ್ನೇ ಮಂಗಳಮ್ಮ ನೋಡುತ್ತಿದ್ದಾರೆ.

ಅದು ಕಾಲೇಜಿನ ಆವರಣ!

ಯುವಕರು ಮೂಲೆ ಮೂಲೆಗಳಲ್ಲಿ ಮರದ ಕೆಳಗೆ ನಿಂತು ಹರಟುತ್ತಿದ್ದಾರೆ.

ಯುವತಿಯರು ಹುಲ್ಲಿನ ಮೇಲೆ ವೃತ್ತಾಕಾರವಾಗಿ ಕುಳಿತು ನಗು - ನಗುತ್ತಾ ಮಾತಾಡುತ್ತಿದ್ದಾರೆ. ಪರಸ್ಪರ ರೇಗಿಸುತ್ತಿದ್ದಾರೆ.

ಕಾರಿನಿಂದ ಒಬ್ಬಳು ಇಳಿದು ಬಂದಳು. ಯುವಕರ ಕಣ್ಣುಗಳು ಅರಳಿದವು!

ಅಪ್ಸರೆಯಂತಹ ಚೆಲುವೆ!

ಸಪೂರ ಮೈ ಮಾಟದ ಎತ್ತರವಾದ ನಿಲುವಿನ ಚೆಲುವೆ! ಅಪರೂಪದ ಮೈಕಾಂತಿ!

ಹಾಲಿನ ಕೆನೆಯ ಬಣ್ಣದ ದೇಹಕಾಂತಿ!

ಅಪ್ಸರೆಯಂತಹ ಚೆಲುವೆ!

ಸಪೂರ ಮೈ ಮಾಟದ ಎತ್ತರವಾದ ನಿಲುವಿನ ಚೆಲುವೆ! ಅಪರೂಪದ ಮೈಕಾಂತಿ!

ಹಾಲಿನ ಕೆನೆಯ ಬಣ್ಣದ ದೇಹಕಾಂತಿ!

ಅವಳು ಕೆಂಪು ಬಾರ್ಡರಿನ ನೇರಳೆ ಬಣ್ಣದ ಸೀರೆ ಉಟ್ಟು ಮಿಂಚುತ್ತಿದ್ದಾಳೆ. ಕರಿ ಮೋಡದ ಮಿಂಚಿನಂತೆ ಹರಡಿಕೊಂಡಿದೆ ತಲೆಯ ಕೂದಲು! ಒಂದೇ ಒಂದು ಗುಲಾಬಿ ಮುಡಿದಿದ್ದಾಳೆ!

ಅವಳೇ ಅಪ್ಸರ!

ಶ್ರೀಮಂತ ಕುಟುಂಬದ ಚೆಲುವೆ. ಆದರೂ ಅವಳಿಗೆ ಸೀರೆ ಎಂದರೆ ಬಲು ಪ್ರಿಯ!

ಸಾಂಪ್ರದಾಯಿಕ ಚೆಲುವೆ!

ಇತ್ತೀಗಿನ ಹಿಂದಿ ಸಿನಿಮಾ ತಾರೆ ಸೋನಾಲಿ ಬೇಂದ್ರೆಯ ಹೋಲಿಕೆ ಇತ್ತು ಅವಳ ಮುಖದಲ್ಲಿ!

ಅದೇ ರೀತಿ ಲೀನ್ ಪರ್ಸನಾಲಿಟಿ!

ಎತ್ತರವಾದ ನಿನಿಲುವು!

ಅಪ್ಸರ ಕಾರಿನಿಂದ ಇಳಿದು ಹೆಜ್ಜೆ ಹಾಕಿದ ಕೂಡಲೇ ಮತ್ತೊಬ್ಬ ಹೊರ ಬಂದನು!

ಅವನೇ ಉದಯ!

ಇವಳ ಬಾಡಿಗಾರ್ಡ್ ಅಲ್ಲ. ಆದರೂ ಸದಾ ಇವಳ ಜೊತೆಯೇ ಬರುತ್ತಿದ್ದ.

ಅಪ್ಸರ ಗೆಳತಿಯರ ಗುಂಪಿನತ್ತ ಬರುವ ಮುನ್ನ ಉದಯನ ಕಡೆ ನೋಡಿ ಒಂದು ರೀತಿ ಸಿಗ್ನಲ್ ನೀಡಿದಳು. ಅವನು ಕಿರುನಗೆ ಬೀರುತ್ತಾ ತಲೆಯಾಡಿಸಿದನು.

ಅಪ್ಸರ ಗೆಳತಿಯರ ಜೊತೆ ಸೇರಿಕೊಂಡು ನಗು ನಗುತ್ತಾ ಹರಟೆ ಹೊಡೆಯಲಾರಂಭಿಸಿದಳು.

ಉದಯ ಕಾರ್ಯ ಪ್ರವರ್ತನಾದನು!

ಅಂದರೆ ದೂರದಿಂದ ಪ್ರೊಫೆಸರ್ ಸ್ವಾಮಿಯ ಬೈಕ್ ಬರುವುದನ್ನು ಕಂಡು ಕಿಡಿಯಾದನು.

ಡಿಕ್ಕಿಯಿಂದ ಸಣ್ಣ ಕ್ಯಾನನ್ನು ತೆಗೆದು ಅದರಲ್ಲಿ ಇದ್ದ ಟಾರ್ ಅನ್ನು ನೆಲದ ಮೇಲೆ ಸುರಿದನು.

ಅದು ತಿರುವಿನ ರಸ್ತೆ!

ಇಳಿಜಾರು ಬೇರೆ ಇದೆ!

ನೆಲದ ಮೇಲೆ ಟಾರು ಇರುವುದು ಸಡನ್ ಆಗಿ ಗೊತ್ತಾಗುವುದಿಲ್ಲ. ಗೊತ್ತಾದರೂ ಸಹ ಗಾಡಿಯನ್ನು ಇಳಿಜಾರಿನಲ್ಲಿ ಕಂಟ್ರೋಲ್ ಮಾಡಲು ಆಗುವುದಿಲ್ಲ.

ಎಲ್ಲರೂ ಗಾಬರಿಯಿಂದ ನೋಡುತ್ತಿದ್ದಾರೆ. ಉದಯ ಅಲ್ಲಿಂದ ಜಾಗ ಖಾಲಿ ಮಾಡಿದನು.

ಗೆಳತಿಯರ ಮಧ್ಯೆ ಅಪ್ಸರ ಈಗ ಕುತೂಹಲ, ಕಾತುರದಿಂದ ನೋಡುತ್ತಿದ್ದಾಳೆ.

ಅದರೊಂದಿಗೆ ಹಲ್ಲು ಕಡಿಯುತ್ತಿದ್ದಳು!

ಪ್ರೊಫೆಸರ್ ಸೂರ್ಯ ಕ್ಲಾಸ್‌ನಲ್ಲಿ ಎಲ್ಲರ ಎದುರಿಗೆ ಅವಮಾನ ಆಗುವಂತೆ ಮಾತಾಡಿದ್ದನು.

ಅಪ್ಸರ ಮಹಾ ಅಂದಗಾತಿ!

ಅವಳ ಕಿರುನಗೆಯ ಕೃಪೆಗಾಗಿ ಪಡ್ಡೆ ಹುಡುಗರು ಸರ್ಕಸ್ ಮಾಡುತ್ತಾರೆ!

ಅಪ್ಸರ ಶ್ರೀಮಂತ ಹೆಣ್ಣು! ಕೆಲವು ಕೋಟಿ ರೂಪಾಯಿ ಆಸ್ತಿಗೆ ಹಕ್ಕುಧಾರಿಣಿ. ಅಂದಮೇಲೆ ಅವಳಿಗೆ ಪೊಗರು ಇಲ್ಲದೆ ಇರಲು ಸಾಧ್ಯವೆ?

ತನಗೆ ಅವಮಾನ ಮಾಡಿರುವ ಪ್ರೊಫೆಸರ್ ಸೂರ್ಯನಿಗೆ ಬುದ್ಧಿ ಕಲಿಸಬೇಕು!

ಆದರೆ ಈ ರೀತಿ ಅಲ್ಲ ಬಿಡಿ!

ಆದರೆ ಮುಂಗೋಪದ ಚೆಲುವಗೆ ಇದು ತಲೆಗೆ ಹೊಗಿರಲಿಲ್ಲ. ಇವಳ ಮೆಚ್ಚುಗೆಯನ್ನು ಹೇಗಾದರೂ ಗಳಿಸಬೇಕು ಅಂತ ಸರ್ಕಸ್ ಮಾಡುತ್ತಿದ್ದ ಉದಯ! ಇವಳ ತಂದೆಯ ದೂರದ ಸಂಬಂಧಿ!

ಸಣ್ಣ ಕಾರಣ ಸಿಕ್ಕಿದರೂ ಸಹ ಇವಳನ್ನು ಪ್ರಚೋದಿಸಿ ಇವಳಿಗೆ ಸಹಾಯ ಮಾಡಲು ತಾನೇ ಮುಂದೆ ಬರುತ್ತಿದ್ದ.

ಇದು ಉದಯನ ಕಿತಾಪತಿ! ಪರಿಣಾಮದ ಬಗ್ಗೆ ಚಿಂತಿಸದೆ ಅವಳು ಖುಷಿ ಪಾಡುತ್ತಿದ್ದಳು.

ಉಳಿದವರಿಗೆ ಗಾಬರಿಯಾಗುತ್ತಿದೆ!

ಪ್ರೊಫೆಸರ್ ಸೂರ್ಯನ ಬೈಕ್ ಈಗ ರಸ್ತೆಯ ತಿರುವಿನಲ್ಲಿ ತಿರುಗಿತು!

ಚಕ್ರ ಟಾರಿನ ಮೇಲೆ ಉರುಳುತ್ತಿದೆ! ಗಾಡಿ ಸ್ಕಿಡ್ ಆಗುತ್ತದೆ!

ಆದರೆ ಹಾಗೆ ಆಗಲೇ ಇಲ್ಲ!

ನಿರಾಸೆ...ತುಂಬಾ ನಿರಾಸೆ!

ಕೊನೆಯ ಕ್ಷಣ ಸೂರ್ಯ ಸಡನ್ ಆಗಿ ಬ್ರೇಕ್ ಹಾಕಿ ಗಾಡಿಯನ್ನು ಕಂಟ್ರೋಲ್ ಮಾಡಿದ್ದನು ಸೂರ್ಯ ಈಗ ಬೈಕ್‌ನಿಂದ ಇಳಿದು ಸುತ್ತಲೂ ನೋಡುತ್ತಾ

''ಈ ಕೆಲಸ ಮಾಡಿದ್ದು ಯಾರು?'' ಎಂದು ಗಂಭೀರವಾಗಿ ಕೇಳಿದನು.

ಯಾರೂ ಉತ್ತರಿಸಿಲಿಲ್ಲ. ಪಿಳಿಪಿಳಿ ಕಣ್ಣು ಬಿಡುತ್ತಾ ನೋಡುತ್ತಿದ್ದಾರೆ.

ಸೂರ್ಯನ ದೃಷ್ಟೀ ಅಲ್ಲಿ ನಿಂತಿತು.

ಅಪ್ಸರಳ ಮೇಲೆ!

ಅವಳು ಚಡಪಡಿಸುತ್ತಿರುವ ರೀತಿಯಿಂದಲೇ ಅವಳ ಬಗ್ಗೆ ಅನುಮಾನ ಬಂದಿತು! ಸೂರ್ಯ ಅವಳ ಹತ್ತಿರ ಬಂದು ''ಕೆಲಸ ನಿನ್ನದೇ ತಾನೇ''

ಉತ್ತರಿಸಲಿಲ್ಲ ಅವಳು!

ಆದರೆ ಮುಖ ಕೆಂಪೇರಿದೆ!

ಸೂರ್ಯ ''ನಿನ್ನಂತಹ ಚೆಲುವಾದ ಹೆಣ್ಣು ಇಂತಹ ಚಿಲ್ಲರೆ ಕೆಲಸ ಮಾಡಿದರೆ ನಿನ್ನ ಸೌಂದರ್ಯಕ್ಕೆ ಕಳೆಬರುವುದಿಲ್ಲ. ನಿನಗೆ ನನ್ನ ಮೇಲೆ ಕೋಪಇದ್ದರೆ ನನ್ನ ಒಬ್ಬನಿಗೆ ತೊಂದರೆ ಮಾಡು. ನೋಡು...ಇದು ಎಲ್ಲರೂ ತಿರುಗಾಡುವ ರಸ್ತೆ. ಬೇರೆ ಪ್ರೊಫೆಸರ್‌ಗಳೂ ಬರುತ್ತಾರೆ. ಇನ್ನು ಹತ್ತು ನಿಮಿಷದಲ್ಲಿ ನೀನು ರಸ್ತೆಯನ್ನು ಕ್ಲೀನ್ ಮಾಡಿಸಿರುತ್ತೀಯ?''

ಅಪ್ಸರ ಕೋಪದಿಂದ ನೋಡಿದಳು.

ಸೂರ್ಯ ''ನೀನು ಈ ಕೆಲಸ ಮಾಡದೆ ಇದ್ದರೆ ನಾನೇ ನಿನಗೆ ಎದುರಾಗಿ ನಿಲ್ಲುತ್ತೇನೆ. ಆ ಮೇಲಿನ ಪರಿಣಾಮ ತುಂಬಾ ಭೀಕರವಾಗಿರುತ್ತದೆ. ನನ್ನ ಬಗ್ಗೆ ನಿನಗೆ ಗೊತ್ತಿದೆ. ನಾನು ಯಾವುದಕ್ಕೂ ಸಹ ಹೆದರುವುದಿಲ್ಲ ಅಂತ. ಗುಡ್ ಬೈ'' ಎಂದು ಬೈಕ್‌ಅನ್ನು ತಳ್ಳಿಕೊಂಡು ಹೊರಟನು.

ಎಲ್ಲರೂ ಸಹ ಈಗ ಅಪ್ಸರಳ ಸುತ್ತಾ ಸುತ್ತೊರೆದು ಉಪದೇಶ ಮಾಡಿದರು.

ಉದಯ ಸಹ ಬಂದನು.

ಕೆವು ಯುವತಿಯರು ''ಲೇ ಅಪ್ಸರ...ನೀನು ಶ್ರೀಮಂತರೆ ಇರಬಹುದು. ಆದರೆ ಈ ಪ್ರೊಫೆಸರ್ ಸೂರ್ಯ ಮಹಾ ವಡ್ಡ. ಹಠವಾದಿ ಯಾರಿಗೂ ಯಾವುದಕ್ಕೂ ಸಹ ಹೆದರುವುದಿಲ್ಲ. ನೀನು ಅವನು ಹೇಳಿದಂತೆ ಮಾಡುವುದೇ ಒಳ್ಳೆಯದು''

ಎಂತಹ ಅವಮಾನ!

ಚೆಲುವೆಯ ಮುಖ ಕೆಂಪೇರಿದೆ!

ಆಗ ಅಲ್ಲಿಗೆ ಬಂದ ಉದಯ ''ಅಪ್ಸರ...ಜುಜುಬಿ ಒಬ್ಬ ಪ್ರೊಫೆಸರ್‌ಗೆ ನೀನು ಸರೆಂಡರ್ ಆಗಬೇಡ. ಇಬ್ಬರು ರೌಡಿಗಳನ್ನು ಕರೆಸಿ ಕೈ - ಕಾಲು ಮುರಿಸಿದರೆ ಆಗ ಬುದ್ಧಿ ಬರುತ್ತದೆ''

ಅಪ್ಸರ ಕೋಪದಿಂದ ಅವನ ಕಡೆ ನೋಡುತ್ತಾ ''ನಿನ್ನ ರೌಡಿಸಂ ಪ್ರಯೋಗ ಬೇಕಿಲ್ಲ. ಇನ್ನು ಹತ್ತು ನಿಮಿಷದಲ್ಲಿ ಸೀಮೆ ಎಣ್ಣೆ ತರಿಸಿ ಟಾರನ್ನು ಕ್ಲೀನ್ ಮಾಡಬೇಕು ಉದಯ...''

ಉದಯ ''ಹಾಗಲ್ಲ ಅಪ್ಸರ...''

''ಡು ವಾಟ್ ಐ ಸೇ...'' ಎಂದು ಸಿಡುಕುತ್ತಾ ಅಲ್ಲಿಂದ ನಡೆದಳು.

ಉದಯ ಕೋಪದಿಂದ ಕಾಲನ್ನು ನೆಲಕ್ಕೆ ಅಪ್ಪಳಿಸುತ್ತಾ ಕಾರ್ಯಪ್ರವರ್ತನಾದನು.

ಕ್ಲಾಸ್ ರೂಮಿನಲ್ಲಿ...!

ಪ್ರೊಫೆಸರ್ ಸೂರ್ಯ ಪಾಠ ಮಾಡುತ್ತಿದ್ದಾನೆ. ಅವಳು ಅವನ ಕಡೆ ಕೋಪದಿಂದ ನೋಡುತ್ತಾದ್ದಳೆ.

ಸೂರ್ಯ ಈಗ ಅವಳ ಕಡೆ ನೋಡುತ್ತಾ ಒಂದು ಸಲ ಕಿರುನಗೆ ಬೀರಿದನು!

ಅಬ್ಬ...ಉರಿದು ಹೋದಳು ಅಪ್ಸರ!

ಸೂರ್ಯನ ನಗುವಿನಲ್ಲಿ ಅವಳ ಬಗ್ಗೆ ಒಂದು ರೀತಿಯ ನೆಗ್‌ಲಿಜೆನ್ಸ್ ಇತ್ತು!

ಅಂದಿನ ತರಗತಿ ಮುಗಿಯಿತು!

ಸಮಯ ಉರುಳುತ್ತಿತ್ತು!

ಪ್ರೊಫೆಸರ್ ಸೂರ್ಯ ಸ್ಟಾಫ್ ರೂಮಿನಿಂದ ಹೊರಗೆ ಬರಲು ಹೆಜ್ಜೆ ಎತ್ತಿ ಇರಿಸಿದನು!

ಆದರೆ ಹೌದು...ನೆಲ ಸ್ಪರ್ಶಿಸಲಿಲ್ಲ! ಸರ್ರನೆ ತನ್ನ ಕಾಲನ್ನು ಮೇಲೆ ಎತ್ತಿ ಪಕ್ಕಕ್ಕೆ ಸರಿದಿದ್ದನು.

ಅಲ್ಲಿ ಬಾಳೆ ಹಣ್ಣಿನ ಸಿಪ್ಪೆ ಇತ್ತು! ಪಾದ ಊರಿದ್ದರೆ ನೀಟಾಗಿ ಜಾರುತ್ತಿದ್ದನು.

ಆಗ ಅಲ್ಲೇ ಇದ್ದ ಕಂಬದ ಮರೆಯಿಂದ ಅಪ್ಸರ ಸರಸರನೆ ಹೋದಳು!

ಸೂರ್ಯ ಬಾಳೆ ಹಣ್ಣಿನ ಸಿಪ್ಪೆಯನ್ನು ಎತ್ತಿ ಮೂಲೆಯಲ್ಲಿ ಇದ್ದ ಡಸ್ಟ್‌ಬಿನ್‌ಗೆ ಎಸೆದು ಏನೂ ನಡೆದೇ ಇಲ್ಲ ಎಂಬಂತೆ ನಡೆದನು.

ಸೂರ್ಯ ಬರುತ್ತಿರುವಾಗ ಕಾಲೇಜಿನ ಕಾರಿಡಾರ್‌ನಲ್ಲಿ ಆ ದೃಶ್ಯ ಕಂಡನು.

ಯುವತಿಯರ ಗುಂಪಿನ ನಡುವೆ ಉದಯ ಏನು ಕೊಡುತ್ತಿದ್ದಾನೆ? ಯುವತಿಯವರು ಏಕೆ ದುಡ್ಡು ಕೊಡುತ್ತಿದ್ದಾರೆ? ಏನು ನಡೆಯುತ್ತಿದೆ ಇಲ್ಲಿ?

ಸೂರ್ಯನನ್ನು ಕಂಡ ಕೂಡಲೆ ಅಲ್ಲಿದ್ದವರೆಲ್ಲಾ ಈಗ ಅಡ್ಡಾದಿಡ್ಡಿ ಓಡುತ್ತಾ ಚದುರಿದರು.

ಸೂರ್ಯ ಅಲ್ಲಿ ನಿಂತು ಒಂದು ಸಲ ಪರಿಶೀಕಿಸಿ ನೋಡಿದನು. ಆದರೆ ಏನೂ ಕಂಡು ಬರಲಿಲ್ಲ.

ಸೂರ್ಯ ತನ್ನ ಮನೆಗೆ ಹಿಂತಿರುಗಿದನು. ಇವನ ತಾಯಿ ''ಸೂರ್ಯ...ನಿನ್ನ ಅಕ್ಕ ಸಿಕ್ಕಿದಳೇನೋ?''

ಸೂರ್ಯ ನಗುತ್ತಲೇ ''ಅಮ್ಮಾ...ನಾನು ಅಕ್ಕನನ್ನು ಹುಡುಕಲು ಹೋಗಿರಲಿಲ್ಲ. ಕಾಲೇಜಿಗೆ ಪಾಠಮಾಡಲು ಹೋಗಿದ್ದೆ. ಇತ್ತೀಚೆಗೆ ನಿನಗೆ ಅಕ್ಕನನ್ನು ನೋಡುವ ಹಂಬಲ ಜಾಸ್ತಿಯಾಗಿದೆ''

ಮಂಗಳಮ್ಮ ''ಅವಳು ಇದೇ ಊರಿನಲ್ಲಿ ಇದ್ದಾಳೆ ಅಂತ ತಿಳಿದ ಮೇಲೂ ಸಹ ನೋಡದೆ ಇರಲು ಸಾಧ್ಯವೇನೋ ಸೂರ್ಯ''

ಸೂರ್ಯ ''ಆಯ್ತು ಬಿಡಮ್ಮ. ಮುಂದಿನ ವಾರ ಕಾಲೇಜಿಗೆ ರಜಾ ಇದೆ. ಆಗ ಬೆಳಗಿನಿಂದ ಸಂಜೆಯ ತನಕ ಅಕ್ಕನನ್ನು ಹುಡುಕುತ್ತೇನೆ''

ಮಂಗಳಮ್ಮ ಮಗನಿಗೆ ಮದ್ದೂರು ವಡೆ ಮತ್ತು ಕಾಫಿಯನ್ನು ನೀಡಿದರು.

ಸೂರ್ಯ ಮಾರನೆಯ ದಿನ ಕಾಲೇಜಿಗೆ ಬಂದಾಗ ಅಪ್ಸರ ಎದುರಾದಳು.

ಸೂರ್ಯ ಅವಳಿಗೆ ಮಾತ್ರ ಕೇಳಿಸುವಂತೆ ಮೆಲು ಧ್ವನಿಯಲ್ಲಿ ''ನಿನ್ನೆ ಬಾಳೆಯ ಹಣ್ಣಿನ ಸಿಪ್ಪೆ ಆಯಿತು. ಇವತ್ತು ಏನು?ಏಏ ಎಂದನು.

ಅಪ್ಸರ ಉರಿಗಣ್ಣಿನ ನೋಟ ಬೀರುತ್ತಾ ''ಇನ್ನು ಮುಂದೆ ಏನೂ ಇಲ್ಲ''

''ಯಾಕೆ...ಕಂಟಿನ್ಯೂ ಮಾಡಬಹುದಲ್ಲ'' ಎಂದು ಕಿರುನಗೆ ಬೀರಿದನು.

ಅಪ್ಸರ ಅವನಿಗೆ ಉತ್ತರಿಸದೆ ಬಿರ ಬಿರನೆ ನಡೆಯುತ್ತಿದ್ದರೆ ಸೂರ್ಯ ನಗುತ್ತಿದ್ದನು.

ಅಪ್ಸರಳಿಗೆ ಎದುರಾಗಿ ಉದಯ ಬಂದನು. ಅವನು ''ಅಪ್ಸರ...ಈ ಪ್ರೊಫಲಸರ್‌ಗೆ ಬುದ್ಧಿ ಕಲಿಸುತ್ತೇನೆ ಅಂದರೆ ನೀನು ಬೇಡಾ ಅಂತೀಯ. ನೀನು ಈಗಲೂ ಸಹ ಹೂಂ ಅನ್ನು, ನನಗೆ ಪರಿಚಯ ಇರುವ ರೌಡಿಗಳನ್ನು ಕಳುಹಿಸಿ ಸೊಂಟ ಮುರಿಸುತ್ತೇನೆ'' ಎಂದು ಕೋಪದಿಂದ ಹೇಳಿದನು.

ಅಪ್ಸರ ''ನಿನಗೆ ಇದು ಬಿಟ್ಟು ಬೇರೆ ಏನೂ ಗೊತ್ತಾಗುವುದಿಲ್ಲವೆ? ನಿನ್ನ ಅಗತ್ಯ ಬಿದ್ದಾಗ ನಾನೇ ಕರೆಯುತ್ತೇನೆ. ನೀನು ಪದೇ ಪದೇ ನನ್ನ ಹತ್ತಿರ ಬಂದು ತೊಂದರೆ ಕೊಡಬೇಡ''

ಉದಯನಿಗೆ ವಿಪರೀತ ಕೋಪ ಬಂದಿತು. 'ಲೇ ಅಪ್ಸರ...ಮದುವೆಯ ಶಾಸ್ತ್ರ ಆಗಲಿ ಅಂತ ತಾಳ್ಮೆಯಿಂದ ಕಾಯುತ್ತಿದ್ದೇನೆ. ನಂತರ ನಿನಗೊಂದು ಗತಿ ಕಾಣಿಸುತ್ತೇನೆ' ಎಂದುಕೊಂಡನು.

ಉದಯ ಇವಳ ತಂದೆಯ ಕಡೆಯ ಸಂಬಂಧಿ! ಮಗಳನ್ನು ಉದಯನಿಗೆ ಕೊಡಬೇಕು ಅಂತ ಆಸೆ ಇತ್ತು ಇವಳ ತಂದೆಗೆ!

ಕೆಲವು ಸಲ ಈ ಮಾತನ್ನು ಉದಯ ಮತ್ತು ಅಪ್ಸರಳ ಎದುರಿಗೇ ಆಡಿದ್ದರು.

ಉದಯನಿಗೆ ಕನಸೋ ಕನಸು!

ಕಲರ್ ಕಲರ್ ಡ್ರೀಮ್ಸ್!

ಅಂದಗಾತಿ ಅಪ್ಸರಳ ಚೆಲುವಿನೊಂದಿಗೆ ಕೋಟ್ಯಂತರ ರೂಪಾಯಿ ಆಸ್ತಿ ಇವನಿಗೆ ಸೇರುತ್ತಿತ್ತು!

ಅಪ್ಸರಳಿಗೆ ಇವನು ಅಂತ ಅಂದರೆ ಒಂದು ರೀತಿಯ ಉದಾಸೀನ...ತಾತ್ಸಾರ!

ಅವನನ್ನು ಕೆಲಸದವರಿಗಿಂತ ಕಡೆಯಾಗಿ ಟ್ರೀಟ್ ಮಾಡುತ್ತಿದ್ದಳು. ಉದಯನಿಗೆ ವಿಪರೀತ ಕೋಪ ಬರುತ್ತಿದ್ದರೂ ಸಹ ಸಹಿಸಿಕೊಂಡಿದ್ದನು.

ಉದಯ ಸಿಗರೇಟ್ ಹತ್ತಿಸಿದನು.

ಅವನು ಚಿಂತಿಸುತ್ತಿದ್ದಾನೆ.

ಅಪ್ಸರಳಿಗೆ ಬುದ್ಧಿ ಕಲಿಸಬೇಕು. ಅವಳ ಅಹಂಕಾರ ಅಡಗಿಸಬೇಕು. ಅವಳು ಈಗಿನಿಂದಲೇ ನಾನು ಹೇಳಿದ ಹಾಗೆ ಕೇಳುವಂತಲ ಮಾಡಬೇಕು!

ಅಪ್ಸರ ನನಗೆ ಗುಲಾಮಳಾಗಬೇಕು! ಅದಕ್ಕೆ ಉಳಿದಿರೋದು ಒಂದೇ ದಾರಿ! ಅವಳ ಮೇಲೆ ಅದನ್ನು ಪ್ರಯೋಗಿಸಬೇಕು!

ಅದೇ ಬ್ರಹ್ಮಾಸ್ತ್ರ!

ಒಂದು ಸಲ ಅದರ ರುಚಿ ನಿಡಿದರೆ ಅವಳು ಅದಕ್ಕೆ ಗುಲಾಮಳಾಗುತ್ತಾಳೆ!

ಅದನ್ನು ಕೊಡು...ಕೊಡು ಅಂತ ನನ್ನ ಹತ್ತಿರ ಗೋಗರೆಯುತ್ತಾ ಬರುತ್ತಾಳೆ!

ಈ ಕೆಲಸ ನಾನು ಮಾಡಬಾರದು. ಬೇರೆಯವರಿಂದ ಇದನ್ನು ಮಾಡಿಸಬೇಕು!

ಉದಯ ಪ್ಲಾನ್ ಮಾಡುತ್ತಿದ್ದಾನೆ! ಅವನು ವಿಷ ಸರ್ಪ!

ಕಾಲೇಜಿನಲ್ಲಿ ಸೂರ್ಯ ಪಾಠ ಮಾಡುತ್ತಿರುವಾಗ ಜವಾನ ಮೆಮೋ ತಂದನು!

ಸೂರ್ಯ ಅದನ್ನು ಓದಿ ಹೇಳಿದನುದ

ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸವನ್ನು ಏರ್ಪಡಿಸಲಾಗಿತ್ತು. ಅದಕ್ಕಾಗಿ ಎಲ್ಲಾ ವಿವರಗಳನ್ನೂ ಸಹ ಬರೆದು ಮೊಮೋ ಕಳಿಸಲಾಗಿತ್ತು.

ಯುವಕ - ಯುವತಿಯರು ಪ್ರವಾಸದ ಸುದ್ದಿಯನ್ನು ಕೇಳಿ ಸಂತೋಷ, ಸಡಗರದಿಂದ ಬೀಗಿದರು. ನಗು, ಉತ್ಸಾಹ, ಸಂಭ್ರಮ!

ಅಪ್ಸರ ಖುಷಿಯಾಗಿದ್ದಳು! ಉದಯ ಮನದಲ್ಲೇ ಯೋಚಿಸುತ್ತಿದ್ದನು. ನಾನು ಏನೇ ಮಾಡಿದರೂ ಸಹ ಈಗಲೇ ಮಾಡಬೇಕು. ಟೂರ್ ಪ್ರೋಗ್ರಾಂನಲ್ಲಿ ಎಲ್ಲರೂ ಜಾಲಿಯಾಗಿರುತ್ತಾರೆ ಯಾರು ಏನೇ ಕೊಟ್ಟರೂ ಅಪ್ಸರ ತಿನ್ನುತ್ತಾಳೆ. ಅದನ್ನು ಅವಳಿಗೆ ತಿನ್ನಿಬೇಕು!

ಪ್ರವಾಸಕ್ಕೆ ಹೊರಡಲು ಕೇವಲ ನಾಲ್ಕು ದಿನಗಳು ಮಾತ್ರ ಉಳಿದಿತ್ತು. ಎಲ್ಲಾ ರೀತಿಯ ಸಿದ್ಧತೆಗಳು ನಡೆಯುತ್ತಿತ್ತು.

ಮಧ್ಯಾಹ-ನ ಮೂರು ಗಂಟೆಯ ಸಮಯ. ಪ್ರೊಫೆಸರ್ ಸೂರ್ಯ ಕಾಲೇಜಿನ ಕಾರಿಡಾರ್‌ನಲ್ಲಿ ಇದ್ದ ಹೂವಿನ ಗಿಡಗಳ ನಡುವೆ ನಡೆಯುತ್ತಿದ್ದನು.

ಆಗ ಅವನಿಗೆ ಗುಲಾಬಿ ಗಿಡದ ಹತ್ತಿರ ಏನೋ ಬಿದ್ದಿರುವುದು ಕಂಡು ಬಂದಿತು.

ಅತ್ತ ನಡೆದು ಅದನ್ನು ಎತ್ತಿಕೊಂಡು ನೋಡಿದನು. ಅದು ಸಣ್ಣ ಪ್ಯಾಕೆಟ್!

ಅದರಲ್ಲಿ ಬಿಳಿಯ ಪುಡಿ ಇತ್ತು!

ಅದನ್ನು ಒಡೆದು ಪರಿಶೀಲಿಸಿ ನೋಡಿದ ಕೂಡಲೇ ಸೂರ್ಯನಿಗೆ ತುಂಬಾ ಗಾಬರಿಯಾಯಿತು.

ಅದು...ಅದು ಬ್ರೌನ್ ಶುಗರ್!

ಮೈಗಾಡ್...! ಕಾಲೇಜಿನಲ್ಲಿ ಬ್ರೌನ್ ಶುಗರ್ ಡೀಲಿಂಗ್ ನಡೆಯುತ್ತಿರುವುದೇ! ಯುವಕ - ಯುವತಿಯರು ಬಾಳನ್ನೇ ಬಲಿ ತೆಗೆದುಕೊಳ್ಳುವ ಚಟಕ್ಕೆ ಬಲಿಯಾಗಿರುವರೆ?

ಇದನ್ನು ತಡೆಯಬೇಕು!

ಇದನ್ನು ಪತ್ತೆ ಮಾಡಬೇಕು!

ಕೆಲವು ದಿನಗಳ ಹಿಂದೆ ನಡೆದದ್ದು ಈಗ ಇವನಿಗೆ ನೆನಪಾಗುತ್ತಿದೆ!

ಉದಯ ಕೆಲವು ಯುವಕ - ಯುವತಿಯರಿಗೆ ಏನನ್ನೋ

ಕೊಡುತ್ತಿದ್ದನು. ಅವರುಗಳು ಉದಯನಿಗೆ ಹಣ ಕೊಡುತ್ತಿದ್ದರು ಅನುಮಾನ ಬರುತ್ತಿದೆ!

ಇಲ್ಲೇ ಏನೋ ರಹಸ್ಯ ಇದೆ! ಉದಯನನ್ನು ಹಿಂಬಾಲಿಸಿದರೆ ಖಂಡಿತಾ ಸತ್ಯ ಏನು ಅಂತ ಗೊತ್ತಾಗುತ್ತದೆ. ಈ ರಹಸ್ಯ ಇಳಿಯಬೇಕು!

ಸೂರ್ಯ ಈಗ ಬೈಕ್ ಸ್ಟಾರ್ಟ್ ಮಾಡಿಕೊಂಡು ಮನೆಗೆ ಹೊರಟನು.

## ಎರಡು

ಅದು ಸರ್ಕಲ್!

ಹತ್ತಾರು ವೆಹಿಕಲ್‌ಗಳು ರೋಡ್ ಕ್ರಾಸ್ ಮಾಡಲು ಗ್ರೀನ್ ಸಿಗ್ನಲ್‌ಗಾಗಿ ಕಾಯುತ್ತಿವೆ!

ಸೂರ್ಯ ದೃಷ್ಟಿ ಹರಿಸಿದನು. ಹತ್ತಾರು ವೆಹಿಕಲ್‌ಗಳ ದೂರದಲ್ಲಿ ಕಂಡಿತು ಕಾರು!

ಮಾರುತಿ ಎಸ್ಟೀಮ್ ಕಾರು!

ಅದರಲ್ಲಿ ಕುಳಿತಿರುವ ವ್ಯಕ್ತಿಯನ್ನು ಕಂಡು ಬೆಚ್ಚಿಬಿದ್ದನು ನಂಬಿಕೆ ಬರಲಿಲ್ಲ!

ಏನೋ ಸಂದೇಹ!

ಮತ್ತೊಂದು ಸಲ ಸರಿಯಾಗಿ ನೋಡಿದನು. ಅವಳೇ ಇರಬಹುದೆ?

ಅದೇ ಹೋಲಿಕೆ ಇದೆ!

ತುಂಬಾ ವರ್ಷಗಳ ನಂತರ ನೋಡುತ್ತಿರುವುದರಿಂದ ಒಂದು ರೀತಿಯ ಸಂದೇಹ ಬರುತ್ತಿದೆ!

ಸೂರ್ಯ ಚಡಪಡಿಸುತ್ತಿದ್ದಾನೆ. ಹತ್ತಿರದಿಂದ ನೋಡಿದರೆ ಖಂಡಿತಾ ಗುರುತು ಹಿಡಿಯಬಹುದು ಆದರೆ ವೆಹಿಕಲ್‌ಗಳು ಇರುವುದರಿಂದ ಇಳಿದು ನಡೆದುಕೊಂಡು ಹೋಗಲು ಸಾಧ್ಯವಿಲ್ಲ.

ಗ್ರೀನ್ ಸಿಗ್ನಲ್ ಕಂಡಿತು!

ಒಂದರ ಹಿಂದೆ ಮತ್ತೊಂದರಂತೆ ವೆಹಿಕಲ್‌ಗಳು ತುಂಬಾ ಸ್ಪೀಡಾಗಿ ಹೊರಟವು!

ಸೂರ್ಯ ಮುಂದೆ ಹೋಗುತ್ತಿರುವ ಕಾರಿನ ಹತ್ತಿರ ಬರಲು ಪ್ರಯತ್ನಿಸುತ್ತಿದ್ದಾನೆ.

ಆದರೆ ವೆಹಿಕಲ್‌ಗಳು ಅಡ್ಡ ಬರುತ್ತಿವೆ. ಹೆವಿ ಟ್ರಾಫಿಕ್ ಇರುವುದರಿಂದ ಓವರ್‌ಟೇಕ್ ಮಾಡಲು ಆಗುತ್ತಿಲ್ಲ!

ಕಾರು ಮುನ್ನುಗ್ಗಿತು!

ಆದರೆ ಮತ್ತೊಂದು ರೋಡ್‌ಕ್ರಾಸ್ ಮಾಡುವುದರಲ್ಲಿ ರೋಡ್ ಸಿಗ್ನಲ್ ಬಿದ್ದಿತು!

ಛೇ...ಛೆ ಎಂದು ಗೊಣಗಿಕೊಂಡನು. ಅವನು ಕಾರಿನ ನಂಬರ್ ಗುರುತಿಸಿದ್ದನು. ಈಗ ಅದರ ಬಗ್ಗೆ ತಿಳಿಯಬೇಕು!

ಸೂರ್ಯನಿಗೆ ಮನಸ್ಸು ತಡೆಯುತ್ತಿಲ್ಲ. ಅವನು ಆರ್.ಟಿ.ಓ. ಆಫೀಸಿಗೆ ಬಂದನು!

ಅರ್ಧ ಗಂಟೆಯಲ್ಲಿ ಅವನ ಮುಖ ಅರಳಿತು. ಕಾರಿನ ಮಾಲೀಕರ ಹೆಸರು ಪಂಕಜ ಪ್ರಸಾದ್! ನಂ 54/78 ಬ್ರಿಗೇಡ್ ರೋಡ್, ಬೆಂಗಳೂರು.

ಪಂಕಜ...ಇವನ ಅಕ್ಕ!

ಪ್ರಸಾದ್ ಇವನ ಭಾವ!

ಸಂತೋಷದಿಂದ ಕುಣಿದಾಡಬೇಕು ಎಂಬ ಹಂಬಲವನ್ನು ನಿಯಂತ್ರಿಸಿಕೊಂಡು ಹಿಂದಿರುಗಿದನು.

ಅಕ್ಕ...ಅಕ್ಕನನ್ನು ತುಂಬಾ ವರ್ಷಗಳ ನಂತರ ತುಂಬಾ ದೂರದಲ್ಲಿ ನೋಡಿದ್ದನು. ಅವಳ ವಿಳಾಸ ಸಹ ಈಗ ದೊರೆತಿದೆ!

ಈ ಸಂಗತಿಯನ್ನು ಮೊದಲು ತಾಯಿಗೆ ತಿಳಿಸಬೇಕು ಎನಿಸಿತು. ಮನೆಗೆ ಬಂದ ಕೂಡಲೇ ಎಲ್ಲವನ್ನೂ ತಾಯಿಗೆ ಹೇಳಿದನು.

ಒಂದು ನಿಮಿಷ ಮಂಗಳಮ್ಮ ದಿಗ್‌ಭ್ರಾಂತಳಾಗಿ ನಿಂತಳು.

ಸಂತಿಷ...ಉದ್ವೇಗ! ಇಪ್ಪತ್ತು ವರ್ಷಗಳ ನಂತರ ಮಗಳ ಬಗ್ಗೆ ಸಂತೋಷದ ಸುದ್ದಿ ಕೇಳಿದ್ದರು.

ಮಂಗಳಮ್ಮ ಕೋಪದಿಂದ ''ಅಲ್ಲೋ ಸೂರ್ಯ ಅಡ್ರೆಸ್ ತಿಳಿದ ಮೇಲೆ ಅವಳ ಮನಲಗೆ ಹೋಗಿ ಅವಳನ್ನು ಕರೆದುಕೊಂಡು ಬಂದಿದ್ದರೆ ಆಗುತ್ತಿರಲಿಲ್ಲವೆ?''

ಸೂರ್ಯ ನಗುತ್ತಾ ''ಅಮ್ಮಾ...ಆತುರಪಡಬೇಡ. ಮೊದಲು ನಿನ್ನ ಮಗಳ ಪರಿಸ್ಥಿತಿಯನ್ನು ತಿಳಿಯೋಣ. ಯಾಕೆ ಅಂದರೆ ಅವಳು ನಮ್ಮನ್ನು ಬಿಟ್ರು ಹೋಗಿ ಇಪ್ಪತ್ತು ವರ್ಷಗಳಾಗಿದೆ. ಅವಳ ಮನಸ್ಸು ಹೇಗಿದೆ ಅಂತ ತಿಳಿದು ನಂತರ ಮುಂದುವರೆಯೋಣ''

ಮಂಗಳಮ್ಮ ಬೇಸರದಿಂದ ''ಅಂದರೆ ಅವಳಿಗೆ ಇನ್ನೂ ಕೋಪ ಆರಿಲ್ಲ ಅಂತ ಹೇಳುತ್ತೀಯ''

ಸೂರ್ಯ ''ಹೇಗೆ ಹೇಳಲು ಸಾಧ್ಯ ಅವಳಿಗೆ ನಮ್ಮ ನೆನಪು ಮತ್ತು ಪ್ರೀತಿ ಇದ್ದಿದ್ದರೆ ಈ ಅವಧಿಯಲ್ಲಿ ಒಂದೇ ಒಂದು ಸಲ ಆದರೂ ನೋಡಲು ಬರುತ್ತಿದ್ದಳು. ನನಗ್ಯಾಕೋ ಇದರ ಬಗ್ಗೆ ಸಂದೇಹ ಇದೆ''

ಮಂಗಳಮ್ಮ ದುಃಖದಿಂದಲೇ ''ಅವಳು ನಮ್ಮನ್ನು ಮಾತಾಡಿಸದೆ ಇದ್ದರೆ ಬೇಡ. ಅವಳನ್ನು ದೂರದಿಂದಲೆ ನೋಡುತ್ತೇನೆ ಈಗಲೇ ಅಲ್ಲಿಗೆ ಕರೆದುಕೊಂಡು ಹೋಗು ಸೂರ್ಯ''

ಸೂರ್ಯ ''ಈ ರಾತ್ರಿ ಹೊತ್ತಿನಲ್ಲಿ ಬೇಡ ನಾಳೆಯ ದಿನ ಮೊದಲು ಅಕ್ಕನ ಮನೆಗೆ ನಾನು ಹೋಗಿ ಬರುತ್ತೇನೆ. ನಂತರ ಅವಳ ಹತ್ತಿರ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ''

ಮಂಗಳಮ್ಮ ಕೋಪದಿಂದ ''ಕಾಲೇಜ್‌ನಲ್ಲಿ ಕೆಲಸ ಇತ್ತು ಹೋಗಲು ಆಗಲಿಲ್ಲ. ಅದೂ - ಇದೂ ಅಂತ ನೀನು ರಾಗ ಎಳೆಯಬೇಡ''

''ನಾಳೆ ಖಂಡಿತಾ ಹೋಗ್ತೀನಿ'' ಎಂದು ತಾಯಿಯ ಭುಜ ಹಿಡಿದುಕೊಂಡು ನಗುತ್ತಾ ''ಸದಾ ನಿನ್ನ ಹತ್ತಿರವೇ ಇರುವ ಮಗನಿಗಿಂತ ಎಲ್ಲೋ ಇರುವ ಅಕ್ಕಳ ಮೇಲೆ ವಿಪರೀತ ಪ್ರೀತಿ ಜಾಸ್ತಿಯಾಗ್ತಿರೋ ಹಾಗಿದೆ''

ಮಂಗಳಮ್ಮ ''ಯಾಕೋ ಹಾಗಂತೀಯ ಸೂರ್ಯ. ಪ್ರೀತಿಯಲ್ಲಿ ನಿನಗೆ ಏನು ಕಡಿಮೆ ಮಾಡಿದ್ದೇನೋ ಅವಳನ್ನು ನೋಡಿ ಇಪ್ಪತ್ತು ವರ್ಷ ಆಗಿದೆ. ಇನ್ನೂ ತಡೆಯಲು ಹೇಗೆ ಸಾಧ್ಯ?''

ಸೂರ್ಯ ''ಅವತ್ತು ಅಕ್ಕ - ಭಾವನನ್ನು ನೀನು ಯಾಕೆ ಬಾಯಿಗೆ ಬಂದಂತೆ ಬೈದೆ ಅಕ್ಕ ಬೇರೆ ಜಾತಿಯವನನ್ನು ಮದುವೆ ಮಾಡಿಕೊಂಡಿದ್ದರೇನು ಅವಳು ಈಗ ಸುಖವಾಗಿ ಇಲ್ಲವೇ?''

ಮಂಗಳಮ್ಮ ಹಣೆ ಚಚ್ಚಿಕೊಳ್ಳುತ್ತಾ ''ಅವತ್ತು ನನಗೆ ಬುದ್ಧಿ ಇರಲಿಲ್ಲ''

ಸೂರ್ಯ ''ಈಗಲೇ ಎಚ್ಚರಿಕೆ ಕೊಡುತ್ತಿದ್ದೇನೆ. ನಾನು ಬೇರೆ ಜಾತಿಯ ಹುಡುಗಿಯನ್ನು ಮದುವೆ ಆದರೆ ನನ್ನನ್ನೂ ಸಹ ಮನೆಯಿಂದ ಓಡಿಸುತ್ತೀಯ'' ಎಂದು ನಕ್ಕನು.

ಮಂಗಳಮ್ಮ ಕೋಪದಿಂದ ''ಅಯ್ಯೋ ಮೂಳ ನಿನ್ನ ಮಾತು ಕೇಳಿದರೆ ನೀನು ಸಹ ಅಡ್ಡದಾರಿ ಹಿಡಿದಿರುವಂತೆ ಕಾಣುತ್ತಿದೆ''

ಸೂರ್ಯ ನಗುತ್ತಾ ''ಇನ್ನೂ ಹಿಡಿದಿಲ್ಲ ಮುಂದೆ ಏನಾಗುತ್ತದೆ ಅಂತ ನನಗೆ ಗೊತ್ತಿಲ್ಲ''

ಮಂಗಳಮ್ಮ ''ಈಗಾಗಲೇ ಕರುಳಿನ ಬಳ್ಳಿಯನ್ನು ಕಳೆದುಕೊಂಡು

ಸಂಕಟಪಡುತ್ತಿದ್ದೇನೆ ನೀನು ಏನೇನೋ ಮಾತಾಡಿ ನನಗೆ ಆತಂಕ ಹೆಚ್ಚು ಮಾಡಬೇಡ''

ಸೂರ್ಯ ನಗುತ್ತಲೇ ''ನನಗೆ ಗೊತ್ತು ಅಮ್ಮ. ನೀನು ಜಾತಿಯನ್ನು ಬೇಕಾದರೂ ಬಿಡುತ್ತೀಯ. ನನ್ನನ್ನು ಬಿಡಲಾರೆ ಅಂತ''

ಮಂಗಳಮ್ಮ ಗಾಬರಿಯಿಂದ ''ಸೂರ್ಯ...ನೀನು ಬೇರೆ ಜಾತಿಯ ಹುಡುಗಿಯನ್ನು ನೋಡಿಕೊಂಡಿದ್ದೀಯ...?'' ಎಂದು ಆತುರದಿಂದ ಕೇಳಿದರು.

ಸೂರ್ಯ ನಗುತ್ತಲೇ ''ಇನ್ನೂ ಇಲ್ಲ ಅಂತ ಆಗಲೇ ಹೇಳಿದೆನಲ್ಲ. ಹುಡುಕುತ್ತಾ ಇದ್ದೇನೆ''

''ಏನನ್ನೋ?''

''ಬೇರೆ ಜಾತಿಯ ಹುಡುಗಿಯನ್ನು...''

ಮಂಗಳಮ್ಮ ಅವನ ತಲೆಯ ಮೇಲೆ ಮೊಟಕುತ್ತಾ ''ಸೂರ್ಯ...ತರ್ಲೆ ಮಾಡಬೇಡ ನಡಿ''

ಸೂರ್ಯ ನಗುತ್ತಿದ್ದಾನೆ!

ಮಾರನೆಯ ದಿನ ಬೆಳಿಗ್ಗೆ ಸೂರ್ಯ ಕಾಲೇಜಿಗೆ ಬಂದನು. ಕಾರಿಡಾರ್‌ನಲ್ಲಿ ನಡೆಯುತ್ತಿರುವಾಗ ಅವನಿಗೆ ಎದುರಾಗಿ ಯುವತಿಯರ ಗುಂಪು ಬಂದಿತು. ಆ ಗುಂಪಿನಲ್ಲಿ ಅಪ್ಸರ ಸಹ ಇದ್ದಳು.

ಅವಳು ಅಂದು ವಿಶೇಷ ರೀತಿಯಲ್ಲಿ ಅಲಂಕರಿಸಿಕೊಂಡಿದ್ದಳು. ಶ್ವೇತ ದೇವತೆ! ಬಿಳಿಯ ಫಾರಿನ್ ನೈಲಾಕ್ಸ್ ಸೀರೆ ಮತ್ತು ರವಿಕೆ!

ಅಂದದ ಬೆಡಗಿ ಈ ಚೆಂದದ ಹುಡುಗಿ. ಅವಳ ಮುಡಿಯಲ್ಲಿ ಮಲ್ಲಿಗೆ ಹೂವು!

ಎಲ್ಲಾ ವೈಟ್ ಕಾಂಬಿನೇಷನ್!

ಅವಳ ಅಂದದ ತುಟಿಗಳಲ್ಲಿ ನಗು!

ಕಣ್ಣುಗಳಲ್ಲಿ ಹೊಳಪು!

ಅವಳು ಈಗ ತನ್ನ ಕೈಯಲ್ಲಿ ಇದ್ದ ಸಿಹಿ ತಿಂಡಿಯ ಬಾಕ್ಸ್ ಅನ್ನು ಸೂರ್ಯನ ಮುಂದೆ ಹಿಡಿದಳು.

ಉಳಿದ ಯುವತಿರು ನಗುತ್ತಿದ್ದಾರೆ!

ಸೂರ್ಯ ''ಏನಿದು?''

ಅಪ್ಸರ ''ಸಾರ್...ಇವತ್ತು ನನ್ನ ಬರ್ತ್‌ಡೇ. ಅದಕ್ಕೆ ಸ್ವೀಟ್ ತಂದಿದ್ದೇನೆ ತಗೊಳ್ಳಿ''

ಸೂರ್ಯ ಅವಳತ್ತ ನೋಡಿದನು. ಅವಳ ಕಣ್ಣುಗಳಲ್ಲಿ ತುಂಟತನ ಇದೆ!

ಚೆಂದುಟಿಗಳು ಮಿಂಚುತ್ತಿವೆ!

''ತಗೊಳ್ಳಿ ಸಾರ್...''

ಸೂರ್ಯ ''ಬಾಳೆಯ ಹಣ್ಣಿನ ಸಿಪ್ಪೆಯನ್ನು ನಾನು ಬರುವ ದಾರಿಯಲ್ಲಿ ಎಸೆದಿದ್ದ ಹೆಣ್ಣು ಇಂದು ನನಗೆ ಸಿಹಿ ತಿಂಡಿ ಕೊಡಲು ಬರುತ್ತಿದ್ದಾಳೆ ಎಂದರೆ ನಾನು ಇದರ ಬಗ್ಗೆ ಆಲೋಚಿಸಬೇಕು''

ಅಪ್ಸರ ಬೇಸರದಿಂದ ''ನಿಮಗೆ ಯಾವಾಗಲೂ ನನ್ನ ಮೇಲೆ ಅನುಮಾನ. ನಾನು ಈಗ ಮೊದಲಿನಂತೆ ಅಲ್ಲ. ಬದಲಾಗಿದ್ದೇನೆ''

ಸೂರ್ಯ ''ಓ...ಹೌದ? ಓ.ಕೆ. ಸ್ವೀಟ್ ಕೊಡು. ಅಂದ ಹಾಗೆ ನಿನ್ನ ಫ್ರೆಂಡ್ಸ್ ಯಾರೂ ತಿಂದಹಾಗೆ ಕಾಣುತ್ತಿಲ್ಲ''

ಅಪ್ಸರ ನಗುತ್ತಲೇ ''ಅವರಿಗೆಲ್ಲಾ ನೀವೇ ಸ್ವೀಟ್ ಕೊಡಿ ಸಾರ್. ಇನ್ನು ಮುಂದೆ ನಾನು ಒಳ್ಳೆಯ ಸ್ಟೂಡೆಂಟ್ ಆಗಬೇಕು ಅಂತ ಆಸೆ''

ಸೂರ್ಯ ಅವಳ ಕೈಯಿಂದ ಬಾಕ್ಸ್ ತೆಗೆದುಕೊಂಡು ಅದನ್ನು ತೆರೆದನು.

ಎಲ್ಲರೂ ದೂರ ಸರಿದರು!

ಬಾಕ್ಸ್ ಓಪನ್ ಆದ ಕೂಡಲೇ ಅದರೊಳಗಿಂದ ಏನೋ ಹೊರಗೆ ನೆಗೆಯಿತು!

ಅದು ಸೂರ್ಯನ ಎದೆಯ ಮೇಲೆ ನೆಗೆಯಿತು. ಸೂರ್ಯ ಬೆಚ್ಚಿಬಿದ್ದುದೂರ ಸರಿದನು. ಬಾಕ್ಸ್ ಎಸೆದು ಅದನ್ನು ಕೈಯಿಂದ ಓಡಿಸಿದನು.

ಯುವತಿಯರು ಜೋರಾಗಿ ನಕ್ಕರು!

ಅದು...ಅದು...ದೊಡ್ಡ ಕಪ್ಪೆ...!

ಸೂರ್ಯ ಕಿಲಕಿಲನೆ ನಗುತ್ತಿದ್ದ ಅಪ್ಸರಳ ಹತ್ತಿರ ಬಂದು ''ಥ್ಯಾಂಕ್ಸ್ ಫಾರ್ ಯುವರ್ ಬರ್ತ್‌ಡೇ ಸ್ವೀಟ್'' ಎಂದು ಸ್ಟಾಫ್ ರೂಮಿಗೆ ನಡೆದನು.

ಎಲ್ಲರೂ ಗುಂಪುಮಾಡಿ ನಗುತ್ತಿದ್ದಾರೆ!

ಇಂಗ್ಲೀಷ್ ಕ್ಲಾಸ್ ಪ್ರಾರಂಭವಾಯಿತು. ಈಗ ಪ್ರೊಫೆಸರ್ ಸೂರ್ಯ ಪಾಠ ಮಾಡುತ್ತಲೇ ಅಪ್ಸರಳ ಕಡೆ ತಿರುಗಿ ನೋಡಿದನು.

ಅಪ್ಸರ ಕಣ್ಣು ಮಿಟುಕಿಸಿ ನಕ್ಕಳು. ಅವಳ ಮುಖದಲ್ಲಿ ಅದೇನೋ ತೃಪ್ತಿ ಕಾಣುತ್ತಿತ್ತು.

ಈಗ ವಿದ್ಯಾರ್ಥಿನೀಗಳು ನಾಡಿದ್ದು ಹೊರಡಲಿರುವ ಟೂರ್ ಬಗ್ಗೆ ಮಾತನಾಡಿದರು.

ಎಲ್ಲರಲ್ಲಿಯೂ ಹೊಸ ಉತ್ಸಾಹ!

ಪ್ರೋಗ್ರಾಂ ಬಗ್ಗೆ ಸೂರ್ಯ ಎಲ್ಲಾ ರೀತಿಯ ವಿವರಗಳನ್ನೂ ನೀಡಿದನು.

ಸೂರ್ಯ ''ಟೂರ್‌ನಲ್ಲಿ ಎಲ್ಲರೂ ಜಾಲಿಯಾಗಿರಬೇಕು. ಆದರೆ ಸಭ್ಯತೆಯನ್ನು ಮೀರಬಾರದು''

ಎಲ್ಲರೂ ಹೋ ಎಂದು ಕೂಗಿಕೊಂಡರು. ಅಂದಿನ ತರಗತಿಗಳು ಬರೀ ಟೂರ್ ಬಗ್ಗೆ ಮಾತಾಡುವುದರಲ್ಲೇ ಕಳೆದುಹೋಯಿತು.

ಸೂರ್ಯ ಈಗ ಕಾಲೇಜಿನ ಕಾರಿಡಾರ್‌ನಿಂದ ಹೊರಬಂದು ಬೈಕ್ ಪಾರ್ಕಿಂಗ್ ಪ್ಲೇಸ್‌ಗೆ ಬಂದನು.

ಅಲ್ಲಿ ಇಬ್ಬರು ನಿಂತಿದ್ದರು!

ಉದಯ ಅದೇ ಕಾಲೇಜಿನ ಮತ್ತೊಬ್ಬಳು ಯುವತಿ ಮೈನಾಳ ಜೊತೆ ಮಾತಾಡುತ್ತಿದ್ದನು!

ಮೈನಾ ಕಾಲೇಜಿನ ಗ್ಲಾಮರ್ ಕ್ವೀನ್!

ಅವಳು ತುಂಬಾ ಕ್ಲೋಸ್ ಆಗಿ ನಿಂತುಕೊಂಡು ಅವನ ಜೊತೆ ಮೆಲು ಧ್ವನಿಯಲ್ಲಿ ಮಾತಾಡುತ್ತಿದ್ದಳು.

ಸೂರ್ಯನನ್ನು ಕಂಡು ಅವರಿಬ್ಬರು ಈಗ ಪರಸ್ಪರ ಮುಖ ನೋಡಿಕೊಂಡರು. ನಂತರ ಅಲ್ಲಿಂದ ಜಾಗ ಖಾಲಿ ಮಾಡಿದರು.

ಸೂರ್ಯ ಅವರು ಹೋದತ್ತಲೇ ನೋಡುತ್ತಿದ್ದಾನೆ. ಅವನಿಗೆ ಏನೋ ಸಂದೇಹ ಬರುತ್ತಿದೆ.

ಈ ಕಾಲೇಜಿನಲ್ಲಿ ಯಾರೋ ಬ್ರೌನ್ ಶುಗರ್ ಡೀಲಿಂಗ್ ನಡೆಸುತ್ತಿದ್ದಾರೆ ಎಂಬುದರ ಬಗ್ಗೆ ಅವನಿಗೆ ಈ ಮೊದಲೇ ಸಂದೇಹ ಬಂದಿತ್ತು. ಅವನ ಅನುಮಾನ ಉದಯನ ಮೇಲೆ. ಆದರೆ ಅದನ್ನು ನಿರೂಪಿಸಲು ಆದಾರ ಇರಲಿಲ್ಲ.

ಸೂರ್ಯ ಈಗ ಬೈಕ್‌ನಲ್ಲಿ ಹೋಗುತ್ತಿದ್ದಾನೆ. ಅವನಿಗೆ ಬೆಳಗಿನ ಘಟನೆ ನೆನಪಾಯಿತು!

ಅಪ್ಸರ ಸೇಡು ತೀರಿಸಿಕೊಂಡಿದ್ದಳು!

ಅವಳ ಕೋಪಕ್ಕೆ ಕಾರಣವೇ ಇರಲಿಲ್ಲ. ಒಂದು ಸಲ ಕ್ಲಾಸ್ ರೂಮಿನಲ್ಲಿ ಅವಳಿಗೆ ಅವಮಾನ ಆಗುವಂತೆ ಮಾತಾಡಿದ್ದನು. ಬುದ್ಧಿ ಹೇಳಿದ್ದನು!

ಅಂದಿನಿಂದ ಸೂರ್ಯನ ತಲೆ ಕಂಡರೆ ಇವಳಿಗೆ ಆಗುತ್ತಿರಲಿಲ್ಲ. ಅವಮಾನ ಮಾಡಲು ತುಂಬಾ ಸಲ ಪ್ರಯತ್ನಿಸಿದ್ದಳು. ಇಂದು ಬೆಳಿಗ್ಗೆ ಕಪ್ಪೆಯನ್ನು ಅವನ ಮೇಲೆ ಹಾರಿಸಿ ಗಾಬರಿಯಾಗುವಂತೆ ಮಾಡಿದ್ದಳು.

ಸೂರ್ಯ ಅದರ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಇನ್ನೊಂದು ಸಲ ಇದೇ ರೀತಿ ಚೇಷ್ಟೆ ಮಾಡಿದರೆ ಆಗ ಅವಳನ್ನು ಸರಿಯಾಗಿಯೇ ವಿಚಾರಿಸಿಕೊಳ್ಳಬೇಕು ಅಂತ ಅಂದುಕೊಂಡಿದ್ದನು ಸೂರ್ಯ!

ಸೂರ್ಯನ ಮುಖ ಅರಳಿತು! ಅವನು ಬೈಕ್ ಅನ್ನು ನಿಲ್ಲಿಸಿದನು. ಯಾಕೆ ಅಂದರೆ ಸಿಲ್ಕ್ ಸ್ಯಾರಿ ಹೌಸ್‌ನ ಹತ್ತಿರ ಕಾರು ನಿಂತಿತ್ತು!

ಇವನ ಅಕ್ಕ ಪಂಕಜಳ ಕಾರು!

ಅಂದರೆ ಅಕ್ಕ ಸ್ಯಾರಿ ಹೌಸ್‌ಗೆ ಬಂದಿದ್ದಾಳೆ. ಅವಳನ್ನು ಕಂಡು ಮಾತಾಡಿಸಬೇಕು ಎಂಬ ಆಸೆ, ಆತುರದಿಂದ ತಾನು ಸಹ ಹೋದನು.

ಅದು ಸಿಲ್ಕ್ ಸ್ಯಾರಿ ಹೌಸ್!

ಕಡಿಮೆ ಎಂದರೂ ಐವತ್ತು ಮಂದಿ ಗಿರಾಕಿಗಳು ವಿವಿಧ ಕಡೆಗಳಲ್ಲಿ ಸೀರೆಯನ್ನು ನೋಡುವುದರಲ್ಲಿ ಮಗ್ನರಾಗಿದ್ದರು.

ಒಂದು ಗುಂಪಿನಲ್ಲಿ ಕಂಡನು. ಇವನ ಹೋಲಿಕೆ ಇದ್ದ ಶ್ರೀಮಂತ ಚಲುವೆ!

ಪಂಕಜ ಪ್ರಸಾದ್! ಅವಳನ್ನು ನೋಡುತ್ತಿರುವಂತೆಯೇ ರಕ್ತ ಸಂಬಂಧದ ಭಾವನೆಗಳು ಜಾಗೃತಗೊಂಡು ಸಂತೋಷ ಮತ್ತು ಉದ್ವೇಗದ ಪರಕಾಷ್ಠೆಯನ್ನು ತಲುಪಿದನು.

ಅಕ್ಕ...ನಮ್ಮ ಪ್ರೀತಿಯ ಅಕ್ಕ!

ಎಂತಹ ಸುಂದರಿ ನಮ್ಮ ಅಕ್ಕ!

ಕಣ್ಣಿನ ರೆಪ್ಪೆ ಸಹ ಆಡಿಸದೆ ಅವಳ ಕಡೆ ನೋಡುತ್ತಿದ್ದಾನೆ. ಪಂಕಜಳಿಗೆ ನಲವತ್ತಾಗಿರಬಹುದು!

ಯುವತಿಯರನ್ನೇ ನಾಚಿಸುವಂತೆ ಇದ್ದಾಳೆ. ಒಂದೇ ಒಂದು ತಲೆಯ ಕೂದಲು ಸಹ ಬೆಳ್ಳಗಾಗಿಲ್ಲ! ದೇಹದ ರಚನೆ ಬಿಗಿ ಕಳೆದುಕೊಂಡಿಲ್ಲ.

ಕಣ್ಣುಗಳಲ್ಲಿ ಅದೇ ಕಾಂತಿ!

ಸೊಂಟದ ಹತ್ತಿರ ಅದೇ ಸಪೂರತೆ. ಎಲ್ಲಿಯೂ ಸಹ ಸುಖದ ಬೊಜ್ಜು ಕಂಡು ಬರುತ್ತಿಲ್ಲ!

ಮುಖದಲ್ಲಿ ತಾಯಿಯ ಹೋಲಿಕೆ!ಇವರಿಬ್ಬರ ಹೋಲಿಕೆ ಸೂರ್ಯನಿಗೆ ಇದೆ.

ಅವಳು ಸೀರೆಯನ್ನು ಸೆಲೆಕ್ಟ್ ಮಾಡಿ ಪ್ಯಾಕೆಟ್ ಅನ್ನು ಹಿಡಿದು ಹೊರಬಂದಳು.

''ಎಕ್ಸ್‌ಕ್ಯೂಜ್ ಮೀ...'' ಎಂಬ ಸ್ವರ ಕೇಳಿ ಹಿಂತಿರುಗಿ ನೋಡಿದಳು.

ತನ್ನ ಎದುರಿಗೆ ತ್ರೀಪೀಸ್ ಸೂಟ್‌ನಲ್ಲಿ ಗಂಭೀರವಾಗಿ ನಿಂತಿರುವ ಸೂರ್ಯನ ನೋಡಿದಳು. ಅವಳ ಕಣ್ಣುಗಳು ಅರಳಿತು.

ಅವಳಿಗೆ ಇವನನ್ನು ಎಲ್ಲಿಯೋ ನೋಡಿದ್ದೇನೆ ಅಂತ ಅನಿಸುತ್ತಿದೆ. ಭಾವನೆಗಳು ಸ್ಪಂದಿಸುತ್ತಿವೆ!

ನೆನಪಾಗುತ್ತಿಲ್ಲ!

ನೆನಪಾಗಲು ಸಾಧ್ಯವೇ ಇಲ್ಲ!

ಯಾಕೆ ಅಂದರೆ ಸೂರ್ಯನಿಗೆ ಹತ್ತು ವರ್ಷಗಳಾಗಿದ್ದಾಗ ನೋಡಿದ್ದಳು. ಈಗ ಬದಲಾಗಿದ್ದಾನೆ!

ಸಿನಿಮಾ ಹೀರೋ ಥರಾ ಬೆಳೆದಿದ್ದಾನೆ! ಅವಳು ಗೊಂದಲದಿಂದಲೇ ''ನೀವು...ನೀವು...''

ನಗುತ್ತಲೇ ''ಸ್ಸಾರಿ...''

ಅವನು ನಗುತ್ತಿದ್ದರೆ ಅವಳಿಗೆ ಕನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಂಡಂತೆ ಭಾಸವಾಗುತ್ತಿದೆ. ಅವಳು ನಕ್ಕರೆ ಸೂರ್ಯನ ಹೋಲಿಕೆ ಕಂಡು ಬರುತ್ತಿತ್ತು.

''ಯಾ...ಯಾವ ಸೂರ್ಯ...?''

ಸೂರ್ಯ ನಗುತ್ತಲೇ ''ನನ್ನ ಮುಖ ನೋಡಿದರೆ ಗೊತ್ತಾಗುವುದಿಲ್ಲವೇ? ನಾನು ಕಣಕ್ಕ...ನಿನ್ನ ತಮ್ಮ ಸೂರ್ಯ'' ಎಂದನು.

ಸಂತೋಷ...! ಆಶ್ಚರ್ಯ!!

ಅವಳ ಕಣ್ಣುಗಳು ಅರಳಿದವು! ಮುಖ ಹಿಗ್ಗಿಕೊಂಡು ಇಷ್ಟಗಲ ಆಯಿತು.

ಸಂತೋಷದ ಪರಾಕಾಷ್ಠೆ! ಉದ್ವೇಗದಿಂದ ಸಣ್ಣಗೆ ನಡುಗುತ್ತಿದ್ದಾಳೆ.

ಸೂರ್ಯ ಅವಳ ಹತ್ತಿರ ಬರುತ್ತಾ ''ಅಕ್ಕ...ಈಗಲಾದರೂ ನನ್ನ ನೆನಪಾಯಿತೆ?'' ಎಂದು ಅವಳ ಮುಖವನ್ನೇ ನೋಡಿದನು.

ಅವಳಿಗೆ ವಿಪರೀತ ಸಂತೋಷ ಆಗುತ್ತಿದೆ. ಅದನ್ನು ತಡೆಯಲಾರದೆ ಅವಳು ಸಸೂರ್ಯನ ಕೈಯನ್ನು ಅದುಮುತ್ತಾ ''ಸೂರ್ಯ...ಅಮ್ಮಾ...ಅಮ್ಮ ಹೇಗಿದ್ದಾಳೆ'' ಎಂದಳು ಉದ್ವೇಗದಿಂದ.

''ಚೆನ್ನಾಗಿದ್ದಾಳೆ. ನಿನ್ನನ್ನು ನೋಡಬೇಕು. ಅಂತ ಇಪ್ಪತ್ತು ವರ್ಷಗಳಿಂದ ಹಂಬಲಿಸುತ್ತಿದ್ದಾಳೆ. ನಿನ್ನ ನೆನಪಲ್ಲೇ ಉಸಿರು ಬಿಗಿ ಹಿಡಿದಿದ್ದಾಳೆ''

ಅವಳ ಕಣ್ಣುಗಳು ಹನಿಗೂಡುತ್ತಿವೆ. ಅವಳು ಈಗ ಭಾವುಕಳಾಗಿ ಕಂಪಿಸುತ್ತಿದ್ದಾಳೆ.

''ಅಕ್ಕ...ಭಾವ ಎಲ್ಲಿ?''

ಅದೇಕೋ ಅವಳು ಬೆಚ್ಚಿಬಿದ್ದಳು. ಗಾಬರಿಯಿಂದ ಸುತ್ತಲೂ ನೋಡುತ್ತಾ ''ಸ್ಯಾರಿ ಹೌಸ್‌ನ ಮಾಲೀಕರ ಜೊತೆ ಮಾತಾಡುತ್ತಿರಬೇಕು ಈಗ ಬರುತಾರೆ''

''ಭಾಗ ಹೇಗಿದ್ದಾರೆ ಅಕ್ಕ?''

'ತುಂಬಾ ಚೆನ್ನಾಗಿದ್ದಾರೆ...''

''ನಾನೊಂದು ಸಲ ನೋಡಬೇಕು ಈಗ ಅಂತಹ ಅಮೃತಘಳಿಗೆ ಕೂಡಿ ಬಂದಿದೆ''

ಪಂಕಜ ಗಾಬರಿಯಿಂದ ''ಈಗ ಮಾತ್ರ ಬೇಡ ಸೂರ್ಯ. ಅದು...ಅದು...''

''ಯಾಕೆ...?!''

ಪಂಕಜ ''ನಿನ್ನ ಭಾವ ಅಂದು ಆಗಿರುವ ಅವಮಾನವನ್ನು ಮರೆತಿಲ್ಲ. ಆದ್ದರಿಂದ ಈಗಲೇ ನಿನ್ನ ಪರಿಚಯ ಮಾಡಿಕೊಳ್ಳಬೇಡ. ಅವರ ಮೂಡ್ ನೋಡಿಕೊಂಡು ಅಂತ ಅಮ್ಮ ಹಂಬಲಿಸುತ್ತಿದ್ದಾಳೆ''

''ನಾನೆ ಬರುತ್ತೇನೆ''

''ಯಾವಾಗ?''

''ಟೈಂ ನೋಡಿಕೊಂಡು...''

ಸೂರ್ಯ ತನ್ನ ಜೇಬಿನಿಂದ ವಿಸಿಟಿಂಗ್ ಕಾರ್ಡ್ ಅನ್ನು ಕೊಡುತ್ತಾ ''ನಾಳೆಯಿಂದ ನಾನು ಒಂದುವಾರ ಊರಿನಲ್ಲಿ ಇರುವುದಿಲ್ಲ. ಕಾಲೇಜಿನಿಂದ ಟೂರ್ ಹೋಗುತ್ತಿದ್ದೇನೆ. ಹಾಗಂತ ಅಮ್ಮನನ್ನು ನೋಡದೆ ಇರಬೇಡ''

ಪಂಕಜ ಕಣ್ಣೀರನ್ನು ಒರೆಸಿಕೊಂಡು ''ಸೂರ್ಯ...ನಾನು ನಾಳೆಯೆ ಅಮ್ಮನನ್ನು ನೋಡುತ್ತೇನೆ. ನಿನ್ನ ಜೊತೆ ನಾನು ತುಂಬಾ ಮಾತಾಡಬೇಕು. ನನ್ನ ಎದೆ ಉದ್ದ ಬೆಳೆದು ನಿಂತಿರುವ ನನ್ನ ತಮ್ಮನನ್ನು ತಬ್ಬಿಕೊಳ್ಳಬೇಕು ಅಂತ ಆಸೆಯಾಗುತ್ತಿದೆ''

ಸೂರ್ಯ ಉದ್ವೇಗವನ್ನು ನಿಯಂತ್ರಿಸಿಕೊಂಡು ''ನಾವೆಲ್ಲಾ ಒಂದಾಗುವ ಕಾಲ ಕೂಡಿ ಬರುತ್ತಿದೆ. ಅಕ್ಕ ನಿನ್ನ ಫೋನ್ ನಂಬರ್ ಕೊಡು''

ಅವಳು ತನ್ನ ವ್ಯಾನಿಟಿ ಬ್ಯಾಗಿನಿಂದ ಕಾರ್ಡನ್ನು ತೆಗೆದುಕೊಡುತ್ತಾ

''ಸೂರ್ಯ, ಇದರಲ್ಲಿ ನನ್ನ ಮೊಬೈಲ್ ನಂಬರ್ ಇದೆ. ನೀನು ಯಾವಾಗ ಬೇಕಾದರೂ ಫೋನ್ ಮಾಡು. ಬರುತ್ತೇನೆ ಸೂರ್ಯ. ನನ್ನ ಗಂಡ ಬಂದರೆ ತೊಂದರೆಯಾಗುತ್ತದೆ''

ಸೂರ್ಯ ಅವಳ ಕೈಯನ್ನು ಮೃದುವಾಗಿ ಅದುಮುತ್ತಾ ''ಅಕ್ಕ...ನಾನು ಭಾವನನ್ನು ದೂರದಿಂದಲೆ ನೋಡುತ್ತೇನೆ''

ಅವಳು ಕಣ್ಣೀರನ್ನು ಒರೆಸಿಕೊಂಡು ತಲೆಯಾಡಿಸಿದಳು. ಹತ್ತು ನಿಮಿಷ ಕಳೆಯಿತು.

ಸ್ಪಿರಂಗ್ ಡೋರ್ ತಳ್ಳಿಕೊಂಡು ಕೊಠಡಿಯಿಂದ ಪ್ರಸಾದ್ ಹೊರಗೆ ಬಂದರು!

ಎತ್ತರವಾದ ವ್ಯಕ್ತಿ. ಅದಕ್ಕೆ ತಕ್ಕ ದೇಹದ ತೂಕ! ಬೊಕ್ಕ ತಲೆ!

ತ್ರೀಪೀಸ್ ಸೂಟ್ ಧರಿಸಿದ್ದಾನೆ. ಮುಖದಲ್ಲಿ ಗಾಂಭೀರ್ಯತೆ ಇದೆ. ತುಸು ಬೊಜ್ಜು ಬಂದಿದೆ!

ಆದರೆ ಆರೋಗ್ಯ ಕಳೆ ಕಂಡು ಬರುತ್ತಿದೆ. ಅವನು ಈಗ ಕಾರಿನ ಹತ್ತಿರ ಬಂದನು.

ಅಲ್ಲಿ ನಿಂತಿದ್ದ ಪಂಕಜ ಈಗ ದೂರದಿಂದಲೇ ಸೂರ್ಯನ ಕಡೆ ನೋಡಿದಳು.

ಮುಗುಳು ನಗೆ ಬೀರಿದಳು.

ಕಾರು ಚಲಿಸಿತು!

ಸೂರ್ಯ ನಿಟ್ಟುಸಿರನ್ನು ಬಿಡುತ್ತಾ ಸ್ಟಾರಿ ಹೌಸ್‌ನಿಂದ ಹೊರ ಬಂದನು.

ತನ್ನ ತಾಯಿಗೆ ವಿಷಯ ತಿಳಿಸಿದನು. ಮಂಗಳಮ್ಮ ಹತ್ತು ಹಲವಾರು ಪ್ರಶೆ+ನಗಳನ್ನು ಕೇಳಿದರು ಮಗಳ ಬಗ್ಗೆ ಅವಳು ನನ್ನನ್ನು ನೋಡಲು ಯಾವಾಗ ಬರುತ್ತಾಳೋ ಅಂತ ಹತ್ತು ಸಲ ಕೇಳಿದ್ದರು.

ಮಾರನೆಯ ದಿನ ಬೆಳಿಗ್ಗೆ ನಾಲ್ಕು ಗಂಟೆಗೆ ಸೂರ್ಯ ಕಾಲೇಜಿನ ಹತ್ತಿರ ಬಂದನು. ಎಲ್ಲಾ ವಿದ್ಯಾರ್ಥಿಗಳು ಅಲ್ಲಿ ಗುಂಪುಗೂಡಿದ್ದರು ಸೂಪರ್ ಡಿಲಕ್ಸ್ ಬಸ್ಸು ರೆಡಿಯಾಗಿತ್ತು.

ಕಾಲೇಜಿನ ಟೂರ್ ಅಂದಮೇಲೆ ಕೇಳಬೇಕೆ. ನಗು, ಉತ್ಸಾಹ, ಸಂಭ,ರಮ ತುಂಬಿತ್ತು!

ಒಟ್ಟು ಐವತ್ತು ಮಂದಿ ಅದರಲ್ಲಿ ಯುವತಿಯರ ಸಂಭ್ರಮ ಜಾಸ್ತಿ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸ. ಈಗ ಬಸ್ಸು ಹಾಸನದತ್ತ ಹೋಗುತ್ತಿತ್ತು.

## ಮೂರು

ಉದಯ ಮತ್ತು ಅವನ ಸ್ನೇಹಿತರು ಮುಂಭಾಗದ ಸೀಟಿನಲ್ಲಿ ಕುಳಿತುಕೊಂಡಿದ್ದರು.

ಒಂದು ಕಡೆ ಸೂರ್ಯ ಮತ್ತು ಅವನ ಸಹೋದ್ಯೋಗಿ. ಅದಕ್ಕೆ ಹೊಂದಿಕೊಂಡಂತೆ ತುಸು ಅಂತರದಲ್ಲಿ ಇರುವ ಸೀಟಿನಲ್ಲಿ ಅಪ್ಸರ ಮತ್ತು ಅವಳ ಗೆಳತಿಯರು ಕುಳಿತಿದ್ದಾರೆ. ಅಪ್ಸರ ಆಗಾಗ ಸೂರ್ಯನನ್ನು ನೋಡುತ್ತಿದ್ದಾಳೆ.

ಅವಳ ಕಣ್ಣುಗಳಲ್ಲಿ ತುಂಟತನ ಇದೆ. ಇವನ ಗಾಂಭೀರ್ಯ ಮುಖ ಮುದ್ರೆ ಕಂಡರೆ ಇವಳಿಗೆ ರೇಗಿಸಬೇಕು ಅಂತ ಆಸೆಯಾಗುತ್ತಿದೆ.

ಆದರೆ ಪ್ರಿನ್ಸಿಪಾಲ್ ಮತ್ತು ಉಳಿದ ಪ್ರೊಫೆಸರುಗಳು ಇರುವಾಗ ಆ ರೀತಿ ಮಾಡಲು ಸಾಧ್ಯವೆ?

ಉಕ್ಕಿ ಬರುತ್ತಿರುವ ನಗುವನ್ನು ತಡೆದುಕೊಂಡು ಸೂರ್ಯನ ಕಡೆಯೇ ನೋಡುತ್ತಾ ಅವಳು ತನ್ನ ಪಕ್ಕದಲ್ಲಿ ಇದ್ದ ಗೆಳತಿಗೆ ಏನೇನೋ ಹೇಳುತ್ತಿದ್ದಾಳೆ.

ಪ್ರೋಗ್ರಾಂ ಪ್ರಕಾರ ಮೊದಲು ಸುಬ್ರಹ್ಮಣ್ಯಕ್ಕೆ ಹಿಗಿ ದೇವರ ಸಸೇವೆ ಮತ್ತು ಊಟ ಮುಗಿಸಿಕೊಂಡು ನಂತರ ಮಧ್ಯಾಹ್ನ ಧರ್ಮಸ್ಥಳಕ್ಕೆ ಹಿಗಬೇಕಿತ್ತು.

ಅಪ್ಸರ ಮೆಲ್ಲಗೆ ''ಟೂರ್ ಪ್ರೋಗ್ರಾಂ ಫಿಕ್ಸ್ ಮಾಡಿರೋವ್ರು ಯಾರೋ ತುಂಬಾ ದೈವ ಭಕ್ತರೇ ಇರಬೇಕು. ಎಲ್ಲಿ ನೋಡಿದರೂ ದೇವಸ್ಥಾನ, ಸಪ್ಪೆ ಊಟ'' ಎಂದು ಗೇಲಿ ಮಾಡಿ ನಕ್ಕಳು.

ಸೂರ್ಯನ ಮುಖ ಕೆಂಪಾಯಿತು. ಅವನೇ ತಾನೇ ಪ್ರೋಗ್ರಾಂ ಆರ್ಗನೈಸರ್!

ಹಾಸನದ ಸನ್ಮಾನ್ ಹೋಟೆಲ್‌ನಲ್ಲಿ ಬೆಳಗಿನ ತಿಂಡಿಗೆ ವ್ಯವಸ್ಥೆ ಮಾಡಲಾಗಿತ್ತು.

ಇಡ್ಲಿ ವಡೆ, ಸಾಂಬಾರ್ ಮತ್ತು ಪೂರಿ, ಮಸಾಲೆ ದೋಸೆ, ಒಂದು ಗಂಟೆ ಮೊದಲೇ ಫೋನ್ ಮಾಡಿದ್ದರಿಂದ ಹೋಟೆಲ್‌ನವರು ಎಲ್ಲಾ ರೆಡಿ ಮಾಡಿದ್ದರು

ತಿಂಡಿ ತಿಂದ ಮೇಲೆ ಯುವತಿಯರ ಗುಂಪು ಬೀಡಾ ಅಂಗಡಿಗೆ ದೌಡಾಯಿಸಿತು.

ಉದಯ ಮತ್ತು ಅವನ ಕೆಲವು ಸ್ನೇಹಿತರ ಗುಂಪು ಸಿಗರೇಟ್ ಸೆದ್ದರು.

ಪ್ರಯಾಣ ಮುಂದುವರೆಯಿತು.

ಹತ್ತಿರದಿಂದ ಅಪ್ಸರಳ ಮುಖ ನೋಡಿದನು ಸೂರ್ಯ. ಅವಳು ಮೊದಲೇ ಚೆಲುವೆ. ಬೀಡಹಾಕಿದ್ದರಿಂದ ಅವಳ ತುಟಿಗಳು ಮಿನುಗುತ್ತಿತ್ತು!

ಕೆಂಪು ಛಾಯೆಯ ರಸದ ರಂಗು!

ಸೂರ್ಯನ ಮೈ ಝುಂ ಎಂದಿತು. ಛೇ...ಛೆ...ನನಗೆ ಏನಾಗಿದೆ ಇವತ್ತು ಎಂದುಕೊಂಡು ತನ್ನ ದೃಷ್ಟಿಯನ್ನು ಬದಲಿಸಿದನು.

ಅಪ್ಸರ ಇದನ್ನು ಗಮನಿಸಿದ್ದಳು. ಅವಳ ಮುಖದಲ್ಲಿ ಗೆಲುವಿನ ನಗು!

ತುಂಬಾ ಗಾಂಭೀರ್ಯದ ಪ್ರೊಫೆಸರ್ ಅನ್ನು ನಾನು ಚೆನ್ನಾಗಿಯೇ ಆಟ ಆಡಿಸುತ್ತೇನೆ ಎಂದುಕೊಂಡಳು. ಅವಳು ಉದ್ದೇಶಪೂರ್ವಕವಾಗಿಯೇ ಸೂರ್ಯ ಕುತಿಳಿದ್ದ ಸೀಟಿನ ಪಕ್ಕದ ಸೀಟಿನಲ್ಲೇ ಕುಳಿತಿದ್ದಳು.

ಅಂತ್ಯಾಕ್ಷರಿ ಪ್ರಾರಂಭವಾಯಿತು!

ಕೆಲವರು ತಾವು ಮನೆಯಿಂದ ತಂದಿದ್ದ ತಿಂಡಿಗಳನ್ನು ಎಲ್ಲರಿಗೂ ಹಂಚಲಾರಂಭಿಸಿದರು.

ಅದೊಂದು ರಸಮಯ ಸನ್ನಿವೇಶ!

ಹೌದು, ನಗು, ಕೇಕೆ!

ಸುಬ್ರಮಣ್ಯದ ಕುಮಾರ ಧಾರೆಯಲ್ಲಿ ಸ್ನಾನ ಮಾಡಿಕೊಂಡು ಎಲ್ಲರೂ ದೇವರ ದರ್ಶನ ಮಾಡಿದರು.

ಮಧ್ಯಾಹ್ನ ಸೊಗಸಾದ ಊಟ!

ಅನ್ನ, ಹುಳಿ ಮತ್ತು ಕಾಯಿ ಚಟ್ನಿ ಏನೋ ಒಂದು ರೀತಿಯ ರುಚಿ ಅಪ್ಸರ ಅಂತು ಯಾವ ಸಂಕೋಚವೂ ಇಲ್ಲದೆ ಗಡದ್ದಾಗಿ ತಿಂದಳು.

ಒಂದು ವಾರದ ಟೂರ್ ಪ್ರೋಗ್ರಾಂ ಹಾಗಾಗಿ ಯಾರೂ ಸಹ ಆಯಾಸ ಮಾಡಿಕೊಂಡಿರಲಿಲ್ಲ!

ಧರ್ಮಸ್ಥಳದಲ್ಲಿ ಅಂದು ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಮೊದಲೇ ಫೋನ್ ಮಾಡಿದ್ದರಿಂದ ಒಂದೇ ಹೋಟೆಲ್‌ನಲ್ಲಿ ಬೇರೆ ಬೇರೆ ರೂಮುಗಳಲ್ಲಿ ಉಳಿದುಕೊಂಡಿದ್ದರು.

ಹೋಟೆಲ್‌ನ ಕಾರಿಡಾರ್! ಆಗ ರಾತ್ರಿ ಒಂಬತ್ತು ಗಂಟೆ ಇರಬೇಕು!

ಮೈನ ಹೊರಗೆ ಬಂದಳು.

ಉದಯ ಮತ್ತೊಂದು ಕಡೆಯಿಂದ ಅಲ್ಲಿಗೆ ಬಂದು ಗಿಡಗಳ ನಡುವೆ ನಿಂತನು.

ಮೈನ ಅಲ್ಲಿಗೆ ಬಂದಳು.

ಉದಯ ಅವಳ ಕೈಗೆ ಏನೋ ತುರುಕಿದನು. ಅವಳು ಅದನ್ನು ಕಣ್ಣರಳಿಸಿ ನೋಡಿದಳು.

ಅದು ಕ್ಯಾಡ್‌ಬರೀಸ್ ಚಾಕೋಲೇಟ್!

ಅವಳು ಭಯದಿಂದ ನೋಡುತ್ತಿರುವಾಗಲೇ ಉದಯ ತುಸು ಗಂಭೀರವಾಗಿ ''ನಿನಿಗೆ ಹೇಳಿದ್ದು ನೆನಪಿದೆ ತಾನೇ?''

ಅವಳು ತಲೆಯಾಡಿಸಿದಳು.

'ಹೂಂ...ನಿನ್ನ ರೂಮಿಗೆ ಹೋಗು' ಎಂದು ಉದಯ ಅಲ್ಲಿಂದ ಹೊರ ನಡೆದನು.

ರೂಮಿನ ಕಿಟಕಿಯ ಮೂಲಕ ಹೊರಗಿನ ದೃಶ್ಯ ನೋಡುತ್ತಿದ್ದ ಸೂರ್ಯ ಇದನ್ನು ನೋಡಿದನು ಮಾತುಗಳು ಕೇಳಿರಲಿಲ್ಲ.

ಆದರೆ ದೃಶ್ಯ ಕಂಡಿತ್ತು!

ಕಾಲೇಜಿನಲ್ಲಿಯೂ ಸಹ ಇವರಿಬ್ಬರೂ ಇದೇ ರೀತಿ ರಹಸ್ಯವಾಗಿ ಸಂಧಿಸಿ ಮಾತಾಡುವುದನ್ನು ಹಿಂದೆ ಒಂದು ಸಲ ಕಂಡಿದ್ದನು.

ಏಕೋ ಅನುಮಾನ ಬರುತ್ತಿದೆ. ಸೂರ್ಯ ಈಗ ಎದ್ದು ರೂಮಿನಿಂದ ಹೊರಬಂದನು! ಆಗ ಅಲ್ಲಿ ಮೈನಳನ್ನು ಕಂಡನು!

ಅವಳು ರೂಮಿನೊಳಗೆ ಹೋಗಿ ಡೋರ್ ಕ್ಲೋಸ್ ಮಾಡಿಕೊಂಡಳು.

ಸೂರ್ಯ ಈಗ ಆ ರೂಮಿನ ಹತ್ತಿರ ಬಂದು ವಿಂಡೋ ಮೂಲಕ ನೋಡಿದನು.

ಅಲ್ಲಿ...ಅಲ್ಲಿ ಅಪ್ಸರ ಇದ್ದಳು...ಮತ್ತೊಬ್ಬಳು ಯುವತಿ ನಿದ್ರಿಸುತ್ತಿದ್ದಳು.

ಒಂದೊಂದು ಕೊಠಡಿಯಲ್ಲಿ ಇಬ್ಬರು ಉಳಿಯಲು ವ್ಯವಸ್ಥೆ ಮಾಡಲಾಗಿತ್ತು. ಮೈನಳಿಗೆ ಬೇರೆಯ ಕೊಠಡಿ ಕೊಡಲಾಗಿತ್ತು. ಆದರೂ ಇವಳೇಕೆ ಬಂದಳು?

ಮೈನ ಈಗ ತುಂಬಾ ಕ್ಲೋಸ್ ಆಗಿ ಅಪ್ಸರಳ ಜೊತೆ ಮಾತಾಡುತ್ತಾ ಅವಳ ವ್ಯಾನಿಟಿ ಬ್ಯಾಗಿನಲ್ಲಿ ತಾನು ತಂದಿದ್ದ ಚಾಕೋಲೇಟ್ ಹಾಕಿದಳು. ಇದನ್ನು ಅಪ್ಸರ ನೋಡಲೇ ಇಲ್ಲ!

ಸೂರ್ಯ ನೋಡಿದ್ದನು!

ಅವನಿಗೇನೋ ಸಂದೇಹ ಬರುತ್ತಿದೆ. ಉದಯ ಮೈನಳಿಗೆ ಈಗ ತಾನೇ ಚಾಕುಲೇಟ್ ಕೊಟ್ಟಿದ್ದನು. ಅದನ್ನು ಮೈನ ಕಳ್ಳತನದಲ್ಲಿ ವ್ಯಾನಿಟಿ ಬ್ಯಾಗಿಗೆ ಸೇರಿದ್ದಾಳಲ!

ಅದು ಎಂತಹ ಚಾಕೋಲೇಟ್?

ಪಾಯಿಸನ್ ಮಿಕ್ಸ್ ಆಗಿರಬಹುದೇ?

ಸೂರ್ಯನಿಗೆ ಗಾಬರಿಯಾಯಿತು ಆದರೆ ಅವನು ಆತುರಪಡಲಿಲ್ಲ. ರೂಮಿನಿಂದ ಮೈನ ಹೊರಗೆ ಬರಲು ಎದ್ದ ಕೂಡಲೇ ಅಲ್ಲಿಂದ ಜಾಗ ಖಾಲಿ ಮಾಡಿದನು.

ಸೂರ್ಯ ಚಡಪಡಿಸುತ್ತಿದ್ದಾನೆ!

ಮೈನ ಮತ್ತು ಉದಯನನ್ನು ಹಿಡಿದು ನಾಲ್ಕು ತದುಕಿ ಬಾಯಿ ಬಿಡಿಸಲೇ ಎಂದುಕೊಂಡನು. ಆದರೆ ವಿವೇಕ ಎಚ್ಚರಿಸಿತು. ಸರಿಯಾಗಿ ವಿಷಯ ತಿಳಿಯದೆ ದುಡುಕಿ ಪ್ರವಾಸದ ಸುಂದರ ಸನ್ನಿವೇಶ ಹಾಳು ಮಾಡಬಾರದು ಎಂದುಕೊಂಡು ಸುಮ್ಮನಾದನು.

ಸೂರ್ಯ ಮಲಗಿಕೊಂಡಿದ್ದಾನೆ. ಆದರೆ ನಿದ್ರೆ ಬರುತ್ತಿಲ್ಲ ಚಡಪಡಿಸುತ್ತಿದ್ದಾನೆ.

ಅದು ಎಂತಹ ಚಾಕೋಲೇಟ್? ಒಂದು ವೇಳೆ ಅದನ್ನು ಅವಳು ಈಗಲೇ ತಿಂದಿರಬಹುದೇ?

ಮನಸ್ಸು ತಡೆಯಲಿಲ್ಲ ರೂಮಿನಿಂದ ಎದ್ದು ಅಪ್ಸರಳ ರೂಮಿನ ಹತ್ತಿರ ಬಂದನು.

ಅಲ್ಲಿ ದೀಪ ಉರಿಯುತ್ತಿದೆ!

ಅಪ್ಸರ ಈಗ ಓದುತ್ತಿದ್ದ ಪುಸ್ತಕವನ್ನು ತೆಗೆದು ಇರಿಸಿ ದೀಪ ಆರಿಸಿ ಮಲಗಿದಳು.

ಸೂರ್ಯನಿಗೆ ಈಗ ಸಮಾಧಾನ ಉಂಟಾಯಿತು. ಅವನು ತನ್ನ ರೂಮಿನತ್ತ ಹೋಗಲು ಹಿಂತಿರುಗಿದನು. ಅಲ್ಲಿ...ಅಲ್ಲಿ ಉದಯ ನಿಂತಿದ್ದನು.

ಅವನು ಕೆಕ್ಕರಿಸಿಕೊಂಡು ನೋಡುತ್ತಾದ್ದಾನೆ. ಇಲ್ಲೇ ಈಗಲೇ ಈ ಪ್ರೊಫೆಸರ್ ಸೂರ್ಯನನ್ನು ಅಡ್ಡಡ್ಡ ಸಿಗಿಯಲೇ ಎಂಬಂತೆ ಕೋಪ ಉಕ್ಕೇರಿ ಬರುತ್ತಿದೆ. ಆದರೆ ಅದು ತನ್ನ ಒಬ್ಬನಿಂದ ಅಸಾಧ್ಯ ಅಂತ ಗೊತ್ತಿದೆ.

ಸೂರ್ಯನ ಮೇಲೆ ಕೈ ಮಾಡಲು ಹೋದರೆ ತನ್ನನ್ನು ನಿರಾಯಾಸವಾಗಿ ಎತ್ತಿ ಎಸೆಯಬಲ್ಲ ಎಂದು ಗೊತ್ತಿದೆ ಅವನಿಗೆ.

ಸೂರ್ಯ ಈಗ ಅವನತ್ತ ಅನುಮಾನದಿಂದಲೇ ನೋಡುತ್ತಾ ಹೊರ ನಡೆದನು.

ಮಾರನೆಯ ದಿನ ಬೆಳಿಗ್ಗೆ ಕಾಫಿ ಕುಡಿದುಕೊಂಡು ಮಂಗಳೂರಿಗೆ ಪ್ರಯಾಣ ಬೆಳೆಸಿದರು. ಆದರೆ ಮೊದಲಿನ ನಗು, ಗಲಾಟೆ ಇರಲಿಲ್ಲ.

ಸೂರ್ಯನ ಪಕ್ಕದ ಸೀಟಿನಲ್ಲೇ ಈಗಲೂ ಸಹ ಅಪ್ಸರ ಕುಳಿತಿದ್ದಾಳೆ. ಅವಳ ತೊಡೆಯ ಮೇಲೆ ವ್ಯಾನಿಟಿ ಬ್ಯಾಗ್ ಇದೆ.

ಸೂರ್ಯ ಅತ್ತ ನೋಡಿದನು. ಅದರಲ್ಲಿರುವ ಚಾಕೋಲೇಟ್ ಬಗ್ಗೆ ಗಾಬರಿಯಾಗುತ್ತಿದೆ!

ಬಸ್ಸು ಮಂಗಳೂರಿನ ಹೋಟೆಲೊಂದರ ಮುಂದೆ ನಿಂತುಕೊಂಡಿತು. ಮಂಗಳೂರಿನಲ್ಲಿ ಅಡ್ಡಾಡಲು ಒಂದು ಗಂಟೆ ಟೈಂ ಕೊಡಲಾಯಿತು.

ಎಲ್ಲರೂ ಗುಂಪು, ಗುಂಪಾಗಿ ಚದುರಿದರು. ಅಪ್ಸರಳ ಜೊತೆ ಮೈನ ಸೇರಿಕೊಂಡಳು.

ಸೂರ್ಯನಿಗೆ ಅನುಮಾನ ಬಂದು ಈಗ ಅವರಿಬ್ಬರನ್ನು ಹಿಂಬಾಲಿಸಿಕೊಂಡು ಹೊರಟನು.

ಅವರಿಬ್ಬರು ಐಸ್‌ಕ್ರೀ ತಿಂದರು. ನಂತರ ಅಪ್ಸರ ಹಣ ಕೊಡಲು ತನ್ನ ವ್ಯಾನಿಟಿ ಬ್ಯಾಗಿಗೆ ಕೈ ಹಾಕಿದಾಗ ಎರಡು ಚಾಕೊಲೇಟ್ ಕಂಡಿತು.

ಅವಳು ಆಶ್ಚರ್ಯದಿಂದ ''ಅರೆ...ಇದು ಎಲ್ಲಿಂದ ಬಂತು? ನಾನು ಕೊಂಡುಕೊಂಡಿಲ್ಲ. ಅರೆ ಇದೆಂತಹ ಪವಾಡ...!''

ಮೈನ ''ಅಪ್ಸರ...ನಿನಗೆ ಗೊತ್ತಿಲ್ಲದಂತೆ ಚಾಕೋಲೇಟ್ ಹೇಗೆ ಬರಲು ಸಾಧ್ಯ? ಅದರ ಬಗ್ಗೆ ಯಾಕೆ ತಲೆ ಕೆಡಿಸಿಕೊಳ್ಳುತ್ತೀಯ ತಿಂದುಬಿಡು ಅಪ್ಸರ''

ಅಪ್ಸರ ''ಅದೂ ಸರಿ ಅನ್ನು ತಗೋ ನೀನೊಂದು ತಿನ್ನು'' ಎಂದು ಕೈ ಚಾಚಿದಳು.

''ಅಪ್ಸರ...ಅದು ನನ್ನ ಬ್ರಾಂಡ್ ಅಲ್ಲ'' ಎಂದು ತನ್ನ ಬ್ಯಾಗಿನಿಂದ ಚಾಕೋಲೇಟ್ ಅನ್ನು ತೆಗೆದು ಬಾಯಿಗೆ ಹಾಕಿಕೊಂಡಳು.

ಅಪ್ಸರ ಬ್ಯಾಗಡೆ ಬಿಡಿಸಿದಳು. ಇನ್ನೇನು, ಅದನ್ನು ಬಾಯಿಗೆ ಹಾಕಿಕೊಳ್ಳಬೇಕು ಆಗ ಕೇಳಿಸಿತು ಗಂಭೀರವಾದ ಸೂರ್ಯನ ಧ್ವನಿ!

''ಅಪ್ಸರ...ಅದನ್ನು ತಿನ್ನಬೇಡ''

ಗಾಬರಿಯಾದಳು ಮೈನ.

ಅಪ್ಸರ ಕೋಪ ಮತ್ತು ವ್ಯಂಗ್ಯವಾಗಿ ''ಇದೇನು ಸಾರ್...ಸಿ.ಬಿ.ಐ.ನವರ ತರಹ ನಮ್ಮನ್ನು ಆಗಿನಿಂದಲೂ ಸುಳಿವೇ ಕೊಡದಂತೆ ಫಾಲೋ ಮಾಡಿಕೊಂಡು ಬರುತ್ತಿದ್ದೀರ''

ಸೂರ್ಯ ಅವಳ ಹತ್ತಿರ ಬರುತ್ತಾ ''ಅಪ್ಸರ ಇದನ್ನು ನೀನು ತಿನ್ನಬೇಡ''

ಅಪ್ಸರ ವ್ಯಂಗ್ಯವಾಗಿ ''ಅದನ್ನು ಹೇಳಲು ನೀವು ಯಾರು ಸಾರ್? ನಮ್ಮ ಪರ್ಸನಲ್ ವಿಷಯದ ಬಗ್ಗೆ ನೀವು ತಲೆ ಕೆಡಿಸಿಕೊಳ್ಳಬೇಡಿ ಅಂತ ನಾನು ಆಗಲೇ ಹೇಳಿದ್ದೇನೆ''

ಸೂರ್ಯ ಕೋಪದಿಂದ ''ನಿನ್ನ ಪರ್ಸನಲ್ ನನಗೆ ಬೇಕಾಗಿಲ್ಲ. ಆದರೆ ಈ ಚಾಕಲೋಟ್ ಅನ್ನು ನೀನು ತಿನ್ನಕೂಡದು''

''ಯಾಕೆ ತಿನ್ನಬಾರದು?''

ಸೂರ್ಯ ''ಯಾಕೆ...ಏನು ಅಂತ ಬಾಯಲ್ಲಿ ಹೇಳಿದರೆ ನಿನಗೆ ಅರ್ಥವೂ ಆಗುವುದಿಲ್ಲ ಮತ್ತು ನಂಬಿಕೆ ಸಹ ಬರುವುದಿಲ್ಲ''

ಅಪ್ಸರ ಕೋಪದಿಂದ ''ದೊಡ್ಡ ಹೀರೋ ಥರಾ ಪ್ರತಿಯೊಂದು ವಿಷಯಕ್ಕೂ ಮೂಗು ತೂರಿಸಿಕೊಂಡು ಬರಬೇಡಿ ಸಾರ್. ಇದನ್ನು ನಾನು ಯಾಕೆ ತಿನ್ನಬಾರದು? ತಿಂದೇ ತಿನ್ನುತ್ತೇನೆ''

ಸೂರ್ಯ ''ಅದಕ್ಕೆ ನನ್ನ ಅಭ್ಯಂತರ ಇಲ್ಲ. ಈ ಚಾಕಲೇಟ್ ಅನ್ನು ಮೊದಲು ನ್ನಿ ಫ್ರೆಂಡ್ ಮೈನಳಿಗೆ ತಿನ್ನಿಸು. ನಂತರ ನೀನು ತಿನ್ನುವಿಯಂತೆ. ಮೈನ ತಿಂದ ಮೇಲೆ ಹತ್ತು ನಿಮಿಷ ಕಾದು ನೋಡು''

ಅಪ್ಸರ ಭಯಾಶ್ಚರ್ಯಗಳಿಂದ ನೋಡುತ್ತಿರುವಾಗಲೇ ಮೈನ ನಡುಗುತ್ತಿದ್ದಳು.

ಅವಳ ಮುಖ ಬಿಳುಚಿಕೊಂಡಿತ್ತು!

ಸೂರ್ಯ ''ಮೈನ...ಯಾಕೆ ಹೆದರುತ್ತೀಯ?'' ಒಂದು ಚಾಕಲೇಟ್ ತಿನ್ನಲು ನಿನಗೆ ಭಯವೇ?''

ಅಪ್ಸರ ''ಮೈನ...ನನಗ್ಯಾಕೋ ನಿನ್ನ ಮೇಲೆ ಅನುಮಾನ ಬರುತ್ತಿದೆ. ತಗೋ...ಇದನ್ನು ತಿನ್ನು...'' ಎಂದು ಒತ್ತಾಯ ಮಾಡಿದಳು.

ಮೈಷ್ಣ ಗಾಬರಿಯಿಂದ ''ಪ್ಲೀಸ್...ನನಗೆ ಇದು ಹಿಡಿಸೋಲ್ಲ. ನಾನು ಮಿಲ್ಕ್ ಚಾಲಲೇಟ್ ಬಿಟ್ಟು ಬೇರೆ ಯಾವುದನ್ನೂ ತಿನ್ನುವುದಿಲ್ಲ''

ಅಪ್ಸರ '' ಒಂದು ತಿಂದ ಮಾತ್ರಕ್ಕೆ ಏನೂ ಆಗುವುದಿಲ್ಲ ನೀನು ತಿನ್ನಲೇಬೇಕು''

ಸೂರ್ಯ ಈಗ ಮುನ್ನುಗ್ಗಿ ಮೈನಳ ವ್ಯಾನಿಟಿ ಕಿತ್ತುಕೊಂಡು ಅದನ್ನು ತೆರೆದು ನೋಡಲಾರಂಭಿಸಿದನು.

ಅಪ್ಸರ ಭಯುಗೊಂಡಿದ್ದಾಳೆ. ಮೈನ ಈಗ ಗಾಬರಿಯಿಂದ ಹೌ ಹಾರಿದಳು.

ವ್ಯಾನಿಟಿ ಬ್ಯಾಗಿನ ತಳದಲ್ಲಿ ಕಂಡಿತು ಸಣ್ಣ ಪ್ಲಾಸ್ಟಿಕ್ ಕವರು. ಅದರಲ್ಲಿ ಇದೇ ರೀತಿಯ ಹತ್ತು ಚಾಕಲೇಟುಗಳು ಇದ್ದವು.

ಸೂರ್ಯ ''ಅಪ್ಸರ...ನಿನ್ನೆ ರಾತ್ರಿ ಇವಳು ಚಾಕುಲೇಟುಗಳನ್ನು ನಿನ್ನ ವ್ಯಾನಿಟಿ

ಬ್ಯಾಗಿಗೆ ಹಾಕಿದ್ದನ್ನು ನಾನು ನೋಡಿದ್ದರಿಂದಲೇ ಫಾಲೋ ಮಾಡಿಕೊಂಡು ಬಂದೆ. ಇದು ಪಾಯಿಸನ್ ಚಾಕಲೇಟ್ ಅಲ್ಲ. ಬಹುಶಃ ಡ್ರಗ್ಸ್ ಮಿಕ್ಸ್ ಮಾಡಿ ತಯಾರಿಸುವ ಚಾಕಲೇಟ್ ಇರಬೇಕು. ನಿಜ ತಾನೆ?''

ಅಪ್ಸರ ನಡುಗಿ ಹೋದಳು!

ಮೈನ ಭಯಗೊಂಡಿದ್ದಾಳೆ.

''ಇವಳು ಈ ರೀತಿಯೆಲ್ಲಾ ಕೇಳಿದರೆ ಬಾಯಿ ಬಿಡೋಲ್ಲ. ಇವಳನ್ನು ಪೋಲೀಸರಿಗೆ ಒಪ್ಪಿಸೋಣ. ಇವಳ ವ್ಯಾನಿಟಿ ಬ್ಯಾಗಿನಲ್ಲಿ ಹೇಗೂ ಇದು ಸಿಕ್ಕಿದೆ. ಪೋಲೀಸರಿಗೆ ಒಪ್ಪಿಸಿದರೆ ಅವರು ಪರಿಶೀಲಿಸಿ ಸತ್ಯ ತಿಳಿಯುತ್ತಾರೆ. ಅಪ್ಸರ...ನೀನೇ ಸಾಕ್ಷಿ ಬಾ...ಮಂಗಳೂರಿನ ಪೋಲೀಸರ ಹತ್ತಿರ ಹಿಗೋಣ''

ಅಪ್ಸರ ಹೊರಟಳು.

ಅವರಿಬ್ಬರು ಹತ್ತು ಹೆಜ್ಜೆ ಹೋಗಿರಲಿಲ್ಲ. ಮೈನ ಭಯ, ಗಾಬರಿಯಿಂದ ಓಡಿ ಬಂದು ''ಬೇಡ...ಬೇಡ...ಪ್ಲೀಸ್ ಪೋಲೀಸರಿಗೆ ಹೇಳಬೇಡಿ. ಇದರಿಂದ ನನ್ನ ಕೆರಿಯರ್ ಹಾಳಾಗುತ್ತದೆ. ನಾನು...ನಾನು'' ಎಂದು ಅಳಲಾರಂಭಿಸಿದಳು.

ಅಪ್ಸರ ಕೋಪದಿಂದ ''ಹಾಗಾದರೆ ಈ ಚಾಕಲೇಟ್‌ನಲ್ಲಿ ಏನಿದೆ ಅಂತ ಹೇಳು''

ಅವಳು ಸುತ್ತಲೂ ನೋಡಿದಳು. ಅಲ್ಲಿ ಅವರ ವಿನಹ ಪರಿಚಯದವರು ಯಾರೂ ಇರಲಿಲ್ಲ. ಟೂರಗೆ ಬಂದಿದ್ದವರೆಲ್ಲಾ ಮಂಗಳೂರು ನೋಡಲು ಹೋಗಿದ್ದರು.

ಮೈನ ಹೆರುತ್ತಲೇ ''ಅದರಲ್ಲಿ...ಅದರಲ್ಲಿ ಎನ್ಕಲಿನ್ ಮತ್ತು ಬ್ರೌನ್‌ಶುಗರ್ ಅನ್ನು ಸೇರಿಸಲಾಗಿದೆ''

ಅದುರಿ ಅಲ್ಲಾಡಿ ಹೋದಳು ಅಪ್ಸರ! ಅವಳ ಮುಖ ಪೂರ್ತಿಯಾಗಿ ಬಿಳುಚಿಕೊಂಡಿತು.

ಸೂರ್ಯ ಏನಾದರೂ ಬರದೆ ಇದ್ದಿದ್ದರೆ ನಾನು ಇದನ್ನು ತಿಂದುಬಿಡುತ್ತಿದ್ದೆ. ಒಂದು ಸಲ ಈ ಡ್ರಗ್ಸ್‌ನ ರುಚಿ ಕಂಡರೆ ಅದನ್ನು ಬಿಡಲು ಸಾಧ್ಯವೇ ಇಲ್ಲ. ಬದುಕೇ ಮುಗಿದು ಹೋಗುತ್ತದೆ.

ಸೂರ್ಯ ಮೈನಳ ತೋಳನ್ನು ಹಿಡಿದು ಗಡುಸಾಗಿ ''ನಿನ್ನೆ ರಾತ್ರಿ ಅಪ್ಸರಳ ವ್ಯಾನಿಟಿ ಬ್ಯಾಗಿನಲ್ಲಿ ಇದನ್ನು ನೀನೇ ತಾನೇ ಹಾಕಿದ್ದು?'' ಎಂದನು.

ಮೈನ ತಲೆಯಾಡಿಸಿದಳು. ಅಪ್ಸರ ಈಗ ಭಯದಿಂದ ಸೂರ್ಯನ ಕಡೆ ನೋಡಿದಳು.

ಸೂರ್ಯ ''ಇದನ್ನು ನಿನಗೆ ಕೊಟ್ಟದ್ದು ಯಾರು ಅಂತ ಹೇಳು''

ಭಯದಿಂದ ನಡುಗಿದಳೇ ವಿನಹ ಉತ್ತರಿಸಲಿಲ್ಲ. ಸೂರ್ಯ ಕೋಪದಿಂದ ''ಮೈನ...ಬಾಯಿ ಬಿಡುತ್ತಿಯೋ ಅಥವ...''

ಅವಳು ಕಂಪಿಸುವ ಸ್ವರದಲ್ಲಿ ''ಉ...ಉ...ಉದಯ...''

ಉದಯ ಎಂಬ ಹೆಸರನ್ನು ಕೇಳಿದ ಕೂಡಲೇ ಹಾವು ಮೈಮೆಲೆ ಬಿದ್ದವರಂತೆ ತತ್ತರಿಸುತ್ತಾ ವಾಲಾಡಿದಳು ಅಪ್ಸರ.

ಉದು...ಉದಯನಿಗೆ ಡ್ರಗ್ ಅಭ್ಯಾಸ ಇರುವುದೇ? ಆದರೆ ಅವನ್ಯಾಕೆ ಇದನ್ನು ಕೊಟ್ಟ?''

ಸೂರ್ಯ ''ಉದಯ ನಿನಗೆ ಇದನ್ನು ಕೊಟ್ಟಿದ್ದನ್ನು ನಾನು ನೋಡಿದ್ದೆ. ಆದರೆ ನಿನ್ನ ಬಾಯಿಂದ ಬರಲಿ ಅಂತ ನಾನು ಸುಮ್ಮನಿದ್ದೆ. ಉದಯ ಇದನ್ನು ನಿನಗ್ಯಾಕೆ ಕೊಟ್ಟ?'' ಎಂದು ಗಡುಸಾಗಿ ಕೇಳಿದನು.

ಮೈನ ಕಂಪಿಸುವ ಸ್ವರದಿಂದಲೇ ''ಅದು...ಅದು...'' ಎಂದು ತೊದಲಿದಳು.

ಅಪ್ಸರ ಕೋಪದಿಂದ ''ನೀನು ನಿಜ ಹೇಳದೆ ಇದ್ದರೆ ನಾನೇ ಪೋಲೀಸರ ಹತ್ತಿರ ಹೋಗುತೇನೆ''

ಮೈನ ಭಯದಿಂದಲೇ ''ಇದನ್ನು ನಿನ್ನ ವ್ಯಾನಿಟಿ ಬ್ಯಾಗಿಗೆ ಹಾಕು ಅಂತ ಹೇಳಿದ. ಇದನ್ನು ನೀನು ತಿಂದರೆ ನಿನಗೆ ಡ್ರಗ್ಸ್ ರುಚಿ ಹತ್ತುತ್ತದೆ. ನಂತರ ಇದನ್ನು ಪಡೆಯಲು ನೀನು ಹಂಬಲಿಸುತ್ತೀಯ. ಅವನ ಹತ್ತಿರ ಹೋಗಬೇಕಾಗಯತ್ತದೆ. ಆಗ ಅವನು ನಿನ್ನನ್ನು ತನ್ನ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಬಹುದು ಎಂಬ ಉದ್ದೇಶದಿಂದ ನಿನಗೆ ಈ ಚಟ ಕಲಿಸಲು ನನಗೆ ಹೇಳಿದ''

ಎಂತಹ ಪಿತೂರಿ!

ಉದು ಬೇರೆ ಯಾರೂ ಅಲ್ಲ. ಇವಳ ತಂದೆಯ ದೂರದ ಸಂಬಂಧಿ! ಮಗಳನ್ನು ಉದಯನಿಗೇ ಕೊಡಬೇಕು ಅಂತ ಪ್ರಸಾದ್‌ಗೆ ಆಸೆ ಇತ್ತು. ಇದನ್ನು ಅಪ್ಸರಳ ಹತ್ತಿರ ಹೇಳಿದ್ದರು. ಆದರೆ ಅವಳಿಗೆ ಉದಯನ ಬಗ್ಗೆ ಒಂದು ರೀತಿಯ ತಾತ್ಸಾರ ಮತ್ತು ತಿರಸ್ಕಾರ ಭಾವನೆ ಉಂಟಾಗಿತ್ತು.

ಅವಳು ಅವನನ್ನು ಪ್ರೀತಿಸುವುದು ಹಾಗಿರಲಿ, ಅವನ ನೆರಳನ್ನು ಸಹ ದ್ವೇಷಿಸುತ್ತಿದ್ದಳು. ಆದರೆ ಅದನ್ನು ಬಹಿರಂಗಪಡಿಸಿರಲಿಲ್ಲ.

ಉದಯ ಯಾವಾಗಲೂ ಇವಳ ಬಾಡಿಗಾರ್ಡ್ ರೀತಿಯಲ್ಲಿ ಜೊತೆಯಲ್ಲೇ ಇರುತ್ತಿದ್ದನು.

ಅಪ್ಸರ ತಾನಾಗಿಯೇ ಒಲಿದು ಮದುವೆ ಆಗಲಾರಳು ಅಂತ ಸಂದೇಹ ಬಂದಿದ್ದರಿಂದಲೇ ಅವನು ಅವಳನ್ನು ಈ ರೀತಿ ಕಂಟ್ರೋಲ್ ಮಾಡಲು ಪ್ರಯತ್ನಿಸಿದ್ದನು ಆದರೆ ಅದು ಫೇಲ್ ಆಗಿತ್ತು.

ಅಪ್ಸರ ಭಯದಿಂದ ನಡುಗುತ್ತಿದ್ದಾಳೆ. ಅವಳ ಮುಖ ಕೆಂಪೇರಿದೆ.

ಸೂರ್ಯ ''ಮೈನ...ನೀನೂ ಸಹ ಡ್ರಗ್ ಅಡಿಕ್ಟ್ ಅಂತ ನನಗೆ ಅನಿಸುತ್ತಿದೆ ಅಲ್ಲವೆ?''

ಮೈನ ತಲೆಯಾಡಿಸುತ್ತಾ ''ಹೌದು ಉದಯ ನನಗೇ ಗೊತ್ತಿಲ್ಲದಂತೆ ಇದರ ಚಟ ಕಲಿಸಿದ. ಇದನ್ನು ಬಿಡಲಾರದೆ ಅವನು ಹೇಳಿದಂತೆ ಕೇಳುತ್ತಿದ್ದೇನೆ. ಪ್ಲೀಸ್...ಇದನ್ನು ಪೋಲೀಸರಿಗೆ ತಿಳಿಸಬೇಡಿ'' ಎಂದು ಕಂಬನಿ ಮಿಡಿಯುತ್ತಾ ಪ್ರಾರ್ಥಿಸಿದಳು.

ಸೂರ್ಯ ''ಮೈನ...ನಿನ್ನನ್ನು ಡಾಕ್ಟರಿಗೆ ತೋರಿಸುತ್ತೇನೆ. ನೀನು ಈ ಚಟ ಬಿಡಲು ಪ್ರಯತ್ನಿಸಬೇಕು. ಇನ್ನು ಮುಂದೆ ನೀನು ಯಾವ ಕಾರಣಕ್ಕೂ ಉದಯನ ಸಹವಾಸ ಮಾಡಬಾರದು. ನೀನು ಇವತ್ತಿನಿಂದಲೇ ಈ ಡ್ರಗ್ಸ್ ಅನ್ನು ಸ್ವಲ್ಪ ಸ್ವಲ್ಪವಾಗಿ ಬಿಡಬೇಕು''

ಮೈನ ಅವನಿಗೆ ಕೈ ಮುಗಿಯುತ್ತಾ ''ನನ್ನನ್ನು ಕತ್ತಲಿನಿಂದ ಹೊರಗೆ ತರುತ್ತೇನೆ ಅಂತ ನೀವು ಪ್ರಯತ್ನಿಸುತ್ತಿರುವಾಗ ನಾನ್ಯಾಕೆ ಬೇಡಾ ಎನ್ನಲಿ ಸಾರ್. ಖಂಡಿತಾ ಇನ್ನು ಮುಂದೆ ನೀವು ಹೇಳಿದಂತೆ ಕೇಳುತ್ತೇನೆ''

ಅಪ್ಸರ ಈಗ ಕಣ್ಣುಗಳನ್ನು ಅರಳಿಸಿ ಸೂರ್ಯನ ಕಡೆ ನೋಡುತ್ತಿದ್ದಾಳೆ. ಅವಳ ನೋಟದ ಹಿಂದೆಇದ್ದ ಭಾವನೆ ಈಗ ಬದಲಾಗಿದೆ!

ಸೂರ್ಯ ''ಅಪ್ಸರ...ಈ ವಿಚಾರದ ಬಗ್ಗೆ ನೀನು ಉದಯನ ಹತ್ತಿರ ಮಾತಾಡಬೇಡ''

ಅಪ್ಸರ ಕೋಪದಿಂದ ''ಮತ್ತೆ...ಅವನನ್ನು ಸುಮ್ಮನೆ ಬಿಟ್ಟುಬಿಡು ಅಂತೀಯ?''

ಸೂರ್ಯ ''ನೀನು ದುಡುಕಿದರೆ ತೊಂದರೆಯಾಗುತ್ತದೆ. ಉದಯ ಎಚ್ಚೆತ್ತುಕೊಂಡು ಬಿಡುತ್ತಾನೆ. ಅವನು ಈ ಕಾಲೇಜಿನಲ್ಲಿ ಡ್ರಗ್ಸ್ ವ್ಯಾಪಾರ ಮಾಡುತ್ತಿದ್ದಾನೆ. ಆ ರಹಸ್ಯವನ್ನು ನಾನು ಕಂಡು ಹಿಡಿಯಬೇಕು. ಅಲ್ಲಿಯ ತನಕ ನೀನು ತಾಳ್ಮೆಯಿಂದ ಇರಬೇಕು''

ಅಪ್ಸರ ತಲೆಯಾಡಿಸಿದಳು.

ಸೂರ್ಯ ಈಗ ಮೈನಳ ಕಡೆ ತಿರುಗಿ ''ಉದಯ ಡ್ರಗ್ಸ್ ಅನ್ನು ಯಾರ್ಯಾರಿಗೆ ಮಾರುತ್ತಾನೆ?''

ಮೈನ ''ಆ ವಿವರಗಳು ನನಗೆ ಗೊತ್ತಿಲ್ಲ. ಯಾಕೆ ಅಂದರೆ ಈ ರಹಸ್ಯವನ್ನು ಅವನು ಯಾರಿಗೂ ಸಹ ಹೇಳುವುದಿಲ್ಲ''

ಸೂರ್ಯ ''ಒದಕೆ. ಅದನ್ನು ನಾನು ಕಂಡು ಹಿಡಿಯುತ್ತೇನೆ. ನೀನು ಮಾತ್ರ ಈಗ ಇಲ್ಲಿ ಇನೆದದ್ದನ್ನು ಅವನ ಹತ್ತಿರ ಬಾಯಿ ಬಿಡಬೇಡ''

ಮೈನ ''ಉದಯ ಕೇಳಿದರೆ ನಾನು ಏನು ಹೇಳಲಿ? ಅವನು ಮಹಾ ಕ್ರೂರಿ. ಸ್ವಲ್ಪ ಅನುಮಾನ ಬಂದರೂ ಸಹ ನನಗೊಂದು ಗತಿ ಕಾಣಿಸುತ್ತಾನೆ''

ಸೂರ್ಯ ''ಹೆದರಬೇಡ ಚಾಕಲೇಟ್ ಅನ್ನು ಅಪ್ಸರಳ ವ್ಯಾನಿಟಿ ಬ್ಯಾಗಿಗೆ ಹಾಕಿದೆ ಅಂತ ಹೇಳು''

ಅಪ್ಸರ ಸೂರ್ಯನ ಕಡೆ ನೋಡಿದಳು.

ಸೂರ್ಯ ''ಅಪ್ಸರ...ಈ ಎರಡು ಚಾಕಲೇಟ್‌ಗಳು ಸದಾ ನಿನ್ನ ಹತ್ತಿರ ಇರಲಿ. ಉದಯ ನಿನ್ನ ಹತ್ತಿರ ಬಂದಾಗ, ಗಮನಿಸುತ್ತಿರುವಾಗ ಈ ಚಾಕಲೇಟ್ ತಿಂದಹಾಗೆ ನಾಟಕ ಆಡು''

ಅಪ್ಸರ ನಗುತ್ತಲೇ ''ನೀವು ನನ್ನ ಸಹಾಯಕ್ಕೆ ಇರುವಾಗ ಉದಯನಿಗೆ ನಾನು ಹೆದರುವುದಿಲ್ಲ. ಅವನನ್ನು ಚೆನ್ನಾಗಿಯೇ ಆಟ ಆಡಿಸುತ್ತೇನೆ'' ಎಂದು ಉತ್ಸಾಹದಿಂದ ಹೇಳಿದಳು.

ಸೂರ್ಯನಿಗೆ ಆಶ್ಚರ್ಯವಾಗುತ್ತಿದೆ. ಇದುವರೆಗೂ ನನ್ನನ್ನು ದ್ವೇಷಿಸುತ್ತಿದ್ದ ಹೆಣ್ಣು ಈಗ ಈ ರೀತಿ ಬದಲಾಗಿರುವುದೇ ಆಶ್ಚರ್ಯ ಎನಿಸುತ್ತಿದೆ.

ಮೈನ ಹೆದರುತ್ತಲೇ ''ಬನ್ನಿ ಬೇಗ ಇಲ್ಲಿಂದ ಹೊರಡೋಣ. ನಾವು ಮೂವರೂ ಇಲ್ಲಿ ನಿಂತಿರುವುದನ್ನು ಯಾರಾದರೂ ನೋಡಿದರೆ ಅದು ಉದಯನ ಕಿವಿಗೆ ಬೀಳುತ್ತದೆ''

ಈಗ ಮೂವರೂ ಬೇರೆ ಬೇರೆಯಾಗಿ ಅಲ್ಲಿಂದ ಹೊರಟರು. ಉದಯ ಬಂದಿರಲಿಲ್ಲ!

ಸೂರ್ಯ ಮೆಲ್ಲಗೆ ''ಮೈನ...ನಿನಗೆ ಹೇಳಿದ್ದು ನೆನಪಿರಲಿ. ನೀನು ಪುನಹ ಉದಯನ ಕಡೆ ಸೇರಕೂಡದು. ನಿನಗೆ ಅಂಟಿರುವ ಡ್ರಗ್ಸ್ ಚಟವನ್ನು ಬಿಡಿಸುವ ಜವಾಬ್ದಾರಿ ನನಗಿರಲಿ''

ಮೈನ ಮೆಲ್ಲಗೆ ತಲೆಯಾಡಿಸಿದಳು.

ಮಂಗಳೂರು ಸಿಟಿ ನೋಡಲು ಹೋಗಿದ್ದವರೆಲ್ಲಾ ಅರ್ಧ ಗಂಟೆ ತಡವಾಗಿ ಬಂದರು.

ಪ್ರಯಾಣ ಮುಂದುವರೆಯಿತು!

ಉದಯ ಮತ್ತು ಅವನ ಸ್ನೇಹಿತರು ರಾತ್ರಿಗೆ ಅಗತ್ಯವಾಗಿ ಬೇಕಾಗುವ ಡ್ರಿಂಕ್ಸ್ ಅನ್ನು ರೆಡಿಮಾಡಿಕೊಂಡಿದ್ದರು.

ಮಂಗಳೂರಿನ ಬೀಚ್ ನೋಡಿಕೊಂಡು ಅಲ್ಲಿಂದ ಮಣಿಪಾಲ್ ಆಸ್ಪತ್ರೆ ನೋಡಿದರು. ನಂತರ ಉಡುಪಿಯ ದರ್ಶನ!

ಆ ರಾತ್ರಿ ಕಟೀಲ್‌ನಲ್ಲಿ ಎಲ್ಲರೂ ತಂಗಿದರು. ಅಲ್ಲಿ ದುರ್ಗಾ ಪರಮೇಶ್ವರಿಯ ದೇವಸ್ಥಾನ ಇದೆ. ರಾತ್ರಿ ಎಲ್ಲರೂ ದೇವಸ್ಥಾನದ ಪ್ರಾಂಗಣದಲ್ಲಿ ಮಲಗಿದ್ದರು. ಹೊಸ ಅನುಭವ!

ಸುತ್ತಲೂ ಹೊಳೆ ಇರುವುದರಿಂದ ನೀರು ಹರಿಯುತ್ತಿರುವ ಶಬ್ದ ಕೇಳಿ ಬರುತ್ತಿದೆ. ಅದರ ಅನುಭವ ಸ್ಮರಣೀಯ.

ಅಪ್ಸರ ಊಟ ಮಾಡಿ ಮಲಗುವ ಮುನ್ನ ಆಕಸ್ಮಿಕವಾಗಿ ಕತ್ತನ್ನು ಹೊರಳಿಸಿದಳು.

ಲುಂಗಿ ಮತ್ತು ಬನಿಯನ್ ಧರಿಸಿದ್ದ ಸದೃಢ ಶರೀರದ ಸೋಗುಗಾರ ಸೂರ್ಯ ನಿಂತಿದ್ದನು.

ಚಿಗುರು ಮೀಸೆಯ ಚೆಲುವ! ಅವನ ಮುಖದಲ್ಲಿ ಸದಾ ಗಾಂಭೀರ್ಯತೆ ಇರುತ್ತದೆ. ಅದೇ ಅವನ ಪ್ರಮುಖ ಆಕರ್ಷಣೆ!

ಅವನು ಆಗೊಮ್ಮೆ - ಈಗೊಮ್ಮೆ ಚಿಗುರು ಮೀಸೆಯ ಅಡಿಯಲ್ಲಿ ಕಿರುನಗೆ ಬೀರುತ್ತಾನೆ!

ಕಾಲೇಜಿನ ಕೆಲವು ಯುವತಿಯರಿಗೆ ಇವನು ಎಂದರೆ ವಿಪರೀತ ಹುಚ್ಚು! ಆದರೆ ಸೂರ್ಯ ತುಂಬಾ ಸ್ಟ್ರಿಕ್ಟ್ ಹಾಗಾಗಿ ಅವನನ್ನು ದೂರದಿಂದಲೇ ನೋಡಿ ತೃಪ್ತಿ ಪಡುತ್ತಿದ್ದರೆ ವಿನಹ ಹತ್ತಿರ ಹೋಗುತ್ತಿರಲಿಲ್ಲ.

ಅಪ್ಸರ ಈಗ ಅವನ ಹರವಾದ ಎದೆಯನ್ನೇ ಬೊರಗಾಗಿ ನೋಢುತ್ತಿದ್ದಾಳೆ.

ಸೂರ್ಯನ ದೃಷ್ಟಿ ಹೊರಳಿತು!

ಅವಳ ಕಣ್ಣುಗಳೊಡನೆ ಸೇರಿತು!

ನಾಲ್ಕು ಕಣ್ಣುಗಳ ಮಿಲನ!

ಆದರೆ ಅವರಿಬ್ಬರೂ ಸರ್ರನೆ ತಮ್ಮ ದೃಷ್ಟಿಯನ್ನು ಬದಲಿಸಿಕೊಂಡರು.

ಅಪ್ಸರಳಿಗೆ ನಿದ್ದೆ ಬರುತ್ತಿಲ್ಲ. ಕಣ್ಮುಚ್ಚಿದರೆ ಸಾಕು ಸೂರ್ಯನ ರೂಪ ತೇಲಿ ಬರುತ್ತಿದೆ.

ಸೂರ್ಯನನ್ನು ಇವಳು ಕಾರಣ ಇಲ್ಲದೆ ದ್ವೇಷಿಸುತ್ತಿದ್ದಳು. ಕೆಲವು ಸಲ

ಅವನಿಗೆ ಅವಮಾನ ಮಾಡಬೇಕು ಅಂತ ಪ್ರಯತ್ನಿಸಿದ್ದಳು.

ಆದರೆ ಸೂರ್ಯ ಅವಳನ್ನು ದೊಡ್ಡ ಅಪಾಯದಿಂದ ಪಾರು ಮಾಡಿದ್ದನು.

ಸೂರ್ಯ ಸಕಾಲಕ್ಕೆ ಸರಿಯಾಗಿ ಬರದೆ ಇದ್ದಿದ್ದರೆ ಇವಳು ಬ್ರೌನ್ ಶುಗರ್‌ನ ರುಚಿನೋಡಿ ಅದರ ಅಡಿಕ್ಟ್ ಆಗಿರುತ್ತಿದ್ದಳು.

ನನ್ನಿಂದ ಅವಮಾನ ಆಗಿದ್ದರೂ ಸಹ ಸೂರ್ಯ ನನ್ನ ಬಗ್ಗೆ ಕಾಳಜಿ ವಹಿಸಿದ್ದಾನೆ!

ಸೂರ್ಯ ಸಿಂಪ್ಲಿ ಗ್ರೇಟ್!

ಮೈನ ನೆನಪಾದಳು!

ಅವಳನ್ನು ಒಳ್ಳೆಯ ಡಾಕ್ಟರ್‌ಗೆ ತೋರಿಸಿ ಡ್ರಗ್ಸ್ ಚಟ ಬಿಡಿಸುತ್ತೇನೆ ಎಂದು ಹೇಳಿದ್ದಾನೆ!

ಎಂತಹ ಪರೋಪಕಾರ ಬುದ್ಧಿ!

ನಾನೇಕೆ ಇವನನ್ನು ದ್ವೇಷಿಸಿದೆ?

ಅಪ್ಸರ ಈಗ ತನ್ನನ್ನು ತಾನೇ ನಿಂದಿಸಿಕೊಂಡಳು. ಬುದ್ಧಿ ಇರಲಿಲ್ಲ ನನಗೆ. ಶ್ರೀಮಂತಿಕೆಯ ಮತ್ತು ಸೌಂದರ್ಯದ ಅಹಂ ಕವಿದಿತ್ತು ಅಂತ ಕಾಣುತ್ತದೆ. ಸೂರ್ಯ ಈಗ ಗ್ರೇಟ್!

ಸೂರ್ಯ ಈಸ್ ಹ್ಯಾಂಡ್‌ಸಮ್!

ಅಬ್ಬ...ಎಂತಹ ಪರ್ಸನಾಲಿಟಿ! ಹೌದು...ಪ್ರತಿದಿನ ವ್ಯಾಯಾಮ ಮಾಡುತ್ತಾನಂತೆ. ಯಾವ ದುರಭ್ಯಾಸಗಳೂ ಇಲ್ಲ!

ಮಹಾನ್ ಪ್ರತಿಭಾವಂತ! ಅಪ್ಸರ ಅವನ ಬಗ್ಗೆ ಆಲೋಚಿಸಿದಷ್ಟು ನಿದ್ದೆ ಅವಳಿಂದ ದೂರಾಗುತ್ತಿತ್ತು!

ಮಾರನೆಯ ದಿನ ಬೆಳಿಗ್ಗೆ ಎಲ್ಲರೂ ಹೊಳೆಯಲ್ಲಿ ಸ್ನಾನ ಮುಗಿಸಿ ದೇವರ ದರ್ಶನ ಮಾಡಿಕೊಂಡು ಪ್ರಯಾಣ ಮುಂದುವರಿಸಿದರು.

ಗೋಕರ್ಣದ ಕಡೆ ಪ್ರಯಾಣ!

ಅಪ್ಸರ ಈಗ ಅದೇ ಸೀಟಿನಲ್ಲಿ ಕುಳಿತಿದ್ದಳು. ಅವಳಿಗೆ ಸೂರ್ಯನೀಟಾಗಿ ಕಾಣುತ್ತಿದ್ದಾನೆ. ಅವಳು ಆಗಾಗ ಅವನ ಕಡೆ ಕಳ್ಳ ನೋಟ ಬೀರುತ್ತಿದ್ದಾಳೆ.

ಸೂರ್ಯ ಇವಳ ಕಡೆ ನೋಡುತ್ತಿಲ್ಲ. ಯಾಕೆ ಅಂದರೆ ಸ್ಟೂಡೆಂಟ್ಸ್ ಮತ್ತು ಕುಲ್ಲೀಗ್ಸ್ ಇರುವಾಗ ಆ ರೀತಿ ನೋಡುವುದು ಸಭ್ಯತೆ ಅಲ್ಲ!

ಬಸ್ಸನ್ನು ಒಳ್ಳೆಯ ಹೋಟೆಲ್ ಮುಂದೆ ಈಗ ತಿಂಡಿ ತಿನ್ನಲು ನಿಲ್ಲಿಸಲಾಯಿತು.

ಉದು ಈಗ ಅಪ್ಸರಳ ಹತ್ತಿರ ಬಂದನು. ಅನುಮಾನದಿಂದ ಅವಳ ಮುಖ ನೋಡಿದನು.

ಅಪ್ಸರ ನಗುತ್ತಲೇ ''ಉದಯ...ಡ್ಯಾಡಿಗೆ ಫೋನ್ ಮಾಡಿದ್ದೆಯಾ?''

''ಹೂಂ ಮಾಡಿದ್ದೆ. ನಿನ್ನ ಬಗ್ಗೆ ತುಂಬಾ ಕೇಳಿದರು. ಇವತ್ತು ರಾತ್ರಿ ನೀನೇ ಫೋನ್ ಮಾಡಬೇಕಂತೆ''

ಅಪ್ಸರ ''ಡ್ಯಾಡಿಗೆ...ನನ್ನ ಜೊತೆ ಒಂದು ದಿನ ಮಾತಾಡದೆ ಇದ್ದರೂ ಆಗುವುದಿಲ್ಲ. ಉದಯ ಬಾ...ತಿಂಡಿ ತಿಂದುಕೊಂಡು ಬರೋಣ''

ಉದಯನಿಗೆ ಆಶ್ಚರ್ಯವಾಗುತ್ತಿದೆ. ಯಾಕೆ ಅಂದರೆ ಸದಾ ಮುಖ ಬಿಗಿದುಕೊಂಡಿರುತ್ತಿದ್ದ ಅಪ್ಸರ ಅವನ ಜೊತೆ ನಗುತ್ತಾ ಮಾತಾಡುತ್ತಿದ್ದಾಳೆ. ತಿಂಡಿಗೆ ಬಾ ಅಂತ ಕರೆಯುತ್ತಿದ್ದಾಳೆ.

ಅವನಿಗೊಂದು ಸಂದೇಹ ಬಂದಿತು. ಮೈನ ಇವಳಿಗೆ ಆ ಚಾಕಲೇಟ್ ತಿನಿಸಿಲ್ಲವೆ? ತಿನ್ನಿಸಿರಲಾರಳು. ತಿಂದಿದ್ದರೆ ಪುನಹ ಅದೇ ಚಾಕಲೇಟ್ ಬೇಕು ಅಂತ ಗೋಗರೆಯುತ್ತಿದ್ದಳು ಎಂದುಕೊಂಡನು ಉದಯ.

ಅಪ್ಸರ ''ಉದಯ...ಏನು ಯೋಚಿಸುತ್ತಿದ್ದೀಯ? ನನಗೆ ಒಳ್ಳೆಯ ಹೋಟೆಲ್‌ನಲ್ಲಿ ತಿಂಡಿಕೊಡಿಸು'' ಎಂದು ಮುದ್ದು ಮುದ್ದಾಗಿ ಕೇಳಿದಳು.

ಉದಯ ಕ್ಲೀನ್ ಬೌಲ್ಡ್!

ಅಪ್ಸರಳಿಗೆ ನನ್ನ ಮೇಲೆ ಮನಸ್ಸಾಗಿದೆ. ಅವಳು ನನ್ನನ್ನು ಲವ್ ಮಾಡಿದರೆ ಸಾಕು. ನನ್ನ ಹೆಣ್ಣಿಗೆ ನಾನೇ ಯಾಕೆ ಡ್ರಗ್ಸ್ ಚಟ ಕಲಿಸಲಿ ಎಂದುಕೊಂಡನು ಉದಯ. ಎಂತಹ ಬದಲಾವಣೆ!

ಇಬ್ಬರೂ ಬೇರೊಂದು ಹೋಟೇಲಿಗೆ ಬಂದರು. ಅಪ್ಸರ ಅವನ ಪಕ್ಕದಲ್ಲಿಯೇ ಕುಳಿತಿದ್ದಳು ಆಗಾಗ ಅವನತ್ತ ಹೂ ನಗೆ ಬೀರುತ್ತಿದ್ದಳು.

ಪೊಂಗಲ್, ಮೊಸರುವಡೆ ಮತ್ತು ರವಾ ದೋಸೆ ತಿಂದರು. ಸೊಗಸಾದ ತಿಂಡಿ.

ಅಪ್ಸರ ಈಗ ತನ್ನ ವ್ಯಾನಿಟಿ ಬ್ಯಾಗಿನಿಂದ ಆ ಎರಡು ಚಾಕಲೇಟುಗಳನ್ನು ತೆಗೆದು ಅವನಿಗೆ ಕೊಡುತ್ತಾ ''ನಾನು ಇದನ್ನೆಲ್ಲಾ ತಿನ್ನೊಲ್ಲ ಸುಮ್ಮನೆ ವೇಸ್ಟ್ ಮಾಡಬೇಕು ನೀನೇ ತಿನ್ನು''

ಅದು...ಅದು ಅವನೇ ಮೈನಳ ಮೂಲಕ ಕಳುಹಿಸಿದ್ದ ಚಾಕಲೇಟ್. ಮೈನ ತನ್ನ ಪಾಲಿನ ಕೆಲಸವನ್ನು ಸರಿಯಾಗಿ ಮಾಡಿದ್ದಾಳೆ. ಇನ್ನು ಇದರ ಅಗತ್ಯ ಇಲ್ಲ!

ಅಪ್ಸರ ನನ್ನನ್ನು ಲವ್ ಮಾಡುತ್ತಿದ್ದಾಳೆ. ಖಂಡಿತಾ ಮದುವೆಯಾಗುತ್ತಾಳೆ! ನನ್ನ ಹೆಣ್ಣಿಗೆ ಈ ಚಟ ಕಲಿಸಲಾರೆ ಎಂದು ಅದನ್ನು ಜೆಬಿಗೆ ಸೇರಿಸಿದನು.

ಅಪ್ಸರ ನಗುತ್ತಾ ''ಉದಯ...ಯಾಕೆ...ಚಾಕಲೇಟ್ ತಿನ್ನುವುದಿಲ್ಲವೆ?''

ಉದಯ ''ಈಗ ಬೇಡ ಅಪ್ಸರ ಒಳ್ಳೆಯ ಕಾಫಿ ಕುಡಿಯಬೇಕು. ಪ್ರಯಾಣ ಮಾಡುವಾಗ ಇದನ್ನು ತಿನ್ನುತ್ತೇನೆ ಬಿಡು''

ಅಪ್ಸರ ಏಳುತ್ತಾ ''ಉದಯ...ನಾವಿಬ್ಬರು ಈ ರೀತಿ ಇನ್ನು ತಿರುಗೋದು ಬೇಡ. ಆಮೆಲೆ ಕಾಲೇಜಿನ ಗೋಡೆಯ ಮೆಲೆ ನಮ್ಮಿಬ್ಬರ ಬಗ್ಗೆ ಏನೇನೋ ಬರೆದುಬಿಡುತ್ತಾರೆ'' ಎಂದು ನಕ್ಕರು.

ತುಂಬಾ ಹತ್ತಿರದಿಂದ ಅವಳ ಕೆಂಪು ತುಟಿಗಳ ಹೊಳಪನ್ನು ಕಂಡು ಉದಯ ಬೆರಗಾಗಿ ಹೋದನು. ಕನಸೋ...ಕನಸು!

ಚುಂಬನದ ಕನಸು!

ಅಪ್ಸರ ಈಗ ಅವನಿಂದ ದೂರ ಬಂದು ಸುತ್ತಲೂ ಕಾತುರದಿಂದ ನೋಡಲಾರಂಭಿಸಿದಳು.

ಪಬ್ಲಿಕ್ ಟೆಲಿಫೋನ್ ಬೂತಿನ ಕಡೆ ಸೂರ್ಯ ಹೋಗುತ್ತಿರುವುದನ್ನು ಕಂಡಳು.

ಅತ್ತ ನಡೆಯಲಾರಂಭಿಸಿದಳು.

ಸೂರ್ಯ ಜೇಬಿನಿಂದ ಪರ್ಸ್ ತೆಗೆಯುತ್ತಿರುವಾಗ ಅದರಿಂದ ಏನೋ ನೆಲದ ಮೇಲೆ ಬಿದ್ದಿತು. ಸೂರ್ಯ ಅದನ್ನು ಗಮನಿಸದೆ ನಡೆದನುದ

ದೂರದಿಂದಲೇ ಇದನ್ನು ಕಂಡ ಅಪ್ಸರ ಈಗ ಅದನ್ನು ಎತ್ತಿಕೊಂಡಳು.

ಸೂರ್ಯ ಬೂತಿನ ಹತ್ತಿರ ನಿಂತುಕೊಂಡು ತನ್ನ ಜೇಬು ಮತ್ತು ಪರ್ಸ್ ಅನ್ನು ತಡಕಾಡುತ್ತಿದ್ದಾನೆ.

ಅಪ್ಸರಳ ಮುಖ ಅರಳಿತು. ಯಾಕೆ ಅಂದರೆ ಅವಳ ಕೈಯಲ್ಲಿ ವಿಸಿಟಿಂಗ್ ಕಾರ್ಡ್ ಇತ್ತು. ಅದು ಸೂರ್ಯನ ಜೇಬಿನಿಂದ ಬಿದ್ದಿತ್ತು!

ಅಪ್ಸರ ಆಶ್ಚರ್ಯಪಡಲು ಕಾರಣ ಅದು ಅವಳ ಮನೆಯ ಬಿಸಿಟಿಂಗ್ ಕಾರ್ಡ್!

ಶ್ರೀಮತಿ ಒಂಕಜ ಪ್ರಸಾದ್!

ಅಪ್ಸರಳ ತಾಯಿ!

ಅವಳಿಗೆ ಸೋಜಿಗವಾಗುತ್ತಿದೆ. ನನ್ನ ಅಮ್ಮನ ಕಾರ್ಡ್ ಪ್ರೊಫೆಸರ್ ಸೂರ್ಯನ ಹತ್ತಿರ ಯಾಕೆ ಇದೆ?

ಅವನು ಬೂತಿನ ಹತ್ತಿರ ಪರದಾಡುತ್ತಿರುವುದನ್ನು ಕಂಡು ಅತ್ತ ನಡೆದು ಅದನ್ನು ಕೊಡುತ್ತಾ ''ಇದೇ ತಾನೇ ನಿಮಗೆ ಬೇಕಾಗಿರೋದು?'' ಎಂದು ಹೂ ನಗೆ ಬೀರಿದಳು.

ಸೂರ್ಯ ಅವಳತ್ತ ನೋಡಿ ನಗುತ್ತಾ ''ತುಂಬಾ ಥ್ಯಾಂಕ್ಸ್ ಯಾಕೆ ಅಂದರೆ ನಾನು ಅರ್ಜೆಂಟ್ ಆಗಿ ಫೋನ್ ಮಾಡಬೇಕಿತ್ತು''

ಅವಳು ಏನೋ ಕೇಳಬೇಕು ಅಂತ ಅಂದುಕೊಂಡಳು. ಆದರೆ ಸೂರ್ಯ ತನ್ನ ಪಾಡಿಗೆ ತಾನು ಬೂತಿನ ಡೋರ್ ಕ್ಲೋಸ್ ಮಾಡಿಕೊಂಡು ಫೋನ್ ಮಾಡಲಾರಂಭಿಸಿದನು.

ಸ್ಯೂ್ರಯ ಹತ್ತು ನಿಮಿಷ ಮಾತಾಡಿದ ನಂತರ ಹೊರಗೆ ಬಂದನು.

ಅಪ್ಸರ ಅಲ್ಲಿ ಇರಲಿಲ್ಲ!

ಎಲ್ಲರೂ ಬರಬೇಕು ಅಂತ ವಿಶಲ್ ಮಾಡುತ್ತಿದ್ದರಿಂದ ಸೂರ್ಯ ಆತುರಾತುರವಾಗಿ ನಡೆದನು.

ಅವನು ತನ್ನ ಅಕ್ಕನ ಜೊತೆ ಹತ್ತು ನಿಮಿಷಗಳ ಕಾಲ ಫೋನಿನಲ್ಲಿ ಮಾತಾಡಿದ್ದನು. ಅವನು ಈಗ ತುಂಬಾ ಸಂತೋಷಗೊಂಡಿದ್ದನು.

ಯಾಕೆ ಅಂದರೆ ಪಂಕಜ ತನ್ನ ತಾಯಿಯನ್ನು ನೋಡಲು ಎರಡು ಸಲ ಹೋಗಿದ್ದಳಂತೆ!

ಇದೇ ಸೂರ್ಯನಿಗೆ ತೃಪ್ತಿ!

ಇಪ್ಪತ್ತು ವರ್ಷಗಳ ನಂತರ ತಾಯಿ - ಮಗಳು ಭೇಟಿ ಮಾಡಿದ್ದರು.

ಎಂತಹ ಅಪರೂಪದ ಮಿಲನ!

ಪಂಕಜ ಆ ಅನುಭವವನ್ನೆಲ್ಲಾ ಫೋನಿನಲ್ಲಿ ಹೇಳಿದ್ದಳು. ಆದರೆ ಈ ಸಂತೋಷ, ಸಡಗರ ಮತ್ತು ಸಂಭ್ರಮದಲ್ಲಿ ಅದನ್ನೇ ಹೇಳಿರಲಿಲ್ಲ!

ತನ್ನ ಮಗಳ ಬಗ್ಗೆ!

ಬಸ್ಸು ಚಲಿಸುತ್ತಿದೆ.

ಅಪ್ಸರಳಿಗೆ ಕುತೂಹಲ ತಡೆಯಾಲಗುತ್ತಿಲ್ಲ. ಅವಳು ಸೂರ್ಯನ ಕಡೆ ನೋಡಿದಳು.

ಸೂರ್ಯ ಸೀಟಿಗೆ ಒರಗಿ ಕಣ್ಣುಗಳನ್ನು ಮುಚ್ಚಿಕೊಂಡಿದ್ದನು ಅವನು ಈಗ ತನ್ನ ಅಕ್ಕನನ್ನು ನೆನಪು ಮಾಡಿಕೊಂಡು ಭಾವುಕತೆಯಿಂದ ಮಧುರ ಸವಿಯಲ್ಲಿ ಮುಳುಗಿದ್ದನು.

ಅಪ್ಸರಳಿಗೆ ಕುತೂಹಲ ನನ್ನ ಮನೆಯ ವಿಸಿಟಿಂಗ್ ಕಾರ್ಡ್ ಇವನಿಗೆ

ಹೇಗೆ ಸಿಕ್ಕಿತು? ಇವನು ಯಾರ ಜೊತೆ ಫೋನಿನಲ್ಲಿ ಮಾತಾಡಿದ?

ಅವನನ್ನು ಕೇಳುವ ಆಸೆ, ಆತುರ ಉಂಟಾಗುತ್ತಿದೆ. ಬಸ್ಸಿನಲ್ಲಿ ಅದೆಲ್ಲಾ ಸಾಧ್ಯವೆ?

ಅದೂ ಅಲ್ಲದೆ ಉದಯ ಇವಳ ಕಡೆಯೆ ನೋಡುತ್ತಾ ಇದ್ದದ್ದು ಇವಳ ಗಮನಕ್ಕೆ ಬಂದಿತ್ತು. ಆದ್ದರಿಂದ ತನ್ನ ದೃಷ್ಟೀ ಬದಲಿಸಿದ್ದಳು.

ಬಸ್ಸು ಗೋಕರ್ಣ ತಲುಪಿತು ಅಲ್ಲಿ ಆ ದಿನ ಉಳಿಯಲು ಪ್ರೋಗ್ರಾಂ ಫಿಕ್ಸ್ ಆಗಿತ್ತು!

ಸಮುದ್ರದಲ್ಲಿ ಸ್ನಾನ ಮಾಡಿ ಈಶ್ವರನ ಆತ್ಮಲಿಂಗದ ದರ್ಶನ ಮಾಡಿದರು.

ನಂತರ ಸನ್‌ಸೆಟ್ ಪ್ರೋಗ್ರಾಂ!

ಉದಯ ಈಗ ತನ್ನ ಕೆಲವು ಸ್ನೇಹಿತರೊಡನೆ ಬೇರೆ ಕಡೆ ಉಳಿದುಕೊಂಡಿದ್ದನು. ಕಾಲೇಜಿನ ಕ್ಯಾಂಪ್‌ನಲ್ಲಿ ಇದ್ದರೆ ಮಜಾ ಮಾಡಲು ಸಾಧ್ಯವೆ?

ತಂಗಾಳಿ ಹಿತವಾಗಿ ಬೀಸುತ್ತಿದೆ!

ಅಲೆಗಳ ಭೋರ್ಗರೆತ ಕೇಳುತ್ತಿದೆ!

ರಾತ್ರಿ ಒಂಬತ್ತು ಗಂಟೆ!

ಎಲ್ಲರೂ ಅವರವರ ಕೊಠಡಿಗಳಲ್ಲಿ ಊಟ ಮಾಡಿ ಮಲಗಿಕೊಂಡಿದ್ದಾರೆ.

ಸೂರ್ಯ ಸಮುದ್ರದ ಕಡೆ ಹೋಗುತ್ತಿರುವುದನ್ನು ಅಪ್ಸರ ನೋಡಿದಳು.

ಅವಳಿಗೆ ಒಂದು ಕಡೆ ಆಸೆ. ಮತ್ತೊಂದು ಕಡೆ ಭಯ. ಆದರೆ ಆಸೆ ಗೆದ್ದಿತು!

ಆಸೆ ಪ್ರಚೋದಿಸಿತು.

ಅವಳು ಎದ್ದು ಶಾಲನ್ನು ಹೊದೆದುಕೊಂಡು ಈಗ ರೂಮಿನಿಂದ ಹೊರಬಂದಳು.

ಉದಯ ಬೇರೊಂದು ಕಡೆ ತನ್ನ ಕೆಲವು ಸ್ನೇಹಿತರೊಡನೆ ಚೆನ್ನಾಗಿ ಕುಡಿದು ಬೇರೆ ಊರಿನ ಬಾರ್‌ನಿಂದ ಮೊದಲೇ ತಂದಿದ್ದ ಬಿರಿಯಾನಿ ಮತ್ತು ಕಬಾಬ್ ಮಂಚೂರಿಯನ್ನು ತಿಂದನು.

ಅಮಲಿನ ಸುಖ ಅವರಿಗೆ!

ಅಂದು ಹುಣ್ಣಿಮೆ!

ಆಗಸದಲ್ಲಿ ಚಂದ್ರ ನಗುತ್ತಿದ್ದಾನೆ. ಚಂದ್ರನ ಬೆಳಕು ಸಮುದ್ರದ ಮೇಲೆ ಹಾಲು ಚೆಲ್ಲಿದಂತೆ ಕಂಡು ಬರುತ್ತಿದಲ!

ನಯನ ಮನೋಹರ ದೃಶ್ಯ!

ಗಾಳಿ ಜೋರಾಗಿ ಬೀಸುತ್ತಿದೆ!

ಸೂರ್ಯ ದಡದಲ್ಲಿ ನಿಂತಿದ್ದಾನೆ. ರಭಸದಿಂದ ನುಗ್ಗಿ ಬರುತ್ತಿರುವ ಅಲೆಗಳು ಅಪ್ಪಳಿಸುತ್ತಿವೆ!

ನೀರು ಭುಜದ ತನಕ ಹಾರುತ್ತಿದೆ ಸೂರ್ಯ ಚೆನ್ನಾಗಿ ಎಂಜಾಯ್ ಮಾಡುತ್ತಿದ್ದಾನೆ.

ಆಗ ಕೇಳಿಸಿತತು ಗೆಜ್ಜೆ ಶಬ್ದ!

ಬಳಗೆಳ ಇಂಪು ನಾದ!

ಗಾಬರಿಯಿಂದ ಹಿಂತಿರುಗಿದವನು ಅಪ್ಸರಳನ್ನು ಕಂಡು ಸಂತೋಷ, ಆಶ್ಚರ್ಯದಿಂದ ಕಣ್ಣುಗಳನ್ನು ಅರಳಿಸಿದನು.

ಅಪ್ಸರ ಇದನ್ನು ಗಮನಿಸಿದಳು.

ತನ್ನನ್ನು ಕಂಡ ಕೂಡಲೇ ಸೂರ್ಯನ ಕಣ್ಣುಗಳು ಹೊಳೆದು ಮುಖ ಅರಳಿದ್ದನ್ನು ಕಂಡು ಇವಳಿಗೆ ಒಂದು ರೀತಿ ಪುಳಕ ಉಂಟಾಗಿತ್ತು!

ಸೂರ್ಯ ತುಸು ಗಾಬರಿಯಿಂದಲೇ ''ಅಪ್ಸರ...ನೀನ್ಯಾಕೆ ಇಲ್ಲಿಗೆ ಬಂದೆ?''

''ಯಾಕೆ ಬರಬಾರದಿತ್ತೆ?''

''ಹಾಗಲ್ಲ...ಅದೂ...''

ಅಪ್ಸರ ಮೋಹಕವಾಗಿ ''ಇಂತಹ ವೇಳೆಯಲ್ಲಿ ನಾನು ನಿಮ್ಮ ಜೊತೆ ಇರುವುದನ್ನು ಯಾರಾದರೂ ಕಂಡರೆ ಅಪಪ್ರಚಾರ ಶುರು ಆಗಬಹುದು ಅಂತ ಭಯವೆ?''

ತಲೆಯಾಡಸಿದನು ಸೂರ್ಯ.

ಅಪ್ಸರ ನಗುತ್ತಲೇ ''ನಾನು ಇಲ್ಲಿಗೆ ಬಂದಿದ್ದು ಈ ಸಮಯದ್ರದ ಸೌಂದರ್ಯ ನೋಡಿ ಆನಂದಿಸುತ್ತಿರುವ ನಿಮ್ಮನ್ನು ನೋಡಬೇಕು ಅಂತ''

ಅವಳು ಈ ರೀತಿ ಯಾವ ಸಂಕೋಚವೂ ಇಲ್ಲದೆ ನೇರವಾಗಿ ಹೇಳಿದ್ದರಿಂದ ಅವನ ಮುಖ ಕೆಂಪೇರಿತು! ಗಾಬರಿಯಿಂದ ಅವಳ ಕಡೆ ನೋಡಿದನು.

ಅಪ್ಸರ ನಾಲಿಗೆ ಕಚ್ಚಿಕೊಂಡು ''ತಪ್ಪು ತಿಳಿಯಬೇಡಿ ಸಾರ್. ನೀವು ಕಣ್ಣಿನ

ಬಲಳಿಗ್ಗೆ ಯಾರಿಗೆ ಫೋನ್ ಮಾಡಿದ್ದೀರ ಅಂತ ಕೇಳಲು ಬಂದೆ''

ಸೂರ್ಯ ಆಶ್ಚರ್ಯದಿಂದ ''ಅದನ್ನು ಇಲ್ಲಿ ಈ ರೀತಿ ಕೇಳುವಂತಹ ಪ್ರಾಮುಖ್ಯ ವಿಷಯವೇ ಅಪ್ಸರ. ನನಗೆ ತುಂಬಾ ಬೇಕಾದವರಿಗೆ ಫೋನ್ ಮಾಡಿದ್ದೆ''

ಕುತೂಹಲದಿಂದಲೆ ''ತುಂಬಾ ಬೇಕಾದವರು ಅಂದರೆ ಯಾರು ಅಂತ ಹೇಳುತ್ತೀರ?''

ಸೂರ್ಯ ''ಅವರ ಬಗ್ಗೆ ನಿಮಗ್ಯಾಕೆ ಕುತೂಹಲ? ಅವರ್‍ಯಾರು ಅಂತ ನಿನಗೆ ಗೊತ್ತಿಲ್ಲ ಬಿಡು...''

''ಪಂಕಜ ಪ್ರಸಾದ್ ತಾನೆ?''

''ಹಾಂ...! ಹೌದು...!!''

''ಅಂದರೆ ಪಂಕಜ ಅವರ ಜೊತೆ ಮಾತಾಡಿದ್ರಾ'' ಎಂದು ಆತುರದಿಂದ ಕೇಳಿದಳು.

''ಹೌದು''

''ಪಂಕಜ ಅವರು ನಿಮಗೆ ಗೊತ್ತಾ?''

ಸೂರ್ಯ ನಗುತ್ತಲೇ ''ಗೊತ್ತಾ ಅಂತ ಕೇಳುತ್ತಿದ್ದೀರ? ತುಂಬಾ...ತುಂಬಾ ವರ್ಷಗಳಿಂದ ಗೊತ್ತು''

ಅಪ್ಸರ ಆಶ್ಚರ್ಯದಿಂದ ''ಏನು...ಪಂಕಜ ನಿಮಗೆ ತುಂಬಾ ವರ್ಷಗಳಿಂದ ಗೊತ್ತೇ?''

''ಹೌದು ಅಂತ ಹೇಳಿದ್ನಲ್ಲ''

''ಯಾವ ರೀತಿ...ಹೇಗೆ?''

ಸೂರ್ಯ ''ಇದರ ಬಗ್ಗೆ ನೀವ್ಯಾಕೆ ಕೆದಕಿ ಕೇಳುತ್ತಿದ್ದೀರೋ ನನಗೆ ಗೊತ್ತಾಗುತ್ತಿಲ್ಲ. ಪಂಕಜ ಬೇರೆ ಯಾರೂ ಅಲ್ಲ. ನನ್ನ ಸ್ವಂತ ಅಕ್ಕ!

''ಸಾರ್...ಪಂಕಜ ನಿಮ್ಮ ಸ್ವಂತ ಅಕ್ಕನಾ...!'' ಎಂದು ಸಂತೋಷ, ಉದ್ವೇಗದಿಂದ ಕಂಪಿಸುತ್ತಾ ಕೇಳಿದಳು.

ಸೂರ್ಯ ಆಶ್ಚರ್ಯದಿಂದಲೇ ''ನಿಮ್ಮ ಪರಿಸ್ಥಿತಿ ನೋಡಿದರೆ ಪಂಕಜ ನಿಮಗೆ ತುಂಬಾ ಚೆನ್ನಾಗಿಯೇ ಗೊತ್ತು ಅಂತ ಕಾಣುತ್ತೆ''

ಅಪ್ಸರ ಸಂತೋಷ ಮತ್ತು ಉತ್ಸಾಹದಿಂದ ''ಪಂಕಜ...ಪಂಕಜ ನನ್ನ ತಾಯಿ!''

ಸೂರ್ಯ ಬೆಚ್ಚಿಬಿದ್ದನು.

ರೆಪ್ಪೆಯನ್ನೂ ಸಹ ಆಡಿಸದೆ ಅವಳನ್ನೇ ಬೆರಗಾಗಿ ನೋಡುತ್ತಿದ್ದಾನೆ.

ಪರಮಾಶ್ಚರ್ಯಕರ ಸಂಗತಿ!

ಈಗಲೂ ನಂಬಿಕೆಯೇ ಬರುತ್ತಿಲ್ಲ!

ಅಪ್ಸರ ನನ್ನ ಅಕ್ಕನ ಮಗಳು! ಅಪ್ಸರ ಸಹ ಇದೇ ರೀತಿ ದಿಗ್‌ಭ್ರಾಂತಳಾಗಿ ನಿಂತಿದ್ದಾಳೆ. ತಾನು ಮೆಚ್ಚಿಕೊಂಡು ಆರಾಧಿಸುತ್ತಿರು ವಸ್ರ್ಯಾಯ ಬೇರೆ ಯಾರೂ ಅಲ್ಲ!

ತಾಯಿಯ ತಮ್ಮ!

ಎಂತಹ ವಿಚಿತ್ರ ಈ ಜೀವನ ಎಂತಹ ಅನುಬಂಧದ ಬೆಸುಗೆ ಇದು!

ಅವರಿಬ್ಬರು ಒಬ್ಬರನ್ನೊಬ್ಬರು ತುಂಬಾ ಹೊತ್ತಿನಿಂದ ನೋಡುತ್ತಿದ್ದಾರೆಯೇ ವಿನಹ ಮಾತಾಡಿರಲಿಲ್ಲ! ಇಬ್ಬರಿಗೂ ಮೂಕ ವಿಸ್ಮಯ!

ಮಾತುಗಳೇ ಹೊರಬುರತ್ತಿಲ್ಲ!

ತುಂಬಾ ಹೊತ್ತಿನ ನಂತರ ಸೂರ್ಯ ನಿಟ್ಟುಸಿರನ್ನು ಬಿಡುತ್ತಾ ಆನಂದಭಾಷ್ಪ ಒರೆಸಿಕೊಂಡನು.

ಅಪ್ಸರ ಜೋರಾಗಿ ನಕ್ಕಳು! ಕಣ್ಣುಗಳಿಂದ ಕಂಬನಿ ಮುತ್ತಿನ ಹನಿಗಳಂತೆ ಜಾರುತ್ತಿದೆ. ಆದರೂ ನಗುತ್ತಿದ್ದಾಳೆ. ಇದು...ಭಾವೋದ್ವೇಗದ ಪರಕಾಷ್ಠೆ! ಅವರಿಬ್ಬರೂ ಒಂದೇ ತೆರನಾದ ಫೀಲಿಂಗ್ ಅನುಭವಿಸುತ್ತಿದ್ದಾರೆ.

ಸೂರ್ಯ ಅವಳ ಕಡೆ ನೋಡುತ್ತಾ ''ನನ್ನ ಅಕ್ಕನಿಗೆ ನಿನ್ನಂತಹ ಮಗಳು ಇದ್ದಾಳೆ ಎಂಬ ಕಲ್ಪನೆ ಸಹ ಇರಲಿಲ್ಲ. ಶಬ್ಬ...ನನಗಾಗುತ್ತಿರುವ ಸಂತೋಷವನ್ನು ತಡೆದುಕೊಳ್ಳಲು ಆಗುತ್ತಿಲ್ಲ. ಅಕ್ಕ...ನಮ್ಮ ಬಗ್ಗೆ ಹೇಳುತ್ತಿರಲಿಲ್ಲವೇ ಅಪ್ಸರ...?''

ಅಪ್ಸರ ''ಅಮ್ಮ ನಿಮ್ಮಿಬ್ಬರ ಬಗ್ಗೆ ನನ್ನ ಹತ್ತಿರ ಮಾತ್ರ ಹೇಳುತ್ತಿದ್ದಳು. ಡ್ಯಾಡಿಗೆ ಅಜ್ಜಿಯ ಹೆಸರನ್ನು ಕೇಳಿದರೂ ಸಹ ಆಗುವುದಿಲ್ಲ ಉರಿದು ಬೀಳುತ್ತಾರೆ. ಹಿಂದೆ ಅಜ್ಜಿ ತುಂಬಾ ಅವಮಾನಮಾಡಿದ್ದರಂತೆ''

ಸೂರ್ಯ ವಿಷಾದದಿಂದ ''ನಿಜ...ಅದೊಂದು ವಿಷ ಘಳಿಗೆ ಅಮ್ಮ ಇಪ್ಪತ್ತು ವರ್ಷಗಳಿಂದ ಪಶ್ಚಾತ್ತಾಯ ಪಡುತ್ತಿದ್ದಾಳೆ''

ಅಪ್ಸರ ''ಡ್ಯಾಡಿಗೆ ಅಮ್ಮನ ತವರು ಅಂದರೆ ಆಗುವುದಿಲ್ಲ. ಅದಕ್ಕೆ ಅಮ್ಮನಿಗೆ ಆಸೆಯಾಗುತ್ತಿದ್ದರೂ ಸಹ ಹೋಗಲು ಪ್ರಯತ್ನಿಸಲಿಲ್ಲ''

ಸೂರ್ಯ ''ಈಗ ಉಳಿದಿರೋದು ಒಂದೇ ಅಯಪಾಯ. ನಾನು ಅಮ್ಮನನ್ನು ಕರೆದುಕೊಂಡು ಬರುತ್ತೇನೆ. ಹಿಂದೆ ಅಂದು ಅವಮಾನ ಮಾಡಿದ ತಪ್ಪಿಗೆ ಭಾವನನ್ನು ಕ್ಷಮೆ ಕೇಳುತ್ತಾಳೆ''

ಅಪ್ಸರ ''ಸಾರ್...ಸಾರ್...ನಾನು ನನ್ನ ಅಜ್ಜಿಯನ್ನು ನೋಡಬೇಕಲ್ಲ''

ಸೂರ್ಯ ''ಸಂಬಂಧ ತಿಳಿದ ಮೇಲೂ ಸಹ ನೀನು ನನ್ನನ್ನು ಸಾರ್ ಅಂತ ಕರೆದರೆ ನಿನಗೆ ಅಜ್ಜಿಯನ್ನು ತೋರಿಸುವುದಿಲ್ಲ''

ಅಪ್ಸರ ತನ್ನ ಕೆಂದುಟಿಗಳನ್ನು ಉಬ್ಬಿಸಿ ಮುದ್ದು ಮುದ್ದಾಗಿ ನಗುತ್ತಾ ''ಪ್ರೊಫೆಸರ್ ಸಾಹೆಬರನ್ನು ಏನೂಂತ ಕರೆಬೇಕು ಅಂತ ಹೇಳುತ್ತೀರ?''

ಸೂರ್ಯ ಸಹ ನಗುತ್ತಾ ''ಕಾಲೇಜಿನಲ್ಲಿ ಮತ್ತು ಕ್ಲಾಸ್ ರೂಮಿನಲ್ಲಿ ಮಾತ್ರ ನಾನು ನಿನಗೆ ಸಾರ್. ನಾವಿಬ್ಬರೇ ಇರುವಾಗ ಸೂರ್ಯ ಅಂತ...''

ಅಪ್ಸರ ಗಾಬರಿಯಿಂದ ''ಏನು...? ನಾನು ನಿಮ್ಮ ಹೆಸರನ್ನು ಹಿಡಿದು ಕೂಗುವುದೆ?''

ಸೂರ್ಯ ನಗುತ್ತಾ ''ಅದಕ್ಕೆ ಯಾಕೆ ಗಾಬರಿಯಾಗುತ್ತೀಯ? ಹೆಸರು ಇರೋದೇ ಕರೆಯೋಕೆ ತಾನೆ?''

ಅಪ್ಸರ ನಾಚಿಕೆಯಿಂದ ನುಲಿಯುತ್ತಾ ''ಇಲ್ಲಪ್ಪಾ...ನಾನು ಕರೆಯೋಲ್ಲ''

''ಮಾವ ಅಂತ ಕೂಗು''

ಅಪ್ಸರ ನಗುತ್ತಲೇ ''ಏನೋ ಒಂದು ರೀತಿ ಮುಜುಗರ ಆಗುತ್ತೆ. ಓ.ಕೆ. ನನಗೆ ಯಾವ ರೀತಿ ಕರೆಬೇಕು ಅಂತ ಆಸೆ ಆಗುತ್ತೋ ಆ ರೀತಿ ಕರೆಯುತ್ತೇನೆ ಇನ್ನು ಹೊರಡೋಣವೆ?''

''ಮನೆಗೆ ಯಾವಾಗ ಬರ್ತೀಯಾ?''

ಅಪ್ಸರ ಸಂತೋಷ, ಉತ್ಸಾಹದಿಂದ ''ಅದು ನನ್ನ ಅಜ್ಜಿಯ ಮನೆ. ನನಗೆ ಯಾವಾಗ ಬರಬೇಕು ಅಂತ ಅನಿಸುತ್ತೋ ಆಗ ಬರುತ್ತೇನೆ. ನಂಗೆ...ನಂಗೆ ನನ್ನ ಅಪ್ಪನ ಕಡೆಯಿಂದ ಅಜ್ಜೀ ಅಂತ ಯಾರೂ ಇಲ್ಲ. ಈ ಅಜ್ಜಿಯನ್ನು ಯಾವಾಗ ನೋಡುತ್ತೇನೋ ಅಂತ ಆಸೆ, ಆತುರ ಆಗುತ್ತಿದೆ'' ಎಂದು ನಕ್ಕಳು.

ಸೂರ್ಯ ನಗುತ್ತಾ ''ನಿನ್ನಂತಹ ಮೊಮ್ಮಗಳನ್ನು ಕಂಡರೆ ಅಮ್ಮ ಒಂದು ದಿನ ಪೂರ್ತಿ ಹೊರಗೆ ಹೋಗಲು ಬಿಡುವುದಿಲ್ಲ''

ಅಪ್ಸರ ನಗುತ್ತಲೇ ''ಹೇಗಿದ್ದರೂ ನನಗೆ ಈ ವಿಷಉದಲ್ಲಿ ಮಮ್ಮೀಯ ಸಪೋರ್ಟ್ ಇದೆ. ಇನ್ನು ಡ್ಯಾಡಿಗೆ ಏನಾದರೂ ರೀಲು ಸುತ್ತಿದರಾಯಿತು. ಒಂದು ರಾತ್ರಿ ನಾನು ಅಜ್ಜಿಯ ಜೊತೆ ಮಲಗಬೇಕು''

ಸ್ರೂಯ ಗಂಭೀರವಾಗಿ ''ಹೀಗೆ ಮಾತಾಡುತ್ತಾ ನಿಂತಿದ್ದರೆ ಇಲ್ಲೇ ಬೆಳಕು ಹರಿಯುತ್ತದೆ''

ಇಬ್ಬರೂ ಹೋಟೆಲು ಕಡೆ ಬರುತ್ತಿದ್ದಾರೆ. ಆದರೆ ಇದೇ ಸುಖಾಂತ

ಅಲ್ಲ! ಯಾಕೆ ಅಂದರೆ ಅಲ್ಲಿ ಖಳನಾಯಕ ಇದನ್ನು ನೋಡುತ್ತಿದ್ದ!

ಗೆಳೆಯರ ಜೊತೆ ಬೇರೊಂದು ಕಡೆ ಉಳಿದುಕೊಂಡು ಕುಡಿಯುತ್ತಾ ಕುಳಿತಿದ್ದ ಉದಯ, ಅಪ್ಸರ ಸಮುದ್ರದ ಕಡೆ ಹೋಗುವುದನ್ನು ನೋಡಿದ್ದನು! ನಂತರ ಸೂರ್ಯನನ್ನು ಕಂಡಿದ್ದನು.

ಅವರಿಬ್ಬರು ತುಂಬಾ ಹತ್ತಿರವೇ ನಿಂತುಕೊಂಡು ನಗು ನಗುತ್ತಾ ಮಾತಾಡುತ್ತಿದ್ದರು!

ಒಂದು ಗಂಟೆಯ ಕಾಲ ಅದೇ ರೀತಿ ಸಮುದ್ರದ ತೀರದ ಹತ್ತಿರ ಕಳೆದಿದ್ದರು!

ಸಹಿಸಲು ಸಾಧ್ಯವೆ?

ಇಲ್ಲ...ಇಲ್ಲ...ಅಪ್ಸರ ನನ್ನ ಹೆಂಡತಿ! ಬೇರೆ ಯಾರೂ ಸಹ ಅವಳನ್ನು ನನ್ನಿಂದ ದೂರಮಾಡಲು ಸಾಧ್ಯವಿಲ್ಲ!

ಅಪ್ಸರ ನನ್ನ ಹೆಂಡತಿ ಆಗದೆ ಇದ್ದರೆ ನಾನು ಜೀವನ ನಿರ್ವಹಣೆಗೆ ಬೇರೆ ಕಡೆ ಕೆಲಸ ಮಾಡಬೇಕಾಗುತ್ತದೆ!

ನನಗೆ ಅಪ್ಸರ ಬೇಕು!

ಅವಳ ಆಸ್ತಿ ಬೇಕು!

ಉದಯ ಈಗ ವಿಪರೀತ ಟೆನ್‌ಷನ್‌ನಿಂದ ಕುಡಿಯಲಾರಂಭಿಸಿದನು. ಏನಾದರೂ ಮಾಡಲೇಬೇಕು!

ಉದಯ ಹಲ್ಲು ಕಡಿಯುತ್ತಿದ್ದಾನೆ!

## ನಾಲ್ಕು

ಕಾಲೇಜಿನ ಪ್ರವಾಸ ಮುಗಿದ ನಂತರ ಎಲ್ಲರೂ ಊರಿಗೆ ಹಿಂತಿರುಗಿದ್ದರು.

ವಿಶ್ರಾಂತಿಗಾಗಿ ಒಂದು ದಿನ ರಜೆ ನೀಡಲಾಗಿತ್ತು. ಸೂರ್ಯ ಅಂದು ಸ್ವಲ್ಪ ತಡವಾಗಿಯೇ ಎದ್ದು ವ್ಯಾಯಾಮ ಮಾಡಲಾರಂಭಿಸಿದನು.

ಮಂಗಳಮ್ಮ ಅಂದು ಬೆಳಗಿನ ತಿಂಡಿಗಾಗಿ ದೋಸೆ, ಪಲ್ಯ ಮತ್ತು ಕಾಯಿ ಚಟ್ನಿ ಮಾಡಿದ್ದರು. ಅವರು ಈಗ ಉತ್ಸಾಹದಿಂದ ಇದ್ದರು. ಯಾಕೆ ಅಂದರೆ ಅವರ ಮಗಳು ಪಂಕಜ ಈಗಾಗಲೇ ಮೂರು ಸಲ ಬಂದು ಹೋಗಿದ್ದಳು!

ಊನೆಯ ಮುಂದೆ ಕಾರು ನಿಂತುಕೊಂಡಿತು. ಹಾರನ್ ಶಬ್ದ ಕೇಳಿದ ಕೂಡಲೆ ಮಂಗಳಮ್ಮ ಸಂತೋಷ, ಆತುರ, ಉದ್ವೇಗದಿಂದ ಹೊರಗೆ ನಮ್ಮನ್ನು

ಬಂದರು!

ಮಗಳ ಜೊತೆಗೆ ಮೊಮ್ಮಗಳು!

ಅಪ್ಸರ ಸಂತೋಷ, ಉದ್ವೇಗದಿಂದ ''ಅಜ್ಜೀ...'' ಎಂದು ಕೂಗುತ್ತಾ ಓಡಿ ಬಂದು ತಬ್ಬಿಕೊಂಡಳು.

ಈ ಕೂಗು ಯೋಗಾಸನ ಮಾಡುತ್ತಿದ್ದ ಸೂರ್ಯನಿಗೂ ಸಹ ಕೇಳಿಸಿತು!

ಅವನು ಆಗ ತಲೆ ಕೆಳಗಾಗಿ ನಿಂತು ಶೀರ್ಷಾಸನ ಮಾಡುತ್ತಿದ್ದನು!

ಅವನ ಮೈ ಝುಂ ಎಂದಿತು. ಅವನು ದಬಾಲನೆ ಉರುಳಿಕೊಂಡನು.

ಸಾವರಿಸಿಕೊಂಡು ಎದ್ದು ಲುಂಗಿಯನ್ನು ಸುತ್ತಿಕೊಂಡು ಹೊರಗೆ ಬಂದನು.

ಹೃದಯಸ್ಪರ್ಶಿ ದೃಶ್ಯ!

ಅಜ್ಜಿ ಮತ್ತು ಮೊಮ್ಮಗಳು ತಬ್ಬಿಕೊಂಡು ಪರಸ್ಪರ ಮೈ ದಡವುತ್ತಾ ಸಂತೋಷ ಪಡುತ್ತಿದ್ದಾರೆ.

ಪಂಕಜ ಅಳುತ್ತಿದ್ದಾಳೆ. ಅದು ಕಣ್ಣೀರಲ್ಲ, ಆನಂದಭಾಷ್ಪ!

ಹತ್ತು ನಿಮಿಷ ಕಳೆಯಿತು.

ಸೂರ್ಯ ''ಅಮ್ಮಾ...ಇದು ತುಂಬಾ ಅನ್ಯಾಯ. ಮಗಳು ಮತ್ತು ಮೊಮ್ಮಗಳು ಬಂದಿದ್ದಾರೆ ಅಂತ ನೀನು ಈ ಬಡ ಪ್ರಾಣಿಯನ್ನು ಮರೆಯಬಾರದು''

ಮಂಗಳಮ್ಮ ದೂರ ಸರಿದು ಕಣ್ಣೀರನ್ನು ಒರೆಸಿಕೊಂಡು ''ಬನ್ನಿ...ಬನ್ನಿ ಎಲ್ಲಾ ಒಟ್ಟಿಗೇ ತಿಂಡಿ ತಿನ್ನೋಣ'' ಎಂದರು.

ಅಡುಗೆ ಕೋಣೆಯಲ್ಲಿ ಮಂಗಳಮ್ಮ ದೋಸೆ ಮಾಡುತ್ತಿದ್ದಾರೆ. ಅಪ್ಸರ ಮತ್ತು ಪಂಕಜ ಅವರ ಜೊತೆಯಲ್ಲೇ ಕುಳಿತಿದ್ದಾರೆ!

ಅಪ್ಸರ ಹರಟುತ್ತಿದ್ದಾಳೆ!

ಮಂಗಳಮ್ಮ ''ಪಂಕಜ...ಈ ರೀತಿಯ ಕಳ್ಳತನದ ಭೇಟಿ ಸಾಕು. ಹಿಂದೆ ಆಡಿ ಅವಮಾನ ಮಾಡಿದ್ದಕ್ಕೆ ನಾನು ನಿನ್ನ ಗಂಡನ ಹತ್ತಿರ ಬಂದು ಕ್ಷಮೆ ಕೇಳುತ್ತೇನೆ ಹೇಗೋ ಈ ಸಂಸಾರಗಳು ಒಂದಾದರೆ ಸಾಕು''

ಪಂಕಜ ಗಾಬರಿಯಿಂದ ''ಅಮ್ಮಾ...ಇವರಿಗೆ ಇನ್ನೂ ಸಹ ಕೋಪ ಕಡಿಮೆ ಆಗಿಲ್ಲ. ಈಗಲೇ ನೀನು ಅಲ್ಲಿಗೆ ಬರೋದು ಬೇಡಾ ಅನಿಸುತ್ತೆ. ಅವರು ಕೋಪದಿಂದ ನಿನ್ನನ್ನು, ಸೂರ್ಯನನ್ನು ಅಂದರೆ ಅದನ್ನು ಸಹಿಸುವ ಶಕ್ತಿ ನನಗೆ ಇಲ್ಲ''

ಸೂರ್ಯ ''ಅಕ್ಕ...ಇದು ಯಾವತ್ತಿದ್ದರೂ ಸಹ ಗೊತ್ತಾಗಲೇ ಬೇಕು. ಭಾವ

ಬೈದರೂ ಪರವಾಗಿಲ್ಲ ನಾನು, ಅಮ್ಮ ಅಲ್ಲಿಗೆ ಬರುತ್ತೇವೆ''

''ಹಾಗಲ್ಲ...ಸೂರ್ಯ...''

ಅಪ್ಸರ ''ಅಮ್ಮಾ...ಈ ಪ್ರಕರಣ ಒಂದು ಸಲ ಬೇಗ ಮುಗಿದು ಹೋಗಲಿ. ನಾನು ನಿರಾತಂಕವಾಗಿ ಇಲ್ಲಿಗೆ ಬಂದು ಹೋಗಬಹುದು'' ಎಂದು ಸೂರ್ಯನ ಕಡೆ ನೋಡಿ ನಕ್ಕಳು!

ಸೂರ್ಯನಿಗೆ ಪುಳಕ ಉಂಟಾಯಿತು!

ತುಂಬಾ ದಿನಗಳ ನಂತರ ತಾಯಿ ಮತ್ತು ಮಗಳು ಸೇರಿಕೊಂಡು ವಿಶಲೇಷ ಅಡುಗೆ ಮಾಡಲಾರಂಭಿಸಿದರು.

ಅಪ್ಸರ ಮೆಲ್ಲಗೆ ಅಡುಗೆ ಮನೆಯಿಂದ ಹೊರಟಾಗ ''ನೀನು ಎಲ್ಲಿಗೆ ಹೋಗುತ್ತೀಯ? ಜೊತೆಯಲ್ಲಿ ಇದ್ದು ಸಹಾಯ ಮಾಡು''

ಪಂಕಜ ಆ ರೀತಿ ಹೇಳಿದಾಗ ಅಪ್ಸರ ಮೆಲ್ಲಗೆ ''ಪ್ರೊಫೆಸರ್ ಹೇಗಿದ್ದರೂ ಫ್ರೀಯಾಗಿ ಸಿಕ್ಕಿದ್ದಾರೆ. ಇಂಗ್ಲೀಷ್ ಗ್ರಾಮರ್ ಹೇಳಿಸಿಕೊಳ್ಳುತ್ತೇನೆ'' ಎಂದು ಹೊರಡಲು ಅನುವಾದರು.

ಆಗ ಪಂಕಜ ''ಇದೇನೇ...ದಿಢೀರ್ ಅಂತ ನಿನಗೆ ಗ್ರಾಮರ್ ಮೇಲೆ ಆಸಕ್ತಿ ಬಂದಿದೆ. ಓದು ಅಂದರೆ ರಾಗ ಎಳೆಯುತ್ತಿದ್ದೆ''

ಅಪ್ಸರ ನಗುತ್ತಾ ''ನಿನ್ನ ತಮ್ಮನೇ ನನಗೆ ಇಂಗ್ಲೀಷ್ ಪ್ರೊಫೆಸರ್ ಅಂದಮೇಲೆ ಈಗಲೂ ಸಹ ನಾನು ಕಲಿಯದೆ ಇದ್ದರೆ ಚೆನ್ನಾಗಿರುತ್ತಾ? ರುಚಿ ರುಚಿಯಾಗಿ ಅಡುಗೆ ಮಾಡಿ ಬರ್ತೀನಿ'' ಎಂದು ನಗೆ ಬೀರುತ್ತಾ ಹೊರ ನಡೆದಳು.

ಮಗಳ ಕಣ್ಣುಗಳಲ್ಲಿ ಮಿಂಚುತ್ತಿರುವ ಹೊಳಪನ್ನು ಕಂಡು ಪಂಕಜಳ ಮನದ ಮೂಲೆಯಲ್ಲಿ ದೂರದ ಆಸೆ ಮೂಡಿತು!

ಇದು ಸಾಧ್ಯವಾದರೆ ಎಷ್ಟು ಚೆನ್ನ?

ಅಪ್ಸರ ಅವಳ ರೂಮಿಗೆ ಬಂದಳು. ಅವನು ಆಗ ಯಾವುದೋ ಇಂಗ್ಲೀಸ್ ಕಾದಂಬರಿಯನ್ನು ಓದುತ್ತಿದ್ದನು.

ಅವಳು ರೂಮಿನ ಒಳಗೆ ಬಂದು ಸೂರ್ಯನ ಕಡೆ ನೋಡಿದಳು. ಅವಳಿಗೆ ನಗು ತಡೆಯಲಾಗಲಿಲ್ಲ. ಅವಳು ಕಿಲಕಿಲನೆ ನಗಲಾರಂಭಿಸಿದಳು.

ಸೂರ್ಯ ಅವಳು ನಗುತ್ತಿರುವ ಮೋಹಕ ಭಂಗಿಯನ್ನೇ ನೋಡುತ್ತಾ ಕುಳಿತಿದ್ದಾನೆ.

ಅಪ್ಸರ ನಗುವುದನ್ನು ನಿಲ್ಲಿಸಿ 'ಪ್ರೊಫೆಸರ್ ಸಾಹೇಬರು ಏನು ಮಾಡ್ತಾ ಇದ್ದೀರ ಅಂತ ಕೇಳಬಹುದೆ?'' ಎಂದು ಅವನ ಹತ್ತಿರ ಬಂದಳು.

ಸೂರ್ಯ ''ಕಾಣ್ತಾ ಇಲ್ಲವೆ ಕಾದಂಬರಿ ಓದುತ್ತಾ ಇದ್ದೇನೆ'' ಎಂದನು.

''ಎಷ್ಟು ಹೊತ್ತಿನಿಂದ ಓದ್ತಾ ಇದ್ದೀರ?''

''ಅರ್ಧ ಅಂಟೆಯಿಂದ''

ಅಪ್ಸರ ಮುಸಿ ಮುಸಿ ನಗುತ್ತಾ ''ಅಂದರೆ ಅರ್ಧ ಗಂಟೆಯಿಂದ ಇದೇ ರೀತಿ ಓದುತ್ತಾ ಇದ್ದೀರ?'' ಎಂದು ಪುಸ್ತಕದ ಕಡೆ ಕೈ ತೋರಿಸಿದಳು.

ಸೂರ್ಯ ಗಾಬರಿಯಿಂದ ನೋಡಿದನು. ಆ ಕಾದಂಬರಿಯನ್ನು ತಲೆ ಕೆಳಗಾಗಿ ಹಿಡಿದಿದ್ದನು!

ಸೂ್ರ್ಯ ಪೇಲವ ನಗೆ ಬೀರಿದನು. ಅಪ್ಸರ ''ನಾನು ಇಲ್ಲಿಗ್ಯಾಕೆ ಬಂದೆ ಗೊತ್ತೆ?'' ಎಂದು ಕೆಂದುಟಿಗಳನ್ನು ಅರಳಿಸಿ ಕಿರುನಗೆ ಬೀರುತ್ತಾ ಕೇಳಿದಳು. ಅವಳ ಕಣ್ಣುಗಳು ಮಿಂಚುತ್ತಿತ್ತು.

''ಹೇಳಿದರೆ ಗೊತ್ತಾಗುತ್ತೆ''

ಅಪ್ಸರ ''ಇಂಗ್ಲೀಷ್ ಗ್ರ್ರಾಮರ್ ಹೇಳಿಕೊಳ್ಳುತ್ತೇನೆ ಅಂತ ಅಮ್ಮನ ಹತ್ತಿರ ಹೇಳಿ ಬಂದಿದ್ದೇನೆ''

''ಐಯಾಮ್ ಸಾರಿ''

''ಸಾರಿ...ಯಾಕೆ?''

ಸೂರ್ಯ ''ಈಗ ನಾನಿರುವ ಮಾನಸಿಕ ಪರಿಸ್ಥಿತಿಯಲ್ಲಿ ಪಾಠವನ್ನು ಹೇಳಿಕೊಡಲಾರೆ''

ಅಪ್ಸರ ''ಕಾಲೇಜಿನಲ್ಲಿ ಆವತ್ತು ವಿದ್ಯಾರ್ಥಿಗಳ ಎದುರು ಅಮೋಘವಾಗಿ ಉಪನ್ಯಾಸ ಮಾಡುವ ನೀವು ನನ್ನ ಎದುರಿಗೆ ಡಲ್ ಆಗಲು ಕಾರಣ ಏನು ಅಂತ ಕೇಳಬಹುದೆ?''

ಸೂರ್ಯ ಮೆಲ್ಲಗೆ ''ನಿಜ ಹೇಳಬೇಕೋ ಅಥವಾ ಸುಳ್ಳು ಹೇಳಬೇಕೋ ಅಪ್ಸರ''

ಅಪ್ಸರ ನಗುತ್ತಾ ''ನನ್ನನ್ನು ನೋಡಿದರೆ ಏನು ಹೇಳಬೇಕು ಅಂತ ಅನಿಸುತ್ತೆ?''

''ನಿಜ ಹೇಳಬೇಕು ಅಂತ ಅನಿಸುತ್ತೆ''

''ಹಾಗಾದರೆ ಹೇಳಿ''

ಸೂರ್ಯ ''ನಿನ್ನ ಕಣ್ಣುಗಳ ಹೊಳಪನ್ನು ನೋಡುತ್ತಿದ್ದರೆ ನನ್ನ ಬುದ್ಧಿಗೆ ಮಂಕುಕವಿಯುತ್ತದೆ. ನಿನ್ಮುಖ ನೋಡುತ್ತಿದ್ದರೆ ನನಗೆ ಮಾತುಗಳೇ ಹೊರ ಬರುವುದಿಲ್ಲ. ವಿಪರೀತ ಗಾಬರಿಯಾಗುತ್ತದೆ''

ಅಪ್ಸರ ತನ್ನ ಕಳೆ ತುಟಿಯನ್ನು ಕಚ್ಚುತ್ತಾ "ನೀವು ಕಾದಂಬರಿಯನ್ನು ಉಲ್ಟಾ ಹಿಡಿದುಕೊಂಡು ಓದುತ್ತಿರುವಾಗಲೇ ಈ ರೀತಿ ಎಲ್ಲಾ ಆಗುತ್ತಿದೆ ಅಂತ ಅನಿಸಿತು. ಅದಕ್ಕೆ ಕಾರಣ ಏನು ಅಂತ ಹೇಳುತ್ತೀಯ?"

"ನೀನೇ ಕಾರಣ ಅಂತ ಹೇಳಲು ನಾನು ಬಯಸುತ್ತೇನೆ ಅಪ್ಸರ"

ಅವಳು ನಗುತ್ತಲೇ "ನನ್ನಂತಹ ಬಡಪ್ರಾಣಿಯ ಮೇಲೆ ಆರೋಪ ಹೊರಿಸಬಾರದು. ನಾನು ಯಾವ ರೀತಿ ಕಾರಣ ಅಂತ ಹೇಳುತ್ತೀರ?"

ಸೂರ್ಯ ಅವಳು ಮುದ್ದು ಮುಖವನ್ನೇ ನೋಡುತ್ತಾ "ಕೆಲವರಿಗೆ ಎಲ್ಲಾ ಗೊತ್ತಿದ್ದರೂ ಸಹ ಗೊತ್ತಿಲ್ಲದವರಂತೆ ನಾಟಕ ಆಡುತ್ತಾರೆ. ಇನ್ನು ಮುಂದೆ ಕಾಲೇಜಿನಲ್ಲಿ ನನ್ನ ಎದುರಿಗೆ ಕೂರಬೇಡ"

ಗಾಬರಿಯಿಂದ "ಯಾಕೆ?"

"ನನಗೆ ಸರಿಯಾಗಿ ಪಾಠ ಮಾಡಲು ಆಗುವುದಿಲ್ಲ. ನಿನ್ನಿಂದ ತೊಂದರೆಯಾಗುತ್ತದೆ"

ಅಪ್ಸರ ಹುಸಿ ಕೋಪದಿಂದ "ಹಾಗಾದರೆ ನಾಳೆಯಿಂದ ನಾನು ಕಾಲೇಜಿಗೆ ಬರೋಲ್ಲ"

"ಎಷ್ಟು ದಿವಸ ಬರೋಲ್ಲ?"

"ಯಾಕೆ?"

"ಕೇಳಿದ್ದಕ್ಕೆ ಉತ್ತರಿಸು"

"ಒಂದು ವಾರ ಬರೋಲ್ಲ"

ಸ್ರೂಯ "ಹಾಗಾದರೆ ನಾನು ಸಹ ಕಾಲೇಜಿಗೆ ರಜಾ ಹಾಕುತ್ತೇನೆ. ನೀನು ಇಲ್ಲಿಗೆ ಬಂದುಬಿಡು ಇದೇ ರೀತಿ ಜಾಲಿಯಾಗಿ ಹರಟೆ ಹೊಡೆಯುತ್ತಾ ಕೂರೋಣ"

ಅಪ್ಸರ ಜೋರಾಗಿ ನಕ್ಕಳು!

ಸಮಯ ಉರುಳುತ್ತಿತ್ತು!

ಮಧ್ಯಾಹ್ನದ ಎರಡು ಗಂಟೆ!

ಊಟಕ್ಕೆ ಬಂದ ನಂತರವೇ ಅವರಿಬ್ಬರು ರೂಮಿನಿಂದ ಹೊರಗೆ ಬಂದರು.

ಪಂಕಜ ಮಗಳ ಕಡೆ ನೋಡುತ್ತಾ "ಅಪ್ಸರ ಇಂಗ್ಲೀಷ್ ಗ್ರಾಮರ್ ಹೇಳಿಕೊಂಡೆಯಾ?"

ಅಪ್ಸರಳ ಮುಖ ಕೆಂಪೇರಿತು. ಅವಳು ಗಾಬರಿಯಿಂದಲೇ "ಓ...ಹೇಳಿಸಿಕೊಂಡೆ..."

ಮಂಗಳಮ್ಮ ''ಇಡೀ ಬೀದಿಗೆ ಕೇಳುವ ಹಾಗೆ ಮಾತಾಡುತ್ತಾ ಕುಳಿತಿದ್ರಿ. ನಾನು ಪುರುಸೊತ್ತಿಲ್ಲದೆ ನಗುತ್ತಿದ್ದೆ. ನನ್ನ ಮಗ ನಿನಗೆ ಅದ್ಯಾವಾಗ ಪಾಠ ಹೇಳಿಕೊಟ್ಟ ಅಂತ?''

ಕೆಂಪೇರಿತು ಸೂರ್ಯನ ಮುಖ. ಅವನು ''ಅಮ್ಮಾ...ಅಕ್ಕ ನೀನು ಸೇರಿಕೊಂಡು ಏನು ಸ್ಪೆಷಲ್ ಮಾಡಿದ್ದೀರ?'' ಎಂದು ರಾಗ ಎಳೆದನು.

ಮಂಗಳಮ್ಮ ''ಲೋ ಕಳ್ಳಕೋರಮ...ನೀನು ಮಾತು ಬದಲಿಸಲು ಪ್ರಯತ್ನಿಸಬೇಡ''

ಪಂಕಜ ''ಅಮ್ಮಾ...ಹೋಗಲಿ ಬಿಡು ಯಾಕೆ ಅವನನ್ನು ರೇಗಿಸುತ್ತೀಯ? ಏನೋ ದೈವ ಅನುಗ್ರಹದಿಂದ ಎಲ್ಲಾ ಒಳ್ಳೆಯದಾದರೆ ಸಾಕು''

ಮಂಗಳಮ್ಮ ಸಂತಷದಿಂದಲೇ ''ಆಗುತ್ತೆ...ಎಲ್ಲಾ ಖಂಡಿತಾ ಒಳ್ಳೆಯದಾಗುತ್ತೆ''

ಊಟ ಮಾಡಲಾರಂಭಿಸಿದರು. ಅವಲಕ್ಕಿಯ ಅಂಬೋಡೆ, ಪುಳಿಯೊಗರೆ ಮತ್ತು ಸಿಹಿ ಪೊಂಗಲ್ ಮಾಡಿದ್ದರು.

ಮಂಗಳಮ್ಮ ''ಪಂಕಜ...ನಾಳೆಯ ದಿನ ನಾವು ನಿನ್ನ ಮನೆಗೆ ಬರುತ್ತಿದ್ದೇವೆ. ನಿನ್ನ ಗಂಡನಿಗೆ ಇದನ್ನು ಸೂಕ್ಷ್ಮವಾಗಿ ತಿಳಿಸಿರು''

ಪಂಕಜ ಭಯದಿಂದಲೇ ತಲೆಯಾಡಿಸಿದಳು. ಅವಳಿಗೆ ಏನಾಗುವುದೋ ಏನೋ ಎಂಬ ಭಯ!

ಇವರ ಆತಂಕ ನಿಜವಾಗಿತ್ತು!

ಬಾಂಬ್ ಸಿಡಿಸಿದ್ದನು ಉದಯ!

ಟೂರ್ ಪ್ರೋಗ್ರಾಂನಲ್ಲಿ ಸೂರ್ಯನ ಜೊತೆ ರಾತ್ರಿಯ ಏಕಾಂತದಲ್ಲಿ ಅಪ್ಸರ ಬಂದು ಮಾತಾಡಿದಾಗಲೇ ಅವನಿಗೆ ಅನುಮಾನ ಬಂದಿತ್ತು!

ಪಂಕಜ ಮತ್ತು ಅಪ್ಸರ ಒಟ್ಟಿಗೇ ಕಾರಿನಲ್ಲಿ ಹೊರಟಾಗ ಇವನೂ ಸಹ ಹಿಂಬಾಲಿಸಿದ್ದನು. ಕಿಟಕಿಯ ಹತ್ತಿರ ನಿಂತು ಎಲ್ಲಾ ಕೇಳಿಸಿಕೊಂಡಿದ್ದನು!

## ಐದು

ಕಾರು ಬಂಗಲೆಯ ಪೋರ್ಟಿಕೋದಲ್ಲಿ ನಿಂತುಕೊಂಡಿತು. ತಾಯಿ ಮಗಳು ಇಳಿದು ಈಗ ಬಂಗಲೆಯ ಹಾಲ್‌ಗೆ ಬಂದರು.

ಹಾಲ್‌ನಲ್ಲಿ ಪ್ರಸಾದ್ ಕುಳಿತಿದ್ದನು. ಅವರ ಎದುರಿಗೆ ಉದಯ ನಿಂತಿದ್ದನು.

ಗಂಭೀರತರ ವಾತಾವರಣ!

ಪರಿಸ್ಥಿತಿ ಏಕೋ ಸರಿ ಇಲ್ಲ ಅಂತ ಅಲ್ಲಿನ ಸನ್ನಿವೇಶ ಕಂಡಕೂಡಲೇ ಅನಿಸಿತು. ತಾಯಿ - ಮಗಳು ಅಳುಕುತ್ತಲೇ ಒಳಗೆ ಬಂದರು.

ಪ್ರಸಾದ್ ತಣ್ಣನೆಯ ಸ್ವರದಲ್ಲಿ ''ತಾಯಿ ಮಗಳ ಸವಾರಿ ಎಲ್ಲಿಂದ ಬರುತ್ತಿದೆ?''

ಪಂಕಜ ಗಾಬರಿಯಿಂದಲೇ ''ಅದು...ಅದು...ಶಾಪಿಂಗ್ ಮಾಡಲು ಹೋಗಿದ್ದೆವು''

ಪ್ರಸಾದ್ ಸಿಗರೇಟ್ ಅನ್ನು ಹತ್ತಿಸಿಕೊಂಡು ''ಪಂಕಜ... ಈ ವಯಸ್ಸಿನಲ್ಲಿ ನೀಸು ಸುಳ್ಳು ಹೇಳಬಾರದು ನಿಜ ಹೇಳಿಬಿಡು ಡಿಯರ್''

ಪಂಕಜ ಭಯದಿಂದಲೇ ''ಅದು...ಅದು...''

''ನಿನ್ನ ತಾಯಿ ಮನೆಯಿಂದ ತಾನೆ?''

ಬೆಚ್ಚಿಬಿದ್ದಳು ಪಂಕಜ. ಅಪ್ಸರ ಅನುಮಾನದಿಂದಲೇ ಉದಯನ ಕಡೆ ನೋಡಿದಳು.

ಉದಯ ಕುಹಕ ನಗೆ ಬೀರಿದನು!

ಪ್ರಸಾದ್ ''ಪ್ರೀತಿಸಿ ಮದುವೆಯಾಗಿರುವ ಗಂಡನಿಗೆ ನೀನು ಈ ರೀತಿ ಮೋಸ ಮಾಡಬಹುದೆ ಪಂಕಜ?'' ಎಂದು ಗಡುಸಾಗಿ ಕೇಳಿದನು.

ಪಂಕಜ ಧ್ವನಿಯೇರಿಸಿ ''ಏನು...ಏನಂದ್ರಿ? ನಾನು ನಿಮಗೆ ಮೋಸ ಮಾಡಿದ್ದೇನೆಯೇ?''

ಪ್ರಸಾದ್ ''ಇಪ್ಪತ್ತು ವರ್ಷಗಳ ಹಿಂದೆ ನಡು ರಸ್ತೆಯಲ್ಲಿ ನಿಲ್ಲಿಸಿ ನನಗೆ ಅವಮಾನ ಮಾಡಿರುವವರ ಮನೆಗೆ ನನ್ನ ಮಗಳನ್ನು ಕರೆದುಕೊಂಡು ನೀನು ಹೋಗಬಾರದಿತ್ತು''

ಪಂಕಜ ''ರೀ...ರೀ...ಅಮ್ಮ ಅದಕ್ಕಾಗಿ ತುಂಬಾ ಪಶ್ಚಾತ್ತಾಪ ಪಡುತ್ತಿದ್ದಾಳೆ. ನಿಮ್ಮ ಹತ್ತಿರ ಕ್ಷಮೆ ಕೇಳಲು ನಾಳೆಯ ದಿನ ಅಮ್ಮ ಮತ್ತು ಸೂರ್ಯ ಇಲ್ಲಿಗೆ ಬರುತ್ತಿದ್ದಾರೆ''

ಪ್ರಸಾದ್ ಕೋಪ ಮತ್ತು ವ್ಯಂಗ್ಯವಾಗಿ ''ಓಹೋ...ಈಗ ಅಂತಹ ಒಳ್ಳೆಯ ಬುದ್ಧಿ ಬಂದಿದೆಯ? ಈ ರೀತಿ ದಿಢೀರ್ ಅಂತ ಜ್ಞಾನೋದಯ ಆಗಲು ಕಾರಣ ಏನು ಅಂತ ಗೊತ್ತೆ ಪಂಕಜ?''

ಪಂಕಜ ದುಃಖದಿಂದಲೇ ''ನನ್ನ ಅಮ್ಮ ತಪ್ಪು ಮಾಡಿದ್ದಾಳೆ. ಅದು ತಪ್ಪು ಅಂತ ತುಂಬಾ ವರ್ಷಗಳಿಂದಲೇ ಅನಿಸಿದೆ. ಆದರೆ ನಾವು ಈ ಊರಿನಲ್ಲಿ ಇದ್ದೇವೆ

ಅಂತ ಅವರಿಗೆ ಗೊತ್ತಿರಲಿಲ್ಲ''

ಪ್ರಸ್ದ್ ಗಡುಸಾಗಿ ''ನಿನ್ನ ತಾಯಿಯಿನ್ನು ವಹಿಸಿಕೊಂಡು ಮಾತಾಡಬೇಡ ಪಂಕಜ. ಅವರು ಅಂದು ಆಡಿರುವ ಮಾತುಗಳು ಈಗಲೂ ಸಹ ನನ್ನ ಕಿವಿಯಲ್ಲಿ ಪ್ರಸಿಧ್ವನಿಸುತ್ತಿದೆ. ಅದನ್ನು ನಾನು ಮರೆಯಲು ಸಾಧ್ಯವೇ ಇಲ್ಲ. ಪಂಕಜ...ನಾನು ನೇರವಾಗಿ ಹೇಳಿಬಿಡುತ್ತೇನೆ ಕೇಳು. ನಿನ್ನ ತವರಿನವರು ಇಲ್ಲಿಗೆ ಬರಕೂಡದು. ನಿನ್ತಾಯಿ ಮತ್ತು ತಮ್ಮನ ಮುಖ ನೋಡಲು ಇಷ್ಟಪಡುವುದಿಲ್ಲ. ಅದನ್ನು ಈಗಲೇ ಹಿಗಿ ಉದಯ ತಿಳಿಸುತ್ತಾನೆ. ನೀನಾಗಲಿ ನಿನ್ನ ಮಗಳಾಗಲಿ ಅತ್ತ ಕಡೆ ಸುಳಿಯಬಾರದು ತಿಳಿಯಿತೆ?''

ಅಪ್ಸರ ದುಃಖ, ಆತುರದಿಂದ ''ಡ್ಯಾಡಿ...ಅಜ್ಜಿಯನ್ನು ನೀನೊಂದು ಸಲ ನೋಡಿದರೆ ಖಂಡಿತಾ ಈ ಮಾತನ್ನು ಹೇಳುವುದಿಲ್ಲ. ಅವರು ತುಂಬಾ ಒಳ್ಳೆಯವರು ಸೂರ್ಯ ನೈಸ್ ಜಂಟಲ್‌ಮನ್''

ಪ್ರಸಾದ್ ಕೋಪದಿಂದ ''ನೀನು ಬಾಯಿ ಮುಚ್ಚಿಕೊಂಡು ತೆಪ್ಪಗಿರಬೇಕು. ನೀನು ಹುಟ್ಟುವ ಮೊದಲೇ ಈ ಸಂಬಂಧ ಕಡಿದು ಹೋಗಿದೆ. ಇನ್ನು ಅದನ್ನು ನೀನು ಹೊಸದಾಗಿ ಬೆಸುಗೆ ಹಾಕಲು ಸಾಧ್ಯವಿಲ್ಲ''

''ಹಾಗಲ್ಲ ಡ್ಯಾಡಿ...''

ಪ್ರಸಾದ್ ಕೋಪ, ಆವೇಶದಿಂದ ''ನೀನು ನಿನ್ನ ಅಮ್ಮ ಎಲ್ಲಿಯ ತನಕ ಮುಂದುವರಿದಿದ್ದೀರ ಅಂತ ನನಗೆ ಗೊತ್ತಾಗಿದೆ. ನಿಮ್ಮ ಪಾಲಿಗೆ ಊನೆಯ ಯಜಮಾನ ಇದ್ದಾನೆ ,ಅನ್ನೋದು ಮರೆತು ಹೋಗಿದೆಯೆ?''

ಪಂಕಜ ಭಯದಿಂದಲೇ ''ರೀ...ರೀ...ನಾನು ಹೇಳುವುದನ್ನು ಕೇಳಿ...''

ಪ್ರಸಾದ್ ''ನೀನು ಏನೂ ಹೇಳಬೇಡ. ನನಗೆ ಅಲ್ಲಿ ನಡೆದದ್ದನ್ನೆಲ್ಲಾ ಉದಯ ಹೇಳಿದ್ದಾನೆ. ಓ...ಹೋ...ನನ್ನ ಮಗಳನ್ನು ನ್ನಿ ತಮ್ಮನಿಗೆ ಕೊಟ್ಟು ಮದುವೆ ಮಾಡಲು ಮಾತಾಡುತ್ತಿದ್ದೆಯಂತೆ. ಅಬ್ಬ...! ಎಂತಹ ಧೈರ್ಯ! ಎಂತಹ ಚುರುಕು! ನಿನಗೆ ಆ ಸ್ವಾತಂತ್ರ್ಯವನ್ನು ಯಾರು ಕೊಟ್ಟರು?''

ಅಪ್ಸರ ಕೋಪದಿಂದ ''ಡ್ಯಾಡಿ...ಈ ಉದಯ ಏನು ಹೇಳಿದ್ದಾನೋ ಗೊತ್ತಿಲ್ಲ ಆದರೆ ಅಮ್ಮ ಅಲ್ಲಿ ಯಾವ ರೀತಿಯ ಮಾತನ್ನೂ ಆಡಿಲ್ಲ. ನಿಲವು ದಂಡಪಿಂಡ ಉದಯನ ಮಾತುಗಳನ್ನು ಕೇಳಬೇಡ'' ಎಂದು ರೇಗಿದಳು.

ಉದಯನ ಮುಖ ಪೂರ್ತಿಯಾಗಿ ಕೆಂಪು ಕೆಂಪಾಯಿತು. ಎಂತಹ ಅವಮಾನ!

ಪ್ರಸಾದ್ ಕೋಪದಿಂದ ''ಅಪ್ಸರ...ಉದಯನ ಬಗ್ಗೆ ಹಗುರವಾಗಿ ಮಾತಾಡಿದರೆ ನಾನು ಸುಮ್ಮನಿರೋಲ್ಲ ಅದು ಸರಿ, ಈಗ ಸತ್ಯವನ್ನು ನೀನೇ

ಹೇಳು. ಟೂರ್‌ಗೆ ಹಿಗಿದ್ದಾಗ ರಾತ್ರಿಯ ಹೊತ್ತು ಸೂರ್ಯನ ಜೊತೆ ಒಬ್ಬಳೆ ಒಂದು ಗಂಟೆ ಸಮುದ್ರದ ಹತ್ತಿರ ನಿಂತಿದ್ದೆಯಂತೆ. ಈಗ ರೂಮಿನಲ್ಲಿ ನೀವಿಬ್ಬರೇ ಎರಡು ಗಂಟೆಗಳ ಕಾಲ ನಗು ನಗುತ್ತಾ ಹರಟೆ ಹೊಡೆದದ್ದು ನಿಜ ತಾನೆ?''

ಪಂಕಜ ಭಯಗೊಂಡಳು. ಈ ಉದಯನಿಂದ ಎಲ್ಲಾ ತಿರುಗುಮುರುಗಾಗಿದೆ. ಇದು ಎಲ್ಲಿಯತನಕ ಹೋಗುತ್ತದೋ...? ಮುಂದೆ ಏನು ಕಾದಿದೆಯೋ?

ಅಪ್ಸರ ಈಗ ಉರಿಗಣ್ಣಿನ ನೋಟವನ್ನು ಉದಯನ ಮೇಲೆ ಬೀರಿದಳು.

ಪ್ರಸಾದ್ ''ಅವನನ್ನು ಯಾಕೆ ಹಾಗೆ ನೋಡುತ್ತೀಯ? ಯಾಕೆ ನಿನ್ನ ಕಳ್ಳತನ ಕಂಡು ಹಿಡಿದ ಅಂತ ತಾನೆ?''

ಅಪ್ಸರ ತನ್ನ ತಾಯಿಯಂತೆ ಹೆದರುವ ಹೆಣ್ಣಲ್ಲ. ಅವಳು ಧೈರ್ಯದಿಂದಲೇ ''ಡ್ಯಾಡೀ...ಕಳ್ಳತನದ ಕೆಲಸವನ್ನು ನಾನು ಏನೂ ಮಾಡಿಲ್ಲ''

ಪ್ರಸಾದ್ ಕೋಪದಿಂದ ''ಸೂರ್ಯನ ಜೊತೆ ನಿನ್ನ ವರ್ತನೆಯನ್ನು ಏನು ಅಂತ ತಿಳಿಯಬೇಕು?''

ಅಪ್ಸರ ತೀಕ್ಷ್ಣವಾಗಿಯೇ ''ಅದು ಕಳ್ಳತನ ಅಲ್ಲ ಪಿರ್ತಿ...ಪಿರ್ತಿ ಡ್ಯಾಡಿ!''

ಇದನ್ನು ಕೇಳಿ ಅಲ್ಲಿದ್ದವರೆಲ್ಲಾ ಬೆಚ್ಚಿಬಿದ್ದರು. ಉದಯನ ಮುಖದಲ್ಲಿ ನಿರಾಸೆ ಗಾಬರಿ!

ಪಂಕಜ ಗಾಬರಿಯಾಗಿ ಮಗಳ ಮುಖವನ್ನು ನೋಡಿದಳು. ಸುಮ್ಮನಿರು...ಮಾತಾಡಬೇಡ ಎಂಬಂತೆ ಸಂಜ್ಞೆ ಮಾಡಿದಳು. ಆದರೆ ಅಪ್ಸರ ಕೇರ್ ಮಾಡಲಿಲ್ಲ.

ಪ್ರಸಾದ್ ಕೋಪದಿಂದ ''ಅಪ್ಸರ...ನೀನು ಮಿತಿಮೀರಿ ಮಾತಾಡುತ್ತಿದ್ದೀಯ ನನ್ನ ಎದುರಿಗೆ ಅವನನ್ನು ಪ್ರೀತಿಸುತ್ತೇನೆ ಅಂತ ಹೇಳಲು ಎಷ್ಟು ಧೈರ್ಯ ನಿನಗೆ?''

ಅಪ್ಸರ ಧೈರ್ಯದಿಂದಲೆ ''ನಾನು ಯಾರ ಮಗಳು ಅಂತ ಗೊತ್ತೆ ಡ್ಯಾಡಿ? ಪಿರ್ತಿಗೋಸ್ಕರ ರಕ್ತಸಂಬಂಧಿಗಳನ್ನೆಲ್ಲಾ ಮರೆತು ಇಪ್ಪತ್ತು ವರ್ಷಗಳಿಂದ ನಿಮ್ಮ ಜೊತೆ ಸಂಸಾರ ಮಾಡುತ್ತಿರುವ ಮಂಕಜಳ ಮಗಳು.ಪ್ರೀತಿಸಸುತ್ತೇನೆ ಅಂತ ಹೇಳಲು ನನಗ್ಯಾಕೆ ಹಿಂಜರಿಕೆ ಡ್ಯಾಡಿ?'' ಎಂದರು.

ಪ್ರಸಾದ್ ಕೋಪ ತಡೆಯಲಾರದೆ ಎದ್ದು ಬಂದು ಮಗಳ ಕೆನ್ನೆಗೆ ಹೊಡೆದರು.

ಅಪ್ಸರ ತತ್ತರಿಸಿಹೋದಳು. ನೋವಿನಿಂದ ಕಿರುಚುತ್ತಾ ತಾಯಿಯನ್ನು ತಬ್ಬಿಕೊಂಡಳು. ಪ್ರಸಾದ್ ಪುನಃ ಹತ್ತಿರ ಬಂದಾಗ ಪಂಕಜ ದುಃಖ ಮತ್ತು ಅಪ್ಸರ

ಕೋಪದಿಂದ ''ಯಾಕೆ...ಯಾಕೆ...ಹೊಡೆಯುತ್ತೀರಿ? ನನ್ನ ಮಗಳು ಮಾಡಿರೋ ತಪ್ಪಾದರೂ ಏನು?''

ಪ್ರಸಾದ್ ಹತ್ತಿರ ಬರುತ್ತಾ ''ಪಂಕಜ...ನೀನು ಅವಳಿಗೆ ಸಪೋರ್ಟ್ ಮಾಡಬೇಡ. ಯಾರಿಂದ ನನಗೆ ಅವಮಾನ ಆಗಿತ್ತೋ ಅಂತಹ ಕುಟುಂಬಕ್ಕೆ ಹೆಣ್ಣು ಕೊಲಡು ನಾನು ಸಿದ್ಧನಿಲ್ಲ. ನಾನು ದ್ವೇಷಿಸುತ್ತಿರುವ ನಿನ್ನ ತಾಯಿ ಮತ್ತು ತಮ್ಮನ ಮನೆಗೆ ಅಪ್ಸರ ಬೆಳಗುವ ಜ್ಯೋತಿಯಾಗಲು ಸಾಧ್ಯವೇ ಇಲ್ಲ''

ಪಂಕಜ ಗಂಭೀರವಾಗಿ ''ಪ್ರೀತಿಗೆ ನಿಮ್ಮ ದ್ವೇಷ ಮುಖ್ಯ ಅಲ್ಲ. ನೀವು ದ್ವೇಷಿಸುತ್ತಿದ್ದೀರ ಅಂತ ತಿಳಿದಿದ್ದರೂ ಸಹ ಅಪ್ಸರ ಅವನನ್ನು ಪ್ರೀತಿಸುತ್ತಿದ್ದಾಳೆ. ಅಂದರೆ ಇದೇ ನಿಜವಾದ ಪ್ರೀತಿ''

ಪ್ರಸಾದ್ ಕೋಪದಿಂದ ''ಪಂಕಜ''

ಪಂಕಜ ''ಅದು ಸರಿ...ನೀವ್ಯಾಕೆ ನನ್ನ ತಮ್ಮನನ್ನು ದ್ವೇಷಿಸಬೇಕು? ಅವನೇನು ನಿಮ್ಮನ್ನು ಅಂದು ಅವಮಾನ ಮಾಡಿಲ್ಲವಲ್ಲ. ನಮ್ಮ ಮದುವೆಯಾದಾಗ ಅವನಿನ್ನೂ ಚಿಕ್ಕ ಹುಡುಗ. ಅವನಿಗೆ ಭಾವ ಎಂದರೆ ಈಗಲೂ ಸಹ ತುಂಬಾ ಗೌರವ ಇದೆ''

ಪ್ರಸಾದ್ ಗಡುಸಾಗಿ ''ನಿನ್ನ ತಾಯಿ ಮತ್ತು ತಮ್ಮನ ನಾಟಕ ನನಗೆ ಗೊತ್ತಿದೆ. ಸಂಬಂಧದ ಹೆಸರಿನಲ್ಲಿ ನನ್ನ ಮಗಳ ತಲೆ ಕೆಡಿಸಿದ್ದಾರೆ. ಅವಳನ್ನು ಹೇಗಾದರೂ ಸರಿ ಮದುವೆ ಮಾಡಿಕೊಂಡು ಈ ಆಸ್ತಿಯನ್ನು ಹೊಡೆಉುವ ಹುನ್ನಾರ ಅವರದ್ದು''

ಅಪ್ಸರ ''ಡ್ಯಾಡಿ...ನಿಮ್ಮ ಆಸ್ತಿಗಾಗಿ ಯಾರೂ ಸಹ ಬಾಯಿ ಬಿಟ್ಟುಕೊಂಡು ಕುಳಿತಿಲ್ಲ. ನಿಮಗೆ ಆ ರೀತಿ ಅನುಮಾನ ಇದ್ದರೆ ಈ ಆಸ್ತಿಯನ್ನೆಲ್ಲಾ ನಿಮಗೆ ತುಂಬಾ ಬೇಕಾಗಿರೋ ಉದಯನಿಗೆ ಬರೆದುಬಿಡಿ. ಯಾಕೆ ಅಂದರೆ ಇದು ನೀವು ಸಂಪಾದಿಸಿದ್ದು ತಾನೇ? ನಿಮ್ಮನ್ನು ಯಾರೂ ಕೇಳುವುದಿಲ್ಲ''

ಉದಯನ ಮುಖ ಅರಳಿತು. ಅಯ್ಯೋ...ಅಷ್ಟು ಮಾಡೇ ಮಹಾತಾಯಿ. ಆಸ್ತಿ ಸಿಗುವುದಾದರೆ ನ್ನಿ ಕಡೆ ಕತ್ತನ್ನು ಸಹ ಎತ್ತಿ ನೋಡುವುದಿಲ್ಲ ಎಂದು ಅಂದುಕೊಂಡನು.

ಪಂಕಜ ದುಃಖ, ಕೋಪದಿಂದ ''ಒಂದು ಕಾಲದಲ್ಲಿ ಪ್ರೀತಿಗಾಗಿ ಪ್ರಾಮುಖ್ಯತೆ ನೀಡಿದ ನೀವು ಈಗ ಆಸ್ತಿಯ ಬಗ್ಗೆ ಮಾತಾಡುತ್ತಿದ್ದೀರ. ನನ್ನ ತಮ್ಮ ಸೂರ್ಯನ ಕೈತುಂಬಾ ಸಂಪಾದಿಸುತ್ತಾನೆ. ಅವನಿಗೆ ದುರಾಸೆ ಇಲ್ಲ. ಇವಳೇ ಅವನನ್ನು ಪ್ರೀತಿಸುತ್ತಿದ್ದಾಳೆ''

''ಡ್ಯಾಡಿ...ನಿಮ್ಮ ಆಸ್ತಿ ನನಗೆ ಬೇಡ. ನಾನು ಮದುವೆ ಅಂತ ಆದರೆ ಸೂರ್ಯನನ್ನು ಮಾತ್ರ. ನೀವು ಹಳೆಯ ದ್ವೇಷ ಮರೆತು ನಗು ನಗುತ್ತಾ ಅನುಮತಿ ನೀಡಿ ಆಶೀರ್ವಾದ ಮಾಡಿ''

ಪ್ರಸಾದ್ ಕೋಪ, ಆವೇಶದಿಂದ ''ಏನೇ...ಏನೇ ನಿನ್ನ ಅಮ್ಮನ ಸಪೋರ್ಟ್ ಇದೆ ಅಂತ ನನ್ನ ಎದುರಿಗೇ ನಿಂತು ಸಿನಿಮಾ ಡೈಲಾಗ್ಸ್ ಹೇಳುತ್ತಿದ್ದೀಯ. ನಿನ್ತಾಯಿಯ ತವರಿನ ಸಂಬಂಧ ಇಪ್ಪತ್ತು ವರ್ಷಗಳ ಹಿಂದೆಯೆ ಕಡಿದು ಹೋಯ್ತು. ಮುಗಿದು ಹೋಗಿರುವ ಕಾದಂಬರಿಗೆ ನೀನು ಮೊದಲಿನಿಂದ ಮುನ್ನುಡಿ ಬರೆಯಬೇಡ. ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ ಉದಯ...ಇವಳನ್ನು ರೂಮಿಗೆ ಎಳೆದುಕೊಂಡರು ಹೋಗು...''

ತಾಯಿ - ಮಗಳು ಭಯ, ಗಾಬರಿಯಿಂದ ನಡುಗುತ್ತಿರುವಾಗಲೇ ಉದಯ ಕಿರುನಗೆ ಬೀರುತ್ತಾ ಅವರ ಹತ್ತಿರ ಬಂದನು.

ಪಂಕಜ ಕೋಪದಿಂದ ''ರೀ...ರೀ...ನೀವು ಈ ರೀತಿ ದ್ವೇಷ ಸಾಧಿಸಬಾರದು. ಇದು ತುಂಬಾ ಅನ್ಯಾಯ''

ಪ್ರಸಾದ್ ರೇಗುತ್ತಾ ''ನ್ಯಾಯ...ಅನ್ಯಾಯವನ್ನು ನಾನು ನಿನ್ನಿಂದ ಕಲಿಯಬೇಕಾಗಿಲ್ಲ. ಆ ಉದಯ...ಇವಳನ್ನು ಎಳೆದುಕೊಂಡು ರೂಮಿಗೆ ಹೋಗು''

ಉದಯ ಇಂತಹ ಅವಕಾಶಕ್ಕಾಗಿಯೇ ಕಾದಿದ್ದನು. ಸದಾ ಹತ್ತಿರದಲ್ಲೇ ಇರುತ್ತಿದ್ದರೂ ಅವಳ ದೇಹವನ್ನು ಟಚ್ ಮಾಡಿರಲಿಲ್ಲ. ಅವನು. ಈಗ ಬಿಡುತ್ತಾನೆಯೆ? ಅವಳ ತೋಳನ್ನು ಹಿಡಿದನು!

ಅಪ್ಸರ ಕೋಪದಿಂದ ಕೊಸರಾಡುತ್ತಿದ್ದರೂ ಸಹ ಬಿಡದೆ ಅವಳನ್ನು ಎಳೆದುಕೊಂಡು ಹೋಗಿ ರೂಮಿನಲ್ಲಿ ಕೂಡಿ ಬೀಗ ಹಾಕಿದನು.

ಪಂಕಜ ಗಂಡನ ಹತ್ತಿರ ಬರುತ್ತಾ ಆವೇಶದಿಂದ ''ರೀ...ರೀ...ಏನ್ರೀ ಆಗಿದೆ ನಿಮಗೆ. ಪ್ರೀತಿಗೋಸ್ಕರ ಬೇರೆ ಜಾತಿಯವಳಾದ ನನ್ನನ್ನು ಮದುವೆ ಮಾಡಿಕೊಂಡು ನೀವು ಈಗ ಯಾಕೆ ಹೀಗಾಡುತ್ತಿದ್ದೀರ? ನನ್ನ ತವರಿನವರ ಮೇಲೆ ದ್ವೇಷ ಇದೆ ತಾನೆ? ನನ್ನ ತಾಯಿ ಬಂದು ನಿಮ್ಮ ಹತ್ತಿರ ಕ್ಷಮೆ ಕೇಳುತ್ತಾಳೆ. ಅದಕ್ಕಿಂತ ಬೇಕೆ?''

ಪ್ರಸಾದ್ ಗಡುಸಾಗಿ ''ನನ್ನ ಮನೆಗೆ ಯಾರೂ ಸಹ ಬರಕೂಡದು. ನಿನ್ನ ತಾಯಿಯ ಮುಖವನ್ನು ನೋಡಲು ನಾನು ಇಷ್ಟಪಡುವುದಿಲ್ಲ'' ಎಂದು

ಉದಯನ ಕಡೆ ತಿರುಗಿ ''ನೀನು ಸದಾ ಅಲ್ಲೇ ಇರಬೇಕು. ಇನ್ನು ಮೂರು ದಿನಗಳಲ್ಲಿ ಎಲ್ಲಾ ಮುಗಿದು ಹೋಗುತ್ತದೆ''

ಉದಯನಿಗೆ ಸಂತೋಷವಾಗುತ್ತಿದೆ. ಅವನು ಅನುಮಾನದಿಂದಲೇ ''ಮೂರು ದಿನಗಳಲ್ಲಿ ಏನು ಮುಗಿದು ಹೋಗುತ್ತದೆ ಅಂತ ಹೇಳುತ್ತೀರ?''

''ಅಪ್ಸರಳಿಗು ನಿನಗೂ ಮದುವೆ''

ಸಿಡಿಲು ಬಡಿದಂತಹ ಪರಿಸ್ಥಿತಿ!

ಈ ಸುದ್ದಿಯನ್ನು ಕೇಳಿ ಮಾನಸಿಕ ಆಘಾತ ಆದಂತಾಗಿ ಪಂಕಜ ನೆಲಕ್ಕೆ ಕುಸಿಯಲಾರಂಭಿಸಿದಳು.

ಪ್ರಸಾದ್ ಸ್ವಲ್ಪ ಗಾಬರಿಯಾದರೂ ಕೂಡಲೇ ''ಉದಯ ಡಾಕ್ಟರ್‌ಗೆ ಫೋನ್ ಮಾಡು''

ಉದಯ ಫೋನಿನ ಹತ್ತಿರ ನಡೆದನು.

ಅಪ್ಸರ ರೂಮಿನಲ್ಲಿ ಬಂಧಿತಳಾಗಿದ್ದಾಳೆ!

## ಆರು

ಅಪ್ಸರ ಕಾಲೇಜಿಗೆ ಬಂದಿರಲಿಲ್ಲ. ಇದರಿಂದ ಸೂರ್ಯನಿಗೆ ನಿರಾಸೆಯಾಗಿತ್ತು. ಅದರೊಂದಿಗೆ ಗಾಬರಿಯಾಗಿತ್ತು. ಅವನು ಮೊಬೈಲಾಗೆ ಟ್ರೈಮಾಡಿದ್ದನು. ಉಪಯೋಗ ಆಗಿರಲಿಲ್ಲ. ಅವನ ಅಕ್ಕನ ಲೈನ್ ಸಿಕ್ಕಿರಲಿಲ್ಲ! ಬಹುಶಃ ಮೊಬೈಲ್ ಅನ್ನು ಅಕ್ಕ ಆಫ್ ಮಾಡಿರಬೇಕು ಎಂದುಕೊಂಡು ನಿರಾಸೆಯಿಂದ ಡಚಪಡಿಸುತ್ತಿರುವಾಗಲೇ ಜವಾನ ಬಂದು ಇವನನ್ನು ನೋಡಲು ಹೊರಗೆ ಯಾರೋ ಕಾಯುತ್ತಿದ್ದಾರೆ ಎಂದನು.

ಸೂರ್ಯನಿಗೆ ರೋಮಾಂಚನ!

ಅಪ್ಸರ ಬಂದಿರಬಹುದೆ? ಅವಳು ಬಂದಿದ್ದರೂ ನೇರವಾಗಿ ಸ್ಟಾಫ್‌ರೂಮಿಗೂ ಬರುತ್ತಿದ್ದಳು. ಈ ರೀತಿ ಹೇಳಿ ಕಳಿಸುತ್ತಿರಲಿಲ್ಲ. ಒಂದು ವೇಳೆ ಅಕ್ಕ ಏನಾದರೂ ಬಂದಿರಬಹುದೆ? ಅಕ್ಕ ಕಾಲೇಜಿನ ಹತ್ತಿರ ಯಾಕೆ ಬರುತ್ತಾಳೆ?

ಸೂರ್ಯ ಹೊರಗೆ ಬಂದಾಗ ಅವನಿಗೆ ಅಲ್ಲಿ ಆಶ್ಚ್ಯಾಶ್ಚರ್ಯಕರ ಸಂಗಿತಿ ಕಾದಿತ್ತು!

ಅವನ ಭಾವ ಪ್ರಸಾದ್!

ಅವನಿಗೆ ಸಂತೋಷ ಆಗುತ್ತಿದೆ. ನಂಬಿಕೆಯೇ ಬರುತ್ತಿಲ್ಲ. ಭಾವ...! ಭಾವ...ನನ್ನನ್ನು ಹುಡುಕಿಕೊಂಡು ಕಾಲೇಜಿನ ಹತ್ತಿರ ಬಂದಿದ್ದಾರೆ!

ಸೂರ್ಯ ಅವರ ಹತ್ತಿರ ಬಂದು ನಮಸ್ಕರಿಸುತ್ತಾ ''ಚೆನ್ನಾಗಿದ್ದೀರ ಭಾವ'' ಎಂದನು.

ಪ್ರಸಾದ್ ಮುಖ ಸಿಂಡರಿಸಿಕೊಂಡೇ ''ನೀನು ಆ ರೀತಿ ಕೂಗುವುದು ನನಗೆ ಇಷ್ಟಇಲ್ಲ''

ಸೂರ್ಯನಿಗೆ ನಿರಾಸೆ...ಗಾಬರಿ!

ಪ್ರಸಾದ್ ಗಂಭೀರವಾಗಿ ''ಇದು ಕಾಲೇಜು ಇಲ್ಲಿ ಕೂಗಾಡಿ ರಂಪ ಮಾಡಿದರೆ ವಿದ್ಯಾರ್ಥಿಗಳ ಎದುರು ನಿನ್ನ ಗೌರವವೇ ಹಾಳಗುತ್ತದೆ''

ಸೂರ್ಯ ಗಾಬರಿಯಿಂದ ''ಭಾವ ನೀವು ಏನು ಹೇಳ್ತಾ ಇದ್ದೀರ?''

ಪ್ರಸಾದ್ ತಣ್ಣನೆಯ ಸ್ವರದಲ್ಲಿಯೇ ತೀಕ್ಷ್ಣವಾಗಿ ''ನೀನಾಗಲಿ, ನಿನ್ನ ತಾಯಿ ಆಗಲಿ ನನ್ನ ಮನೆಯ ಹೊಸಿಲನ್ನು ಸಹ ತುಳಿಯಕೂಡದು''

''ಹಾಗಲ್ಲ ಭಾವ...''

ಪ್ರಸಾದ್ ''ಮಧ್ಯೆ ಮತಾಡಬೇಡ. ಕಿತ್ತು ಹೋಗಿರುವ ಸಂಬಂಧ ಪುನಹ ಒಂದು ಮಾಡವ ಪ್ರಯತ್ನ ಬೇಡ. ನನ್ನ ಹೆಂಡತಿಯ ತವರಿನವರು ನನ್ನ ಪಾಲಿಗೆ ಒಡೆದು ಹಿಗಿರುವ ಹಾಲಿನಂತೆ. ಹಾಲು ಒಡೆದು ಹೋದರೆ ಏನು ಮಾಡುತ್ತಾರೋ ಅದನ್ನೇ ನಾನು ಮಾಡಿದ್ದೇನೆ''

ಸೂರ್ಯ ಬೇಸರದಿಂದ ''ಭಾವ...ನನ್ನ ತಾಯಿ ಹಿಂದೆ ನಿಮಗೆ ಅವಮಾನ ಆಗುವಂತೆ ಮಾತಾಡಿದ್ದಾರೆ. ನಿಜ ಅದಕ್ಕಾಗಿ ಅವರು ತಪ್ಪತ್ತು ವರ್ಷಗಳಿಂದ ಪಶ್ಚಾತ್ತಾಪ ಪಡುತ್ತಿದ್ದಾರೆ. ನನ್ನ ತಾಯಿಯೇ ನಿಮ್ಮ ಹತ್ತಿರ ಬಂದು ತಪ್ಪಿಸಿ ಕ್ಷಮೆ ಕೇಳುತ್ತಾರೆ''

ಪ್ರಸಾದ್ ವ್ಯಂಗ್ಯವಾಗಿ ''ಆಸ್ತಿಯೊಂದಿಗೆ ನನ್ನ ಮಗಳು ಸಹ ಆ ಮನೆಗೆ ಸೊಸೆಯಾಗಿ ಬರಲಿ ಅಂತ ನಿನ್ನ ತಾಯಿ ನನ್ನ ಕಾಲನ್ನು ಬೇಕಾದರೂ ಹಿಡಿಯುತ್ತಾರೆ''

ಸೂರ್ಯ ಕೋಪದಿಂದ ''ಭಾವ...!''

ಪ್ರಸಾದ್ ''ಕೂಗಾಡಬೇಡ ಇದು ಕಾಲೇಜ್ ನಿಮ್ಮ ನಾಟಕ ನನಗೆ ಗೊತ್ತಿದೆ''

ಸ್ರ್ಯ ಕೋಪದಿಂದ ''ನಾಟಕ ಆಡುವವರ ಹತ್ತಿರ ನೀವು ಯಾಕೆ ಬಂದ್ರಿ?''

ಪ್ರಸಾದ್ ''ಸಂಬಂಧದ ಸೇತುವೆ ಮುರಿದು ಹೋಗಿದೆ. ನಾಟಕ ಆಡುವುದರಿಂದ ನಿಮಗೆ ಯಾವ ರೀತಿಯ ಲಾಭವೂ ಇಲ್ಲ ಅಂತ ತಿಳಿಸಲು

ಬಂದಿದ್ದೇನೆ. ನೀನಾಗಲಿ, ನಿನ್ನ ತಾಯಿ ಆಗಲಿ ನನ್ನ ಮನೆಯಹತ್ತಿರ ಬರಕೂಡದು ನನ್ನ ಹೆಂಡತಿ, ಮಗಳನ್ನು ನೋಡಲು ಪ್ರಯತ್ನಿಸಕೂಡದು''

ಸೂರ್ಯ ತತ್ತರಿಸಿಹೋದನು.

ಪ್ರಸಾದ್ ''ನೋಡು...ನನ್ನ ಮಗಳು ಪ್ರೀತಿಯ ಉನ್ಮಾದದಲ್ಲಿ ನಿನ್ನ ಬಗ್ಗೆ ತಲೆ ಕೆಡಿಸಿಕೊಂನಡಿರಬಹುದು. ಆದರೆ ನಿಮ್ಮಿಬ್ಬರ ಮದುವೆ ಅಸಾಧ್ಯ. ನಾನು ಅವರಿಗೆ ಬೇರೆ ಗಂಡನ್ನು ಗೊತ್ತು ಮಾಡಿದ್ದೇನೆ. ಇನ್ನು ಮೂರು ದಿನಗಳಲ್ಲಿ ಈ ಮದುವೆ ನಡೆಯುತ್ತದೆ''

ಸೂರ್ಯ ಗಾಬರಿಯಿಂದ '4ಭಾವ ನೀವು ದುಡುಕುತ್ತಿದ್ದೀರ ಮುಂಗೋಪ ಬಿಟ್ಟು ನಿಧಾನವಾಗಿ ಆಲೋಚಿಸಿ ಆತುರದ ನಿರ್ಧಾರ ಒಳ್ಳೆಯದಲ್ಲ''

ಪ್ರಸಾದ್ ವ್ಯಂಗ್ಯವಾಗಿ ''ಅಂದರೆ ನಿನ್ನ ಕಾಲುಗಳನ್ನು ತೊಳೆದು ಕನ್ಯಾದಾನ ಮಾಡು ಅಂತೀಯ?''

ಸೂರ್ಯ ಗಂಭೀರವಾಗಿ ''ಭಾವ...ಅಪ್ಸರ ನನಗೆ ಹೆಂಡತಿಯಾಗಬೇಕು ಅಂತ ನನ್ನ ಹಣೆಯಲ್ಲಿ ಬರೆದಿದ್ದರೆ ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ''

ಪ್ರಸಾದ್ ಕೋಪದಿಂದ ''ಓ...ನನಗೇ ಛಾಲೆಂಜ್ ಮಾಡುತ್ತಿದ್ದೀಯ...! ಮೂರು ದಿನಗಳಲ್ಲಿ ನಡೆಯಬೇಕಾಗಿದ್ದ ಮದುವೆಯನ್ನು ನಾಳೆಯೇ ಮುಗಿಸುತ್ತೇನೆ. ನೀನು, ನಿನ್ನ ಅಕ್ಕ ಅದೇನು ಮಾಡುತ್ತೀರೋ ನಾನು ನೋಡಿಯೇ ಬಿಡುತ್ತೇನೆ'' ಎಂದು ಕಾರಿನ ಕಡೆ ನಡೆದರು.

ಸೂರ್ಯ ಅವರನ್ನು ತಡೆಯುವ ಪ್ರಯತ್ನ ಮಾಡಲಿಲ್ಲ. ಕಾರು ಹೋದ ಕೂಡಲೇ ಪಬ್ಲಿಕ್ ಟೆಲಿಫೋನ್ ಬೂತಿನ ಕಡೆ ಆತುರದಿಂದ ನಡೆದನು.

ಬಂಗಲೆಯ ಫೋನ್‌ಗೆ ಡಯಲ್ ಮಾಡುತ್ತಿದ್ದಾನೆ. ಈಗ ಫೋನ್ ರಿಂಗ್ ಆಗುತ್ತಿದೆ.

ಸೆಂಕೆಂಡುಗಳು ಉರುಳುತ್ತಿತ್ತು.

ಅತ್ತ ಕಡೆಯಿಂದ ಕೇಳಿಬಂದ ಗಡುಸಾದ ಪರಿಚಿತ ಪುರುಷ ಕಂಠ ''ಹಲೋ...''

''ಉದಯ...ನೀನಾ...?''

''ಓ...ಪ್ರೊಫೆಸರ್ ಸಾರ್. ನೀವು ಫೋನ್ ಮಾಡಬಹುದು ಅಂದುಕೊಂಡಿದ್ದೆ''

ಸೂರ್ಯ ''ಉದು...ಅಲ್ಲಿ ನನ್ನ ಅಕ್ಕ ಇದ್ದರೆ ಕರೆಯುತ್ತೀಯ?''

''ಅವರು ಹೊರಗೆ ಹೋಗಿದ್ದಾರೆ...'' ಎಂದು ಸೋಫಾದಲ್ಲಿ ಕುಳಿತಿದ್ದ ಪಂಕಜಳ ಕಡೆ ನೋಡಿದನು.

ಪಂಕಜ ಎದ್ದು ಫೋನಿನನ ಹತ್ತಿರ ಬರುತ್ತಾ ''ಉದಯ...ಫೋನ್ ಯಾರದ್ದು?''

ಉದಯ ಮೌತ್ ಪೀಸ್ ಅನ್ನು ಮುಚ್ಚಿಕೊಂಡು ''ಫ್ಯಾಕ್ಟರಿಯಿಂದ ಮ್ಯಾನೇಜರ್ ಮಾಡ್ತಾ ಇದ್ದಾರೆ''

''ಹಲೋ....ಹಲೋ...''

''ಹಾಂ...ಹೇಳಿ''

''ಅಪ್ಸರ ಇದ್ದರೆ ಅವಳನ್ನು ಕರೆಯುತ್ತೀಯ?'' ಎಂದು ಆತುರದಿಂದ ಕೇಳಿದನು.

ಉದಯಕೋಪದಿಂದ ''ನೋಡಿ...ಈ ಮನೆಯಲ್ಲಿ ನನ್ನ ವಿನಹ ಬೇರೆ ಯಾರೂ ಇಲ್ಲ. ಪದೇ ಪದೇ ತೊಂದರೆ ಕೊಡಬೇಡಿ''

ಸೂರ್ಯ ಗಾಬರಿಯಿಂದ ''ಹಲೋ...ಹಲೋ...'' ಎಂದು ಬಡಬಡಿಸಿದನು.

ಫೋನ್ ಡಿಸ್‌ಕನೆಕ್ಟ್ ಆಗಿತ್ತು ಸೂರ್ಯನಿಗೆ ಏನು ಮಾಡಬೇಕು ಅಂತ ತಿಳಿಯುತ್ತಿಲ್ಲ ಪರಿಸ್ಥಿತಿ ಕೈ ಮೀರಿ ಹೋಗುತ್ತಿದೆ!

ಅಪ್ಸರಳಿಗೆ ನಾಳೆಯ ದಿನವೇ ಬೇರೆ ಗಂಡಿನ ಜೊತೆ ಮದುವೆ ಮಾಡುತ್ತಾರಂತೆ. ಆ ಬೇರೆ ಗಂಡು ಉದಯನೇ ಇರಬೇಕು.

ಸೂರ್ಯನಿಗೆ ಏನೋ ಅನುಮಾನ ಬರುತ್ತಿದೆ. ಅವನು ಈಗ ಬೈಕ್ ಸ್ಟಾರ್ಟ್ ಮಾಡಿದನು.

ಹೇಗಾದರೂ ಆಗಲಿ ಒಂದು ಸಲ ಬಂಗಲೆಯ ಹತ್ತಿರ ಹೋಗಿ ನೋಡುವುದು ಒಳ್ಳೆಯದು ಅನಿಸಿದ್ದರಿಂದ ಅತ್ತ ಹೋಗುತ್ತಿದ್ದಾನೆ.

ಭಾವನಿಗೆ ನಮ್ಮ ಮೇಲಿನ ಕೋಪ ಮತ್ತು ದ್ವೇಷ ಕಡಿಮೆ ಆಗಿಲ್ಲ. ದಿಢೀರ್ ಅಂತ ಅಪ್ಸರಳ ಮದುವೆ ಮಾಡಲು ರೆಡಿಯಾಗುತ್ತಿದ್ದಾರೆ ಅಂದರೆ ಏನೋ ದೊಡ್ಡ ರಂಪವೇ ನಡೆದಿರಬೇಕು.

ಸೂರ್ಯ ಬಂಗಲೆಯ ಗೇಟಿನ ಹತ್ತಿರ ಬೈಕ್ ಅನ್ನು ನಿಲ್ಲಿಸಿ ಒಳಗೆ ಬಂದನು.

ಆದರೆ ಗೇಟಿನ ಹತ್ತಿರ ನಿಂತಿದ್ದ ಘೂರ್ಖ ಇವನನ್ನು ತಡೆದು ನಿಲ್ಲಿಸಿದನು.

ಆಗ ಹೊರಗೆ ಬಂದರು ಪ್ರಸಾದ್ ಮತ್ತು ಉದಯ. ಪ್ರಸಾದ್ ಕೋಪದಿಂದ ''ನೀವ್ಯಾಕೆ ಇಲ್ಲಿಗೆ ಬಂದೆ? ನನ್ನ ಮನೆಗೆ ಬಾ ಅಂತ ನಿನಗೆ ಅಕ್ಷತೆ ಕೊಟ್ಟು ಕರೆದವರು ಯಾರು?''

ಪ್ರಸಾದ್ ''ನಾನು ನಿಮ್ಮನ್ನು ನೋಡಲು ಬರಲಿಲ್ಲ. ನನ್ನ ಅಕ್ಕನನ್ನು ನೋಡಲು ಬಂದಿದ್ದೇನೆ''

''ನಿನ್ನಕ್ಕ ಎಂದೋ ನನ್ನ ಹೆಂಡತಿ ಆಗಿದ್ದಾಳೆ. ಕೊಟ್ಟ ಹೆಣ್ಣು ಕುಲದಿಂದ ಹೊರಗೆ. ನೀನು ಅವಳನ್ನು ನೋಡುವ ಅಗತ್ಯ ಇಲ್ಲ. ಮರ್ಯಾದೆಯಿಂದ ಇಲ್ಲಿಂದ ಹೋದರೆ ಕ್ಷೆಮ!''

''ಹೋಗದೆ ಇದ್ದರೆ...''

''ಉದಯ ವಿಚಾರಿಸಿಕೊಳ್ಳುತ್ತಾನೆ'' ಎಂದು ಅವನ ಕಡೆ ನೋಡಿದರು. ಉದಯನಿಗೆ ಭಯವಾಯಿತು. ಯಾಕೆ ಅಂದರೆ ಸೂರ್ಯನ ಪರ್ಸನಾಲಿಟಿ ಆ ರೀತಿ ಇತ್ತು.

ಸೂರ್ಯ ''ನಾನು ಜಗಳ ಆಡಲು ಬಂಲ್ಲಿಲ್ಲ. ಆದರೆ ನನ್ನ ಮೈ ಮುಟ್ಟಿದವರ ಕೈ ಮುರಿಯದೆ ಬಿಡೋಲ್ಲ'' ಎಂದನು.

ಪ್ರಸಾದ್ ಕೋಪದಿಂದ ''ಏನೋ...ರೌಡಿಸಂ ಮಾಡುತ್ತಿದ್ದೀಯಏ ನೀನು ನನ್ನ ಹೆಂಡತಿ, ಮಗಳನ್ನು ನೋಡಲು ಸಾಧ,ಯವೇ ಇಲ್ಲ. ನನ್ನ ಹೆಣ ಉರುಳಿದರೂ ಸಹ ನಾನು ಅವಕಾಶ ಕೊಡುವುದಿಲ್ಲ''

ಸೂರ್ಯ ಬೆಚ್ಚಿಬಿದ್ದನು. ಬಾಗಿಲಿಗೆ ಅಡ್ಡಲಾಗಿ ನಿಂತಿರುವ ಭಾವನನ್ನು ಕಂಡನು. ಈಗ ತಾನು ದುಡುಕಿದರೆ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ ಅಂತ ಗೊತ್ತಾಗಿ ಸೂರ್ಯ ಅಲ್ಲಿಂದ ಹಿಂತಿರುಗಿದನು.

ಉದಯ ನಗುತ್ತಿದ್ದಾನೆ!

ಗೆಲುವಿನ ನಗು ಅದು! ನಾಳೆ ಬೆಳಿಗ್ಗೆ ಇದೇ ಊರಿನ ದೇವಸ್ಥಾನದಲ್ಲಿ ಅಪ್ಸರಳ ಜೊತೆ ಇವನ ಮದುವೆ! ನಂತರ ಹನಿಮೂನ್...ಸುಖ!

ನಿಂತಲ್ಲೇ ಕನಸು ಕಾಣುತ್ತಿದ್ದಾನೆ! ಅಪ್ಸರ ರೂಮಿನಲ್ಲಿ ಬಂಧಿತಳಾಗಿದ್ದಳು. ಪಂಕಜಳಿಗೆ ದಿಗ್ಬಂಧನ ವಿಧಿಸಲಾಗಿತ್ತು! ಅವಳು ಗೋಳಾಡುತ್ತಿದ್ದಳು!

ಸೂರ್ಯ ಮನೆಗೆ ಬಂದು ನಡೆದ ಸಂಗತಿಯನ್ನೆಲ್ಲಾ ತನ್ನ ತಾಯಿಗೆ ಹೇಳಿದನು.

ಮಂಗಳಮ್ಮ ದುಃಖ, ಆವೇಶದಿಂದ ''ನಾನು ಈಗಲೇ ಹೋಗುತ್ತೇನೆ'' ಎಂದು ಹೊರಟರು.

ಸೂರ್ಯ ಅವರನ್ನು ತಡೆದು ನಿಲ್ಲಿಸುತ್ತಾ "ಈಗ ಎಲ್ಲಿಗೆ ಹೋಗುತ್ತಿದ್ದೀಯ?"

ಮಂಗಳಮ್ಮ "ನನ್ನ ಅಳಿಯನ ಕಾಲು ಹಿಡಿದು ಕ್ಷಮೆ ಕೇಳುತ್ತೇನೆ"

ಸೂರ್ಯ ಕೋಪದಿಂದ "ಅದರ ಅಗತ್ಯ ಇಲ್ಲ. ನೀನು ಏನೇ ಮಾಡಿದರೂ ಆವೇಶದಿಂದ ಪರಿತಪಿಸುತ್ತಿರುವ ಆ ಮನುಷ್ಯನ ಮನಸ್ಸು ಬದಲಾಗುವುದಿಲ್ಲ"

ಮಂಗಳಮ್ಮ "ಅಲ್ಲೋ...ನನ್ನ ಮೊಮ್ಮಗಳ ಮದುವೆಯನ್ನು ಬೇರೆ ಗಂಡಿನ ಜೊತೆ ಮಾಡುತ್ತಿದ್ದರೂ ಸಹ ನೋಡಿಕೊಂಡು ಸುಮ್ಮನಿದ್ದೀಯಲ್ಲೋ..."

ಸೂರ್ಯ "ಅಮ್ಮಾ...ಆತುರ, ಆವೇಶದಿಂದ ಮತ್ತೊಂದು ದೊಡ್ಡ ಗಲಾಟೆ ನಡೆಯುತ್ತದೆ"

"ಮತ್ತೆ ಏನು ಮಾಡುತ್ತೀಯ?"

ಸೂರ್ಯ "ಇನ್ನೂ ಕಾಲಾವಕಾಶ ಇದೆ ಅಷ್ಟರಲ್ಲಿ ಏನಾದರೂ ಮಾಡುತ್ತೇನೆ ಸುಮ್ನೆ ಇರು" ಎಂದು ತನ್ನ ರೂಮಿಗೆ ಬಂದು ಚಿಂತಿಸಲಾಂರಭಿಸಿದನು.

ಸಮಯ ಉರುಳುತ್ತಿತ್ತು.

ತುಂಬಾ ಹೊತ್ತು ಆಲೋಚಿಸಿದ ನಂತರ ಸೂರ್ಯ ದೃಢವಾದ ನಿಧಾರಕ್ಕೆ ಬಂದನು. ಅದಕ್ಕೆ ಅಗತ್ಯವಾದ ಸಿದ್ದತೆಗಳನ್ನು ಮಾಡಿಕೊಂಡು ತಾಯಿಗೆ ಧೈರ್ಯ ಹೇಳಿ ಮನೆಯಿಂದ ಹೊರಬಂದನು.

ಮಧ್ಯರಾತ್ರಿ ಎರಡು ಗಂಟೆ!

ಸೂರ್ಯ ಬೈಕ್ ಅನ್ನು ಬಂಗಲೆಯ ಹತ್ತಿರ ನಿಲ್ಲಿಸಿ ಇಳಿದು ಹಿಂಬಾಗಕ್ಕೆ ಬಂದನು.

ನಿಶ್ಯಬ್ಧತೆ ಆವರಿಸಿದಲ!

ಸೂರ್ಯ ಕಾಂಪೌಂಡಿಗೆ ಹತ್ತಿರದಲ್ಲಿ ಬೆಳೆದಿದ್ದ ಮರವನ್ನು ಹತ್ತಿ ಬೈನಾಕ್ಯುಲರ್ ಮೂಲಕ ಬಂಗಲೆಯ ಕಡೆ ನೋಡಿದನು.

ರೂಮೊಂದರಲ್ಲಿ ದೀಪ ಉರಿಯುತ್ತಿತ್ತು. ಅಲ್ಲಿ ಅಪ್ಸರ ಅಳುತ್ತಾ ಮಲಗಿಕೊಂಡಿದ್ದಳು.

ಸೂರ್ಯ ಪೆನ್ನು ಪೇಪರ್ ತೆಗೆದು ಸರಸರನೆ ಬರೆದು ಕಲ್ಲೊಂದನ್ನು ಎತ್ತಿಕೊಂಡು ಅದಕ್ಕೆ ಸುತ್ತಿಸಣ್ಣದಾರ ಬಿಗಿದನು. ಈಗ ಅದನ್ನು ಗುರಿ ನೋಡಿ ತಲರೆದಿದ್ದ ವಿಂಡೋ ಮೂಲಕ ಎಸೆದನು!

ಗುರಿ ಸರಿಯಾಗಿ ತಲುಪಿತ್ತು!

★★★

ಬೆಳಗಿನ ಜಾವ ಐದು ಗಂಟೆ!

ಎಲ್ಲರೂ ತೂಕಡಿಸುತ್ತಾ ಸೋಫಾಕ್ಕೆ ಒರಗಿಕೊಂಡಿದ್ದರು. ಫೋನ್ ರಿಂಗ್ ಆಯಿತು.

ಈ ಶಬ್ದಕ್ಕೆ ಮೊದಲು ಎಚ್ಚರಗೊಂಡ ಪ್ರಸಾದ್ ಫೋನ್ ಅಟೆಂಡ್ ಮಾಡಿದರು.

''ಡ್ಯಾಡಿ...ನಾನು...''

ಫೋನಿನಲ್ಲಿ ಮಗಳ ಧ್ವನಿಯನ್ನು ಕೇಳಿ ಪ್ರಸಾದ್ ಹೌಹಾರಿದರು ಕೂಡಲೇ ಮಗಳನ್ನು ಬಂಧಿಸಿದ್ದ ರೂಮಿನ ಕಡೆ ನೋಡಿದರು!

ಬಾಗಿಲು ತೆರೆದುಕೊಂಡಿತ್ತು!

ಅಪ್ಸರ ''ಡ್ಯಾಡಿ...ಸೂರ್ಯ ನನ್ನನ್ನು ಈಗಾಗಲೇ ನಿಮ್ಮಿಂದ ದೂರ ಕಡೆದುಕೊಂಡು ಹೋಗಿದ್ದಾನೆ''

''ಅಪ್ಸರ...!'' ಎಂದು ಕೋಪ ಮತ್ತು ಆವೇಶದಿಂದ ಅಬ್ಬರಿಸಿದರು.

ಈ ಗಲಾಟೆ ಕೇಳಿ ಉದಯ ಮತ್ತು ಪಂಕಜ ಸಹ ಗಾಬರಿಯಿಂದ ಓಡಿ ಬಂದರು.

ಅಪ್ಸರ ''ಡ್ಯಾಡಿ...ಪ್ರೀತಿಗೋಸ್ಕರ ನನ್ನ ತಮ್ಮ ಅವರು ಮನೆಯನ್ನು ಸಂಬಂಧವನ್ನು ಕಡಿದುಕೊಂಡರು. ಅದೆ ಪ್ರೀತಿಗಾಗಿ ಅದೇ ಕೆಲಸವನ್ನು ನಾನು ಮಾಡುತ್ತಿದ್ದೇನೆ''

ಪ್ರಸಾದ್ ಗಾಬರಿಯಿಂದ ''ಅಂದರೆ...ಅಂದರೆ...ನೀನು...ನೀನು...''

''ಸೂರ್ಯನನ್ನು ಮದುವೆ ಆಗುತ್ತಿದ್ದೇನೆ. ಇವತ್ತೇ...ಇನ್ನು ಒಂದು ಗಂಟೆಯಲ್ಲಿ ಸೂರ್ಯನಿಗೆ ನಾನು ಹೆಂಡತಿ ಆಗಿರುತ್ತೇನೆ. ನೀವಾಗಿಯೇ ಬರುವ ತನಕ ನಾನಾಗಲೀ, ನನ್ನ ಗಂಡ ಆಗಲಿ ತವರು ಮನೆಗೆ ಬರುವುದಿಲ್ಲ ಗುಡ್ ಬೈ...''

ಫೋನ್ ಡಿಸ್‌ಕನೆಕ್ಟ್ ಆಗಿತ್ತು. ವಿಷಯ ತಿಳಿದ ಕೂಡಲೇ ಪಂಕಜಳ ಮುಖ ಸಂತಿಷದಿಂದ ಅರಳಿತು. ಉದಯನ ಮುಖ ಈಗ ಹಸಿ ಹಾಗಲಕಾಯಿ ತಿಂದವರಂತೆ ಆಗಿತ್ತು! ಪ್ರಸಾದ್ ಗರಬಡಿದವರಂತೆ ನಿಂತಿದ್ದರು!

★★★

ಒಂದು ವಾರ ಕಳೆಯಿತು!

ಮನೆಯ ಮುಂದೆ ಕಾರು ನಿಂತುಕೊಂಡಿತು. ಆಗ ಬೆಳಗಿನ

ಆರೂವರೆಯ ಸಮಯ!

ಮಂಗಳಮ್ಮ ಬಾಗಿಲನ್ನು ತೆರೆದವರೇ ಸಂತೋಷ ಮತ್ತು ಆಶ್ಚರ್ಯದಿಂದ ದಿಗ್‌ಭ್ರಾಂತರವಾದರು.

ಅಳಿಯ - ಮಗಳು! ಪ್ರಸಾದ್ - ಪಂಕಜ!

ಇದೇನು ಕನಸೋ...ನನಸೋ...! ಎಂಬ ಭ್ರಮೆ ಉಂಟಾಯಿತು. ಬೆರಗಾಗಿ ನೋಡುತ್ತಿರುವಾಗಲೇ ಪಂಕಜ ಅಳುತ್ತಾ ಓಡಿ ಬಂದು ತಾಯಿಯನ್ನು ತಬ್ಬಿಕೊಂಡರು.

ಪ್ರಸಾದ್ ತಲೆತಗ್ಗಿಸಿ ನಿಂತಿದ್ದರು. ಮಂಗಳಮ್ಮ ಕಂಬನಿ ಮಿಡಿಯುತ್ತಾ ''ನಡೆದಿದ್ದನ್ನು ಮರೆತುಬಿಡಿ ದಯವಿಟ್ಟು ಒಳಗೆ ಬನ್ನಿ'' ಎಂದು ಕೈ ಮುಗಿದರು.

ಪ್ರಸಾದ್ ಒಳಗೆ ಬಂದರು.

ಅದೇ ತಾನೇ ಗಂಡನ ಜೊತೆ ರೂಮಿನಿಂದ ಹೊರ ಬಂದ ಅಪ್ಸರ ತನ್ನ ತಾಯಿಯನ್ನು ತಬ್ಬಿಕೊಂಡು ಅತ್ತಳು. ಭಯದಿಂದಲೇ ತಂದೆಯ ಕಡೆ ನೋಡುತ್ತಾ ''ಐಯಾಮ್ ಸಾರಿ ಡ್ಯಾಡಿ'' ಎಂದಳು.

ಪ್ರಸಾದ್‌ಗೆ ಇನ್ನು ತಡೆಯಲಾಗಲಿಲ್ಲ. ಅವರು ಮಗಳನ್ನು ಬರಸೆಳೆದು ತಬ್ಬಿಕೊಂಡರು.

ಸಂತಸ...ಉದ್ವೇಗದ ಕ್ಷಣಗಳು! ಇದೇ ಶುಭಘಳಿಗೆ...!

ಪ್ರಸಾದ್ ಸೂರ್ಯನ ಹತ್ತಿರ ಬಂದು ''ಐಯಾಮ್ ಸಾರಿ ಮೈ ಬಾಯ್'' ಎಂದರು.

ಸೂರ್ಯ ''ಭಾವ...ನಮ್ಮ ವರ್ತನೆಯಿಂದ ಬೇಸರವಾಗಿದ್ದರೆ ಕ್ಷಮಿಸಿ ಬಿಡಿ''

ಪಂಕಜ ಕಣ್ಣೀರನ್ನು ಒರೆಸಿಕೊಂಡು ''ಇನ್ನು ಹಳೆಯ ಸಂಗತಿಯನ್ನು ಕೆದಕುವುದು ಬೇಡ. ಎಲ್ಲರ ಸಂತೋಷವಾಗಿರೋಣ'' ಎಂದಳು.

ತಾಯಿ, ಮಗಳು ಮತ್ತು ಮೊಮ್ಮಗಳು ಸೇರಿಕೊಂಡು ರುಚಿ ರುಚಿಯಾದ ಅಡುಗೆ ಮಾಡುತ್ತಿದ್ದಾರೆ. ಸೂರ್ಯ ತನ್ನ ಭಾವನೊಂದಿಗೆ ಹಾಲ್‌ನಲ್ಲಿ ಕುಳಿತು ನಗು - ನಗುತ್ತಾ ಹರಟೆ ಹೊಡೆಯುತ್ತಿದ್ದಾನೆ. ಇದೇ ಶುಭಘಳಿಗೆ!

# ಪ್ರತಿ ತಂತ್ರ

ಎಸ್. ಐ. ಗ್ರೇಡಿನ ಪೋಲೀಸ್ ಅಧಿಕಾರಿಗಳೆಲ್ಲಾ ಅಲ್ಲಿ ಅಸೆಂಬಲ್ ಆಗಿದ್ದರು. ಎಸ್. ಪಿ. ಗಜಾನನ ಅವರು ಈ ಎಮರ್‌ಜೆನ್ಸಿ ಮೀಟಿಂಗ್ ಅನ್ನು ಕರೆದಿದ್ದರು.

ರೌಂಡ್ ಟೇಬಲ್ಲಿಗೆ ಅಳವಡಿಸಿದ್ದ ಆಸನಗಳಲ್ಲಿ ಆರು ಮಂದಿ ಎಸ್. ಐ.ಗಳು ಕುಳಿತಿದ್ದಾರೆ.

ಆರು ಮಂದಿಯ ಪೈಕಿ ಅವನೂ ಒಬ್ಬ!

ಈ ಕಾದಂಬರಿಯ ಹೀರೋ!

ಎಸ್. ಐ. ಲಂಬೋದರ! ಈ ಕಾದಂಬರಿಯ ಹೀರೋ ಒಬ್ಬ ಪೋಲೀಸ್ ಅಧಿಕಾರಿ ಎಂದ ಕೂಡಲೇ ಓದುಗರಿಗೆ ನೆನಪಾಗುತ್ತದೆ ತಾವು ನೋಡಿರುವ ಕೇವು ಸಿನಿಮಾಗಳು!

ಸಿನಿಮಾಗಳಲ್ಲಿ ಹಿಂದೆ ಎಸ್. ಐ. ಪಾತ್ರ ಮಾಡುತ್ತಿದ್ದ ಡೈನಾಮಿಕ್ ಹೀರೋ ದೇವರಾಜ್! ಡೈಲಾಗ್‌ಕಿಂಗ್ ಸಾಯಿಕುಮಾರ್! ಅದಕ್ಕೂ ಹಿಂದೆ ಇನ್ನಿತರ ಹೀರೋಗಳು! ಅಂದರೆ ಆ್ಯಂಗ್ರಿ ಹೀರೋ...ಮಾರ್ವಲೆಸ್ ಪರ್ಸನಾಲಿಟಿ, ಟೈಗರ್ ಪ್ರಭಾಕರ್ ತರಹ ಮಸಲ್ಸ್!

ಏನೇನೋ ಕಲ್ಪನೆ ಬರುತ್ತದೆ ಅಲ್ಲವೆ? ಕ್ಷಮಿಸಿ ನಿಮ್ಮಗಳ ಕಲ್ಪನೆಯಂತೆ ಇಲ್ಲ ನಮ್ಮ ಹೀರೋ, ಎಸ್. ಐ ಲಂಬೋದರ!

ಮತ್ತೆ ಇನ್ಯಾಗೆ ಇದ್ದಾನೆ!

ಹೆಸರಿಗೆ...ಹೆಸರಿಗೆ ತಕ್ಕಂತೆ! ಲಂಬವಾಗಿರುವ ಉದರ! ಇತ್ತೀಚೆಗೆ ಹೊಟ್ಟೆ ಒಂದು ಅಡಿ ಮುಂದೆ ಬಂದಿದೆ!

ಕೆಲಸಕ್ಕೆ ಸೇರುವ ಮುನ್ನ...ಮದುವೆ ಆಗುವ ಮುನ್ನ ಪರ್ಫೆಕ್ಟ್ ಪರ್ಸನಾಲಿಟಿ ಇತ್ತು!

ಎಲ್ಲಾ ಎಡವಟ್ಟಾಗೋದೂ ಆಮೇಲೆ ತಾನೆ? ಲಂಬೋದರನಿಗೂ ಹಾಗೇ ಆಯಿತು.

ಬಿಯರ್...ಚಿಕನ್! ಈ ಚಿಕನ್ ಪ್ರಿಯ ಪ್ರತಿ ದಿನಾ ಎಲ್ಲಾ ಬಾರ್‌ಗಳಿಗೂ ವಿಸಿಟ್ ಕೊಡುತ್ತಿದ್ದ.

ಕಬಾಬ್ ಮಂಚೂರಿ ತಿನ್ನುತ್ತಿದ್ದ! ದಿನಗಳು ಕಳೆದಂತೆ ಬೆಲೂನಿನಂತೆ ಊದಿತು ಹೊಟ್ಟೆ! ಈಗ ರಿಯಲೈಸ್ ಆಗಿದೆ! ಡಯಟ್ ಮಾಡುತ್ತಿದ್ದಾನೆ ಅಂತ ಸುದ್ದಿ!

ಈಗ ಮೀಟಿಂಗ್ ಯಾಕೆ ಕರೆದಿದ್ದಾನೆ!

ಎಸ್. ಪಿ. ಗಜಾನನ ಅವರು ''ನಗರದಲ್ಲಿ ಡ್ರಗ್ಸ್ ಡೀಲಿಂಗ್ ವಿಪರೀತ ಜಾಸ್ತಿಯಾಗುತ್ತಿದೆ. ಬ್ರೌನ್‌ಶುಗರ್, ಎಸ್ಕಲಿನ್, ಎಲ್. ಎಸ್. ಡಿಗಳನ್ನು ತುಂಬಾ ಸೀಕ್ರೆಟ್ ಆಗಿ ವ್ಯವಸ್ಥಿತ ರೀತಿಯಲ್ಲಿ ಮಾರುತ್ತಿದ್ದಾರೆ. ಅವರು ಡ್ರಗ್ಸ್‌ಗಳನ್ನು ತುಂಬಾ ಬುದ್ಧಿವಂತಿಕೆಯಿಂದ ಸಪ್ಲೈಮಾಡುತ್ತಿದ್ದಾರೆ. ಅದನ್ನು ಪತ್ತೆ ಮಾಡಲೇ ಬೇಕು. ನಿಮ್ಮಗಳ ಜೂರಿಸ್‌ಡಿಕ್ಷನ್‌ನಲ್ಲಿ ನೀವು ತುಂಬಾ ಕೇರ್‌ಫುಲ್ ಆಗಿ ವಾಚ್ ಮಾಡಬೇಕು. ಡ್ರಗ್ಸ್ ಸ್ಮಗ್ಲರ್‌ಗಳು ಸ್ನೇಹಿತರಂತೆ, ಸಂಬಂಧಿಗಳಂತೆ ಮತ್ತು ಸಮಾಜದಲ್ಲಿ ಗೌರವ ವ್ಯಕ್ತಿಗಳಂತೆ ನಟಿಸುತ್ತಾ ಡ್ರಗ್ಸ್ ಡೀಲಿಂಗ್ ನಡೆಸುತ್ತಿದ್ದಾರೆ. ಆದ್ದರಿಂದ ಅವರುಗಳನ್ನು ಹಿಡಿಯಲಾಗುತ್ತಿಲ್ಲ. ಸೋ...ನೀವುಗಳು ಇನ್ನು ಮುಂದೆ ಎಚ್ಚರಿಕೆಯಿಂದ ಇರಬೇಕು'' ವಿವರಣೆ ಮುಂದುವರೆಯುತ್ತಿದಲ! ಲಂಬೋದರ ಜೇಬಿನಿಂದ ಕರ್ಚೀಫ್ ತೆಗೆದು ಈಗ ಮುಖ ಮತ್ತು ಕತ್ತಿನಲ್ಲಿ ಜಿನುಗುತ್ತಿದ್ದ ಬೆವರನ್ನು ರೆಸಿಕೊಂಡು ಎದ್ದು ನಿಂತನು.

ಮೀಟಿಂಗ್ ಮುಗಿದಿತ್ತು ಮೊದಲಿನಂತೆ ಚುರುಕಾಗಿ ನಡೆಯಲು ಆಗುತ್ತಿಲ್ಲ ಕಾಲುಗಳಿಗಿಂತ ಹೊಟ್ಟೆ ಮುಂದೆ, ಮುಂದೆ ಹೋದರೆ ಇನ್ನೇನಾಗುತ್ತದೆ?

ಮೀಟಿಂಗ್‌ನಲ್ಲಿ ಏನು ಹೇಳಿದ್ರು? ಡ್ರಗ್ಸ್‌ಸ್ಮಗ್ಲರ್ಸ್ ಅನ್ನು ಗಮನಿಸಿ ಅಂತ!

ಅಯ್ಯೋ ಗಮನಿಸಿದರಾಯಿತು ಎಂದು ಉದಾಸೀನದಿಂದ ಅಂದುಕೊಂಡನು.

ಪೋಲೀಸ್ ಸ್ಟೇಷನ್ನಿಗೆ ಬಂದನು. ಕುಳಿತು ಗಾಳಿ ಹಾಕಿ ಕೊಳ್ಳುತ್ತಿರುವಾಗಲೇ ಫೋನ್ ಬಂತು!

ಫೋನ್ ಅಟೆಂಡ್ ಮಾಡಿದನು. ಮುಖ ಸಿಂಡರಿಸಿದನು ಹಾಗಲಕಾಯಿಯನ್ನು ಕಚ್ಚಿತಿಂದವರಂತೆ! ಅವನ ಹೆಂಡತಿ ಲೈನಿನಲ್ಲಿದ್ದಳು. ಅಂದರೆ ಇವನ ಪಾಲಿಗೆ ಹೆಂಡತಿ ಹಾಗಲಕಾಯಿಯಷ್ಟೇ! ಅಯ್ಯೋ ಪಾಪ...!

ಅವನ ಹೆಂಡತಿ ಗಜಲಕ್ಷ್ಮಿ!

''ರೀ....ಬೇಗ ಬರ್ತೀರ?'' ಎಂದು ತುಂಬಾ ಕೂಲ್ ಆಗಿಯೇ ಕರೆದಳು.

''ಯಾಕೆ...ಯಾಕೆ ಏನಾದರೂ ಆಯಿತೆ?'' ಎಂದು ಗಾಬರಿ, ಆತುರದಿಂದ ಕೇಳಿದನು.

''ಅಂದರೆ ನನಗೆ ಏನಾದರೂ ಆಗಬೇಕು ಅನ್ನಿ''

''ಅಯ್ಯೋ ಹಾಗಲ್ಲ ಚಿನ್ನ...''

ಗಜಲಕ್ಷ್ಮಿ ಕೋಪದಿಂದ ''ನನಗೆಲ್ಲಾ ಆದರೆ ನನಗೆ ಹಾಗೆಲ್ಲಾ ಏನೂ ಆಗೋಲ್ಲ''

''ನೋಡು...ನೋಡು ತಪ್ಪು ತಿಳಿಯಬೇಡ. ಈಗ ನಾನ್ಯಾಕೆ ಬರಬೇಕ್ಷೇಕು ಅಂತ ಹೇಳು''

''ಮಮತ ಬಂದಿದ್ದಾಳೆ''

ಅರಳಿತು ಮುಖ 70 ಇಂಇ ಸಿನಿಮಾ ಪರದೆಯಂತೆ ಗಾಳಿಯಲ್ಲಿ ತೇಲುತ್ತಿರುವ ಅನುಭವ! ಸಂತೋಷ...ಪರಮ ಸಂತೋಷ! ಮಮತ. ಮಮತ ಬಂದಿದ್ದಾಳೆ.

ಈ ಪ್ರಾಣ ಎಷ್ಟೊಂದು ಸಂತೋಷ ಪಡುತ್ತಿದೆಯಲ್ಲ ಈ ಮಮತ ಯಾರು?

ಇವನ ಹೆಂಡತಿ ತಂಗಿ! ವಾಟ್...! ನಾದಿನಿ ಬಂದರೆ ಈ ರೀತಿ ಸಂತೋಷ ಪಡುವ ಗಂಡಂದಿರು ಇದ್ದಾರೆಯೇ?

ಲಂಬೋದರ ಇದ್ದಾನಲ್ಲ!

''ಬಂದೇ...ಈಗ ಬರುತ್ತೇನೆ'' ಎಂದು ಫೋನ್ ಡಿಸ್‌ಕನೆಕ್ಟ್ ಮಾಡಿ ಟೇಬಲ್ಲಿನ ಮೇಲೆ ಇದ್ದ ಕ್ಯಾಪ್ ಅನ್ನು ಹಾಕಿಕೊಂಡನು. ಪೋಲೀಸ್ ಕ್ಯಾಪ್ ತಲೆಯ ಮೇಲೆ ಇದ್ದಾಗ ಈ ಲಂಬೋದರ ಸುಮಾರಾಗಿ ಕಾಣುತ್ತಾನಲ! ಕ್ಯಾಪ್ ತೆಗೆದರೆ ಕಾಣುತ್ತದೆ ತಿರುಪತಿಗೆ ಹೋಗಿ ಕೂದಲು ಕಳೆದುಕೊಂಡು ಬಂದಿರುವ ಭಕ್ತರ ತಲೆಯಂತೆ! ಪರ್ಮನೆಂಟ್ ಬೋಡಾ!

ಪೋಲೀಸ್ ಜೀಪ್ ಮನೆಯ ಮುಂದೆ ನಿಂತಿತು. ಉತ್ಸಾಹದಿಂದ ಇಳಿದನು. ಆದರೆ ಮೆಟ್ಟಿಲುಗಳನ್ನು ಕಂಡು ಕೋಪ ಉಕ್ಕೇರಿತು. ಅದನ್ನು ಹತ್ತಬೇಕಲ್ಲ ಈ ಹೊಟ್ಟೆ ಹೊತ್ತುಕೊಂಡು! ಸುಸ್ತಾಗಿದ್ದಿ ಸಾರ್ಥಕವಾಯಿತು!

ಬಿಸಿಲಲ್ಲಿ ಬಾಯಾರಿದವನಿಗೆ ಕೂಲ್ ಡ್ರಿಂಕ್ಸ್ ಕುಡಿದ ತೃಪ್ತಿ ಈಗವನ ಮುಖದಲ್ಲಿ!

ನಗುತ್ತಿದ್ದ ನಾದಿನಿ ಮಮತ! ಕ್ಲೋಸ್ ಅಪ್ ಟೂತ್ ಪೇಸ್ಟ್‌ನ ನಗು!

ಅವಳು ತುಂಬಾ ಚೆನ್ನಾಗಿದ್ದಾಳೆ ಬಿಡಿ. ತೆಳ್ಳಗೆ, ಬೆಳ್ಳಗೆ ಎತ್ತರವಾಗಿದ್ದಾಳೆ!

ದುಂಡನೆಯ ಮುಖ! ಬಾಬ್ ಮಾಡಿರುವ ಹೇರ್ ಸ್ಟೈಲ್! ಜೀನ್ಸ್ ಪ್ಯಾಂಟ್ ಮತ್ತು ಕೆಂಪು ಬಣ್ಣದ ಬಿಗಿಯಾಗಿ ಟೀಷರ್ಟ್ ಧರಿಸಿದ್ದಾಳೆ ಮುಂದಕ್ಕೆ ಉಬ್ಬಿಕೊಂಡಿದೆ ಮಾಟವಾಗಿರುವ ಮಾರ್ವೆಲಸ್ ಬಾಡಿಸ್ಟ್ರಕ್ಚರ್! ಅವಳ ಯೌವ್ವನದ ಸಿಂಬಲ್‌ಗಳು! ಅವಳು ಹುರಿದಂತೆ ಇಂಗ್ಲೀಷ್ ಮಾತಾಡುತ್ತಾಳೆ. ದಾಳಿಂಬೆ ನೆನಪಾಗುತ್ತದೆ ಅವಳ ಹಲ್ಲುಗಳನ್ನು ನೋಡುತ್ತಿರುವಾಗ, ನಗುವಾಗ ಅರಳುವ ತುಟಿಗಳು! ತೆಳ್ಳಗಿರುವ ಗುಲಾಬಿ ತುಟಿಗಳು! ಸದಾ ಒದ್ದೆಯಾಗಿರುತ್ತದೆ. ಮಿಂಚುತ್ತಿರುತ್ತದೆ. ಮಮತ ಬಣ್ಣ ಬಳಿಯೋಲ್ಲ!

ಪಕ್ಕದಲ್ಲಿ ಹೆಂಡತಿ ಇದ್ದಾಳೆ ಅನ್ನೋದನ್ನು ಸಹ ಮರೆತು ನಾದಿನಿಯನ್ನು ನೋಡುತ್ತಿದ್ದಾನೆ.

''ಹಲೋ ಭಾವ ಹೇಗಿದ್ದೀರ?'' ಎಂದು ನಗುತ್ತಾ ಹತ್ತಿರ ಬಂದಳು ನಾದಿನಿ.

ಅವಳ ತುಂಬಿದ ಎದೆ ಟಚ್ ಆಗಲು ಕೇವಲ ಅರ್ಧ ಅಡಿ ಅಂತರ!

ಮಮತ ನಗುತ್ತಲೇ ''ನಿಮ್ಮನ್ನು ನೋಡಿದರೆ ತುಂಬಾ ಸುಖವಾಗಿದ್ದೀರ ಅನಿಸುತ್ತೆ''

ಗಜಲಕ್ಷ್ಮಿ ಮುಖ ಸಿಂಡರಿಸುತ್ತಾ ''ಸುಖ ಜಾಸ್ತಿಯಾಗಿರೋದ್ರಿಂದಲೇ ಮೈ ಬಂದಿರೋದು'' ಮುಖ ಕೆಂಪೇರಿತು ಅವಮಾನದಿಂದ!

ಆದರೆ ಹೆಂಡತಿಯನ್ನು ಅನ್ನುವ ಹಾಗಿಲ್ಲ. ಅವಳೇನು ಇವನ ಹಾಗೆ ತಿಂಗಳ ಸಂಬಳದ ಹೆಣ್ಣಲ್ಲ!

ಅವಳ ಹೆಸರಿನಲ್ಲಿ ಆಸ್ತಿ ಇದೆ! ಒಬ್ಬಳಿಗೇ ಅರವತ್ತು ಲಕ್ಷ! ಲಂಬೋದರ ಹೆಂಡತಿಯ ಕಡೆ ತಿರಸ್ಕಾರದಿಂದ ನೋಡುತ್ತಾ ಒಳಗೆ ಹೋದನು. ಹೆಂಡತಿಯ ಹೆಸರು ಗಜಲಕ್ಷ್ಮಿ! ಅವಳು ಗಜಗಮನೆ ಅಲ್ಲ! ಸಿಕ್ಕಾ ಪಟ್ಟೆ ಲೀನ್ ಪರ್ಸನಾಲಿಟಿ. ಅವಳು ಹ್ಯಾಗೆ ಕಾಣುತ್ತಾಳೆ ಗೊತ್ತೆ? ಮಡಿಕೋಲಿಗೆ ಸೀರೆ ಸುತ್ತಿದಂತೆ! ಉಬ್ಬು ಹಲ್ಲು ಬೇರೆ! ಬಣ್ಣ...ಭದ್ರಾವತಿ ಬಂಗಾರ! ಕಪ್ಪು ಮುಖದಲ್ಲಿ ಸಿಡುಕು!

ಹೋಗಲಿ ಮೈ ಮಾಟ ಹೇಗಿದೆ? ಎದೆ ಇದೆ ಅಂತ ಗೊತ್ತಾಗುವುದೇ ಇಲ್ಲ!

ಪ್ಲಾಟ್...ನೀಟಾಗಿ ಪ್ಲಾಟ್ ಆಗಿದೆ!

ಈ ರಸಿಕನಿಗಲ್ಲ ಅವಳು! ಇವನಿಗೋ ನೂರಾರು ಆಸೆ...ಕನಸುಗಳು! ಬಯಕೆಗಳು! ಹೆಂಡತಿ ಹತ್ತಿರ ಸೇರಿಸುತ್ತಿರಲಿಲ್ಲ! ಅದಕ್ಕೆ ಕಾರಣ ರೋಗ! ಮದುವೆಯಾಗಿ ಎರಡು ವರ್ಷದಲ್ಲಿ ಕೇವಲ ಬೆರಳೆಣಿಕೆಯಷ್ಟು ಸಲ

ಕರೆದುಕೊಂಡಿದ್ದಾಳೆ. ಈಗಂತೂ ಸೇರಿಯೇ ಸರಿ! ಇವನ ದೇಹ ರೋಡ್ ರೋಲರ್! ಅವಳೋ ಜಲ್ಲಿಕಲ್ಲು...! ಇವನು ಮೇಲೆ ಬಿದ್ದಾಗ ಬಾಯಿ ಬಡಿದುಕೊಂಡು ದೂರ ಸರಿದಿದ್ದಳು.

ಅಂದಿನಿಂದ ಲೈಂಗಿಕ ಸುಖ ಇಲ್ಲ!

ಸಿಡಿಮಿಡಿಗೊಂಡಿದ್ದನು ಈ ಹೀರೋ! ಹೆಂಡತಿ ಏನು ಹೇಳಿದ್ದಳು ಗೊತ್ತೆ?

ಮೊದಲು ಬೋಂಡದಂತೆ ಊದಿರುವ ನಿನ್ನ ಬಾಡಿಯನ್ನು ಕರಗಿಸು ಅಂತ!

ಕೋಪ ಉಕ್ಕೇರಿತು ಉಬ್ಬು ಹಲ್ಲಿನ ಮಡಿಕೋಲಿನಂತಹ ಫ್ಲಾಟ್ ಶೂರ್ಪನಖಿಯನ್ನು ಅನುಭವಿಸಲು ಡಯಟ್ ಮಾಡಬೇಕೆ?

ಸಹಿಸಿಕೊಂಡಿದ್ದನು. ಹೆಂಡತಿಯ ಹೆಸರಿನಲ್ಲಿ ಅರವತ್ತು ಲಕ್ಷದ ಆಸ್ತಿ ಇದೆ! ಹೆಂಡತಿಯ ತಾಯಿಯ ತವರಿನವರ ಆಸ್ತಿ!

ಹೆಂಡತಿಯ ಹೆಸರಿನಲ್ಲಿದೆ! ಆದರೆ ಅದನ್ನು ಈ ಗಂಡ ಸುಲಭವಾಗಿ ಪಡೆಯಲಾರ!

ಅದಕ್ಕೆ ಕೆಲವು ನಿಬಂಧನೆಗಳಿವೆ! ಅದಕ್ಕೇ ಈ ಹೀರೋ ತುಂಬಾ ತಾಳ್ಮೆಯಿಂದ ಸಹಿಸಿಕೊಂಡಿದ್ದಾನೆ. ಅವನ ಮನಸ್ಸಿನಲ್ಲಿ ಗುಪ್ತವಾಗಿ ಎರಡು ಆಸೆಗಳಿವೆ! ಆಸೆ ಬೆಳೆದು ಹೆಮ್ಮರವಾಗಿದೆ!

ಮೊದಲನೆಯ ಆಸೆ ಸಂಸಾರದಲ್ಲಿ ಅತೃಪ್ತವಾಗಿರೋ ಎಲ್ಲಾ ಗಂಡಸರು ಬಯಸುವುದು! ಹೆಂಡತಿ ಸತ್ತರೆ ಸಾಕು! ಇವನಿಗೂ ಅದೇ ಬಯಕೆ! ಮನಸ್ಸಿನಲ್ಲಿ ಮಂಡಿಗೆ, ಸಂಡಿಗೆ ತಿನ್ನುವ ಜಾಯಮಾನದವನಲ್ಲ ಲಂಬೋದರ.

ಪ್ಲಾನ್ ಮಾಡುತ್ತಿದ್ದಾನೆ! ಮಾಸ್ಟರ್ ಕ್ರಿಮಿನಲ್ ಪ್ಲಾನ್! ಯಾರಿಗೂ ಅನುಮಾನ ಬರದಂತೆ ಹೆಂಡತಿಯನ್ನು ತುಂಬಾ ಸಹಜ ರೀತಿಯಲ್ಲಿ ಸಾಯಿಸುವ ಇರಾದೆ!

ಹೆಂಡತಿ ಸಾಯಬೇಕು! ಆಸ್ತಿಯೆಲ್ಲಾ ತನಗೆ ಬರಬೇಕು!

ಅದು ಸರಿ...ಈ ಲಂಬೋದರನ ಎರಡನೆಯ ಆಸೆ ಏನು?

ಅವನ ನಾದಿನಿ ಮಮತ! ಕೇಳಿದರೆ ಬೆಚ್ಚಿ ಬೀಳುತ್ತೀರ? ಗಜಲಕ್ಷ್ಮಿಯನ್ನು ನೋಡಲು ಮೊದಲ ಸಲ ಹೋಗಿದ್ದಾಗಲೇ ನಾದಿನಿಯನ್ನು ಕಂಡು ಈ ಹೀರೋ ಕ್ಲೀನ್ ಬೌಲ್ಡ್ ಆಗಿದ್ದನು.

ಆದರೆ ನಾದಿನಿಯನ್ನು ತನಗೆ ಮದುವೆ ಮಾಡಿ ಕೊಡಿ ಅಂತ ಕೇಳಿರಲಿಲ್ಲ. ಅಂತಹ ಹುಂಬನಲ್ಲ ಮಮತ ಚೆಲುವೆ! ಆದರೆ ಅವಳ ಹೆಸರಿನಲ್ಲಿ ಆಸ್ತಿ ಇಲ್ಲ!

ವಿಚಿತ್ರ ಅನಿಸುವುದೆ! ಮಮತ ಮತ್ತು ಗಜಲಕ್ಷ್ಮಿ ಅಕ್ಕ ತಂಗಿಯರೇ ಆಗಿದ್ದರೂ ಸಹ ಆಸ್ತಿ ಇರಲಿಲ್ಲಮಮತಳಿಗೆ! ಅದಕ್ಕೆ ಕಾರಣ ಇದೆ ಬಿಡಿ! ಮೊದಲಿನಿಂದಲೂ ಆಸೆ ಇತ್ತು. ನಾದಿನಿಯನ್ನು ಮದುವೆ ಆಗಬೇಕು! ಹೆಂಡತಿಯ ಆಸ್ತಿ ಪಡೆಯಬೇಕು!

ಆದರೆ ಇದು ಹೇಗೆ ಸಾಧ್ಯ! ತಲೆಯಲ್ಲಿ ಮೆದುಳು ಅಂತ ಇದ್ದರೆ ಅದು ಸರಿಯಾಗಿ ಕೆಲಸ ಮಾಡಿದರೆ ಅಸಾಧ್ಯವಾಗುವುದು ಯಾವುದು ಇಲ್ಲ.

ಲಂಬೋದರನಿಗೆ ನಂಬಿಕೆ ಇದೆ! ತನಗೆ ಖಂಡಿತಾ ಚುರುಕು ಬುದ್ಧಿ ಇದೆ ಅಂತ!

ಬಡ್ಡೀಮಗ ಅವಕಾಶಕ್ಕಾಗಿ ಕಾಯುತ್ತಿದ್ದಾನೆ. ಹೆಂಡತಿಯನ್ನು ನ್ಯಾಚುರಲ್ ಆಗಿ ಇಲ್ಲಾ ಅನ್ನಿಸಿ ಅವಳ ತಂಗಿಯನ್ನು ಮದುವೆ ಆಗಲು ಹಂತ, ಹಂತವಾಗಿ ಪ್ಲಾನ್ ಮಾಡುತ್ತಿದ್ದಾನೆ.

ನಾದಿನಿ ಅಪರೂಪಕ್ಕೆ ಬಂದಿದ್ದಾಳೆ ಅಂತ ಪೋಲೀಸ್ ಜೀಪಿನಲ್ಲಿ ಎಲ್ಲಾ ಕಡೆ ತಿರುಗಿಸಿದ್ದನು ಎಂಜಾಯ್ ಮಾಡಿಸಿದ್ದನು.

ಶಾರುಖ್ ಖಾನ್ ಸಿನಿಮಾ ತಿರಿಸಿದ್ದನು! ಅವಳು ಇಷ್ಟು ಪಡುತ್ತಾಳೆ ಅಂತ ಐಸ್ ಕ್ರೀಂ, ಗಡ್ ಬಡ್ ಕೊಡಿಸಿದ್ದನು, ಚೂಡೀದಾರ್ ಕೊಡಿಸಿದ್ದನು. ಬೆಂಗಳೂರಿನಲ್ಲಿ ಮಸಾಲೆ ದೋಸೆ ಚೆನ್ನಾಗಿರುತ್ತೆ ಅಂತ ಅಂದಿದ್ದಳು ಬೆಡಗಿ! ಹತ್ತು ಹೋಟೆಲ್‌ನ ರುಚಿ ತೋರಿಸಿದ್ದನು ಪೋಲೀಸ್ ಜೀಪಿನಲ್ಲಿ! ಅವಳು ಸಹ ಕ್ಲೋಸ್ ಆಗಿ ಮೂವ್ ಮಾಡಿದ್ದಳು. ಮೈಗೆ ಮೈ ತಗುಲಿಸಿಕೊಂಡು ಕೂರುತ್ತಿದ್ದಳು.

ಭಾವನ ಕೈಯನ್ನು ಆಗಾಗ ಹಿಡಿದುಕೊಳ್ಳುತ್ತಿದ್ದಳು. ಮೋಹಕವಾಗಿ ನಗುತ್ತಿದ್ದಳು.

ಸುಸ್ತಾಗಿ ಹೋಗಿದ್ದನು ಲಂಬೋದರ! ನಾದಿನಿಗೆ ನನ್ನ ಮೇಲೆ ಮನಸ್ಸಿದೆ!

ಹೆಂಡತಿಯನ್ನು ಮುಗಿಸಿದರೆ ಅವಳ ಜಾಗಕ್ಕೆ ಈ ಮಿಂಚಿನ ಬಳ್ಳಿಯಂತಹ ಚೆಲುವೆ ಬರುತ್ತಾಳೆ! ಹೆಂಡತಿಯ ಆಸ್ತಿಯೊಂದಿಗೆ ಸಿನಿಮಾ ಹೀರೋಯಿನ್ ತರಹ ಇರುವ ನಾದಿನಿಯೊಂದಿಗೆ ಸಂಸಾರ!

ಸುಖ...ಸುಖ...ಸುಖ!

ನಾದಿನಿಯೊಂದಿಗೆ ಸುತ್ತಾಡಿ ರಾತ್ರಿ ಹೆಂಡಿತಯ ಪಕ್ಕದಲ್ಲಿ ಮಲಗಿಕೊಂಡು ಎದೆಯ ಮೇಲೆ ನಿದ್ದೆಗಣ್ಣಿನಲ್ಲಿ ಕೈ ಹಾಕಿದ್ದನು ನಾದಿನಿಯನ್ನು ಕಲಿಸಿಕೊಂಡು.

ಏನೂ ಸಿಗದೆ ಇದ್ದಾಗ ಗೊತ್ತಾಗಿತ್ತು ಹೆಂಡತಿ ಅಂತ! ಅವಳು ಉರಿಗಣ್ಣು ಬೀರಿದಳು!

ಗಜಲಕ್ಷ್ಮಿಗೆ ವಿಪರೀತ ಅನುಮಾನ! ಸಹಜ...ಸಹಜ ಬಿಡಿ. ಗಂಡ ತನ್ನ ತಂಗಿಯೊಂದಿಗೆ ಸುತ್ತಾಡಿದ್ದರಿಂದ ಮಾತ್ರ ಅಲ್ಲ. ಅವನ ಮನೋಭಾವ ಅಂತದ್ದು.

ಗಂಡನ ಮೇಲೆ ರೇಗಾಡಿದ್ದಳು. ಏಕಾಂತದಲ್ಲಿ ಗಜಲಕ್ಷ್ಮಿ ''ರೀ...ನೀವು ನನ್ನ ತಂಗಿಗೆ ವಿಶೇಷವಾಗಿ ಉಪಚಾರ ಮಾಡಬೇಕಿಲ್ಲ''

''ಅವಳು ನಿನ್ನ ತಂಗಿ ಅಲ್ಲವೆ?''

ಗಜಲಕ್ಷ್ಮಿ ಕೋಪದಿಂದ ''ನನ್ನ ಹೆಸರಿನಲ್ಲಿ ಮಾತ್ರ ಆಸ್ತಿ ಇದೆ ಅಂತ ಸದಾ ಹೊಟ್ಟೆಯುರಿ ಪಡುತ್ತಿರುತ್ತಾಳೆ. ಆಗಾಗ ನನ್ನ ಜೊತೆ ಜಗಳ ಆಡುತ್ತಾಳೆ. ನನಗೆ...ನನಗೆ ಅವಳ ತಲೆಯನ್ನು ಕಂಡರೆ ಆಗುವುದಿಲ್ಲ''

''ನನಗೇನು ಗೊತ್ತೇ ನಿನಗೆ ನಿನ್ನ ತಂಗಿಯನ್ನು ಕಂಡರೆ ಆಗುವುದಿಲ್ಲ ಅಂತ. ಇನ್ನು ಮುಂದೆ ನಾನು ಸಹ ಅವಳ ಹತ್ತಿರ ಹೆಚ್ಚು ಹೋಗುವುದಿಲ್ಲ'' ಎಂದು ಹೆಂಡತಿಯನ್ನು ಸಮಾದಾನ ಮಾಡಿದ್ದನು.

ಅಂದಿನಿಂದ ಹೆಂಡತಿ ಇರುವಾಗ ತನ್ನ ನಾದಿನಿಯನ್ನು ಕತ್ತೆತ್ತಿ ಸಹ ನೋಡುತ್ತಿರಲಿಲ್ಲ!

ಮಮತ ನಗುತ್ತಾ ಕೇಳಿದಾಗ ಲಂಬೋದರ ''ನಿನ್ನ ಅಕ್ಕ ಕಂಡರೆ ಕುರುಕ್ಷೇತ್ರ ಪ್ರಾರಂಭವಾಗುತ್ತೆ. ಅವಳಿರೋವಾಗ ನನ್ನನ್ನು ಮಾತಾಡಿಸಬೇಡ''

ಮಮತ ಬೇಸರದಿಂದ ''ನಿಮ್ಮಂತಹ ಒಳ್ಳೆಯ ವ್ಯಕ್ತಿಗೆ ಅಕ್ಕ ಸರಿ ಜೋಡಿ ಅಲ್ಲ'' ಎಂದು ಅವನ ಕೈಯನ್ನು ಅದುಮಿದ್ದಳು!

ಹಾಲಿನ ಕೆನೆಯ ಬಣ್ಣದ ಕೈ ಬಲರಳುಗಳು! ಬೆಚ್ಚಗೆ ಮೃದುವಾಗಿದ್ದ ಅಂಗೈ!

ಹಿತವಾದ ಸ್ಪರ್ಶ ಸುಖ! ಸರ್ರನೆ ಅವಳತ್ತ ನೋಡಿದ್ದನು. ಕೆಂದುಟಿಗಳನ್ನು ಅರಳಿಸಿ ಮೋಹಕವಾಗಿ ನಗುತ್ತಿದ್ದಾಳೆ ಚೆಲುವೆ! ಆ ರಾತ್ರಿ ನಿದ್ದೆ ಬರಲಿಲ್ಲ! ನಾದಿನಿಗೆ ನನ್ನ ಮೇಲೆ ಆಸಕ್ತಿ ಇದೆ. ಇಂತಹ ಅವಕಾಶ ಬಿಡಲೇಬಾರದು. ಎಂದೋ ಮಾಡಬೇಕು ಎಂದುಕೊಂಡಿರುವುದನ್ನು ಇಂದೇ ಮಾಡಬೇಕು!

ಮಡದಿಯ ಮರ್ಡರ್!

ಆಗ ರಾತ್ರಿ ಹನ್ನೆರಡು ಗಂಟೆ! ಮಂಚದಲ್ಲಿ ಮಲಗಿಕೊಂಡಿದ್ದಾಳೆ ಹೆಂಡತಿ. ಮುದುರಿಕೊಂಡಿರುವುದರಿಂದ ಗುಬ್ಬಚ್ಚಿಯ ಮರಿಯಂತೆ

ಕಾಣುತ್ತಿದ್ದಾಳೆ. ಅಸಹ್ಯವಾಗುತ್ತಿದೆ.

ಈಗಲೇ ಕತ್ತು ಹಿಸುಕಿ ಸಾಯಿಸಿ ಬಿಡಲೇ ಎಂಬಷ್ಟು ಆಕ್ರೋಶ ಉಕ್ಕೇರುತ್ತಿದೆ!

ಕಂಟ್ರೋಲ್ ಮಾಡಿಕೊಂಡನು. ಇವಳ ಸಾವಿನ ಬಗ್ಗೆ ಯಾರಿಗೇ ಅನುಮಾನ ಬಂದರೂ ಸಹ ಅದರಿಂದ ನನಗೆ ತುಂಬಾ ತೊಂದರೆಯಾಗುತ್ತದೆ!

ಇವಳನ್ನು ನ್ಯಾಚುರಲ್ ಆಗಿ ಸಾಯಿಸಬೇಕು!

ಡೀಪ್ ಆಗಿ ಥಿಂಕ್ ಮಾಡುತ್ತಿದ್ದಾನೆ!

★★★

ಮಾರನೆಯ ದಿನ ಬೆಳಿಗ್ಗೆ! ಗಜಲಕ್ಷ್ಮಿ ತನ್ನ ಬೆಡ್ ರೂಮಿನಿಂದ ಎದ್ದು ಹೊರಗೆ ಬಂದಳು. ಬಾತ್ ರೂಮಿನಿಂದ ನೀರು ಬೀಳುತ್ತಿರುವ ಶಬ್ದ!

ಕತ್ತನ್ನು ಹೊರಳಿಸಿದಳು! ಹಾಲ್‌ನಲ್ಲಿ ಹಾಕಿದ್ದ ಸೋಫಾದಲ್ಲಿ ಕುಳಿತಿದ್ದ ಗಂಡ ನೆಪಮಾತ್ರಕ್ಕೆ ಪೇಪರ್ ಹಿಡಿದುಕೊಂಡಿರುವುದು ಕಣ್ಣಿಗೆ ಬಿದ್ದಿತು. ಗಂಡನ ಓರೆ ಗಣ್ಣಿನ ನೋಟ ಈಗ ಆಗಾಗ ಬಾತ್ ರೂಮಿನ ಬಾಗಿಲಿನ ಕಡೆ ಹರಿಯುತ್ತಿದೆ.

ಡೋರ್ ತೆರೆದುಕೊಂಡಿತು. ಹೆಂಡತಿಯನ್ನು ಗಮನಿಸದ ಲಂಬೋದರ ಈ ದೃಶ್ಯ ನೋಡಲು ಕಾತುರದಿಂದ ಕಾಯುತ್ತಿದ್ದವನು ಈಗ ಸರ್‍ರನೆ ತಲೆಯೆತ್ತಿ ನೋಡಿದನು ಆಸೆಯಿಂದ.

ನಿರೀಕ್ಷಿಸಿದ ದೃಶ್ಯ! ಮಮತಳ ಮೈ ಮೇಲೆ ಟವಲ್ಲು ಮಾತ್ರ ಇದೆ. ಬಿಸಿ ನೀರಿನ ಸ್ನಾನದಿಂದ ಹಾಲು ಬಣ್ಣದ ದೇಹದಲ್ಲಿ ಈಗ ನಸು ಕೆಂಪಿನ ಛಾಯೆ ಮೂಡಿದೆ.

ಅಮೃತ ಶಿಲೆಯಂತೆ ನುಣುಪಾದ ದೇಹದ ತುಂಬಾ ನೀರಿನ ಹನಿಗಳು ಮುತ್ತಿನಂತೆ ಕುಳಿತಿದೆ. ಎದೆಯ ಕಣಿವೆ ಕಾಣುತ್ತಿದೆ! ಬೆನ್ನಿ ಬಹುಭಾಗ ದರ್ಶನ ನೀಡುತ್ತಿದೆ. ಇನ್ನು ಟವಲ್ಲು ಮಂಡಿಯಿಂದ ತುಂಬಾ ಮೇಲೆ ಇದೆ. ಸೊಂಪಾದ ದೇಹ ಸಿರಿ. ಟವೆಲ್ಲನ್ನು ಕಿತ್ತೆಸೆದು ರೇಪ್ ಮಾಡಬೇಕೆಂಬ ತನ್ನ ಬಯಕೆಯನ್ನು ತಡೆದುಕೊಳ್ಳುತ್ತಿದ್ದಾನೆ ಈ ಲಂಬೋದರ.

ಅಬ್ಬ...ಚೆಲುವು ಅಂದರೆ ಇದು! ಮುಖ ತೊಳೆದ ಕನ್ನಡಿಯಂತೆ ಲಕಲಕನೆ ಹೊಳೆಯುತ್ತಿದೆ. ಗುಲಾಬಿ ತುಟಿಗಳಲ್ಲಿ ನಗು ಇದೆ.

ಹೋಗಿ ಮುತ್ತು ಕೊಟ್ಟು? ಅವಳೇನು ನನ್ನ ಹೆಂಡತಿಯೇ? ಅಯ್ಯೋ...ಹೆಂಡತಿ ಇಲ್ಲಿಯೇ ಇದ್ದಾಳಲ! ಅರೆ...ಯಾವಾಗ ಬಂದಳು?

ಮಾಲು ಸಮೇತ ಸಿಕ್ಕಿ ಬಿದ್ದ ಕಳ್ಳ! ಗಾಬರಿಯಿಂದ ಪೇಪರ್‌ನಲ್ಲಿ ತಲೆ ಹುದುಗಿಸಿದನು.

ಹಲ್ಲು ಕಡಿಯುತ್ತಿದ್ದಾಳೆ ಗಜಲಕ್ಷ್ಮಿ! ಮೈ ಉರಿದು ಹೋಯಿತು. ಗಂಡನ ದೃಷ್ಟಿ ತಂಗಿಯ ಅರೆ ತರೆದು ತುಂಬು ಎದೆಯ ಮೇಲೆ!

ಕೆಂಗಣ್ಣು ಬೀರಿದಳು. ಅರೆ...ಅಕ್ಕ ಯಾಕೆ ಹೀಗಾಡುತ್ತಿದ್ದಾಳೆ ಎಂದು ಪಿಳಿ ಪಿಳಿ ಕಣ್ಣು ಬಿಡುತ್ತಾ ನೋಡಲಾರಂಭಿಸಿದಳು.

ಗಜಲಕ್ಷ್ಮಿ ತಂಗಿಯನ್ನು ಪುನಃ ಬಾತ್‌ರೂಮಿನ ಒಳಗೆ ಸಳ್ಳುತ್ತಾ ''ಬೆತ್ತಲೆ ತಿರುಗುತ್ತಾ ನನ್ನ ಗಂಡನ ಮುಂದೆ ಕ್ಯಾನರೆ ಮಾಡಬೇಡ. ಮೈ ತುಂಬಾ ಬಟ್ಟೆ ಹಾಕಿಕೊಂಡು ಆಮೇಲೆ ಹೊರಗೆ ಬಾ'' ಅಳುತ್ತಿರುವ ಶಬ್ದ! ಅವಮಾನ ಅಲ್ಲವೇ ಮತ್ತೆ? ಹತ್ತು ನಿಮಿಷಗಳ ನಂತರ ಮುಸಿ ಮುಸಿ ಅಳುತ್ತಲೇ ಬಾತ್ ರೂಮಿನಿಂದ ಹೊರಗೆ ಬಂದಳು.

ನೈಟಿ...ಪಾರದರ್ಶಕ ನೈಟಿಯಲ್ಲಿ ಈಗ ದೇಹದ ಸೊಂಪಾದ ಭಾಗ ಕಾಣುತ್ತಿದೆ.

ಉಗುಳು ನುಂಗಿದ ಲಂಬೋದರ!

ಓರೆಗಣ್ಣಿನಿಂದ ನೋಡುತ್ತಿದ್ದಾನೆ. ಗಜಲಕ್ಷ್ಮಿ ಕೋಪದಿಂದ... ''ಮಮತ... ಊರಿಗೆ ಯಾವಾಗ ಹೋಗುತ್ತೀಯ?''

''ಇವತ್ತೇ ಹೋಗುತ್ತೀನಿ''

''ಅಪ್ಪಯ್ಯನಿಗೆ ನಾನು ಕೇಳಿದೆ ಅಂತ ಹೇಳು. ಈ ಬೆಂಗಳೂರಿನಲ್ಲಿ ನೋಡಲು ಏನೂ ಇಲ್ಲ. ಇಲ್ಲದಿದ್ದರೆ ಇನ್ನೊಂದು ನಾಲ್ಕು ದಿನ ಉಳಿಸಿಕೊಳ್ಳುತ್ತಿದ್ದೆ''

ಅಂದರೆ ಈಗ ಹೊರಡು ಅಂತ ಸೂಚನೆ! ಈಗ ಲಂಬೋದರ ಮೆಲ್ಲಗೆ ''ಮಮತ...ಹೊರಡುವುದಾದರೆ ಬೇಗ ಹೊರಡು. ನಿನ್ನನ್ನು ಬಸ್ಸು ಹತ್ತಿಸಿ ನಂತರ ನಾನು ಸ್ಟೇಷನ್ನಿಗೆ ಹೊರಡುತ್ತೇನೆ''

ಗಜಲಕ್ಷ್ಮಿ ''ನಿಮಗೆ ಆ ಶ್ರಮ ಬೇಡ. ನಾನು ಇವಳನ್ನು ಊರಿಗೆ ಕಳಿಸುತ್ತೇನೆ ನೀವು ಹೊರಡಿ''

ಎಂತಹ ನಿರಾಸೆ! ಜೀಪಿನಲ್ಲಿ ನಾದಿನಿಯನ್ನು ಪಕ್ಕದಲ್ಲಿ ಕೂರಿಸಿಕೊಂಡು ಹೀರೋ ತರಹ ನಗರದಲ್ಲಿ ಸುತ್ತಿ, ಅವಳ ಜೊತೆ ಸಿನಿಮಾ ನೋಡಿ ಕೊನೆಯ ಬಸ್ಸಿಗೆ ಊರಿಗೆ ಕಳಿಸಬೇಕು ಎಂದುಕೊಂಡಿದ್ದನು ಲಂಬೋದರ ಮಮತ ರೆಡಿಯಾದಳು.

ಲಂಬೋದರ ಯೂನಿಫಾರಂ ಹಾಕಿಕೊಂಡು ಹೊರಬಂದು ತನ್ನ ಡೊಳ್ಳು ಹೊಟ್ಟೆಯನ್ನು ಸವರಿಕೊಳ್ಳುತ್ತಾ ''ಊರಿಗೆ ಹೋದ ಕೂಡಲೇ ಮರೆಯದೆ ಫೋನ್ ಮಡು'' ಎಂದು ಹಲ್ಲು ಕಸಿದನು.

''ಆಯ್ತು ಭಾವ''

ಗಜಲಕ್ಷ್ಮಿ ಸಿಡುಕುತ್ತಾ ''ನೀನು ಫೋನ್ ಮಾಡಬೇಡ''

ಲಂಬೋದರ ಹೆಂಡತಿಯನ್ನು ಯಾವ ರೀತಿ ಕತ್ತರಿಸಿದ್ದರೂ ಸಹ ಜಾಸ್ತಿ ಮಾಂಸ ಸಿಗೋಲ್ಲ! ಮಡಿಕೋಲನ್ನು ಮುರಿದು ಎಸೆದಂತೆ ಆಗುತ್ತದೆ ಅಷ್ಟೇ.

ಲಂಬೋದರ ಹೊರಡುತ್ತಿದ್ದಾನೆ.

ಮಮತ ಮೆಲ್ಲಗೆ ''ಅಕ್ಕ...ಮುಂದಿನ ವರ್ಷ ಕಾಲೇಜಿಗೆ ಸೇರಲು ನಿನ್ನ ಮನೆಗೆ ಬರುತ್ತೇನೆ ನಮ್ಮ ಹಳ್ಳಿಯಲ್ಲಿ ಸರಿಯಾದ ಕಾಲೇಜ್ ಇಲ್ಲ''

''ಓ...ಹೋ...ಅದಕ್ಕೇನಂತೆ. ನೀನು ಧಾರಾಳವಾಗಿ ಬಾ ಮಮತ''

ಗಾಬರಿಯಾಗಬೇಡಿ ಈ ರೀತಿ ಉತ್ತರ ನೀಡಿದ್ದು ಗಜಲಕ್ಷ್ಮಿ ಅಲ್ಲ! ಅವಳ ಗಂಡ!

ಮಮತ ರೇಗುತ್ತಾ ''ನೀನು ಓದಿ ಯಾರನ್ನೂ ಸಹ ಉದ್ಧಾರ ಮಾಡ ಬೇಕಾಗಿಲ್ಲ ಅಲ್ಲೇ ತೆಪ್ಪಗೆ ಬಿದ್ದಿರು''

ಪಾಪ...ಸಪ್ಪಗಾಯಿತು ಮುಖ!

ಲಂಬೋದರ ಅಂದುಕೊಂಡ. ನನ್ನ ಹೆಂಡತಿ ಯಾಕೆ ಸದಾ ತನ್ನ ತಂಗಿಯ ಮೇಲೆ ರೇಗುತ್ತಾಳೆ? ಉತ್ತರ ತುಂಬಾ ಸಿಂಪಲ್! ಸೌಂದರ್ಯದ ಮತ್ಸರ...ಉರಿ! ತಂಗಿ ದೇವಲೋಕದ ಅಪ್ಸರೆಯಂತೆ...ಸಿನಿಮಾ ಹೀರೋಯಿನ್ ತರಹ ಕಂಗೊಳಿಸುತ್ತಿದ್ದಾಳೆ!

ಅದೇ ತಂದೆಯಿಂದ ಜನ್ಮ ಪಡೆದರೂ ಇವಳಿಗೆ ಅಂತಹ ಸೌಂದರ್ಯ ಇಲ್ಲ!

ಅದಕ್ಕೇ ತಂಗಿಯೆಂದರೆ ಕಿಡಿ ಕಿಡಿ! ಮುಂದೆ ಕಾದಿದೆ ಪಜೀತಿ!

★★★

ಪೋಲೀಸ್ ಸ್ಟೇಷನ್!

ಲಂಬೋದರ ಅದೇ ತಾನೇ ಬಂದು ಅರ್ಧ ಗಂಟೆಯ ಲಾಲ ಫ್ಯಾನಿಗೆ ಮುಖ ಒಡ್ಡಿ ತಂಪು ಮಾಡಿಕೊಂಡಿದ್ದನು.

ದೇಹದ ತುಂಬಾ ಬೆವರು! ಈ ಲಂಬೋದರ ಏನು ವೀಇಪ್ಪನ್‌ನನ್ನು ಹಿಡಿಯಲು ಹೋಗಿರಲಿಲ್ಲ ಅಥವಾ ರೌಡಿಗಳ ಗ್ಯಾಂಗನ್ನು ಹಿಡಿದು ಮಟ್ಟ ಹಾಕಲು ಪ್ರಯತ್ನಿಸಿರಲಿಲ್ಲ.

ಮನೆಯಿಂದ ಬಂದಿದ್ದಕ್ಕೆ ಈ ರೀತಿ ಅರ್ಧ ಲೀಟರ್ ಬೆವರು ದೇಹದಿಂದ ಬಂದಿತ್ತು. ಟೀ ಬಂತು. ಅದನ್ನು ಕುಡಿದ ಒಂದು ಸಿಗರೇಟ್ ಸೇದಿ ಸುಧಾರಿಸಿಕೊಂಡು ಯಾವುದೋ ಫೈಲನ್ನು ಎತ್ತಿಕೊಂಡನು.

ಫೋನ್ ರಿಂಗ್ ಆಯಿತು!

ಅಟೆಂಡ್ ಮಾಡಿದನು ಅತ್ತ ಕಡೆಯಿಂದ ಕೇಳಿಬಂದ ಧ್ವನಿಯಿಂದ ಮುಖ ಅರಳಿತು!

''ಅರೆ...ಮಮತಾ...ನೀನಾ?''

''ಹೌದು ಭಾವ''

''ಇಷ್ಟು ಬೇಗ ಊರಿಗೆ ಹೋದೆಯ? ಅಂದ ಹಾಗೆ ನಿನ್ನ ಅಪ್ಪ ಅಮ್ಮ ಚೆನ್ನಾಗಿದ್ದಾರ?''

''ನಂಗೇನು ಗೊತ್ತು?''

''ಅರೆ...ಇದೇನು ಹಿಂಗಂತೀಯ?''

''ನಾನು ಬೆಂಗಳೂರಿನಲ್ಲೇ ಇದ್ದೇನೆ ಭಾವ. ನಾನು ಊರಿಗೆ ಹೋಗಿಯೇ ಇಲ್ಲ''

''ಮೈ ಗಾಡ್...ಎಲ್ಲಿದ್ದೀಯ?''

''ಸಂಗಲ್ ಥಿಯೇಟರ್ ಹತ್ತಿರ''

''ನಿನ್ನ ಅಕ್ಕ ಇಲ್ಲವೆ?''

''ಇಲ್ಲ ಆಗಲೇ ಹೋದಳು''

''ಅಬ್ಬ...ಅದು ಸರಿ...ಅಕ್ಕ ನಿನ್ನನ್ನು ಊರಿನ ಬಸ್ಸಿಗೆ ಹತ್ತಿಸಿಲಿಲ್ಲವೆ ಮಮತ''

''ಹತ್ತಿಸಿದಳು ಆದರೆ ಬಸ್ಸು ಹೊರಡೋದಿಕ್ಕೆ ತುಂಬಾ ತಡವಾಗುತ್ತೆ ಅಂತ ಹೊರಟು ಹೋದಳು''

''ನೀವ್ಯಾಕೆ ಊರಿಗೆ ಹೋಗಲಿಲ್ಲ!''

''ಅದನ್ನು ಫೋನಿನಲ್ಲಿ ಹೇಳಲಾರೆ''

''ಅಂದರೆ...ಅಂದರೆ...''

''ನೀವೇ ಬನ್ನಿ ಭಾವ!''

ಕನಸುಗಳು...ನೂರೆಂಟು ಕನಸುಗಳು! ಡ್ಯುಯೆಟ್ ಹಾಡುತ್ತಿರುವ ಕನಸು!

ಮಮತ ಹೀರೋಯಿನ್! ಅವಳ ಮೈ ಮೇಲೆ ಎರಡು ತುಂಡು ಬಟ್ಟೆ ಇದೆ. ಅವಳು ಈಜುತ್ತಿದ್ದಾಳೆ. ನಗು ನಗುತ್ತಾ ಕರೆಯುತ್ತಿದ್ದಾಳೆ! ದಡಾಲನೆ ನೀರಿಗೆ

ಹಾರಿದನು. ಊರಿದ್ದ ಮೊಣಕೈ ಹೊರಳಿಕೊಂಡಿದ್ದರಿಂದ ದಡೂತಿ ದೇಹ ಟೇಬಲ್ಲಿನ ಮೇಲೆ ವಾಲಿಕೊಂಡಿತು!

'ದಡ್' ಎಂಬ ಶಬ್ದ!

''ಏನಾಯ್ತು ಭಾವ?''

''ಅದು...ಅದು...ನೀರಿಗೆ ಬಿದ್ದೆ!''

''ಏನು...ನೀರಿಗಾ? ಅಲ್ಲೆಲ್ಲಿ ನೀರಿದೆ'' ಎಂದು ಗಾಬರಿಯಿಂದ ಕೇಳಿದಳು ಮಮತ.

ಲಂಬೋದರ ''ಓ...ಆ ವಿಷಯ ಬಿಡು. ನೀನು ಊರಿಗೂ ಸಹ ಹೋಗದೆ ನನಗೋಸ್ಕರ ಕಾಯುತ್ತೀಯ ಅಂದರೆ ಸಾಮ್ನಾನ್ಯವೇ? ನೀನು ಅಲ್ಲಿಯೇ ಇರು''

''ಬೇಗ ಬರ್ತೀರ ತಾನೆ?''

''ಅರ್ಧ ಗಂಟೆಯಲ್ಲಿ ಅಲ್ಲಿರುತ್ತೇನೆ''

'4ಥ್ಯಾಂಕ್ ಯೂ ಭಾವ''

ಫೋನ್ ಡಿಸ್‌ಕನೆಕ್ಟ್ ಆಯಿತು. ಲಂಬೋದರನಿಗೆ ಸಂತೋಷ ತಡೆಯಲಾಗದೆ ಸಿಗರೇಟ್ ಅನ್ನುಹತ್ತಿಸಿಕೊಂಡು ದಮ್ ಹೊಡೆದನು. ಮಮತಳಿಗೆ ನನ್ನ ಮೇಲೆ ಮನಸ್ಸಾಗಿದೆ. ಇಲ್ಲದಿದ್ದರೆ ಅಕ್ಕನ ಕಣ್ಣು ತಪ್ಪಿಸಿ ನನ್ನನ್ನು ಕರೆಸಿಕೊಳ್ಳುತ್ತಿದ್ದಳೆ! ಅಬ್ಬ. ನನ್ನ ಕನಸು ನನಸಾಗುತ್ತಿದೆ. ಹೆಂಡತಿ ನೆನಪಾದಳು! ಮಡಿಕೋಲಿನಂತಹ ದೇಹ! ಉಬ್ಬು ಹಲ್ಲು...ಗೆಡ್ಡೆ ಕಣ್ಣು! ಬಣ್ಣವೋ...ಭದ್ರಾವತಿ ಬಂಗಾರ!

ಇವಳು ಬದುಕಿರುವ ತನಕ ಮಮತಳನ್ನು ನಾನು ಮದುವೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ!

ಹೆಂಡತಿ ಸಾಯಬೇಕು! ಬೇಗ...ಆದಷ್ಟೂ ಬೇಗ! ತುಂಬಾ ನಾ,ಯಚುರಲ್ ಆಗಿ!

ಟೇಬಲ್ಲಿನ ಮೇಲೆ ಇದ್ದ ಕ್ಯಾಪ್ ಅನ್ನು ಬೋಳು ತಲೆಗೆ ಸಿಗಿಸಿ ಜೀಪನ್ನು ಏರಿದನು! ಮುಂದೆ ಇದ್ದೇ ಇದೆ - ಪಜೀತಿಯೋ ಪರದಾಟವೋ ಯಾರಿಗೆ ಗೊತ್ತು?

★★★

ಕಾಲಿಂಗ್ ಬೆಲ್ ಶಬ್ದ ಮಾಡಿತು.

ತಂಗಿಯನ್ನು ಆದೇ ತಾನೇ ಬಸ್ಸಿಗೆ ಕಳುಹಿಸಿ ಬಂದಿದ್ದ ಗಜಲಕ್ಷ್ಮಿ

ಕಾದಂಬರಿ ಓದುತ್ತಿದ್ದವಳು ಎದ್ದು ಬಂದು ಬಾಗಿಲನ್ನು ತೆರೆದಳು.

ಅಲ್ಲಿ ಸುಂದರ ಯುವತಿ ನಿಂತಿದ್ದಾಳೆ! ಮೈಸೂರಿನ ಸಿಲ್ಕ್ ಸೀರೆ ಉಟ್ಟು ಮುಡಿಯಲ್ಲಿ ಮಲ್ಲಿಗೆ ಮತ್ತು ಕನಕಾಂಬರದ ಹೂವನ್ನು ಮುಡಿದಿದ್ದಾಳೆ.

ಅವಳು ಕೈ ಜೋಡಿಸಿ ನಮಸ್ಕರಿಸಿದಳು.

''ನೀವು ಯಾರು ಅಂತ ಗೊತ್ತಾಗಲಿಲ್ಲ''

ಆ ಯುವತಿ ನಗುತ್ತಾ ''ನನ್ನ ಹೆಸರು ಸುನಂದ ಅಂತ. ಇದೇ ರಸ್ತೆಯ ಕೊನೆಯಲ್ಲಿ ನಮ್ಮ ಮನೆ ಇದೆ''

''ಸಂತೋಷ ನನ್ನಿಂದ ಏನಾಗಬೇಕು ಅಂತ ಹೇಳುತ್ತೀರ?'' ಎಂದಳು.

''ನಮ್ಮ ತಂದೆಗೆ ಆರೋಗ್ಯ ಸರಿಯಿಲ್ಲ ಅಂತ ಟೆಲಿಗ್ರ್ಯಾಂ ಬಂತು. ಈಗೀಗ ಕಳ್ಳತನ ಜಾಸ್ತಿಯಾಗಿದೆ. ನಾನು ಊರಿಂದ ಬರುವ ತನಕ ಈ ಎರಡು ಸೂಟ್‌ಕೇಸ್‌ಗಳನ್ನು ನಿಮ್ಮ ಮನೆಯಲ್ಲಿ ಇಟ್ಟಿರಬಹುದೆ?''

''ಅದಕ್ಕೇನಂತೆ ಧಾರಾಳವಾಗಿ ಇಡಿ''

ಸುನಂದ ತುಂಬಾ ತೂಕ ಇದ್ದ ಎರಡು ಸೂಟ್‌ಕೇಸ್‌ಗಳನ್ನು ಒಳಗೆ ತಂದಳು. ಗಜಲಕ್ಷ್ಮಿ ಹೇಳಿದಂತೆ ಅದನ್ನು ಬೆಡ್ ರೂಮಿನ ಮಂಚದ ಕೆಳಗೆ ಇಡಲಾಯಿತು. ಈಗ ಸೇಫ್‌ಆಗಿದೆ.

''ಲಾಕ್ ಮಾಡಿದ್ದೀರ ತಾನೆ!'' ತಲೆಯಾಡಿಸಿದಳು ಸುನಂದ.

''ಊರಿಂದ ಯಾವಾಗ ಬರ್ತೀರ?''

''ನಾಳೆ ಸಂಜೆ. ನೆರೆ - ಹೊರೆಯವರಾಗಿ ಸಹಾಯ ಮಾಡುತ್ತಿರುವುದಕ್ಕೆ ಥ್ಯಾಂಕ್ಸ್''

''ಇದಕ್ಕೆಲ್ಲಾ ಥ್ಯಾಂಕ್ಸ್ ಯಾಕೆ?''

''ಬರುತ್ತೇನೆ'' ಬಂದು ಹೇಳಿ ಸುನಂದ ಅಲ್ಲಿಂದ ತನ್ನ ಮನೆಯತ್ತ ನಡೆದಳು.

ಡೋರ್ ಕ್ಲೋಸ್ ಆಯಿತು. ಸದಾ ಮನೆಯೊಳಗೇ ಇರುವ ಗಜಲಕ್ಷ್ಮಿಗೆ ಆ ಬೀದಿಯಲ್ಲಿ ಏನೇ ನಡೆದರೂ ಗೊತ್ತಾಗುತ್ತಿರಲಿಲ್ಲ. ಅರ್ಧ ಗಂಟೆಯ ನಂತರ! ಸುನಂದಳ ಮನೆಯ ಹತ್ತಿರ ಎರಡು ಜೀಪುಗಳು ಬಂದು ನಿಂತಿತು. ಅದರಿಂದ ಇಳಿದ ಆರು ಮಂದಿ ಪೋಲೀಸ್ ಅಧಿಕಾರಿಗಳು ಒಳಗೆ ನುಗ್ಗಿದರು.

ದಡದಡನೆ ಹುಡುಕಾಡಿದರು! ಇಲ್ಲ...ಏನೂ ಸಿಗಲಿಲ್ಲ!

ಏನಾದರೂ ಇದ್ದರೆ ತಾನೇ ಸಿಗಲು! ಬಂದ ದಾರಿಗೆ ಸುಂಕ ಇಲ್ಲದಂತೆ ಹಿಂತಿರುಗಿದ್ದರು ಆರು ಮಂದಿ ಪೋಲೀಸ್ ಅಧಿಕಾರಿಗಳು!

ಫೋನ್ ರಿಂಗ್ ಆಯಿತು! ಸುನಂದ ಅಟೆಂಡ್ ಮಾಡಿದಳು.

''ಸುನಂದ...ಏನಾಯಿತು?''

ಸುನಂದ ಕೋಪದಿಂದ ''ನಾನು ಮುಂಜಾಗ್ರತೆವಹಿಸಿದ್ದರಿಂದ ತೊಂದರೆಯಾಗಲಿಲ್ಲ. ಇಲ್ಲದಿದ್ದರೆ ಮಾಲಿನ ಸಮೇತ ಸಿಕ್ಕಿ ಬಿದ್ದು ನಾನು ಕಂಬಿ ಎಣಿಸಬೇಕಾಗುತ್ತಿತ್ತು''

''ಐ ಯ್ಯಾಮ್ ಸಾರಿ ಸುನಂದ''

''ಪೋಲೀಸರಿಗೆ ಅನುಮಾನ ಯಾಕೆ ಬಂದಿದೆ?''

ಅತ್ತಕಡೆಯಿಂದ ''ಈ ನಗರದಲ್ಲಿ ಬ್ರೌನ್ ಶುಗರ್ ಡೀಲಿಂಗ್ ಅಡ್ಡಾ - ದಿಡ್ಡಿ ಜಾಸ್ತಿಯಾಗುತ್ತಿದೆ. ಪೋಲೀಸ್ ಇಲಾಖೆಯೇ ಚುರುಕಾಗಿದೆ. ಎಲ್ಲಾ ಕಡೆ ಕಾವಲು ತುಂಬಾ ಬಿಗಿಯಾಗಿದೆ. ಅನುಮಾನ ಬಂದವರನ್ನೆಲ್ಲಾ ಹಿಡಿದು ಪರಿಶೀಲಿಸುತ್ತಿದ್ದಾರೆ. ಪರಿಸ್ಥಿತಿ ಸರಿ ಇಲ್ಲ''

''ಹಾಗಾದರೆ ಈಗೇನು ಮಾಡೋದು!''

ಅತ್ತ ಕಡೆಯಿಂದ ''ಏನಾದರೂ ಬುದ್ಧಿವಂತಿಕೆ ಉಪಯೋಗಿಸಿ ಡ್ರಗ್ಸ್ ಡೀಲಿಂಗ್ ಮುಂದುವರಿಸಬೇಕು ಅಂದ ಹಾಗೆ ಎರಡು ಸೂಟ್ ಕೇಸ್‌ಗಳನ್ನು ಹನುಮಾನ್ ಗ್ಯಾರೇಜಿನ ಉಸ್ತಾದನಿಗೆ ತಲುಪಿದೆಯ?''

ಸುನಂದ ಕೋಪದಿಂದ ''ಹೇಗೆ...ಹೇಗೆ ಸಾಧ್ಯ? ಎರಡು ಸೂಟ್‌ಕೇಸ್ ಬ್ರೌನ್ ಶುಗರ್ ನೆನ್ನೆ ರಾತ್ರಿ ತಾನೇ ಬಂತು. ರಾತ್ರಿ ಉಸ್ತಾದ್ ಇರಲಿಲ್ಲ. ಬೆಳಗ್ಗೆ ತಲುಪಿಸೋಣ ಅಂದರೆ ಪೋಲೀಸರ ಕಾಟ. ಏನು ಮಾಡಲಿ ಹೇಳು''

ಅತ್ತ ಕಡೆಯಿಂದ ''ಹಾಗಂತ ಹೇಳಿದ್ರೆ ಉಸ್ತಾದ್ ಕೇಳೋಲ್ಲ. ರೆಗು-ಯಲರ್ ಕಸ್ಟಮರ್ಸ್‌ಗೆ ಅದು ಸಿಗದೆ ಇದ್ದರೆ ತುಂಬಾ ಗಲಾಟೆ ಮಾಡುತ್ತಾರೆ. ಇವತ್ತು ಸಂಜೆ ಅದನ್ನೂ ಉಸ್ತಾದ್‌ಗೆ ತಲುಪಿಸಲು ಸಾಧ್ಯವೆ?''

ಸುನಂದ ಗಾಬರಿಯಿಂದ ''ಏನು...ಅದನ್ನು ನಾನು ತೆಗೆದುಕೊಂಡು ಹೋಗುವುದೇ? ಮೈ ಗಾಡ್...ಈಗಾಗಲೇ ಪೋಲೀಸರಿಗೆ ನನ್ನ ಮೇಲೆ ಅನುಮಾನ ಬಂದಿದೆ''

''ಹಾಗಂತ ಸುಮ್ಮನೆ ಇದ್ದರೆ ಆಗೋಲ್ಲ. ಉಸ್ತಾದ್ ಹತ್ತುಸಾವಿರ ಜಾಸ್ತಿ ಕೊಡುತ್ತೇನೆ ಅಂದಿದ್ದಾನೆ''

''ಈಗ ನಾನು ಏನು ಮಾಡಲಿ ಹೇಳು''

ಅತ್ತ ಕಡೆಯಿಂದ ''ಸುನಂದ...ನಮ್ಮಗಳ ಪೈಕಿ ನೀನೆ ತುಂಬಾ

ಬುದ್ಧಿವಂತೆ. ನೀನೇ ಏನಾದರೂ ಮಾಡು. ಉಸ್ತಾದ್ ಕೊಡುವ ಹಣವನ್ನೆಲ್ಲಾ ನೀನೇ ತಗೊ. ಆದರೆ ಹೇಗಾದರೂ ಮಾಲು ತಲುಪಿತು''

ಸುನಂದಳ ಮುಖ ಅರಳಿತು! ಮಾಮೂಲೀ ಲಾಭದ ಹಣ ನಲವತ್ತು ಸಾವಿರ! ಅದರ ಜೊತೆ ಉಸ್ತಾದ್ ಹತ್ತು ಸಾವಿರ ಜಾಸ್ತಿ ಕೊಡುತ್ತಾನೆ. ಸ್ವಲ್ಪ ರಿಸ್ಕ್ ತೆಗೆದುಕೊಂಡರೆ ಐವತ್ತು ಸಾವಿರ ರೂಪಾಯಿ ನಿನಗೆ ಸೇರುತ್ತೆ!

''ಏನು ಯೋಚನೆ ಮಾಡ್ತಾ ಇದ್ದೀಯ?''

''ಓ.ಕೆ. ಮಾಲು ತಲುಪಿಸುತ್ತೇನೆ ಬಿಡು''

''ಬೀ ಕೇರ್ ಫುಲ್''

ಫೋನ್ ಡಿಸ್ ಕನೆಕ್ಟ್ ಆಗಿತ್ತು. ಸುನಂದ ಗ್ಲಾಸಿಗೆ ವೈನ್ ಸುರಿದುಕೊಂಡು ಚಪ್ಪರಿಸುತ್ತಿದ್ದಾಳೆ. ತಲೆಯ ತುಂಬಾ ಆಲೋಚನೆಗಳು! ಬ್ರೌನ್ ಶುಗರ್ ಇರೋ ಸೂಟ್‌ಕೇಸ್ ಈಗ ಪೋಲೀಸ್ ಅಧಿಕಾರಿ ಲಂಬೋದರನ ಮನೆಯಲ್ಲಿದೆ! ನಾನು ಅದನ್ನು ತೆಗೆದುಕೊಂಡು ಹೋಗಿ ಉಸ್ತಾದನಿಗೆ ಕೊಡಲು ಸಾಧ್ಯವೇ ಇಲ್ಲ!

ಏನು ಮಾಡಲಿ? ಒಂದು ಸಲ ಪೋಲೀಸರಿಗೆ ನನ್ನ ಮೇಲೆ ಅನುಮಾನ ಬಂದಿರೋದ್ರಿಂದ ಅವರು ಖಂಡಿತಾ ನನ್ನನ್ನು ಹೆಜ್ಜೆ, ಹೆಜ್ಜೆಗೂ ಫಾಲೋ ಮಾಡ್ತಾರೆ. ಡೀಪ್ ಆಗಿ ಥಿಂಕ್ ಮಾಡುತ್ತಿದ್ದಾಳೆ. ವೈನ್ ಕಾಲಿಯಾಗುತ್ತಿದೆ! ಫ್ಲಾಶ್ ಆಯಿತು! ಸುನಂದಳ ಮುಖ ಅರಳಿತು. ಅವಳು ಈಗ ಯಾವುದೋ ನಂಬರ್‌ಗೆ ಡಯಲ್ ಮಾಡಲಾರಂಭಿಸಿದಳು!

2

ಸಂಗಮ್ ಥಿಯೇಟರ್! ಊರಿಗೆ ಹೋಗದೆ ಮಮತ ಥಿಯೇಟರಿನ ಗೇಟಿನ ಹತ್ತಿರ ನಿಂತುಕೊಂಡಿದ್ದಾಳೆ. ಬಿಸಿಲಿನ ಧಗೆ ಪ್ರಾರಂಭವಾಗಿದಲ! ಅವಳಿಗೆ ನಂಬಿಕೆ ಇತ್ತು. ಫೋನ್ ಮಾಡಿರೋದ್ರಿಂದಿ ಭಾವ ಖಂಡಿತಾ ಬಂದೇ ಬರುತ್ತಾರೆ!

ಈ ರೀತಿ ಮಾಡಲು ಕಾರಣ ಇದೆ! ಅದನ್ನು ಫೋನಲ್ಲಿ ಹೇಳಲಾರಳು. ಹತ್ತು ನಿಮಿಷಗಳ ನಂತರ ಪೋಲೀಸ್ ಜೀಪಿನಲ್ಲಿ ಬಂದ ನಮ್ಮ ಹೀರೋ ಲಂಬೋದರ!

ಮಮತಳ ಮುಖ ಅರಳಿತು. ವ್ಯಾನಿಟಿ ಬ್ಯಾಗ್ ಮತ್ತು ಸೂಟ್ ಕೇಸನ್ನು ಹಿಡಿದುಕೊಂಡು ಆತುರಾತುರವಾಗಿ ಜೀಪನ್ನು ಹತ್ತಿರ ಕುಳಿತಳು.

ಜೀಪು ಚಲಿಸುತ್ತಿದೆ! ಲಂಬೋದರ ನಾದಿನಿಯ ಕಡೆ ನೋಡಿದನು. ಅವಳ ದುಂಡನೆಯ ಮುಖದ ತುಂಬಾ ಬೆವರಿನ ಹನಿಗಳು ಮೂಡಿವೆ. ಮುಖ

ಕೆಂಪಾಗಾಗಿದೆ.

ಲಂಬೋದರ ತನ್ನ ಜೇಬಿನಿಂದ ಕರ್ಚೀಫ್ ಅನ್ನು ತೆಗೆದು ಅವಳ ಮುಖ ಒರೆಸಿದನು.

ಅವಳ ಕೆನ್ನೆ, ತುಟಿಯನ್ನು ಇವನ ಎರಡು ಕೈಗಳು ಸ್ಪರ್ಶಿಸಿದವು. ಚೆಲುವೆಯಾದ ನಾದಿನಿ ಪಕ್ಕದಲ್ಲಿರುವಾಗ ಇಡೀ ಜಗತ್ತೇ ಸುಂದರವಾಗಿರುವಂತೆ ಕಾಣುತ್ತದೆ! ಅವಳನ್ನು ಕರೆದುಕೊಂಡು ಎಂ.ಜಿ. ರೋಡಿಗೆ ಬಂದು ಅವಳು ಕೇಳಿದ್ದನ್ನೆಲ್ಲಾ ಕೊಡಿಸಿದನು. ಐಸ್‌ಕ್ರೀಮ್...ದೋಸೆ...ಸ್ವೀಟ್ಸ್!

ಲಂಬೋದರನ ಮನಸ್ಸಿನಲ್ಲಿ ಏನೇನೋ ಆಸೆಗಳು. ಈಗ ಮಮತ ನಗು, ನಗುತ್ತಾ ಸಹಕರಿಸುತ್ತಿದ್ದಾಳಲ್ಲ! ಇವತ್ತು ರೂಮ್ ಮಾಡಬೇಕು! ಮಮತಳಿಗೆ ನನ್ನ ಮೇಲೆ ಆಸೆಯಾಗಿದೆ. ಅವಳು ಖಂಡಿತಾ ಇದಕ್ಕೆ ಒಪ್ಪಿಕೊಳ್ಳುತ್ತಾಳೆ! ಬಡ್ಡೀಮಗನ ಆಸೆ ನೋಡಿ!

''ಮಮತಾ ಸಿನಿಮಾಕ್ಕೆ ಹೋಗೋಣವೆ?'' ಎಂದ.

ಮಮತ ಗಾಬರಿಯಿಂದ ''ಅಯ್ಯೋ...ಸಿನಿಮಾ ಅಂತ ಕೂತರೆ ಊರಿಗೆ ಹೋಗಲು ಸಾಧ್ಯವಿಲ್ಲ''

''ನಾಳೆ ಹೋದರಾಯಿತು''

''ಮೈಗಾಡ್...ಪುನಃ ಮನೆಗೆ ಹೋದರೆ ನನ್ನ ಅಕ್ಕ ಪೊರಕೆ ತೆಗೆದುಕೊಳ್ಳುತ್ತಾಳೆ''

''ಮನೆಗೆ ಯಾಕೆ ಹೋಗಬೇಕು?''

''ಮತ್ತೆ ಇನ್ನೆಲ್ಲಿ ಹೋಗಲು ಸಾಧ್ಯ?''

''ಹೋಟೆಲ್‌ನಲ್ಲಿ ಉಳಿದರಾಯಿತು''

''ಏನು...ನಾನು ಒಬ್ಬಳೇ ಹೋಟೆಲ್‌ನಲ್ಲಿ ಉಳಿಯಲು ಸಾಧ್ಯವೆ?'' ಎಂದಳು ಗಾಬರಿಯಿಂದ.

''ನಿನ್ನ ಜೊತೆ ನಾನಿರುತ್ತೇನಲ್ಲ'' ಎಂದು ಹಲ್ಲು ಕಿಸಿಯುತ್ತಾ.

ಪೋಲೀಸ್ ಕ್ಯಾಪ್ ತೆಗೆದಿದ್ದರಿಂದ ಅವನ ಬೋಳು ತಲೆ ತಾಮ್ರದ ತಂಬಿಗೆಯನ್ನು ಬೋರಲಾಗಿ ಇಟ್ಟ ಹಾಗೆ ಕಾಣುತ್ತಿದೆ! ಅಸಹ್ಯವಾಯಿತು ಮಮತಳಿಗೆ!

ಆದರೂ ಭಾವ ಅಲ್ವ ಎಂದುಕೊಂಡು ನಾಚಿಕೆಯಿಂದಲೇ ''ಹೋಗಿ ಭಾವ ತಮಾಷೆ ಮಾಡ್ಬೇಡಿ ನನ್ನ ಪಾಲಿಗೆ ಅಕ್ಕ ಅಂತೂ ಇಲ್ಲ. ಎಲ್ಲಾ ನೀವೇ!''

ಲಂಬೋದರ ''ಅದು ಸರಿ...ನಿನ್ನ ಅಕ್ಕನಿಗೆ ಯಾಕೆ ನಿನ್ನ ಮೇಲೆ ದ್ವೇಷ!''

''ನಾನು ಅವಳಿಗಿಂತ ಚೆನ್ನಾಗಿದ್ದೀನಲ್ಲ...''

ಲಂಬೋದರ ಅವಳ ಕೆನ್ನೆಯನ್ನು ಸವರುತ್ತಾ ''ನನಗೆ ಈಗ ಫೀಲ್ ಆಗ್ತಾ ಇದೆ. ಆವತ್ತು ನಾನು ಗಜಲಕ್ಷ್ಮಿಗೆ ಬದಲಾಗಿ ನಿನ್ನನ್ನೇ ಆರಿಸಿಕೊಳ್ಳಬೇಕಿತ್ತು ಅಂತ''

ಕೆಂಪೇರಿತು ಮುಖ ನಾಚಿಕೆಯಿಂದ! ತನ್ನ ಭಾವನ ಮುಖ ನೋಡಿದಳು ಅಸಹ್ಯವಾಯಿತು.

ಕೋಪ ಬರುತ್ತಿದ್ದರೂ ಸಹಿಸಿಕೊಂಡು ''ಥೂ...ಹೋಗಿ ಭಾವ ನನಗೊಂದು ತರಹ ಆಗುತ್ತೆ'' ಎಂದು ಅವನ ಕೈ ಬಿಡಿಸಿಕೊಂಡು ದೂರ ಸರಿದಳು.

''ಸಿನಿಮಾಕ್ಕೆ ಹೋಗೋಣವೆ?''

ಮಮತ ಗಂಭೀರವಾಗಿ ''ನಾನು ನಿಮ್ಮ ಜೊತೆ ಸಿನಿಮಾ ನೋಡಲು ಊರಿನ ಪ್ರೋಗ್ರಾಂ ಕ್ಯಾನ್ಸಲ್ ಮಾಡಲಿಲ್ಲ''

''ಮತ್ತೆ ಇನ್ನ್ಯಾಕೆ?''

''ನನಗೆ ಸಹಾಯ ಮಾಡ್ತೀನಿ ಅಂತ ಪ್ರಾಮಿಸ್ ಮಾಡಿದರೆ ನಾನು ಹೇಳುತ್ತೇನೆ'' ಎಂದು ಕೈ ಚಾಚಿದಳು ಬೆಳ್ಳಗೆ ಬೆಣ್ಣೆಯಂತೆ ಇದ್ದ ಅಂಗೈ!

ಅದರ ಮೇಲೆ ತನ್ನ ಕೈ ಇರಿಸುತ್ತಾ ''ಹೇಳು ನನ್ನಿಂದ ನಿನಗೆ ಯಾವ ರೀತಿ ಸಹಾಯ ಆಗಬೇಕು'' ಎಂದು ಮೃದುವಾಗಿ ಸವರಿದನು.

ಬೆಚ್ಚನೆಯ ಮೃದು ಸ್ಪರ್ಶ! ತೀರಾ ಹತ್ತಿರದಲ್ಲಿ ಅವಳ ತುಟಿಗಳು ಮಿಂಚನ್ನು ಕಂಡು ಆಸೆ ಉಕ್ಕೇರುತ್ತಿದೆ ಕನಸು ಕಾಣುತ್ತಿದ್ದಾನಲ! ಮುಂದೆ ಎಂತಹ ನಿರಾಸೆ ಕಾದಿದೆ ಅಂತ ಗೊತ್ತಿಲ್ಲದೆ ಏನೇನೋ ಪ್ಲಾನ್ ಮಾಡುತ್ತಿದ್ದಾನೆ!

★★★

ಮಧ್ಯಾಹ್ನ ಎರಡುಗಂಟೆ! ಕೆಲವು ಗಟೆಗಳ ಹಿಂದೆ ಸುನಂದ ಎಂಬ ಚೆಲುವೆ ಕೊಟ್ಟಿದ್ದ ಸೂಟ್‌ಕೇಸ್ ಮಂಚದ ಅಡಿ ಇದೆ. ಗಜಲಕ್ಷ್ಮಿಗೆ ನನ್ನ ತಂಗಿ ನೆನಪಾದಳು. ಕೂಡಲೇ ಮಂಚದಿಂದ ಎದ್ದು ಊರಿಗೆ ಫೋನ್ ಮಾಡಿದಳು. ಅವಳ ತಂದೆ ಮಾತಾಡುತ್ತಿದ್ದಾರೆ! ಮಮತ ಇನ್ನೂ ಊರಿಗೆ ಬಂದಿಲ್ಲ! ಬೆಂಗಳೂರಿನಿಂದ ಅವಳ ಊರಿಗೆ ಕೇವಲ ಎರಡು ಗಂಟೆಗಳ ಪ್ರಯಾಣ. ಮಮತ ಯಾಕೆ ಊರಿಗೆ ಹೋಗಿಲ್ಲ. ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿದಳು. ಗಂಡ ಸಹ ಅಲ್ಲಿ ಇರಲಿಲ್ಲ. ಅವಳಿಗೆ ಕೂಡಲೇ ಗಂಡನ ಮೇಲೆ ಅನುಮಾನ ಬರಲಿಲ್ಲ. ಪುನಹ ಕಾದಂಬರಿ ಓದುತ್ತಿದ್ದಾಳೆ.

''ಫೋನ್ ರಿಂಗ್ ಆಯಿತು''

ಗಜಲಕ್ಷ್ಮಿ ರಿಸೀವರ್ ಎತ್ತಿ ''ಹಲೋ...''

''ನಮಸ್ಕಾರ ಮೇಡಂ ನಾನು...ಸುನಂದ ನೆನಪಿಗೆ ಬರುತ್ತಿಲ್ಲವೆ?''

''ಯಾವ ಸುನಂದ?''

''ಅದೇ ಮೇಡಂ ಇವತ್ತು ಬೆಳಿಗ್ಗೆ ನಿಮ್ಮ ಮನೆಗೆ ಬಂದು ಸೂಟ್ ಕೇಸ್ ಇಡಲಿಲ್ಲವೇ?''

''ಓ...ನೀವಾ...? ಅಂದ ಹಾಗೆ ನಿಮ್ಮ ತಂದೆಯವರ ಆರೋಗ್ಯ ಹೇಗಿದೆ?''

ಸುನಂದ ಗಾಬರಿಯಾದಳು. ''ತಂದೆಯ ಆರೋಗ್ಯ...ಹಾಂ...ಹಾಂ...ಈಗ ಪರವಾಗಿಲ್ಲ''

''ಈಗ ಎಲ್ಲಿಂದ ಮಾತಾಡುತ್ತಿದ್ದೀರ?''

''ನಮ್ಮ ಊರಿನಿಂದ''

''ವಿಷಯ ಏನು ಅಂತ ಹೇಳಿ''

''ಏನಿಲ್ಲ ಮೇಡಂ ಪುನಃ ನಿಮಗೊಂದು ತೊಂದರೆಯನ್ನು ಕೊಡಬೇಕಾಗಿದೆ''

ಗಜಲಕ್ಷ್ಮಿ ನಗುತ್ತಾ ''ನೆರೆ - ಹೊರೆ ಅಂದ ಮೇಲೆ ಅಷ್ಟೂ ಸಹ ಮಾಡದೆ ಇದ್ದರೆ ಹೇಗೆ? ಅದೇನು ಅಂತ ಹೇಳಿ''

''ನನ್ನ ಸೂಟ್ ಕೇಸ್‌ಗಳು ಅಲ್ಲಿದಲ ಅಲ್ಲವೆ?''

''ಹೌದು ಯಾಕೆ ಹೇಳಿ''

''ಏನಿಲ್ಲ ಅದರಲ್ಲಿ ನಮ್ಮ ತಂದೆಗೆ ಅಗತ್ಯವಾದ ಮೆಡಿಸನ್‌ಗಳು ಇದೆ. ಅದು ಈಗ ಬೇಕಿತ್ತು''

''ಹಾಗಾದ್ರೆ ಈಗೇನು ಮಾಡ್ತೀರ?''

''ನೀವು ಸ್ವಲ್ಪ ಹೆಲ್ಪ್ ಮಾಡ್ತೀರ?''

''ಹೇಗೆ...ಯಾವ ರೀತಿ?''

''ಆ ಸೂಟ್ ಕೇಸ್ ಅನ್ನು ತಲುಪಿಸಲು ಸಾಧ್ಯವೆ'' ಎಂದು ಸಂಕೋಚದಿಂದಲೆ ಕೇಳಿದಳು.

ಗಜಲಕ್ಷ್ಮಿ ಗಾಬರಿಯಿಂದ ''ಹೇಗೆ...ಹೇಗೆ? ಸಾಧ್ಯ ನೀವು ಇರೋದು ಬೇರೆ ಊರಿನಲ್ಲಿ''

''ಮೇಡಂ...ನೀವು ಸೂಟ್ ಕೇಸ್‌ಗಳನ್ನು ತಿಲಕನಗರದಲ್ಲಿರೋ ಹನುಮಾನ್ ಗ್ಯಾರೇಜಿನ ಉಸ್ತಾದ್ ಎಂಬುವವರಿಗೆ ತಲುಪಿಸಿದರೆ ಸಾಕು.

ಅವರು ಇವತ್ತು ನಮ್ಮ ಊರಿಗೆ ಬರುತ್ತಿದ್ದಾರೆ''

''ಓದಕೆ. ತಲುಪಿಸುತ್ತೇನೆ. ಸರಿಯಾದ ಅಡ್ರೆಸ್ ಹೇಳಿ'' ಎಂದು ಪೆನ್ನು, ಪ್ಯಾಡ್ ಎಳೆದುಕೊಂಡಳು. ಸುನಂದ ಅಡ್ರೆಸ್ ಹೇಳಿದಳು.

ಗಜಲಕ್ಷ್ಮಿ ನಗುತ್ತಾ ''ನಿಮ್ಮ ಸೂಟ್‌ಕೇಸ್‌ಗಳನ್ನು ನನ್ನ ಕೈಯಿಂದ ಅಲ್ಲಾಡಿಸಲು ಸಹ ಸಾಧ್ಯವಿಲ್ಲ''

''ಮತ್ತೆ ಹ್ಯಾಗೆ ತಲುಪಿಸುತ್ತೀರ?''

''ನನ್ನ ಹಸ್ಬೆಂಡ್ ಇದ್ದಾರಲ್ಲ''

ಸುನಂದ ಗಾಬರಿಯಿಂದ ''ಲಂಬೋದರ...!''

''ಯಾಕೆ ಗಾಬರಿಯಾಗ್ತೀರ?''

''ಪೋಲೀಸರಿಗೆ ತೊಂದರೆ ಕೊಡಬೇಕಲ್ಲ ಅಂತ''

''ಪರವಾಗಿಲ್ಲ ಬಿಡಿ''

''ಥ್ಯಾಂಕ್ ಯೂ ಮೇಡಂ''

''ಯೂ ಆರ್ ವೆಲ್‌ಕಮ್''

ಫೋನ್ ಡಿಸ್‌ಕನೆಕ್ಟ್ ಆಯಿತು. ಗಜಲಕ್ಷ್ಮಿ ಸ್ಟೇಷನ್ನಿಗೆ ಫೋನ್ ಮಾಡಿ ಗಂಡ ಬಂದ ಕೂಡಲೇ ಕಳುಹಿಸಲು ತಿಳಿಸಿದಳು. ಅವಳಿಗೇನು ಗೊತ್ತು ಪಾಪ...ಗಂಡ ಈಗ ತನ್ನ ತಂಗಿಯ ಜೊತೆ ಇದೇ ಊರಿನಲ್ಲಿ ಇದ್ದಾನೆ ಅಂತ!

3

ಹಾಲಿನ ಕೆನೆಯ ಬಣ್ಣದ ನೈಲ್ ಪಾಲೀಶ್ ಹಚ್ಚಿದ ಸುಂದರವಾದ ಚಿಗುರೆ ಬೆರಳುಗಳನ್ನು ಸವರುತ್ತಿದ್ದಾನೆ ಎಸ್. ಐ. ಲಂಬೋದರ! ಮಮತ ಅವನ ಕೈ ಬಿಡಿಸಿಕೊಂಡು ತನ್ನ ವ್ಯಾನಿಟಿ ಬ್ಯಾಗಿನಿಂದ ಫೋಟೋ ತೆಗೆದು ಅದನ್ನು ತನ್ನ ಭಾವನ ಮುಖದ ಮುಂದೆ ಹಿಡಿದಳು. ಚಿಗುರು ಮೀಸೆಯ ಚೆಲುವ! ಸಿನಿಮಾ ಹೀರೋ ತರಹ ಇದ್ದಾನೆ!

ಅಪಹಾಸ್ಯ ಮಾಡಿದಂತಾಯಿತು ನೀನು ಇದ್ದೀಯ ನೋಡು ಎಂದು.

ಬೋಳು ತಲೆ...ಡೊಳ್ಳು ಹೊಟ್ಟೆ! ಮೈ ತುಂಬಾ ವಿಪರೀತ ರೋಮ!

''ಯಾರಿವನು?'' ಅನುಮಾನದಿಂದ ಕೇಳಿದನು.

ಮಮತ ''ಇವನ ಬಗ್ಗೆ ಮಾತಾಡಬೇಕು ಅಂತಾನೆ ನಾನು ಊರಿನ ಪ್ರೋಗ್ರಾಂ ಕ್ಯಾನ್ಸಲ್ ಮಾಡಿದ್ದು''

''ಮೊದಲು ವಿಷಯ ಹೇಳು''

''ಇವನ ಹೆಸರು ನರೇಂದ್ರ ಅಂತ. ಇದೇ ಊರಿನಲ್ಲಿ ಸೇಕ್

ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾನೆ ನಮ್ಮ ಜಾತಿಯವನಲ್ಲ''

''ಪೀಠಿಕೆ ಸಾಕು ವಿಷಯ ಹೇಳು'' ಎಂದು ಅಸಹನೆಯಿಂದ ಹೇಳಿದನು.

''ನಾನು...ನಾನು ಇವನನ್ನು ಪ್ರೀತಿಸುತ್ತಿದ್ದೇನೆ! ಇವನನ್ನೇ ಮದುವೆಯಾಗುತ್ತೇನೆ!''

ಸ್ಪೀಡ್ ಆಗಿ ಹೋಗುತ್ತಿರುವಾಗ ಜೆಪಿನ ಟಯರ್ ಒಡೆದಂತೆ ಆಯಿತು! ಅದುರಿ ಅಲ್ಲಾಡಿ ಹೋದನು. ಯಾರೋ ಹಿಡಿದೆತ್ತಿ ನಿರಾಸೆ ಎಂಬ ಆಳವಾದ ಕಮರಿಗೆ ಎಸೆದಂತೆ ಆಯಿತು. ಮುಖ ಒಂದು ಹಿಡಿ ಇಂಗು ತಿಂದ ಹಾಗೆ ಆಗಿದೆ. ಅಯ್ಯೋ ಪಾಪ...ತಾನೇ ನಾದಿನಿಯನ್ನು ಮದುವೆಯಾಗಬೇಕು ಅಂತ ಆಸೆ ಇರಿಸಿಕೊಂಡಿದ್ದ!

ನಾದಿನಿಯ ಲವ್ ಕೇಸ್! ಅದಕ್ಕೆ ಸಹಾಯ ಕೇಳುತ್ತಿದ್ದಾಳೆ! ನಿರಾಸೆ ಕೋಪಕ್ಕೆ ತಿರುಗಿತು. ತನ್ನ ಹುಡುಗಿಯ ಮನಸ್ಸನ್ನು ಕೆಡಿಸಿರುವ ಅಬ್ಬೆಪಾರಿ ಸೂಳೆಮಗನನ್ನು ಲಾಕಪ್‌ಗೆ ತಳ್ಳಿ ಸೊಂಟ ಮುರಿಯುವ ಆತುರ ಉಂಟಾಗುತ್ತಿದೆ ಲಂಬೋದರನಿಗೆ! ಬಿಡುತ್ತಾನೆಯೆ? ಹೇಗೆ ಸಾಧ್ಯ? ಇದೇ ಊರಿನಲ್ಲಿದ್ದಾನಂತೆ! ಎಳೆತಂದು ಏರೋಪ್ಲೇನ್ ಎತ್ತಿಸುತ್ತೇನೆ ಮುಖಕ್ಕೆ ಬುಗುರಿಯ ತರಹ ಗುನ್ನಾ ಹೊಡೆಯುತ್ತೇನೆ.

ಮಮತ ಅವನ ಕೈ ಅದುಮುತ್ತಾ ''ಯಾಕೆ ಭಾವ ಸುಮ್ಮನಾದ್ರಿ ನನಗಕ್ಷ ಸಹಾಯ ಮಾಡೋಲ್ವ?''

ಲಂಬೋದರ ಕೋಪದಿಂದ ''ಸಹಾಯ...ನಿನಗೆ...ಹೇಗೆ...ಯಾವ ರೀತಿ?''

ಮಮತ ಅಳುತ್ತಲೇ ''ನನ್ನ ಅಕ್ಕನಿಗೆ ನನ್ನ ತಲೆ ಕಂಡರೆ ಆಗೋಲ್ಲ ಅಪ್ಪಾ, ಅಮ್ಮ ಈ ಮದುವೆಗೆ ಒಪ್ಪೋಲ್ಲ''

''ಹುಡುಗ ಬೇರೆ ಜಾತಿಯವನು''

''ಈಗ ನಾನೇನು ಮಾಡಬೇಕು?''

ಲಂಬೋದರ ಸ್ವಲ್ಪ ಹೊತ್ತು ಆಲೋಚಿಸಿ ನಂತರ ''ಆಯಿತು ಪ್ರಯಸುತ್ತೇನೆ. ಈ ಹುಡುಗನ ಫೋನ್ ನಂಬರ್, ಅಡ್ರೆಸ್ ಕೊಡು''

ಮಮತ ತನ್ನ ವ್ಯಾನಿಟಿ ಬ್ಯಾಗಿನಿಂದ ನರೇಂದ್ರನ ವಿಳಾಸ ನೀಡಿದಳು. ಲಂಬೋದರ ಸಿಗರೇಟ್ ಅನ್ನು ಹೊತ್ತಿಸಿಕೊಂಡು ಮುಂದೇನು ಮಾಡಬೇಕು ಅಂತ ಚಿಂತಿಸುತ್ತಿದ್ದಾನೆ.

ಮಮತ ಅವನ ಕೈ ಹಿಡಿದುಕೊಂಡು ''ಭಾವ...ನಾನು ನರೇಂದ್ರನನ್ನು

ತುಂಬಾ ಪ್ರೀತಿಸುತ್ತಿದ್ದೇನೆ. ಅವನು ಸಿಗಲಿಲ್ಲ ಅಂದರೆ ನನಗೆ ಹುಚ್ಚೇ ಹಿಡಿಯುತ್ತದೆ. ನೀವೇ ನಿಂತು ಮದುವೆ ಮಾಡಿಸಬೇಕು''

ಉತ್ತರಿಸಲಿಲ್ಲ ಲಂಬೋದರ.

''ಭಾವ...ಸಹಾಯ...ಮಾಡ್ತೀರ?''

''ಪ್ರಯತ್ನಿಸುತ್ತೇನೆ ಅಂದೆನಲ್ಲ''

''ನೀವು ಭರವಸೆ ಕೊಡುತ್ತಿಲ್ಲ''

''ನಾನು ರಾಜಕಾರಣಿ ಅಲ್ಲ''

ಮಮತ ಕಣ್ಣೀರನ್ನು ಒರೆಸಿಕೊಂಡು ''ನಾನು ನಿಮ್ಮನ್ನೇ ನಂಬಿದ್ದೇನೆ ಭಾವ. ಕೈ ಬಿಡಬೇಡಿ''

''ಈಗ ನೀನು ಊರಿಗೆ ಹೋಗುತ್ತೀಯ?''

ತಲೆಯಾಡಿಸಿದಳು ಮಮತ. ಅವಳನ್ನು ಜೀಪಿನಲ್ಲಿ ಕೂರಿಸಿಕೊಂಡು ಬಸ್ಸು ನಿಲ್ದಾಣದ ಕಡೆ ಬರುತ್ತಿದ್ದಾನೆ ಲಂಬೋದರ! ಮೊದಲಿದ್ದ ಉತ್ಸಾಹ ಇಲ್ಲ! ಅವನು ಅಂದುಕೊಂಡಿದ್ದೇನು? ಮಮತಳ ಜೊತೆ ಸಿನಿಮಾ ನೋಡುವುದು, ರಾತ್ರಿ ಹೋಟೆಲ್‌ನಲ್ಲಿ ಉಳಿದು ಅವಳ ಜೊತೆ ಮಜಾ ಮಾಡೋದು ಅಂತ!

ಇವಳು ಕೈಗೆ ಸಿಗೋ ಹೆಣ್ಣಲ್ಲ! ಬೇರೆ ಯಾರನ್ನೋ ಪ್ರೀತಿಸಿ ಕತೆ ಹೇಳುತ್ತಿದ್ದಾಳೆ.

ಕೋಪ ಉಕ್ಕೇರುತ್ತಿದೆ! ಲಂಬೋದರ ಹತಾಶನಾಗಲಿಲ್ಲ. ಯಾಕೆ ಅಂದರೆ ಅವನು ಒಂದು ಸಲ ಬಯಸಿದ ಮೇಲೆ ಅದನ್ನು ಹೇಗಾದರೂಮ ಸರಿ ಪಡೆಯಲೇ ಬೇಕೆಂಬ ಹಟಗಾರ.

ಅವನ ಗುರಿ ಏನು? ಮಡಿಕೋಲಿನಂತೆ ಇರುವ ಹೆಂಡತಿಯಿಂದ ಬಿಡುಗಡೆ ಪಡೆಯುವುದು. ಅವಳ ಹೆಸರಿನಲ್ಲಿ ಇರೋ ಆಸ್ತಿಯನ್ನು ಹೊಂದುವುದು ಅವನ ಬಹು ದಿನಗಳ ಬಯಕೆ ಮಮತ! ಮಿಂಚಿನ ಬಳ್ಳಿಯನ್ನು ಮದುವೆಯಾಗುವುದು!

ಅವನ ಊಹೆ ತಲೆ ಕೆಳಕಾಗಿದೆ! ಮಮತ ಇವನನ್ನು ಮದುವೆಯಾಗಲು ಒಪ್ಪುವುದಿಲ್ಲ. ಅವಳು ಬೇರೆ ಯಾರನ್ನೋ ಪ್ರೀತಿಸುತ್ತಿದ್ದಾಳೆ. ಗುಂಗಿನಿಂದ ಹೊರ ಬರಲಾರಳು. ಚಕಚಕನೆ ಚಿಂತಿಸುತ್ತಿದ್ದಾನೆ. ಒಂದೇ ಬಾಣದಿಂದ ಎರಡು ಹಕ್ಕಿಗಳನ್ನು ಹೊಡೆಯಬೇಕು!

ನನ್ನ ಹೆಂಡತಿ ಸಾಯಬೇಕು! ಮಮತ ತಾನಾಗಿಯೇ ನನ್ನನ್ನು ಮದುವೆ ಆಗಲು ಒಪ್ಪಿಕೊಳ್ಳಬೇಕು!

## 4

ನಾದಿನಿಯನ್ನು ಬಸ್ಸಿಗೆ ಕಳುಹಿಸಿ ಪೋಲೀಸ್ ಸ್ಟೇಷನ್ನಿಗೆ ಬಂದನು ಎಸ್. ಐ. ಲಂಬೋದರ! ಅವನಿಗೊಂದು ಮೆಸೇಜ್ ಕಾದಿತ್ತು! ಮನೆಯಿಂದ ಫೋನ್ ಬಂದಿತ್ತು. ನೀವು ಕೂಡಲೇ ಹೋಗಬೇಕೆಂತೆ ಎಂದು ಪಿ.ಸಿ. ಹೇಳಿದನು. ಪುನಃ ಜೀಪನ್ನು ಹತ್ತಿದನು. ಈ ಜೀಪು ಇರೋದಾದರೂ ಯಾಕೆ ಹೇಳಿ? ಹೆಂಡತಿ ಕರೆದ ಕೂಡಲೇ ಮನೆಗೆ ಹೋಗಲು! ಹೆಂಡತಿಗೆ ಗೊತ್ತಾಗದಂತೆ ಅವಳ ತಂಗಿಯ ಜೊತೆ ಎಂ.ಜಿ. ರೋಡಿನಲ್ಲಿ ಸುತ್ತಾಡಲು! ಜೀಪನ್ನು ಮನೆಯ ಮುಂದೆ ನಿಲ್ಲಿಸಿ ಕರ್ಚೀಫ್‌ನಿಂದ ಬೋಳು ತಲೆಯಲ್ಲಿ ಮೂಡಿದ್ದ ಬೆವರನ್ನು ಒರೆಸಿಕೊಳ್ಳುತ್ತಾ ಕಾಲಿಂಗ್ ಬೆಲ್ ಪ್ರೆಸ್ ಮಾಡಿದನು. ಬಾಗಿಲು ತೆರೆದಳು ಧರ್ಮ ಪತ್ನಿ!

ಗಜಲಕ್ಷ್ಮಿ ಕೋಪದಿಂದ ''ಅಲ್ರೀ...ನಾನು ಫೋನ್ ಮಾಡಿದ್ದಾಗ ಸ್ಟೇಷನ್ನಿನಲ್ಲಿ ಇರದೆ ಎಲ್ಲಿಗ್ರೀ ಹಿಗಿದ್ರಿ?'' ಎಂದು ದಬಾಯಿಸಿ ಕೇಳಿಸಿದಳು.

ಲಂಬೋದರ ''ಡ್ಯೂಟಿ ಕಣೆ ಡ್ಯೂಟಿ ಸುಮ್ನೆ ಕೂತಿದ್ದರೆ ಸಂಬಳ ಕೊಡ್ತಾರಾ ನೀನು ಫೋನ್ ಮಾಡ್ತೀನಿ ಅಂದಿದ್ರೆ ಅಲ್ಲೇ ಇರುತ್ತಿದ್ದೆ''

ಎಂತಹ ವಿದೇಯವಂತ ಗಂಡ! ದಾಂಪತ್ಯ ಅಂದರೆ ಇದು!

ಗಜಲಕ್ಷ್ಮಿ ಅಹಂಬಿಂದ ''ಈ ಕೆಲಸ ಯಾಕೆ ಬೇಕು ಹೇಳಿ. ಮುಂದಿನ ತಿಂಗಳು ನನ್ನ ತಾತನ ಆಸ್ತಿ. ನನ್ನ ಹೆಸರಿಗೆ ಬರುತ್ತೆ. ಅರವತ್ತು ಲಕ್ಷ''

''ಗೊತ್ತಿದೆ...ಗೊತ್ತಿದೆ ಕಣೆ''

''ಥೂ...ವಯಸ್ಸಾದವರ ತರಹ ಕಣೆ ಅಂತ ರಾಗ ಎಳೆಯಬೇಡಿ'' ಎಂದು ರೇಗಿದಳು.

''ಈಗ ಫೋನ್ ಮಾಡಿದ್ದು ಯಾಕೆ?''

''ನೀವು ಈಗಲೇ ತಿಲಕನಗರದಲ್ಲಿರೋ ಹನುಮಾನ್ ಗ್ಯಾರೇಜಿಗೆ ಹೋಗಿ ಬರಬೇಕು''

ಗಾಬರಿಯಿಂದ ''ಯಾಕೆ?''

''ನನ್ನ ಫ್ರೆಂಡ್ ಸುನಂದ ಅನ್ನೋವ್ರ ಲಗೇಜ್ ಅನ್ನು ನೀವು ತಗೊಂಡು ಹೋಗಿ ಕೊಡಬೇಕು''

ಕೋಪದಿಂದ ''ಏನು...ನಾನೇ?''

''ಮತ್ತೆ...ನಾನು ಹೋಗಲು ಸಾಧ್ಯವೆ?''

''ಇಂತಹ ಕೆಲಸ ಯಾಕೆ ಒಪಿಕೊಂಡೆ?''

''ಏನೋ ನೆರೆ - ಹೊರೆಯವರು ಅಂತ''

''ಸರಿ ಸರಿ...ಎಂತಹ ಲಗ್ಗೇಜ್?''

ಗಜಲಕ್ಷ್ಮಿ ಮಂಚದ ಅಡಿಯ ಕಡೆ ಕೈ ತೂರಿಸಿದಾಗ ಲಂಬೋದರ ಅತ್ತ ನಡೆದನು.

ತುಂಬಾ ಕಷ್ಟದಿಂದ ಮಂಡಿಯೂರಿ ಕುಳಿತುಕೊಂಡು ಎರಡು ಸೂಟ್ ಕೇಸ್‌ಗಳನ್ನು ಎಳೆದನು. ಏದುಸಿರು ಬಿಡುತ್ತಿದ್ದಾನೆ.

ಗಜಲಕ್ಷ್ಮಿ ತಿರಸ್ಕಾರದಿಂದ ''ಡಯೆಟ್ ಮಾಡಿ ಅಂದರೆ ಕೇಳೋಲ್ಲ ಇಷ್ಟಕ್ಕೆ ಬುಸು ಬುಸು ಅಂತ ಉಸಿರು ಹೊಡೆಯುತ್ತಿದ್ದೀರಲ್ಲ''

ಹೆಂಡತಿಯ ಕಡೆ ಕೆಕ್ಕರಿಸಿಕೊಂಡು ನೋಡಿದನು ಲಂಬೋದರ! ಅದನ್ನು ಎತ್ತಿಕೊಂಡು ನಡೆಯುತ್ತಾ ''ಅಬ್ಬಬ್ಬ...ಹೆಣ ಭಾರ. ಇದರಲ್ಲಿ ಅಂತಾದ್ದು ಏನೇ ಇದೆ?''

ಗಜಲಕ್ಷ್ಮಿ ಕೋಪದಿಂದ ''ಅದೆಷ್ಟು ಮಾತಾಡುತ್ತೀರ ಬೇಗ ತಗೊಂಡು ಹೋಗ್ರಿ''

''ಸರಿ ಸರಿ...ಅಡ್ರೆಸ್ ಹೇಳು''

ವಿವರಿಸಿದಳು ಅವಳು! ಲಂಬೋದರ ಎರಡು ಸೂಟ್ ಕೇಸ್‌ಗಳನ್ನು ಎತ್ತಿ ಜೀಪಿನಲ್ಲಿ ಇಡುವ ಹೊತ್ತಿಗೆ ಬೆವರು ಬಂದಿತ್ತು!

''ರೀ...ರೀ...ಮಮತ ಇನ್ನೂ ಊರಿಗೆ ಹೋಗಿಲ್ಲವಂತೆ'' ಎನ್ನುತ್ತಾ ಗಂಡನ ಹತ್ತಿರ ಬಂದಳು.

ಗಾಬರಿಯಾದರೂ ಸಹ ಸಾವರಿಸಿಕೊಂಡು ''ಹೌದಾ...ನೀನೇ ಬಸ್ಸನ್ನು ಹೊತ್ತಿಸಿದೆಯಲ್ಲ''

''ಅದೇ ನೋಡಿ ಗೊತ್ತಾಗುತ್ತಿಲ್ಲ''

''ಎಲ್ಲಿ ಹೋಗುತ್ತಾಳೆ. ರಾತ್ರಿ ಮನೆಗೆ ಹೋಗಿರುತ್ತಾಳೆ ಬಿಡು. ನೀವ್ಯಾಕೆ ಗಾಬರಿಯಾಗುತ್ತೀಯ?''

''ಸರಿ ಸರಿ ಬೇಗ ಬನ್ನಿ''

ಲಂಬೋದರ ಜೀಪಿನಲ್ಲಿ ಕುಳಿತನು. ಮನೆಗೆ ಬೇಗ ಯಾಕೆ ಬರಬೇಕು?

ಹೆಂಡತಿಯಿಂದ ಸುಖ ಇಲ್ಲ! ಹೆಂಡತಿಯ ಎದುರಲ್ಲಿ ಕುಡಿಯುವ ಹಾಗಿಲ್ಲ. ಯಾವ ಸುಖ ಸೂರೆ ಮಾಡಲು ಬರಬೇಕು? ಲಂಬೋದರ ಜೀಪಿನ ವೇಗ ಹೆಚ್ಚಿಸಿದನು ಹತ್ತು ನಿಮಿಷಗಳ ನಂತರ ಇವನ ಇಲಾಖೆಯ ಮತ್ತೆರಡು ವೆಹಿಕಲ್‌ಗಳು ಬಂದವು.

ಲಂಬೋದರ ವಿಶ್ ಮಾಡಿದನು.

''ಇದೇನು ಈ ಕಡೆ?''

''ತಿಲಕ ನಗರಕ್ಕೆ ಹೋಗಬೇಕು. ಡ್ರಗ್ಸ್ ಸ್ಮಗ್ಲರ್‌ನ್ನು ಟ್ರೇಟ್ ಔಟ್ ಮಾಡುತ್ತಿದ್ದೀರ?''

ಮತ್ತೊಬ್ಬ ಪೋಲೀಸ್ ಅಧಿಕಾರಿ ''ಡ್ರಗ್ಸ್ ಡೀಲರ್ಸ್ ತುಂಬಾ ಬುದ್ಧಿವಂತಿಕೆಯಿಂದ ಜಾರಿಕೊಳ್ಳುತ್ತಿದ್ದಾನೆ. ಯಾವ ರೀತಿ ಬ್ರೌನ್ ಶುಗರ್ ಸಾಗಿಸುತ್ತಿದ್ದಾರೆ ಅಂತಾನೇ ಸುಳಿವು ಸಿಗುತ್ತಿಲ್ಲ. ಕಮೀಷನರ್ ತುಂಬಾ ಗಲಾಟೆ ಮಾಡುತ್ತಿದ್ದಾರೆ''

ಲಂಬೋದರ ''ತಪ್ಪು ಮಾಡಿದವನು ಸಿಕ್ಕಿ ಕೊಳ್ಳಲೇ ಬೇಕು. ವಿಶ್ ಯು ಗುಡ್ ಲಕ್!'' ಎಂದು ಜೀಪನ್ನು ತಿಲಕ ನಗರದ ಕಡೆ ತಿರುಗಿಸಿದನು.

ಅದರಲ್ಲಿ ಎರಡು ಸೂಟ್ ಕೇಸ್‌ಗಳಿವೆ! ಅದರ ತುಂಬಾ ಬ್ರೌನ್ ಶುಗರ್ ಇದೆ! ಹತ್ತು ನಿಮಿಷಗಳ ನಂತರ ಜೀಪು ಹನುಮಾನ್ ಗ್ಯಾರೇಜಿನ ಮುಂದೆ ಬಂದು ನಿಂತಿತು.

ಸುನಂದಳಿಂದ ಮೊದಲೇ ಫೋನ್ ಮೆಸೇಜ್ ಬಂದಿದ್ದರಿಂದ ಉಸ್ತಾದ್ ಗಾಬರಿಯಾಗಲಿಲ್ಲ! ಹಲ್ಲು ಕಿಸಿಯುತ್ತಾ ಬಂದು ನಮಸ್ಕರಿಸಿ ಸೂಟ್‌ಕೇಸ್‌ಗಳನ್ನು ಪಡೆದುಕೊಂಡನು. ಲಂಬೋದರ ತಿಲಕ್ಷ್ಣವಾಗಿ ನೋಡುತ್ತಿದ್ದಾನೆ. ಎಲ್ಲೋ ಏನೋ ಅಸಹಜತೆ ಕಾಣುತ್ತಿದೆ.

ಜೀಪು ಹೊರಟಿತು. ಉಸ್ತಾದ್ ಬಣ್ಣದ ಪೇಪರ್‌ಗಳನ್ನು ಸುತ್ತಿದ್ದ ದೊಡ್ಡ ಬಾಕ್ಸ್‌ಅನ್ನು ಹಿಡಿದುಕೊಂಡು ಬಂದು ಕೊಡುತ್ತಾ ''ಸಾರ್...ಇದನ್ನು ದಯವಿಟ್ಟು ತಲುಪಿಸಿ''

''ಯಾರಿಗೆ ತಲುಪಿಸಬೇಕು!''

''ನಿಮ್ಮ ಶ್ರೀಮತಿಯವರಿಗೆ''

''ಅವಳಿಗ್ಯಾಕೆ ಇದು?''

ಉಸ್ತಾದ್ ನಗುತ್ತಾ ''ಇದು ಅವರಿಗಲ್ಲ. ಇದನ್ನು ನಿಮ್ಮ ಶ್ರೀಮತಿಯವರಿಗೆ ತಲುಪಿಸಿದರೆ ಅವರು ಸುನಂದಳಿಗೆ ಕೊಡುತ್ತಾರೆ ಸಾರ್ ಪ್ಲೀಸ್...''

ಅವನಿಂದ ಅದನ್ನು ಪಡೆದುಲೊಂಡು ಸೀಟಿನ ಮೇಲೆ ಹಾಕುತ್ತಾ ''ಇದೊಳ್ಳೆ ವ್ಯವಹಾರ ಆಯ್ತು'' ಎಂದು ಸ್ಟಾರ್ಟ್ ಮಾಡಿದನು.

ಜೀಪು ಚಲಿಸುತ್ತಿದೆ! ಉಸ್ತಾದ್ ಅತ್ತಲೇ ನೋಡಿ ನಗುತ್ತಿದ್ದಾನೆ. ಸುನಂದ

ತುಂಬಾ ಕಿಲಾಡಿ ಹೆಣ್ಣು! ಮತ್ತೇ...ಪೋಲೀಸರ ಮೂಲಕವೇ ಅವಳು ಬ್ರೌನ್‌ಶುಗರ್ ಡೀಲಿಂಗ್ ಮಾಡುತ್ತಿದ್ದಾಳಲ್ಲ! ಈಗಲೇ ಮನೆಗೆ ಹಿಗಿ ಏನು ಮಾಡಬೇಕು ಎಂದುಕೊಂಡು ಸ್ಟೇಷನ್ನಿಗೆ ಬಂದನು. ಉಸ್ತಾದ್ ನೀಡಿದ್ದ ಬಾಕ್ಸ್ ಅನ್ನು ಸ್ಟೇಷನ್ನಿನಲ್ಲಿ ಇದ್ದ ಬೀರುವಿನಲ್ಲಿ ಇರಿಸಿದನು.

ಫೋನ್ ರಿಂಗ್ ಆಯಿತು. ಲಂಬೋದರ್ ಅಟೆಂಡ್ ಮಾಡಿದನು.

''ಭಾವ...ನನಾ...ಮಮತ''

ಅವಳ ಧ್ವನಿ ಈಗ ಮೊದಲಿನ ಸಂತೋಷ ಮತ್ತು ಉತ್ಸಾಹ ಉಂಟಾಗಲಿಲ್ಲ ಅವನಿಗೆ.

''ಎಲ್ಲಿಂದ ಮಾತಾಡ್ತ ಇದ್ದೀಯ?''

''ಈಗ ತಾನೇ ಊರಿಗೆ ಬಂದೆ''

''ಇಷ್ಟು ಬೇಗ ಯಾಕೆ ಫೋನ್ ಮಾಡಿದೆ?''

ಮಮತ ಹೆದರುತ್ತಲೇ ''ಅದು...ಅದು...ನಾನು ಹೇಳಿದ್ದ ವಿಷಯ ಏನು ಮಾಡಿದ್ರಿ?''

''ಯಾವ ವಿಷಯ''

''ಅದೇ ಭಾವ ನರೇಂದ್ರ...''

ಲಂಬೋದರನಿಗೆ ಮೈಯೆಲ್ಲಾ ಉರಿದು ಹೋಯಿತು. ಅವನು ಕೋಪದಿಂದ ''ನನಗೇನು ಮಾಡಲು ಬೇರೆ ಕೆಲಸ ಇಲ್ಲಾ ಅಂತ ಅಂದುಕೊಂಡಿದ್ದೀಯ?''

ಮಮತ ಪೆಚ್ಚಾದಳು.

''ಕಂಡವರ ಕೆಲಸ ಮಾಡಿಕೊಡಲು ಅಲ್ಲ ಇಲಾಖೆ ನನಗೆ ಸಂಬಳ ಕೊಡುವುದು ಅದಕ್ಕೇನು ಅರ್ಜೆಂಟ್. ನಿನ್ನ ಪ್ರಿಯತಮ ಎಲ್ಲಿ ಓಡಿ ಹೋಗುತ್ತಾನೆ? ಈಗ ಫೋನ್ ಇಡು ಸಾಕು'' ಫೋನ್ ಡಿಸ್ ಕನೆಕ್ಟ್ ಆಯಿತು. ಯಾಕೆ ಅಂತ ಗೊತ್ತಿಲ್ಲ. ಲಂಬೊದರ ಕೋಪ, ಅಸಹನೆ, ಹತಾಶೆಯಿಂದ ಚಡಪಡಿಸುತ್ತಿದ್ದಾನೆ. ಮನಸ್ಸು ದುಗುಡಗೊಂಡಿದೆ.

ಲಂಬೋದರ ಪಿ.ಸಿ.ಗೆ ಹೇಳಿದ. ಮನೆಯಿಂದ ಫೋನ್ ಬಂದರೆ ಸಾಹೇಬರು ಡ್ಯೂಟಿಯ ಮೇಲೆ ಬೇರೆ ಊರಿಗೆ ಹೋಗಿದ್ದಾರೆ ಅಂತ ಹೇಳು.

ಇದು ಆಗಾಗ ಹೇಳುವ ಸುಳ್ಳು! ಲಂಬೋದರ ಯಾವುದೋ ಹೋಟೆಲ್‌ನಲ್ಲಿ ರೂಮ್ ಮಾಡಿ ಈ ರಾತ್ರಿ ಉಳಿದುಕೊಂಡ!

ಮನೆಯಲ್ಲಿ ಎಲ್ಲಿದೆ ಸ್ವಾತಂತ್ರ್ಯ? ಟೀಪಾಯಿಯ ಮೇಲೆ ಮ್ಯಾನಿಕನ್

ಹೌಸ್ ವಿಸ್ಕಿ ಸೀಸೆ, ಸೋಡಾ, ಐಸ್ ಚೂರುಗಳು, ಹುರಿದ ಗೋಡಂಬಿ ಚಿಕನ್ ಮಂಚೂರಿ ಬಿರಿಯಾನಿ ವಿಸ್ಕಿ ಸಿಪ್ ಮಾಡುತ್ತಿದ್ದಾನೆ! ಸಿಗರೇಟ್ ಹೊಗೆಯಾಡುತ್ತಿದೆ! ಅಂದರೆ ಲಂಬೋದರ ತನ್ನ ತಲೆಗೆ ವಿಪರೀತ ಕೆಲಸ ಕೊಟ್ಟಿದ್ದಾನೆ ಅಂತ ಅರ್ಥ! ಹೆಂಡತಿ ಇನ್ನು ಕೇವಲ ಮೂರು ದಿನಗಳಲ್ಲಿ ತುಂಬಾ ವಿಚಿತ್ರ ರೀತಿಯಲ್ಲಿ ಸಾಯಬೇಕು! ನನ್ನನ್ನು ಮಮತ ಮದುವೆಯಾಗಲು ತಾನಾಗಿಯೇ ಒಪ್ಪಿಕೊಳ್ಳಬೇಕು! ಪ್ಲಾನ್ ರೆಡಿಯಾಯಿತು! ನಾಳೆಯಿಂದಲೇ ಮಾಸ್ಟರ್ ಪ್ಲಾನಿನ ಮೊದಲನೆಯ ಹಂತವನ್ನು ಕಾರ್ಯಗತ ಮಾಡಬೇಕು!

5

ಮಾರನೆಯ ದಿನ ಬೆಳಿಗ್ಗೆ! ಲಂಬೋದರ ತನ್ನ ಜೇಬಿನಿಂದ ಮಮತ ನೀಡಿದ್ದ ಫೋಟೋ ಹೊರ ತೆಗೆದನು! ಅದು ಅವಳ ಪ್ರಿಯತಮ ನರೇಂದ್ರನ ಫೋಟೋ ಹಿಂಭಾಗದಲ್ಲಿ ಅಡ್ರೆಸ್, ಫೋನ್ ನಂಬರ್ ಇತ್ತು! ಲಂಬೋದರನ ಮುಖದಲ್ಲಿ ಕ್ರೂರತನದ ನಗು ಮೂಡಿತು! ಹಲ್ಲು ಕಡಿಯುತ್ತಿದ್ದಾನೆ ಹಿಂದಿನ ರಾತ್ರಿ ಮಾಡಿದ್ದ ಮಾಸ್ಟರ್ ಪ್ಲಾನ್ ಪ್ರಕಾರ ಈಗ ಮಮತಳ ಪ್ರಿಯತಮನನ್ನು ಕಾಣಬೇಕು! ಡಯಲ್ ಮಾಡುತ್ತಿದ್ದಾನೆ. ಕೆಲವು ಸೆಕೆಂಡುಗಳ ನಂತರ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪ್ರಿಯತಮ ಲೈನಿಗೆ ಬಂದಿದ್ದನು.

''ನರೇಂದ್ರ ಅಂದರೆ...''

''ನಾನೇ ಸರ್ ತಾವು...''

''ಮಮತಳ ಭಾವ ಎಸ್. ಐ. ಲಂಬೋದರ''

''ನ...ನ...ನಮಸ್ಕಾರ ಸಾರ್''

''ಮಮತ ನ್ನಿ ಬಗ್ಗೆ ಹೇಳಿದ್ದಾಳೆ''

''ಥ್ಯಾಂಕ್ಸ್ ಯೂ ಸಾರ್''

''ನಿನ್ನನ್ನು ನಾನು ನೋಡಬೇಕಲ್ಲ''

''ಎಲ್ಲಿಗೆ ಬರಬೇಕು ಅಂತ ಹೇಳಿ''

ಲಂಬೋದರ ವಿವರಿಸಿದನು

''ಎಷ್ಟು ಹೊತ್ತಿಗೆ ಬರಲಿ ಸಾರ್?''

''ರಾತ್ರಿ ಏಳು ಗಂಟೆಗೆ''

''ಬರ್ತೀನಿ ಸಾರ್''

ಫೋನ್ ಡಿಸ್ ಕನೆಕ್ಟ್ ಮಾಡಿದನು. ಲಂಬೋದರ ಸಿಗರೇಟ್ ಒಂದನ್ನು ಹೊತ್ತಿಸಿಕೊಂಡು 'ಬಾ...ಬಾ ನಿನಗೆ ಕಾದಿದೆ ಮರಿ ಹಬ್ಬ! ನನ್ನ ಹೆಣ್ಣಿಗೆ ನಿನ್ನ

ಮೇಲೆ ಪ್ರೀತಿ! ನೀನು ಬದುಕಿರೋ ತನಕ ಅವಳು ನನ್ನನ್ನು ಒಪ್ಪೋಲ್ಲ ಹಾಗಂತ ನಿನ್ನ್ನ ಸಾಯಿಸೋಲ್ಲ! ನಿನಗಾಗಿ ಕಾದಿದೆ ಸ್ಪೆಷಲ್ ಟ್ರೀಟ್‌ಮೆಂಟ್!' ಎಂದು ನಗಲಾರಂಭಿಸಿದನು.

ಒಬ್ಬನೇ ಯಾಕೆ ನಗುತ್ತಿದ್ದಾನೆ? ಅಲ್ಲಿದ್ದ ಪಿ.ಸಿ.ಗಳು ಪಿಳಿ ಪಿಳಿ ಕಣ್ಣು ಬಿಡುತ್ತಾ ಅವನನ್ನು ನೋಡುತ್ತಿದ್ದಾರೆ.

ಫೋನ್ ರಿಂಗ್ ಆಯಿತು. ಉರಿಯುತ್ತಿದ್ದ ಸಿಗರೇಟ್ ಅನ್ನು ಎಸೆದು ರಿಸೀವರ್ ಎತ್ತಿಕೊಂಡು ''ಹಲೋ...''

ಹೆಂಡತಿಯ ಅಬ್ಬರದ ಧ್ವನಿ! ಅವಳು ಕೋಪದಿಂದ ''ರಾತ್ರಿ ಎಲ್ಲಿಗೆ ಹೋಗಿದ್ರಿ?''

''ಡ್ಯೂಟಿ...ಡ್ಯೂಟಿ ಇತ್ತು ಚಿನ್ನ''

''ಈ ಸುಳ್ಳನ್ನು ನಾನು ನಂಬಲಾರೆ''

''ಅದನ್ನ ಹೇಳಲು ಫೋನ್ ಮಾಡಿದೆಯ?''

ಗಜಲಕ್ಷ್ಮಿ ಕೋಪದಿಂದ ''ರೀ...ನೆನ್ನೆ ಅದ್ಯಾರೋ ಉಸ್ತಾದ್ ಅನ್ನೋ ವ್ಯಕ್ತಿ ನಿಮಗೆ ಬಾಕ್ಸ್ ಕೊಟ್ಟಿದ್ದನೆ?''

''ಕೊಟ್ಟಿದ್ದ ಅದಕ್ಕೆ ಏನೀಗ?''

''ಅದನ್ನು ಸುನಂದಳಿಗೆ ತಲುಪಿಸಿಬೇಕು ನೀವ್ಯಾಕೆ ಅದನ್ನು ನನಗೆ ತಂದುಕೊಡಲಿಲ್ಲ''

''ನಾನು ರಾತ್ರಿ ಮನೆಗೆ ಬರಲೇ ಇಲ್ಲವಲ್ಲ''

ಗಜಲಕ್ಷ್ಮಿ ಗಂಭೀರವಾಗಿ ''ನೋಡಿ...ಆ ಸುನಂದ ಈಗ ಅಲ್ಲಿಗೆ ಬರ್‍ತ್ತಾಳೆ. ಅವಳಿಗೆ ಬಾಕ್ಸ್ ಕೊಡಿ''

''ಏನು...ಇಲ್ಲಿಗೆ ಬರ್‍ತ್ತಾಳ?''

ಗಜಲಕ್ಷ್ಮಿ ರೇಗುತ್ತಾ ''ನೋಡಲು ಚೆನ್ನಾಗಿದ್ದಾಳೆ ಅಂತ ಅವಳ ಹತ್ತಿರ ಮಂಗನ ತರಹ ಆಡಬೇಡಿ''

''ನನ್ನನ್ನು ಏನು ಅಂತ ತಿಳಿದುಕೊಂಡಿದ್ದೀಯ?'' ಎಂದು ಕೋಪದಿಂದ ಕೇಳಿದನು.

''ನನಗೆ ಎಲ್ಲಾ ಗೊತ್ತಿದೆ ಬಿಡಿ''

''ಈಗ ಫೋನ್ ಇಡ್ತೀಯ?''

''ನನ್ನ ಹತ್ತಿರ ಮಾತಾಡಲು ನಿಮಗೆ ಇಷ್ಟಇಲ್ಲ ಅಂತ ನನಗೆ ಗೊತ್ತು ಇನ್ನೊಂದು ವಿಷಯ''

''ಏನದು?'' ''ನನ್ನ ಅಪ್ಪ ಫೋನ್ ಮಾಡಿದ್ರು. ಅವರಿಗೆ ನನ್ನನ್ನು ನೋಡುವ ಆಸೆ ಆಗಿದೆಯಂತೆ ನಾನು ನಾಳೆಯ ದಿನ ತವರು ಮನೆಗೆ ಹೊರಡುತ್ತಿದ್ದೇನೆ''

''ಅದಕ್ಕೇನಂತೆ ಹೋಗಿ ಬಾ''

''ನೀವು ಸಹ ನನ್ನ ಜೊತೆ ಬರಬೇಕು. ಅದಕ್ಕೆ ಮೊದಲೇ ತಿಳಿಸುತ್ತಿದ್ದೇನೆ''

''ಸಾಧ್ಯವಾದರೆ ಬರ್ತೀನಿ''

ಗಜಲಕ್ಷ್ಮಿ ರೇಗುತ್ತಾ ''ನಾನು ಯಾವಾಗ ಕರೆದರೂ ಹೀಗೆ ಹೇಳುತ್ತೀರ? ನನ್ನನ್ನು ಕರೆದುಕೊಂಡು ಹೋಗಿ ಬಿಡಲು ನೀವು ಬರಲೇ ಬೇಕು''

''ನಾಳೆ ತಾನೆ? ಪ್ರಯತ್ನಿಸುತ್ತೇನೆ''

''ಈಗ ಸುನಂದ ಬರ್ತಾಳೆ ಬಾಕ್ಸ್ ಕೊಡಿ''

''ಸರಿ ಫೋನ್ ಇಡು...''

ಫೋನ್ ಡಿಸ್‌ಕನೆಕ್ಟ್ ಆಯಿತು. ಎಸ್. ಐ. ಲಂಬೋದರನಿಗೆ ತುಂಬಾ ಸಂತೋಷವಾಗಿದೆ. ಯಾಕೆ ಅಂದರೆ ಅವನ ಮರ್ಡರ್ ಪ್ಲಾನ್ ಎಗ್ಸಿಕ್ಯೂಟ್ ಮಾಡಲು ಒಳ್ಳೆಯ ಅವಕಾಶ ದೊರೆತಿದೆ!

ಹೆಂಡತಿ ನಾಳೆ ಊರಿಗೆ ಹೊರಡುತ್ತಾಳೆ! ಇದೇ ಸರಿಯಾದ ಸಮಯ! ಅದೇ ಸಮಯಕ್ಕೆ ಆಟೋದಿಂದ ಇಳಿದು ಸುಂದರ ಯುವತಿಯೊಬ್ಬಳು ಅಲ್ಲಿಗೆ ಬಂದಳು!

ಅವಳೇ ಸುನಂದ! ಕೆಂಪು ಬಾರ್ಡರಿನ ನೀಲಿ ಬಣ್ಣದ ಮೈಸೂರಿನ ಸಿಲ್ಕ್ ಸೀರೆಯನ್ನು ಉಟ್ಟುಕೊಂಡಿದ್ದಾಳೆ! ತಲೆಯಲ್ಲಿ ಮಲ್ಲಿಗೆ ಕನಕಾಂಬರ! ಕೈ ತುಂಬಾ ಬಳೆಗಳು! ಕತ್ತಿನಲ್ಲಿ ಮಾಂಗಲ್ಯದ ಸರ! ಯಾವ ಬಡ್ಡೀ ಮಗನಿಗೆ ಅನುಮಾನ ಬರುತ್ತದೆ. ಈ ಸಾಂಪ್ರದಾಯಿಕ ಚೆಲುವೆ ಬ್ರೌನ್‌ಶುಗರ್ ಡೀಲರ್ ಅಂತ! ಲಂಬೋದರ ಸುಸ್ತಾಗಿ ಹೋದನು.

ಅವಳು ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸುತ್ತಾ ಮೋಹಕ ನಗೆ ಬೀರಿದಳು.

ಅಬ್ಬಬ...ಇವಳು...ಇವಳು ಮಮತಳಿಗಿಂತಾ ತುಂಬಾ ಚೆನ್ನಾಗಿದ್ದಾಳೆ. ಚೆನ್ನಾಗಿದ್ದಾಳೆ ಅಂತ ಬಯಸಿದರೆ, ಕೋತಿ ಚೇಷ್ಟೆ ಮಾಡಿದರೆ ಹೆಂಡತಿಗೆ ಗೊತ್ತಾಗುತ್ತೆ.

ಇವಳು ಹೆಂಡತಿಯ ಕ್ಲೋಸ್ ಫ್ರೆಂಡ್! ಅಲ್ಲದೆ ಈಕೆಗೆ ಮದುವೆ ಬೇರೆ ಆಗಿದೆ!

ಲಂಬೋದರ ಅವಳ ಜೊತೆ ಹೊಚ್ಚು ಮಾತನಾಡದೆ ಬೀರುವಿನಲ್ಲಿದ್ದ

ಬಾಕ್ಸ್ ಅನ್ನು ತೆಗೆದನು. ಅದನ್ನು ಬಣ್ಣದ ಕಾಗದದಿಂದ ಸುತ್ತಲಾಗಿತ್ತು. ಗಿಫ್ಟ್ ಬಾಕ್‌ನಂತೆ ಇತ್ತು!

ಸುನಂದ ಅದನ್ನು ತೆಗೆದುಕೊಂಡು ''ಥ್ಯಾಂಕ್ ಯೂ ಸಾರ್!'' ಎಂದಳು.

ನಿರುತ್ಸಾಹದಿಂದಲೇ ನಕ್ಕನು! ಸುನಂದ ಹೊರಟು ಹೋದಳು. ಲಂಬೋದರನಿಗೆ ಕೆಲಸದ ಮೇಲೆ ಆಸಕ್ತಿ ಇಲ್ಲ. ಅವನು ಹೆಂಡತಿಯ ಸಾವಿನ ಬಗ್ಗೆ ಚಿಂತಿಸುತ್ತಿದ್ದಾನೆ!

6

ಅದು ಪಬ್ಲಿಕ್ ಟೆಲಿಫೋನ್ ಬೂತ್. ಮಮತ ತನ್ನ ಊರಿನಿಂದ ಬೆಂಗಳೂರಿನಲ್ಲಿರುವ ಪ್ರಿಯತಮ ನರೇಂದ್ರನ ಜೊತೆ ಫೋನಿನಲ್ಲಿ ಸಂತೋಷ ಮತ್ತು ಉತ್ಸಾಹದಿಂದ ಮಾತಾಡುತ್ತಿದ್ದಾಳೆ.

''ನಿನ್ನ ಭಾವ ಫೋನ್ ಮಾಡಿದ್ರು''

''ಹೌದ...ಏನಂದ್ರು?''

''ಇವತ್ತು ನನ್ನನ್ನು ಬರಲು ಹೇಳಿದ್ದಾರೆ''

'ಯಾಕಂತೆ?'

ನರೇಂದ್ರ ನಗುತ್ತಾ ''ಇನ್ಯಾಕೆ? ನಮ್ಮಿಬ್ಬರ ಮದುವೆಯ ವಿಷಯ ಮಾತಾಡಲು ಇರಬೇಕು''

''ನನ್ನ ಭಾವ ತುಂಬಾ ಒಳ್ಳೆಯವರು''

''ನನಗೂ ಸಹ ಹಾಗೆ ಅನ್ನಿಸುತ್ತೆ''

''ಅವರ ಜೊತೆ ಸರಿಯಾಗಿ ಮಾತಾಡು''

ನರೇಂದ್ರ ನಗುತ್ತಾ ''ಮಾತಾಡುವುದನ್ನು ನನಗೆ ಹೇಳಿಕೊಡಬೇಕೆ ಹೆದರಬೇಡ ನನ್ನ ಪಾತಿನಿಂದಲೇ ನಿನ್ನ ಭಾವನನ್ನು ಇಂಪ್ರೆಸ್ ಮಾಡುತ್ತೇನೆ''

''ಎಕ್ಲಿಗೆ ಬರಲು ಹೇಳಿದ್ದಾರೆ?''

''ಅರುಂಧತಿ ನಗರದ ಪಾರ್ಕಿಗೆ''

''ಅಷ್ಟೊಂದು ದೂರದ ಸ್ಥಳಕ್ಕೆ ನಿನ್ನನ್ನು ಯಾಕೆ ಬರಲು ಹೇಳಿದ್ರು ನರೇಂದ್ರ''

''ಏನೋ...ಯಾರಿಗೆ ಗೊತ್ತು?''

''ಹುಷಾರಾಗಿರು'' ನರೇಂದ್ರ ನಗುತ್ತಾ ಡಿಸ್‌ಕನೆಕ್ಟ್ ಮಾಡಿದನು.

★★★

ರಾತ್ರಿ ಏಳೂವರೆಯ ಸಮಯ! ನರೇಂದ್ರ ಅರುಂಧತಿ ನಗರದ ಪಾರ್ಕಿನ ಹತ್ತಿರ ನಿಂತುಕೊಂಡಿದ್ದಾನೆ. ಅಲ್ಲಿಗೆ ಬಂದು ಅರ್ಧ ಗಂಟೆಯಾಗಿದೆ. ಲಂಬೋದರ ಬರುತ್ತಾನೋ ಇಲ್ಲವೋ? ಆದರೆ ಅವನು ಈ ರೀತಿ ಅನುಮಾನ ಪಡುತ್ತಿರುವಾಗಲೇ ಪೋಲೀಸ್ ಜೀಪು ಬಂದಿತು. ಅದರಿಂದ ಇಳಿದ ದಢೂತಿ ದೇಹದ ಪೋಲೀಸ್ ಅಧಿಕಾರಿಯನ್ನು ಕಂಡು ಭಯವಾಯಿತು.

''ನರೇಂದ್ರ...ನೀನೇ ತಾನೆ?'' ಹೆದರುತ್ತಲೇ ತಲೆಯಾಡಿಸಿದನು.

''ಬಾ...ಜೀಪಿನಲ್ಲಿ ಕೂರು'' ಎಂದು ಗಡುಸಾಗಿ ಹೇಳಿದಾಗ ನರೇಂದ್ರ ಕುಳಿತನು.

ಜೀಪು ಚಲಿಸುತ್ತಿದೆ.

ಲಂಬೋದರ ತೀಕ್ಷ್ಣವಾಗಿ ನೋಡುತ್ತಾ ''ನೀನು...ನೀನು ಮಮತಳನ್ನು ಪ್ರೀತಿಸುತ್ತಿದ್ದೀಯ?''

ಹೆದರುತ್ತಲೇ ತಲೆಯಾಡಿಸಿದನು.

''ಅವಳೂ ಪ್ರೀತಿಸುತ್ತಿದ್ದಾಳಾ?''

ನರೇಂದ್ರ ಉತ್ಸಾಹದಿಂದ ''ತುಂಬಾ ಪ್ರೀತಿಸುತ್ತಿದ್ದಾಳೆ ಸಾರ್. ನಾನು ಇಲ್ಲಾ ಅಂದರೆ ಅವಳ ಜೀವನ ಬರಡಾಗುತ್ತೆ. ನಾನೇ ಅವಳ ಉಸಿರು...ಸರ್ವಸ್ವ...ಪ್ರಾಣ'' ಎಂದ.

ಲಂಬೋದರ ಕೋಪದಿಂದ ''ಸಾಕು...ಸಾಕು. ಈ ರೀತಿಯ ಉದ್ವೇಗ, ಆವೇಶ ನನಗೆ ಹಿಡಿಸೋಲ್ಲ''

ಉತ್ಸಾಹಕ್ಕೆ ತಣ್ಣೀರು ಎರಚಿದಂತಾಯಿತು.

''ಸಾರ್...ಈಗ ನಾವೆಲ್ಲಿಗೆ ಹೋಗುತ್ತಿದ್ದೇವೆ'' ಎಂದು ಭಯ, ಅನುಮಾನದಿಂದಲೇ ಕೇಳಿದನು.

''ನಿಮ್ಮಿಬ್ಬರ ಮದುವೆಯ ಬಗ್ಗೆ ಮಾತಾಡಲು''

ಮನಸ್ಸು ಅರಳಿತು ಸಂತೋಷದಿಂದ! ಜೀಪು ಅರ್ಧ ಗಂಟೆಯ ನಂತರ ಮನೆಯೊಂದರ ಮುಂದೆ ನಿಂತಿತು. ಇಬ್ಬರೂ ಇಳಿದರು. ಆ ಮನೆಗೆ ಬೀಗ ಹಾಕಲಾಗಿತ್ತು! ಲಂಬೋದರ ಬೀಗ ತೆರೆದು ಒಳಗೆ ಹೋಗುತ್ತಾ ''ಬಾರಯ್ಯ...ಬಾ...ಇನ್ನು ಮುಂದೆ ನೀನು ನನ್ನ ಕೋಬ್ರದರ್ ನನ್ನ ಹೆಂಡತಿಯ ತಂಗಿಯನ್ನು ಮದುವೆಯಾಗುತ್ತಿದ್ದೀಯಲ್ಲ''

ಅರಳಿತು ನರೇಂದ್ರನ ಮನಸ್ಸು! ಲಂಬೋದರ ಮಾತಾಡುತ್ತಲೇ ''ಈಗ

ಬೇಡಾ...ಬೇಡಾ ಅಂತ ಎಷ್ಟೇ ಹೇಳಿದರೂ ಸಹ ಅವನಿಗೆ ಬಲವಂತವಾಗಿ ವಿಸ್ಕಿಯನ್ನು ಕುಡಿಸಿದನು. ಕುಡಿದದ್ದು ಎರಡೇ ಪೆಗ್! ಗೊರಕೆ ಹೊಡೆಯಲಾರಂಭಿಸಿದನು ನರೇಂದ್ರ ಯಾವುದಕ್ಕೂ ಇರಲಿ ಮುಖಕ್ಕೆ ಒಂದು ಎಂದು ಪಂಚ್ ಕೊಟ್ಟ. ಅದು ವಿಸ್ಕಿಯೊಂದಿಗೆ ಬೆರೆತ ಮತ್ತಿನ ಗುಳಿಗೆಯ ಪ್ರಭಾವ!

ಲಂಬೋದರ ಜೀಪಿನಲ್ಲಿ ಇರಿಸಿದ್ದ ಹಗ್ಗವನ್ನು ತಂದು ನೆಲದ ಮೇಲೆ ಬಿದ್ದಿದ್ದ ನರೇಂದ್ರನ ಕೈ - ಕಾಲುಗಳನ್ನು ಬಿಗಿದನು. ಬಾಯಿಗೆ ಪ್ಲಾಸ್ಟರ್ ಅಂಟಿಸಿದನು! ಆ ಮನೆಯ ಎಲ್ಲಾ ಡೋರ್‌ಗಳನ್ನು ಕ್ಲೋಸ್ ಮಾಡಿ ಬೀಗ ಹಾಕಿದನು.

ಫೈನಲ್‌ಪ್ಲಾನ್ ಎಗ್ಸಿಕ್ಯೂಟ್ ಮಾಡುವ ಮುನ್ನ ಬಂದು ಇವನನ್ನು ನೋಡಬೇಕು! ಲಂಬೋದರ ಈಗ ಜೀಪಿನಲ್ಲಿ ಬರುತ್ತಿದ್ದಾನೆ. ಮಾಸ್ಟರ್ ಪ್ಲಾನಿನ ಸೆಕೆಂಡ್ ಪ್ರೋಸೆಸ್ ಅನ್ನು ಈಗ ಕಾರ್ಯಗತ ಮಾಡಬೇಕು!

ಜೀಪಿನಿಂದ ಇಳಿದು ಪಬ್ಲಿಕ್ ಟೆಲಿಫೋನ್ ಬೂತಿನಿಂದ ಹೆಂಡತಿಯ ಊರಿಗೆ ಫೋನ್ ಮಾಡಿದನು. ತನ್ನ ಮಾವ, ನಾದಿನಿಯ ಜೊತೆ ಮಾತಾಡಿ ಅವರು ಏನು ಮಾಡಬೇಕು ಅಂತ ತಿಳಿಸಿದನು! ಲಂಬೋದರನಿಗೆ ಸಂತೋಷವಾಗುತ್ತಿದೆ!

7

ಮಾರನೆಯ ದಿನ ಬೆಳಿಗ್ಗೆ! ಗಜಲಕ್ಷ್ಮಿ ತವರು ಮನೆಗೆ ಹೋಗಲು ಸಂತೋಷದಿಂದ ರೆಡಿಯಾಗಿ ನಿಂತಿದ್ದಾಳೆ.

ಗಂಡ ಯೂನಿಫಾರಂ ಹಾಕಿಕೊಂಡು ಬರುತ್ತಿರುವುದನ್ನು ಕಂಡು ಕೋಪದಿಂದ.

''ರೀ...ಇದೇನು...ನೀವು ನನ್ನ ಜೊತೆ ಊರಿಗೆ ಬರೋಲ್ವೆ?''

''ಸಾರ ಡಿಯರ್ ಇವತ್ತು ನಾಳೆ ನಾನು ಈ ಊರಿನಿಂದ ಎಲ್ಲಿಗೂ ಬರಲಾರೆ''

''ಅಂತಹ ತಲೆ ಹೋಗುವ ಕೆಲಸ ಏನಿದೆ?'' ಎಂದು ಕೋಪದಿಂದ ಕೇಳಿದಳು.

ಲಂಬೋದರ ''ಕಮೀಷನರ್ ಎಮರ್‌ಜೆನ್ಸಿಮೀಟಿಂಗ್ ಕರೆದಿದ್ದಾರೆ. ನಾನು ಇರಲೇ ಬೇಕು''

''ಮತ್ತೇ...ನಾನು ಹೇಗೆ ಹೋಗಲಿ?''

ಬಾಡಿಗೆ ಕಾರು ಬರುತ್ತೆ''

ಗಜಲಕ್ಷ್ಮಿ ಗಾಬರಿಯಿಂದ ''ಏನು...ಕಾರಿನಲ್ಲಿ ನಾನೊಬ್ಬಳೇ ಹೋಗಬೇಕೆ?''

ಹೆದರಬೇಡ...ನಿನ್ನನ್ನು ನೋಡಿದರೆ ಆ ಡ್ರೈವರ್‌ಗೆ ಖಂಡಿತಾ ರೇಪ್ ಮಾಡಲು ಮನಸ್ಸು ಬರೋಲ್ಲ. ಎಂದುಕೊಂಡ ಮೆಲ್ಲಗೆ ''ಈಗ ನಿನ್ನ ಜೊತೆಗೆ ನಿನ್ನ ತಂಗಿ ಬರ್‍ತಾಳೆ''

ಅದುವರೆಗೂ ಗಂಡನ ಮೇಲೆ ಚೂರು - ಪಾರು ಕೋಪ ಇತ್ತು. ಈಗ ಅದು ಭುಗಿಲ್ ಎಂದಿತು. ಅವಳು ಅಬ್ಬರಿಸುತ್ತಾ ''ಅವಳನ್ನು ಯಾಕೆ ಬರಲು ಹೇಳಿದ್ರಿ?''

''ನಿನ್ನ ಜೊತೆಗೆ ಇರಲಿ ಅಂತ''

ಗಜಲಕ್ಷ್ಮಿ ಹಲ್ಲು ಕಡಿಯುತ್ತಾ ''ನನಗೆ ಅವಳ ತಲೆ ಕಂಡರೆ ಆಗೋಲ್ಲ. ಅವಳನ್ನ ಯಾಕೆ ಕರೆಸುತ್ತಿದ್ದೀರಾ?''

ಲಂಬೋದರ ''ಇದೆಲ್ಲಾ ನನಗೇನೇ ಗೊತ್ತು ನಿನ್ನ ಜೊತೆಗೆ ಇದ್ದು ಪ್ರಯಾಣ ಮಾಡಲಿ ಅಂತ ಕರೆಸಿದೆ. ನೀನು ನಿನ್ನ ಸ್ವಂತ ತಂಗಿಯನ್ನು ಸಹ ಈ ರೀತಿ ದ್ವೇಷಿಸುತ್ತೀಯ ಅಂತ ನನಗೆ ಗೊತ್ತಿರಲಿಲ್ಲ''

ಗಜಲಕ್ಷ್ಮಿ ''ನಾನು ಮಾತ್ರ ಅಲ್ಲ ಕಣ್ರಿ. ಮಮತಳಿಗೆ ನನ್ನ ತಲೆ ಕಂಡರೆ ಆಗೋಲ್ಲ''

ಆಶ್ಚರ್ಯದಿಂದ ನೋಡಿದ.

''ನಾನು ಸತ್ತರೆ ಸಾಕು ಅಂತ ಕಾಯುತ್ತಿದ್ದಾಳೆ. ನನ್ನ ಪರಮಶತ್ರು ಅವಳೇ ಕಣ್ರಿ''

ಹೊಸ ವಿಷಯ ಲಂಬೋದರ ಭಯಾಶ್ಚರ್ಯದಿಂದ ''ಅರೆ...ನೀನು ಏನು ಹೇಳ್ತಾ ಇದ್ದೀಯ?''

ಗಜಲಕ್ಷ್ಮಿ ''ನನ್ನ ಹೆಸರಿನಲ್ಲಿ ಆಸ್ತಿ ಇದೆ. ಅದೆಲ್ಲಾ ನನಗೆ ಮಾತ್ರ ಸೇರುತ್ತೆ. ಅವಳಿಗೆ ಒಂದು ರೂಪಾಯಿ ಸಹ ಸಿಗೋಲ್ಲ ಈ ಆಸ್ತಿಯ ವಿಚಾರವಾಗಿ ಮಮತ ನನ್ನ ಹತ್ತಿರ ಮದುವೆಗೆ ಮೊದಲು ತುಂಬಾ ಸಲ ಜಗಳ ಆಡಿದ್ದಾಳೆ.''

ಮಮತ, ಗಜಲಕ್ಷ್ಮಿಯ ತಂದೆ ರಂಗನಾಥ್ ಅವರಿಗೆ ಇಬ್ಬರು ಹೆಂಡತಿಯರು.

ಗಜಲಕ್ಷ್ಮಿಯ ತಾಯಿ ಅನುಸೂಯ ನೋಡಲು ಏನೇನೂ

ಚೆನ್ನಾಗಿರಲಿಲ್ಲ. ಆದರೆ ಅವಳ ತವರಿನವರ ಆಸ್ತಿ ಬಂದಿತ್ತು ಅವಳಿಗೆ! ರಂಗನಾಥ ಹೆಣ್ಣಿನ ಚಪಲದ ಮನುಷ್ಯ!

ಸದಾ ರೋಗದಿಂದ ನರಳುತ್ತಿದ್ದ ಮೊದಲ ಹೆಂಡತಿಯಿಂದ ಸುಖ ಸಿಗಲಿಲ್ಲ ಅಂತ ಬೇರೊಂದು ಮದುವೆ ಮಾಡಿಕೊಂಡಿದ್ದನು. ಅದರ ಪರವಾಗಿ ಈ ಮಮತ ಜನಿಸಿದ್ದಳು.

ಗಜಲಕ್ಷ್ಮಿಯ ತಾಯಿ ಸಾಯುವ ಮುನ್ನ ವಿಲ್ ಬರೆದಿದ್ದರು! ವಿಲ್ ಪ್ರಕಾರ ಅರವತ್ತು ಲಕ್ಷದ ಆಸ್ತಿ ಗಜಲಕ್ಷ್ಮಿಗೆ ಸೇರುತ್ತದೆ! ಅವಳಿಗೆ ಈ ಆಸ್ತಿಯ ಮೇಲೆ ಹಕ್ಕು ಬರುವುದು ಮದುವೆಯಾಗಿ ಒಂದು ವರ್ಷದ ನಂತರ! ರ ಮೊದಲೇ ಗಜಲಕ್ಷ್ಮಿ ಸತ್ತರೆ ಆಸ್ತಿಯೆಲ್ಲಾ ತನ್ನ ಸವತಿಯ ಮಗಳು ಮಮತಳಿಗೆ ಸೇರುತ್ತದೆ! ಆಸ್ತಿ ಗಜಲಕ್ಷ್ಮಿಯ ತಾಯಿಗೆ ಬಂದಿರುವುದು ಅವಳ ತಾತನಿಂದ! ಆದ್ದರಿಂದ ಅವರು ಹೇಳಿದಂತೆ ವಿಲ್ ಮಾಡಿದ್ದರು. ಉಪಯೋಗ ಇಲ್ಲದ ವಿಚಿತ್ರವಾದ ವಿಲ್! ಮಮತಳಿಗೆ ಅದಕ್ಕೇ ಕೋಪ! ತನ್ನ ಅಕ್ಕ ಸತ್ತರೆ ಮಾತ್ರ ಆಸ್ತಿ ತನಗೆ ಬರುತ್ತದೆ. ಇದೆಂತಹ ಅನ್ಯಾಯ? ತನ್ನ ಮದುವೆಗೆ ಸಹಾಯ ಅಂತ ಐದು ಲಕ್ಷ ಕೊಡಬಾರದಿತ್ತೆ?

ಮಮತ ಇದನ್ನೇ ಹೇಳುತ್ತಾ ಹಲವಾರು ಸಲ ತನ್ನ ಅಕ್ಕನ ಜೊತೆ ಜಗಳ ಆಡಿದ್ದಳು! ಈಗ ಗಜಲಕ್ಷ್ಮಿ ತಂಗಿಯನ್ನು ದ್ವೇಷಿಸಲು ಅವಳ ಅಪರೂಪದ ಸೌಂದರ್ಯ ಸಹ ಕಾರಣವಾಗಿತ್ತು.

ಎಲ್ಲವನ್ನೂ ಕೇಳಿಸಿಕೊಂಡ ಲದಬೊದರ ''ನನಗೆ ಇದೆಲ್ಲಾ ಗೊತ್ತಿರಲಿಲ್ಲ. ಇದೊಂದು ಸಲ ನೀನು ಅವಳ ಜೊತೆ ಊರಿಗೆ ಹೋಗು. ಇನ್ನ್ಯಾವತ್ತೂ ಸಹ ನಿನ್ನ ತಂಗಿಯನ್ನು ಇಲ್ಲಿಗೆ ಕರೆಸೋಲ್ಲ''

ಗಜಲಕ್ಷ್ಮಿಗೆ ಈಗ ತುಸು ಸಮಾಧಾನವಾಗಿತ್ತು. ''ನಾಳೆಯ ದಿನ ಊರಿಗೆ ಬನ್ನಿ''

''ಖಂಡಿತಾ ಬರಲು ಪ್ರಯತ್ನಿಸುತ್ತೇನೆ!''

ಸ್ವಲ್ಪ ಹೊತ್ತಿನ ನಂತರ ಆಟೋದಲ್ಲಿ ಮಮತ ಬಂದಳು. ಕಾಫಿ - ತಿಂಡಿಯ ಉಪಚಾರ ನಡೆಯಿತು ಅಕ್ಕ - ತಂಗಿ ಕಾರಿನಲ್ಲಿ ಹೊರಟರು! ಅವರಿಬ್ಬರ ನಡುವೆ ಮಾತಿಲ್ಲ! ಕಾರು ಹೋಗುತ್ತಿದ್ದರೆ ಲಂಬೋದರ ನಗುತ್ತಿದ್ದನು. ಆ ನಗುವಿನಲ್ಲಿ ಕ್ರೂರತನ ಇತ್ತು!

ಗಜಲಕ್ಷ್ಮಿ...ಇದೇ ನಿನ್ನ ಕೊನೆಯ ಪ್ರಯಾಣ! ನೀನು ಹಿಂತಿರುಗಿ

ಬರಲಾರಲ! ಸಾವು ಕಾಯುತ್ತಿದೆ! ಲಂಬೋದರನಿಗೆ ಈಗ ನೆನಪಾಯಿತು ಕೂಡಲೇ ಪೋಲೀಸ್ ಜೀಪಿನಲ್ಲಿ ಅಲ್ಲಿಗೆ ಹೋದನು.

ಅದೊಂದು ಮನೆ! ಅದಕ್ಕೆ ಹಾಕಿದ್ದ ಬೀಗವನ್ನು ತೆರೆದು ಒಳಗೆ ಹೋದನು. ಈಗವನಿಗೆ ನೆಮ್ಮದಿ ಉಂಟಾಯಿತು! ಬಂಧನದಲ್ಲಿದ್ದ ನರೇಂದ್ರ! ಮಮತಳ ಪ್ರಿಯತಮ! ಅವನಿಗೆ ಇನ್ನೂ ಸರಿಯಾಗಿ ಎಚ್ಚರಿಕೆಯೇ ಬಂದಿರಲಿಲ್ಲ. ಗಾಢವಾದ ನಿದ್ದೆಯಲ್ಲಿದ್ದಾನೆ! ನೈಲಾನ್ ಹಗ್ಗದ ಬಿಗಿಯಾದ ಬಂಧನ! ಬಾಯಿಗೆ ಪ್ಲಾಸ್ಟರ್ ಅಂಟಿಸಲಾಗಿದೆ! ಲಂಬೋದರ ಈಗ ಮೊದಲಿನಂತೆ ಆ ಮನೆಯ ಬೀಗ ಹಾಕಿಕೊಂಡು ಜೀಪಿನಲ್ಲಿ ಹಿಂತಿರುಗಿದನು. ಲಂಬೋದರನ ಪ್ಲಾನ್ ಏನು?

★★★

ಕಾರು ಚಲಿಸುತ್ತಿದೆ! ಹಿಂದಿನ ಸೀಟಿನಲ್ಲಿ ಗಜಲಕ್ಷ್ಮಿ ಮತ್ತು ಅವಳ ತಂಗಿ ಮಮತ ಕುಳಿತುಕೊಂಡಿದ್ದಾರೆ. ಅವರುಗಳ ನಡುವೆ ಮಾತಿಲ್ಲ! ಕಾರು ಇನ್ನೂ ನಗರವನ್ನು ದಾಟಿರಲಿಲ್ಲ. ರಸ್ತೆಯ ಬಲ್ಲಿಯಲ್ಲಿ ನಿಂತಿದ್ದ ವ್ಯಕ್ತಿಯನ್ನು ಕಂಡು ಗಜಲಕ್ಷ್ಮಿ ''ಡ್ರೈವರ್ ಕಾರನ್ನು ನಿಲ್ಲಿಸು''

ಕಾರು ಗಕ್ಕನೆ ನಿಂತಿತು.

ಅಲ್ಲಿ...ಅಲ್ಲಿ ಸುನಂದ ನಿಂತಿದ್ದಳು! ಸುನಂದ ಹತ್ತಿರ ಬಂದಳು.

ಗಜಲಕ್ಷ್ಮಿ ಪರಿಚಯದ ನಗೆ ಬೀರುತ್ತಾ ''ಅರೆ...ಇದೇನು ನೀವು ಇಲ್ಲಿ ನಿಂತಿದ್ದೀರ?''

ಸುನಂದ ''ನನ್ನ ಊರಿಗೆ ಹೋಗಬೇಕಿತ್ತು ಸಿಟಿ ಬಸ್ಸಿಗೆ ಕಾಯುತ್ತಿದ್ದೇನೆ'' ಎಂದಳು.

ಗಜಲಕ್ಷ್ಮಿ ''ಅರೆ...ಹೌದ? ಬಸ್ಸಿಗಾಗಿ ಯಾಕೆ ಕಾಯುತ್ತೀರ. ನಮ್ಮ ಕಾರು ಅದೇ ಮಾರ್ಗವಾಗಿ ನಮ್ಮ ಊರಿಗೆ ಹೋಗಬೇಕು ಬನ್ನಿ ಡ್ರಾಪ್ ಕೊಡುತ್ತೇನೆ''

ಸುನಂದ ತನ್ನ ಸೂಟ್ ಕೇಸ್‌ನೊಂದಿಗೆ ಕುಳಿತ ಕೂಡಲೇ ಕಾರು ಚಲಿಸಿತು.

ಗಜಲಕ್ಷ್ಮಿ ತಂಗಿಯ ಪರಿಚಯ ಮಾಡಿಸಿದಳು. ಸುನಂದ ತುಂಬಾ ಕಿಲಾಡಿ!

ಅವಳು ಈ ಗಜಲಕ್ಷ್ಮಿಯ ಬಾಯಿಯಿಂದಲೇ ಊರಿಗೆ ಹೋಗುವ ಪ್ರೋಗ್ರಾಂ ಬಗ್ಗೆ ತಿಳಿದುಕೊಂಡಿದ್ದಳು. ಅದಕ್ಕಾಗಿಯೇ ಕಾಯುತ್ತಿದ್ದಳು!

ಊರು ಬಂದಿತು! ಸುನಂದ ಕಾರಿನಿಂದ ಇಳಿದು ''ಥ್ಯಾಂಕ್ಸ್'' ಎನ್ನುತ್ತಾ

ಸರಸರನೆ ಅಲ್ಲಿಂದ ಮರೆಯಾದಳು. ಕಾರು ಚಲಿಸುತ್ತಿದೆ! ಮಮತ ಗಾಬರಿಯಿಂದ ''ಅಕ್ಕಾ...ಅವರು ಸೂಟ್‌ಕೇಸನ್ನು ಇಲ್ಲೇ ಬಿಟ್ಟಿದ್ದಾಳೆ!''

''ಅರೆ...ಹೌದ?'' ಎಂದು ತನ್ನ ಕೈಯಿಂದ ಸವರುತ್ತಾ ''ಆತುರದಲ್ಲಿ ಮರೆತು ಹೋಗಿರಬೆಕು ಊರಿಗೆ ಬಂದಾಗ ಪಡೆದುಕೊಳ್ಳುತ್ತಾಳೆ ಬಿಡು. ಡ್ರೈವರ್ ನೀನು ಹೊರಡಪ್ಪ''

ಕಾರು ಪುನಃ ಚಲಿಸಿತು ಸುನಂದ ಸೂಟ್‌ಕೇಸ್ ಅನ್ನು ಮರೆತಿರಲಿಲ್ಲ. ಬೇಕೆಂದೆ ಅಲ್ಲಿ ಬಿಟ್ಟು ಹೋಗಿದ್ದಳು!

★★★

ಲಂಬೋದರ ಮಾಸ್ಟರ್ ಪ್ಲಾನಿನ ಮೂರನೆ ಹಂತವನ್ನು ಕಾರ್ಯಗತ ಮಾಡಿದನು ಸಾಕ್ಷಿ, ಪುರಾವೆ ಸೃಷ್ಟಿಸಿಕೊಂಡಿದ್ದನು! ಅವನನ್ನು ಸಮರ್ಥಿಸಲು ಸಾಕ್ಷಿ!

ಅಂದರೆ ಪೋಲೀಸ್ ಇಲಾಖೆಯ ಕೆಲವು ಸಹದ್ಯೋಗಿಗಳನ್ನು ತನ್ನ ಮನೆಗೆ ಆಹ್ವಾನಿಸಿದ್ದನು! ಆ ರಾತ್ರಿ ಅಲ್ಲಿ ಗ್ರಾಂಡ್ ಗುಂಡಿನ ಪಾರ್ಟಿ ಇಟ್ಟುಕೊಂಡಿದ್ದನು!

ಅಂದರೆ ಆ ರಾತ್ರಿಯೆಲ್ಲಾ ತಾನು ತನ್ನ ಸ್ನೇಹಿತರ ಜೊತೆಯೇ ಕುಡಿಯುತ್ತಾ ನಗರದ ತನ್ನ ಮನೆಯಲ್ಲೇ ಇದ್ದ ಎಂಬುದನ್ನು ತೋರಿಸುವ ಪ್ರಯತ್ನ! ಗೆಳೆಯರನ್ನೆಲ್ಲಾ ಒತ್ತಾಯಮಾಡಿ ರಾತ್ರಿ ಏಳು ಗಂಟೆಗೆ ತನ್ನ ಮನೆಗೆ ಕರೆಸಿಕೊಂಡಿದ್ದರು. ಚಿಕನ್ ಬಿರಿಯಾನಿ...ಮಂಚೂರಿ! ತಂದೂರಿ ಚಿಕನ್...ಕಬಾಬ್! ವಿಸ್ಕಿ...ರಮ್, ಬಿಯರ್! ಯಾರಿಗೆ ಯಾವುದು ಬೇಕೋ ಅದು! ಲಂಬೋದರನನ್ನು ಬಾಯಿ ತುಂಬಾ ಹೊಗಳುತ್ತಾ ಕುಡಿಯುತ್ತಿದ್ದರು. ಲಂಬೋದರ ಗೆಳೆಯರಿಗೆ ಬಲವಂತವಾಗಿ ಕುಡಿಸಿದ್ದನು. ರಾತ್ರಿ ಒಂಭತ್ತು ಗಂಟೆಗೆ ಎಲ್ಲರೂ ಫುಲ್ ಟೈಟ್ ಆಗಿದ್ದರು. ಅವರ್‍ಯಾರೂ ಬೆಳಗಿನ ತನಕ ಏಳಲಾರರು ಅಂತ ಅವನಿಗೆ ಖಾತ್ರಿಯಾಗಿತ್ತು!

ಮುಂಬಾಗಿಲನ್ನು ಒಳಗಿನಿಂದ ಲಾಕ್ ಮಾಡಲಾಗಿದೆ. ಲಂಬೋದರ ಈಗ ಹಿತ್ತಲಿನ ಬಾಗಿಲನ್ನು ತೆರೆದುಕೊಂಡು ಹೊರಬಂದನು. ತನ್ನ ಗುರುತು ಸಿಗದಿರಲಿ ಎಂದು ತಲೆಗೆ ಮಂಕಿಕ್ಯಾಪ್, ಮಫ್ಲರ್ ಉಪಯಿಗಿಸಿದ್ದಾನೆ. ಭುಜದಲ್ಲಿ ದೊಡ್ಡ ಏರ್ ಬ್ಯಾಗ್ ನೇತಾಡುತ್ತಿದೆ.

ಅದರಲ್ಲಿ ಎಲ್ಲಾ ಪರಿಕರಗಳಿವೆ! ಕ್ಯಾಮರ ಸಹ ಇದೆ! ಲಂಬೋದರ ಈಗ ನಗರದ ಮುಖ್ಯ ರಸ್ತೆಗೆ ಬಂದ ಟ್ಯಾಕ್ಸಿಯನ್ನು ಮಾಡಿಕೊಂಡು ಹೊರಟನು.

ಹೆಂಡತಿಯ ಊರಿಗೆ!

8

ಅನುಕುಂದ ಗ್ರಾಮ! ಬೆಡ್ ರೂಮಿನಲ್ಲಿ ಗಜಲಕ್ಷ್ಮಿ ರೆಸ್ಟ್ ತೆಗೆದುಕೊಳ್ಳುತ್ತಿದ್ದಾಳೆ. ಸೂಟ್ ಕೇಸ್ ಅಲ್ಲಿಯೇ ಇದೆ! ಅದು ಸುನಂದಳ ಸೂಟ್ ಕೇಸ್! ಅದನ್ನು ನೋಡುತ್ತಿರುವಂತೆಯೇ ಗಜಲಕ್ಷ್ಮಿಗೆ ಒಂದು ರೀತಿಯ ಕುತೂಹಲ ಉಂಟಾಯಿತು. ಇದರಲ್ಲಿ ಏನಿರಬಹುದು? ಅದನ್ನು ಮಂಚದ ಮೇಲೆ ಇರಿಸಿ ಕೆಲವು ಅದೇ ತರಹದ ಸೂಟ್ ಕೇಸಿನ ಕೀ ಬಳಿಸಿದಳು. ಅರ್ಧ ಗಂಟೆಯ ಪ್ರಯತ್ನದ ನಂತರ ಸೂಟ್ ಕೇಸ್ ಬಾಯಿ ತೆರೆದುಕೊಂಡಿತು! ಬೆಚ್ಚಿ ಬಿದ್ದಳು ಗಜಲಕ್ಷ್ಮಿ! ಅದರ ತುಂಬಾ ಬ್ರೌನ್‌ಶುಗರ್ ಪ್ಯಾಕೆಟ್‌ಗಳು! ಮೈಗಾಡ್...ಸುನಂದ ಇಂತಹ ಹೆಣ್ಣೇ ಎಂದುಕೊಳ್ಳುತ್ತಿರುವಾಗಲೇ ಫೋನ್ ರಿಂಗ್ ಆಯಿತು. ಆಗ ರಾತ್ರಿ ಎಂಟೂವರೆ!

ಗಜಲಕ್ಷ್ಮಿ ರಿಸೀವರ್ ಎತ್ತಿ ''ಹಲೋ...''

''ಹಲೋ...ನಾನು...ಸುನಂದ...''

ಬೆಚ್ಚಿಬಿದ್ದಳು ಕೋಪ, ಆವೇಶವನ್ನು ತಡೆದುಕೊಂಡು ''ಹಲೋ...ಎಲ್ಲಿಂದ ಮಾತಾಡ್ತ ಇದ್ದೀರ?''

''ಬೆಂಗಳೂರಿನಿಂದ''

''ನಿಮ್ಮ ಸೂಟ್ ಕೇಸ್ ಅನ್ನ ನನ್ನ ಕಾರಿನಲ್ಲೇ ಮರೆತು ಹೋಗಿದ್ದೀರ?''

''ಸಾರಿ ಜಣ್ರಿ. ಅದಕ್ಕೆ ಫೋನ್ ಮಾಡಿರೋದು''

''ಉಸ್ತಾದ್‌ಗೆ ಕೊಡಬೇಕೆ?''

ಸುನಂದ ಬೆಚ್ಚಿ ಬಿದ್ದಳು. ತುಸು ಗಾಬರಿಯಿಂದಲೇ ''ಹೌ ಕಣ್ರಿ ಉಸ್ತಾದ್ ಅಲ್ಲಿಗೇ ಬರ್ತಾನೆ?''

''ಯಾವಾಗ ಬರ್ತಾನೆ?''

''ನಾಳೆ ಬೆಳಿಗ್ಗೆ''

ಗಜಲಕ್ಷ್ಮಿ ಕೋಪದಿಂದ ''ಅಷ್ಟರೊಳಗೆ ಇದನ್ನು ನಾನು ಪೋಲೀಸರಿಗೆ ತಲುಪಿಸಿರುತ್ತೇನೆ''

ಸುನಂದ ಹೌ ಹಾರುತ್ತಾ ''ಅರೆ...ಅರೆ...ನೀವು...ನೀವು ಏನು ಹೇಳ್ತಾ ಇದ್ದೀರ?''

''ಅದರಲ್ಲಿ ಬ್ರೌನ್‌ಶುಗರ್ ಇದೆ ಅಂತ''

ಭಯದಿಂದ ತತ್ತರಿಸಿದಳು. ಅವಳು ಹೆದರುತ್ತಲೇ

''ಅದು...ಅದು...ಅದು...''

ಗಜಲಕ್ಷ್ಮಿ ಕೋಪದಿಂದ ''ನನ್ನ ಗಂಡ ಒಬ್ಬ ಪೋಲೀಸ್ ಆಫೀಸರ್ ಅಂತ ಗೊತ್ತಿದೆ ತಾನೆ?''

''ಸಾರಿ...ಸಾರಿ ಪ್ಲೀಸ್''

ಗಜಲಕ್ಷ್ಮಿ ''ನನ್ನ ಹತ್ತಿರ ಮಾತಾಡಬೇಡಿ ನನ್ನ ಗಂಡನನ್ನು ಈಗಲೇ ಕರೆಸಿಕೊಳ್ಳುತ್ತೇನೆ''

ಫೋನ್ ಡಿಸ್ ಕನೆಕ್ಟ್ ಆಗಿತ್ತು! ಗಜಲಕ್ಷ್ಮಿ ಬೆಂಗಳೂರಿನಲ್ಲಿರುವ ತನ್ನ ಮನೆಗೆ ಹಲವಾರು ಸಲ ಫೋನ್ ಮಾಡಿದಳು. ಲೈನ್ ಸಿಗಲೇ ಇಲ್ಲ! ಬೆಳಿಗ್ಗೆ ಫೋನ್ ಮಾಡಿ ಗಂಡನನ್ನು ಕರೆಸಿಕೊಂಡರಾಯಿತು ಎಂದು ಸೂಟ್‌ಕೇಸ್ ಅನ್ನು ಕ್ಲೋಸ್ ಮಾಡಿ ಮಂಚದ ಅಡಿ ಇರಿಸಿದಳು. ಗಜಲಕ್ಷ್ಮಿ ಈ ವಿಚಾರವನ್ನು ಯಾರಿಗೂ ಸಹ ಹೇಳಲೇ ಇಲ್ಲ!

★★★

ಬೆಂಗಳೂರಿನಲ್ಲಿ! ಸುನಂದ ಭಯ, ಗಾಬರಿಯಿಂದ ಚಡಪಡಿಸುತ್ತಿದ್ದಾಳೆ. ರಹಸ್ಯ...ರಹಸ್ಯ ಬಯಲಾಗಿತ್ತು! ಸೂಟ್‌ಕೇಸ್‌ನಲ್ಲಿ ನಾಲ್ಕು ಲಕ್ಷ ರೂಪಾಯಿಯ ಬ್ರೌನ್‌ಶುಗರ್ ಇತ್ತು. ಅದೇನಾದರೂ ಪೋಲೀಸರ ಕೈಗೆ ಸಿಕ್ಕಿದರೆ ದೇವರೇ ಗತಿ!

ಉಸ್ತಾದನಿಗಾಗಿ ಪ್ರಯತ್ನಿಸಿದಳು! ಇಲ್ಲ...ಸಿಗಲಿಲ್ಲ. ಕಂಠಪೂರ್ತಿ ಕುಡಿದುಯಾವಳ ಜೊತೆ ಮಲಗಿದ್ದನೋ ಏನೋ? ಚಡಪಡಿಕೆ ಜಾಸ್ತಿಯಾಗಿದೆ! ತುಂಬಾ ಹೊತ್ತು ಆಲೋಚಿಸಿದ ನಂತರ ಅವಳಿಗೆ ಈ ತೀರ್ಮಾನ ಸರಿ ಎನಿಸಿತು!

ಗಜಲಕ್ಷ್ಮಿಯ ಊರಿಗೆ ಹೋಗಬೇಕು. ಅಲ್ಲಿ ಅವಳನ್ನು ಈ ರಾತ್ರಿಯೇ ಮುಗಿಸಬೇಕು! ಇದರಿಂದ ರಹಸ್ಯ ಉಳಿಯುತ್ತದೆ. ಅಲ್ಲದೆ ಬ್ರೌನ್‌ಶುಗರ್ ಸಹ ನಮಗೆ ಸಿಗುತ್ತದೆ. ಸುನಂದ ಬೇಗ, ಬೇಗ ರೆಡಿಯಾಗಿ ಬಾಡಿಗೆಯ ಟ್ಯಾಕ್ಸಿಯನ್ನು ಮಾಡಿಕೊಂಡು ಹೊರಟಳು. ಆಗ ರಾತ್ರಿ ಒಂಭತ್ತು ಗಂಟೆ!

★★★

ಡೋರ್ ತಲರೆದುಕೊಂಡಿತು! ಒಳಗೆ ಪ್ರವೇಶಿಸಿದ್ದ ಮಮತ ''ಅಕ್ಕ...ಊಟಕ್ಕೆ ಬರುತ್ತೀಯ ಅಪ್ಪ ಅಮ್ಮ ಕಾದಿದ್ದಾರೆ ಬರ್ತೀಯ?''

ಗಜಲಕ್ಷ್ಮಿ ಕೋಪದಿಂದ ''ಇಲ್ಲ...ನನಗೆ ಊಟ ಬೇಡ. ಬೇಕು ಅನಿಸಿದರೆ ನಾನೇ ಬರ್ತೀನಿ''

ಮಮತ ಪೆಚ್ಚಾದಳು ನಂತರ ಮೆಲ್ಲಗೆ ''ಅಪ್ಪ... ಯಕ್ಷಗಾನ ನೋಡಲು ಹೋಗುತ್ತಾರೆ. ಅವರು ಪುನಹ ಬರೋದು ಬೆಳಿಗ್ಗೆ ಏಳು ಗಂಟೆಗೆ''

ಗಜಲಕ್ಷ್ಮಿ ಸಿಡುಕುತ್ತಾ ''ಅದಕ್ಕೆ ನಾನೇನು ಮಾಡಲಿ? ನೀನು ಸಹ ಬೇಕಿದ್ದರೆ ಹೋಗು ನಾನೊಬ್ಬಳೇ ಇರುತ್ತೇನೆ''

ಮಮತ ಕೋಪದಿಂದ ''ಅದ್ಯಾಕೆ ಮಾತು, ಮಾತಿಗೂ ಸಹ ರೇಗುತ್ತೀಯಲ್ಲ. ಸತ್ತಿರೋ ನಿನ್ನ ಅಮ್ಮ ಉಳಿಸಿರೋ ಆಸ್ತಿಯಿಂದ ನಿನಗೆ ಅಹಂಕಾರ ಬಂದಿದೆ'' ಎಂದು ರಪ್ಪನೆ ಬಾಗಿಲನ್ನು ಹಾಕಿಕೊಂಡು ಹೋದಳು.

ಕೋಪದಿಂದ ಮುಷ್ಠಿ ಬಿಗಿದು ಗುದ್ದಿದಳು ಗಜಲಕ್ಷ್ಮಿ! ಆ ಮನೆಯಲ್ಲಿ ಅವಳನ್ನು ಹೆತ್ತಿದ್ದ ತಾಯಿ ಈಗ ಇರಲಿಲ್ಲ. ಅವಳ ತಂದೆ ಇದ್ದರು.

ಮಮತಳ ತಾಯಿ ಅಂದರೆ ಗಜಲಕ್ಷ್ಮಿಯ ಚಿಕ್ಕಮ್ಮ ಇದ್ದರು! ಪಾಪ...ಆಕೆ ಯಾವತ್ತೂ ಸಹ ಮಲತಾಯಿ ಕಾಟ ನೀಡಿರಲಿಲ್ಲ!

ತಂಗಿಯ ಮೇಲೆ ಕೋಪ ಉಕ್ಕೇರಿ ಬರುತ್ತಿದೆ. ಅವಳಿಗೆ ಆಸ್ತಿಯ ನೆನಪಾಯಿತು! ತಾಯಿಯ ತವರಿನವರ ಆಸ್ತಿ! ಮಮತಳಿಗೆ ಸೌಂದರ್ಯವು ಇದೆ! ಆದರೆ ಶ್ರೀಮಂತಿಕೆ ಬರಲು ಸಾಧ್ಯವೇ ಇಲ್ಲ! ಈಗ ಸತ್ತಿರುವ ತಾಯಿ ಮತ್ತು ತನ್ನ ತಾತನ ಮೇಲೂ ಸಹ ಕೋಪ ಬರುತ್ತಿದೆ ತಾನು ಸತ್ತರೆ ಆಸ್ತಿಯೆಲ್ಲಾ ಮಲತಾಯಿಯ ಮಗಳಿಗೆ ಹೋಗುತ್ತದೆ!

ಅಂದರೆ ಮಮತಳಿಗೆ ಬರುತ್ತದೆ! ಕರ್ಮ...ಕರ್ಮ...ಇದ್ಯಾಕೆ ಈ ರೀತಿ ವಿಲ್ ಮಾಡಿದರು ಅಮ್ಮ ಮತ್ತು ತಾತ! ಛೇ!...ಛೇ...! ಮದುವೆಯಾಗಿ ಒಂದು ವರ್ಷ ಆಗುವ ತನಕ ನನಗೆ ಆಸ್ತಿಯ ಮೇಲೆ ಹಕ್ಕು ಇಲ್ಲವಂತೆ! ಅದ್ಯಾಕೆ ಈ ನಿಬಂಧನೆ! ನಾನು ಗಂಡನನ್ನು ಬಿಟ್ಟು ಓಡಿಹೋಗುತ್ತೇನೆ ಅಂತ ಅವರಿಗೆ ಏನಾದರೂ ಸಂದೇಹ ಬಂದು ಹೀಗೆ ಮಾಡಿದರೆ?

ಮದುವೆಯಾಗಿ ಒಂದು ವರ್ಷ ತುಂಬಲು ಇನ್ನು ಹದಿನೈಧು ದಿನ ಮಾತ್ರ ಇದೆ!

ನಂತರ ಆಸ್ತಿ ನನಗೆ ಬರುತ್ತೆ! ಅದರಲ್ಲಿ ಒಂದು ರೂಪಾಯಿ ಸಹ ಮಮತಳಿಗೆ ಕೊಡುವುದಿಲ್ಲ! ಆಸ್ತಿ ನನ್ನದು...ನಾನು ಏನು ಬೇಕಾದರೂ ಸಹ ಮಾಡುತ್ತೇನೆ!

ಹಲ್ಲು ಕಡಿಯುತ್ತಿದ್ದಾಳೆ ಮಮತ! ಡೋರ್ ತೆರೆದುಕೊಂಡಿತು. ಪುನಹ ಮಮತ ಬಂದಿರಬೇಕೆಂದು ಕೋಪದಿಂದ ನೋಡಿದಳು ಗಜಲಕ್ಷ್ಮಿ!

ಕೆಲಸದ ಹೆಂಗಸು ರತ್ನಮ್ಮ!

ಆಕೆ ''ಅಮ್ಮಾ...ನಾನು ಸಹ ಯಕ್ಷಗಾನ ನೋಡಲು ಹೋಗಿ ಬರುತ್ತೇನೆ. ಗಸಗಸೆ ಪಾಯಸ ಮಾಡಿದ್ದೇನೆ. ಒಂದು ಗ್ಲಾಸಾದರೂ ಕುಡಿದು ಮಲಗಿಕೊಳ್ಳಿ''

''ಸರಿ ಸರಿ ನೀನು ಹೋಗು...''

ಹತ್ತು ನಿಮಿಷಗಳ ನಂತರ! ಊಟ ಬೇಕು ಅನಿಸಲಿಲ್ಲ. ಆದರೆ ಅವಳಿಗೆ ಗಸಗಸೆಪಾಯಸ ಅಂದರೆ ತುಂಬಾ ಇಷ್ಟ ಹಾಗಾಗಿ ಅವಳು ಎದ್ದು ಬಂದಳು. ಅಡುಗೆಯ ರೂಮಿಗೆ ಬಂದಳು!

ಕಾಲಿಗೆ ಅದೇನೋ ಮೆತ್ತಿಕೊಂಡಿತು. ಅದು...ಅದು ಕಲಸರು! ಯಾರೋ ಕೆಸರನ್ನು ತುಳಿದುಕೊಂಡೇ ಅಡುಗೆ ಮನೆಗೆ ಬಂದಿದ್ದಾರೆ ಎಂದು ಬೈದುಕೊಂಡು ಪಾತ್ರೆಯಲ್ಲಿದ್ದ ಪಾಯಸ ಬಗ್ಗಿಸಿಕೊಂಡು ತುಂಬಾ ರುಚಿಯಾಗಿ ಇದ್ದುದ್ದರಿಂದ ಎರಡು ಲೋಟ ಪಾಯಯಸವನ್ನುಕುಡಿದು ತನ್ನ ರೂಮಿಗೆ ಬಂದಳು. ಬರುವಾಗ ಹಾಲ್‌ನಲ್ಲಿ ಕುಳಿತು ಟಿ.ವಿ. ಸಿನಿಮಾ ನೋಡುತ್ತಿದ್ದ ತಂಗಿಯನ್ನು ಕಂಡು ಮುಖ ಸಿಂಡರಿಸಿಕೊಂಡು ತನ್ನ ರೂಮಿಗೆ ಬಂದು ಮಲಗಿದಳು. ಮಮತ ಹುಬ್ಬು ಗಂಟಿಕ್ಕಿದಳು! ಫೋನ್ ರಿಂಗ್ ಆಯಿತು.

ಮಮತ ರಿಸೀವರ್ ಎತ್ತಿದಳು.

ಅತ್ತ ಕಡೆಯಿಂದ ''ಅಬ್ಬ...ನೀನು ಫೋನ್ ಅಟೆಂಡ್ ಮಾಡಿದ್ದು ನನಗೆ ತುಂಬಾ ಒಳ್ಳೆಯದಾಯಿತು''

ಮಮತ ಆಶ್ಚರ್ಯದಿಂದ ''ಭಾವ...ನೀವಾ...! ಎಲ್ಲಿಂದ ಫೋನ್ ಮಾಡ್ತಾ ಇದ್ದೀರ?''

''ಇದೇ ಊರಿನಿಂದ''

''ಅರೆ...ಈ ಊರಿನಿಂದ ಯಾಕೆ ಫೋನ್ ಮಾಡಬೇಕು? ಹೊತ್ತಾಗಿದೆ ಮನೆಗೆ ಬರಬಾರದೆ?''

''ಬರ್ತೀನಿ ನಿನ್ನ ಅಕ್ಕ ಇದ್ದಾಳ?''

''ಇದ್ದಾಳೆ. ಅವಳನ್ನು ಕರೆಯುತ್ತೇನೆ''

''ಬೇಡ...ಬೇಡ''

''ಯಾಕೆ ಭಾವ?''

''ಹೇಳುತ್ತೇನೆ ಅದು ಸರಿ ಮನೊಯಲ್ಲಿ ಯಾರಿದ್ದಾರೆ?''

''ಯಾರೂ ಸಹ ಇಲ್ಲ''

''ಎಲ್ಲಿಗೆ ಹೋಗಿದ್ದಾರೆ?''

''ಯಕ್ಷಗಾನ ನೋಡಲು''

ಲಂಬೋದರ ''ಮಮತ...ನನಗೊಂದು ಸಹಾಯ ಮಾಡುತ್ತೀಯ?'' ಎಂದು ಕೇಳಿದನು.

''ಅದೇನು ಅಂತ ಕೇಳಿ ಭಾವ''

''ನೀನು ಈಗಲೇ ದೇವಸ್ಥಾನದ ಹತ್ತಿರ ಬಾ''

''ಯಾಕೆ?''

ಲಂಬೋದರ ನಗುತ್ತಾ ''ನಿನ್ನ ಪ್ರಿಯತಮ ನರೇಂದ್ರನನ್ನು ಕರೆದುಕೊಂಡು ಬಂದಿದ್ದೇನೆ''

ಮಮತ ಸಂತೋಷ ಉತ್ಸಾಹದಿಂದ ''ಭಾವ...ಭಾವ ನಿಜವಾಗಿಯೂ ನರೇಂದ್ರ ಬಂದಿದ್ದಾನಾ! ಎಲ್ಲಿದ್ದಾನೆ?''

''ನನ್ನ ಜೊತೆ ಇದ್ದಾನೆ''

''ಅದೇ ಎಲ್ಲಿ ಅಂತ?''

''ದೇವಸ್ಥಾನದ ಹತ್ತಿರ ಬೇಗ ಬಾ''

''ಈಗಲೇ ಬಂದು ಬಿಡುತ್ತೇನೆ''

''ನಿನ್ನ ಅಕ್ಕನಿಗೆ ಹೇಳಬೇಡ''

''ಇದನ್ನೆಲ್ಲಾ ಹೇಳುತ್ತೇನಾ?'' ಎಂದು ಫೋನ್ ಡಿಸ್‌ಕನೆಕ್ಟ್ ಮಾಡಿ ಸಂತೋಷ ಸಡಗರದಿಂದ ಮುಂಬಾಗಿಲನ್ನು ಹಾಕಿಕೊಂಡು ಹೊರಬಂದಳು.

★★★

ಮಮತ ಅತ್ತ ಕಡೆ ಹೋದ ಸ್ವಲ್ಪ ಹೊತ್ತಿನ ನಂತರ ಸುನಂದ ಬಂದಳು.

ಆ ಗ್ರಾಮದ ಜನಗಳೆಲ್ಲಾ ಯಕ್ಷಗಾನ ನೋಡಲು ಹೋಗಿದ್ದರಿಂದ ಮನೆಗಳಲ್ಲಿ ದೀಪ ಉರಿಯುತ್ತಿರಲಿಲ್ಲ!

ಸುನಂದ ಗಜಲಕ್ಷ್ಮಿಯ ಜೊತೆ ಸ್ನೇಹದಿಂದ ಮಾತಾಡುವಾಗ ಅವಳ ತವರು ಮನೆಯ ಬಗ್ಗೆ ಎಲ್ಲಾ ಕೋಳಿ ತಿಳಿದುಕೊಂಡಿದ್ದಳು. ಈಗ ಅದು ಉಪಯೋಗಕ್ಕೆ ಬಂದಿದೆ! ಬೈನಾಕ್ಯುಲರ್ ಮೂಲಕ ನೋಡಿದಳು. ಮನೆಯಲ್ಲಿ ಯಾರೂ ಸಹ ಇದ್ದಂತೆ ಕಂಡು ಬರಲಿಲ್ಲ!

ಹೆದರುತ್ತಲೇ ಒಳಗೆ ಪ್ರವೇಶಿಸಿದಳು!

★★★

ಆ ಊರಿನಲ್ಲಿ ಇದ್ದದ್ದೇ ಒಂದು ದೇವಸ್ಥಾನ. ಮಮತ ಟಾರ್ಚ್ ಬೆಳಗಿಸುತ್ತಾ ಅಲ್ಲಿಗೆ ಬಂದಳು! ದೇವಸ್ಥಾನದ ಕಟ್ಟೆಯ ಮೇಲೆ ತಲೆಗೆ ಮಂಕಿ ಕ್ಯಾಪ್ ಧರಿಸಿ, ಮಫ್ಲರ್ ಸುತ್ತಿದ್ದ ವ್ಯಕ್ತಿಯನ್ನು ಕಂಡು ಅವಳಿಗೆ ಗುರುತಿಸಲು

ಆಗಲಿಲ್ಲ! ಲಂಬೋದರ ನಗುತ್ತಲೇ ತನ್ನ ಮುಖದ ಮುಸುಕು ವೇಷ ತೆರೆದನು.

ಡೊಳ್ಳು ಹೊಟ್ಟೆಯ ಲಂಬೊದರ!

ಮಮತ ಎಲ್ಲಾ ಕಡೆ ಸರಸರನೆ ನೋಡುತ್ತಾ ''ಭಾವ...ನರೇಂದ್ರ ಎಲ್ಲಿ?''

''ಈಗ ಬರುತ್ತಾನೆ''

''ಜೊತೆಯಲ್ಲೇ ಇದ್ದಾನೆ ಅಂದ್ರಿ'' ಎಂದು ಭಯ, ಅನುಮಾನದಿಂದ ನೋಡಿದಳು.

ಲಂಬೋದರ ''ಮಮತ. ಈ ಬ್ಯಾಗನ್ನು ತೆಗೆದುಕೊಂಡು ನೀನು ನಿನ್ನ ಮನೆಗೆ ಹೋಗಿರು. ನಾನು ಇಲ್ಲಿಯೆ ಇದ್ದು ನರೇಂದ್ರನನ್ನು ಕರೆದುಕೊಂಡು ಬರುತ್ತೇನೆ'' ಎಂದು ಕಪ್ಪು ಬಣ್ಣದ ಬ್ಯಾಗನ್ನು ನೀಡಿದನು. ಅದರ ತುದಿಯನ್ನು ದಾರದಿಂದ ಕಟ್ಟಲಾಗಿತ್ತು!

ಅವಳಿಗೆ ಪ್ರಿಯತಮನ ಚಿಂತೆ!

''ನೀವು ಆಡುತ್ತಿರುವ ಮಾತಿನಲ್ಲಿ ನನಗೆ ನಂಬಿಕೆಯೆ ಬರುತ್ತಿಲ್ಲ. ನರೇಂದ್ರ ಜೊತೆಯಲ್ಲೇ ಬಂದಿದ್ದಾನೆ ಅಂತ ಆಗ ಅಂದ್ರಿ. ಈಗ ಇನ್ನೇನೋ ಸುಳ್ಳು ಹೇಳ್ತಾ ಇದ್ದೀರ. ಇದೆಲ್ಲಾ ಏನು ಅಂತ ಹೇಳಿ''

ಲಂಬೋದರ ಗಂಭೀರವಾಗಿ ''ಎಲ್ಲಾ ನಿನಗೋಸ್ಕರ ಮಾಡ್ತಾ ಇರೋದು. ನೀನು ಹೋಗಿರು. ನರೇಂದ್ರ ಬಂದ ಕೂಡಲೇ ಕರೆದುಕೊಂಡು ಬರುತ್ತೇನೆ''

''ಏನೋ ನನಗೆ ನಂಬಿಕೆ ಬರುತ್ತಿಲ್ಲ''

ಲಂಬೋದರ ನಗುತ್ತಾ ''ನರೇಂದ್ರ ಬಂದ ಮೇಲೆ ನಂಬಿಕೆ ತಾನಾಗಿಯೇ ಬರುತ್ತೆ. ಈಗ ಹೋಗು'' ಎಂದ ಬ್ಯಾಗನ್ನು ಅವಳ ಕೈಗೆ ನೀಡಿದನು.

''ಇದರಲ್ಲಿ ಏನಿದೆ?''

''ನಿನ್ನ ಅಕ್ಕನಿಗೆ ಗಿಫ್ಟ್!''

''ಅದನ್ನು ಈ ರೀತಿ ಬ್ಯಾಗಿನಲ್ಲಿ ಕೊಡುತ್ತಾರ?''

''ಇದು ಸ್ಪೆಷಲ್ ಗಿಫ್ಟ್!''

ಮಮತ ''ಇದನ್ನು ನೀವೇ ಕೊಡದೆ ನನ್ನ ಮೂಲಕ ಯಾಕೆ ಕೊಡಿಸುತ್ತಿದ್ದೀರ?''

''ಎಲ್ಲಾ ನಿನಗೋಸ್ಕರ ಅಂದೆನಲ್ಲ!''

''ಇವತ್ಯಾಕೋ ನಿಮ್ಮ ಮಾತುಗಳು ತುಂಬಾ ವಿಚಿತ್ರವಾಗಿದೆ. ನಂಗೆ ನಿದ್ರೆ ಬರ್‍ತಾ ಇದೆ. ಬರ್‍ತೀನಿ''

''ಸ್ವಲ್ಪ ನಿಂತ್ಕೊ ಮಮತ!''

ಮಮತ ಹಿಂದೆ ತಿರುಗಿ ನೋಡಿದಳು.

''ಇದನ್ನು ನಿನ್ನ ಅಕ್ಕನ ರೂಮಿಗೆ ತೆಗೆದುಕೊಂಡು ಹೋದ ನಂತರವೇ ಓಪನ್ ಮಾಡಬೇಕು!''

ಮಮತ ಕಣ್ಣರಳಿಸಿ ನೋಡಿದಳು.

ಲಂಬೋದರ ''ಈ ಬ್ಯಾಗನ್ನು ನಿನ್ನ ಅಕ್ಕನ ಎದೆಯ ಮೇಲೆ ಇಡು. ನೀನು ಎರಡು ಅಡಿ ದೂರ ನಿಂತುಕೊಂಡು ಗಂಟನ್ನು ಎಳೆಯಬೇಕು. ದಾರ ತುಂಬಾ ಉದ್ದ ಇದೆ. ನೀನು ದೂರದಲ್ಲಿ ನಿಂತುಕೊಂಡು ಗಂಟನ್ನು ಎಳೆದರೂ ಸಹ ಸಡಿಲವಾಗುತ್ತೆ''

ಮಮತ ಭಯ, ಸಂದೇಹದಿಂದ ''ಇದೆಲ್ಲಾ ಏನು? ಇದರಲ್ಲಿ ಏನಿದೆ?''

''ಶ್ಯಾಶ್ಚರ್ಯಕರ ಪುಷ್ಪವೃಷ್ಟಿಯಾಗುತ್ತೆ. ನಿನ್ನ ಅಕ್ಕನನ್ನು ಸಂತಿಷ ಪಡಿಸಲು ತಂದಿದ್ದೇನೆ''

''ನಿದ್ದೆಗೆ ತೊಂದರೆಯಾದರೆ ಅಕ್ಕ ಬೈಯುತ್ತಾಳೆ'' ಲಂಬೋದರ ನಗುತ್ತಾ.

''ಗಂಟನ್ನು ಎಳೆದ ಕೂಡಲೇ ನೀನು ರೂಮಿನಿಂದ ಹೊರಗೆ ಬಂದು ಬಿಡು''

ಮಮತ ಹೆದರುತ್ತಲೇ ತಲೆಯಾಡಿಸಿದಳು! ಆಗ ಲಂಬೋದರ ''ಹೆದರಬೇಡ...ಇನ್ನು ಅರ್ಧ ಗಂಟೆಯೊಳಗೆ ನಿನ್ನ ಪ್ರಿಯತಮನನ್ನು ಕಡೆ ತರುತ್ತೇನೆ

ವ ತ ಬ್ರ್ಯಾಗನ್ನು ಹಿಡಿದುಕೊಂಡು ಅಲ್ಲಿಂದ ಬಿರು ಬಿರನೆ ನಡೆಯಲಾರಂಭಿಸಿದಳು.

9

ಸುನಂದ ಆ ಮನೆಯಿಂದ ಹೊರಬಂದಳು. ಈಗ ಅವಳ ಕೈಯಲ್ಲಿ ಸೂಟ್‌ಕೇಸ್ ಇದೆ! ಅದು ಬ್ರೌನ್‌ಶುಗರ್ ಸೂಟ್‌ಕೇಸ್!

ಸುನಂದ ಗಡಗಡನೆ ನಡುಗುತ್ತಿದ್ದಾಳೆ! ಅವಳ ಮುಖ ಬಿಳುಚಿಕೊಂಡಿದೆ! ಆ ಮನೆಯಲ್ಲಿ ಯಾರೂ ಸಹ ಇರಲಿಲ್ಲ. ಎಲ್ಲರೂ ಯಕ್ಷಗಾನ ನೋಡಲು ಹೋಗಿದ್ದರು!

ಸುನಂದ

ಕೆಲಸ ಮುಗಿದಿತ್ತು. ಅವಳು ತನ್ನ ಬ್ರೌನ್‌ಶುಗರ್ ಸೂಟ್‌ಕೇಸ್ ತೆಗೆದುಕೊಂಡಿದ್ದಳು. ಆದರೂ ಸಹ ಭಯದಿಂದ ನಡುಗುತ್ತಿದ್ದಳು

★★★

ಮಮತ ಮನೆಗೆ ಬಂದಳು. ಹಾಲ್‌ನಲ್ಲಿ ದೀಪ ಉರಿಯುತ್ತಿದೆ. ಬ್ಯಾಗನ್ನು ಹಿಡಿದುಕೊಂಡು ತನ್ನ ಅಕ್ಕನ ರೂಮಿಗೆ ಬಂದಳು. ಬಾಗಿಲು ತೆರೆದಿದೆ. ದೀಪ ಉರಿಯಯತ್ತಿದೆ!

ಗಜಲಕ್ಷ್ಮಿ ಅಂಗಾತನೆ ಮಲಗಿದ್ದಾಳೆ. ಕೈ - ಕಾಲುಗಳು ಅತ್ತಿತ್ತ ಚಾಚಿಕೊಂಡಿದೆ. ಯಾವ ಚಿಂತೆಯೂ ಇಲ್ಲದ ಅವಳಿಗೆ ಬಹುಬೇಗ ಗಾಢವಾದ ನಿದ್ದೆ ಬಂದು ಬಿಡುತ್ತದೆ. ಮಂಚದ ಹತ್ತಿರ ಬಂದಳು! ಅಕ್ಕನಿಗೆ ಎಚ್ಚರವಾಗಿ ತನ್ನನ್ನು ಇಲ್ಲಿ ಕಂಡರೆ ಬಾಯಿಗೆ ಬಂದಂತ ಎ ಬಯ್ಯುತ್ತಾಳೆ ಎಂದು ಗೊತ್ತಿದೆ. ಮಮತ ಬೆಚ್ಚಿಬಿದ್ದಳು. ಯಾಕೆ ಅಂದರೆ ಅವಳ ಕೈಯಲ್ಲಿದ್ದ ಬ್ಯಾಗಿನಲ್ಲಿ ಅದೇನೋ ಹೊರಳಿದಂತೆ ಭಾಸವಾಯಿತು. ಭಯ...ಸಂದೇಹ! ಬ್ಯಾಗನ್ನು ಮೆಲ್ಲಗೆ ಅಕ್ಕನ ತೊಡೆಗಳ ಮೇಲೆ ಇರಿಸಿ ಅದರ ದಾರದ ಉಂಡೆಯನ್ನು ಸಡಿಲಿಸುತ್ತಾ ತುಸುದೂರ ಬಂದಳು!

ದಾರದ ಗಂಟನ್ನು ಎಳೆದಳು! ಬ್ಯಾಗಿನಿಂದ ಹೂವಿನ ರಾಶಿ ಚೆಲ್ಲುತ್ತದೆ. ಅಕ್ಕನಿಗೆ ನಿದ್ರಾ ಭಂಗವಾದರೆ ಬೈಯುತ್ತಾಳೆ ಎಂದು ಸರ್ರನೆ ರೂಮಿನಿಂದ ಹೊರಗೆ ಬಂದಳು.

ಸೆಕೆಂಡುಗಳು ಉರುಳುತ್ತಿತ್ತು! ನಿಶ್ಯಬ್ದತೆ...ನೀರವತೆ!

ಅವಳಿಗೆ ಅದೇನೋ ಅನುಮಾನ ಬಂದು ಬಾಗಿಲಿನ ಸಂದಿಯಿಂದ ನೋಡಿದಳು.

ಅವಳಿಗೆ ಅರಿವಿಲ್ಲದಂತೆ ಕಿಟಾರನೆ ಕಿರುಚಿಕೊಂಡಿದ್ದಳು. ''ಹಾವು...ಹಾವು...!!''

ಅವಳೆದೆಯ ಮೇಲೆ ಹಾವು! ಹೆಡೆಯಾಡಿಸುತ್ತಾ ಇವಳ ಕಿರುಚಿವಿಕೆಯಿಂದ ಅಪ್ಪಳಿಸಿತ್ತು ಗಜಲಕ್ಷ್ಮಿಗೆ! ಹಲ್ಲುಗಳನ್ನು ಊರಿತ್ತು! ದಡಬಡನೆ ಹೆಜ್ಜೆಗಳ ಶಬ್ಧ! ಹರಿದಾಡುತ್ತಾ ಮಂಚದಿಂದ ಇಳಿಯಿತು!

ಲಂಬೋದರನ ದೊಣ್ಣೆ ಪ್ರಹಾರ! ಅದರ ತಲೆ ಸಿಡಿಯಿತು! ಅದು ಸತ್ತಿದೆ ಅಂತ ಖಾತರಿಯಾಗುವ ತನಕ ಚೆನ್ನಾಗಿ ಹೊಡೆದನು ನಂತರ ಏನು ಮಾಡಿದ ಗೊತ್ತೆ?

ಕರ್ಚೀಫ್‌ನಿಂದ ದೊಣ್ಣೆಯ ಮೇಲೆ ಇದ್ದ ಬೆರಳು ಗುರುತನ್ನು

ಒರೆಸಿದನು. ಮಮತ ಭಯದಿಂದ ನಡುಗುತ್ತಿದ್ದಾಳೆ. ಗಜಲಕ್ಷ್ಮಿ ಹೆಣವಾಗಿ ಬಿಟ್ಟಿದ್ದಾಳಲ! ಅಸಯನೀಯ ನಿಶ್ಯಬ್ಧತೆ! ಆ ಊರಿಗೆ ಯಕ್ಷಗಾನದ ತಂಡದವರು ಬರುತ್ತಿದ್ದುದ್ದು ತುಂಬಾ ಕಡಿಮೆ! ಹೀಗಾಗಿ ಆ ಊರಿನ ಜನಗಳೆಲ್ಲಾ ಸಂತೇ ಮಾಳದ ಹತ್ತಿರ ಇದ್ದ ಸ್ಟೇಜಿನ ಹತ್ತಿರ ಸೇರಿದ್ದರು.

ಯಕ್ಷಗಾನ ನಡೆಯುತ್ತಿದೆ. ಈ ಮನೆಯಲ್ಲಿ ಈಗ ಮೂವರು ಮಾತ್ರ ಇದ್ದಾರೆ. ಅವರಲ್ಲಿ ಒಬ್ಬಳು ಬದುಕಿಲ್ಲ! ಲಂಬೋದರ ಬುಸು ಬುಸು ಅಂತ ಏದುಸಿರು ಬಿಡುತ್ತಿದ್ದಾನೆ. ಮುಖ, ಕತ್ತು ಮತ್ತು ಬೋಳು ತಲೆಯಲ್ಲಿ ಬೆವರಿನ ಹನಿಗಳು ಜಿನುಗುತ್ತಿದೆ!

ಅವನೇನು ಕಡಿಮೆ ಕಷ್ಟಪಟ್ಟಿರುವನೆ? ಅಬ್ಬಬ್ಬ...ಓಡಿ ಬಂದಿದ್ದಾನೆ! ಹಾವನ್ನು ಕೊಂದಿದ್ದಾನೆ! ಈಗ ಬೆವರನ್ನು ಒರೆಸಿಕೊಳ್ಳುತ್ತಿದ್ದಾನೆ! ಪಾಪ...ಮಮತಳ ಸುಂದರವಾದ ಮುಖ ಈಗ ಅತಿಯಾದ ಭಯದಿಂದ ಬಿಳುಚಿಕೊಂಡಿದೆ. ಚೆಂದುಟಿಗಳು ನಡುಗುತ್ತಿದೆ! ಅವಳು ಮಂಚದ ಮೇಲೆ ಸತ್ತು ಬಿದ್ದಿರುವ ತನ್ನ ಅಕ್ಕನ ಹೆಣ ಮತ್ತು ಮಂಚದ ಹತ್ತಿರ ನೆಲದ ಮೇಲೆ ಸತ್ತು ಬಿದ್ದಿರುವ ಹಾವನ್ನು ನೋಡುತ್ತಿದ್ದಾಳೆ.

ದೇಹದಲ್ಲಿ ಚಳುಕು ಬಂದಿತು! ಅವಳು ಉಗುಳು ನುಂಗುತ್ತಾ ತನ್ನ ಭಾವನನ್ನು ಕೆಕ್ಕರಿಸಿಕೊಂಡು ನೋಡಿದಳು. ಲಂಬೋದರ ಕೂಲ್ ಆಗಿದ್ದಾನೆ! ತುಂಬಾ ಸಂತಷವಾಗಿದೆ. ಅವನಿಗೆ ಬಿಡುಗಡೆ ದೊರೆತಿದೆ! ಮಹದಾಸೆ ಈಡೇರಿದೆ! ಹೆಂಡತಿಯ ಸಾವು...! ನಾದಿನಿಯನ್ನು ಹೊಂದುವ ಬಯಕೆ!

ಮಮತ ಕೋಪದಿಂದ ಬುಸುಗುಡುತ್ತಾ ''ಥೂ...ನಿಮ್ಮನ್ನ ಭಾವ ಅಂತ ಕರೆಯೋಕ್ಕೆ ನನಗೆ ನಾಚಿಕೆಯಾಗುತ್ತೆ. ಹೀಗ್ಯಾಕೆ ಮಾಡಿದ್ರಿ?'' ಎಂದು ಹೊಡೆಯಲು ಹೋದಳು.

''ನಾನೇನು ಮಾಡಿದೆ?''

''ನನ್ನ ಅಕ್ಕನನ್ನು ಯಾಕೆ ಕೊಂದ್ರಿ?''

ಲಂಬೋದರ ಸಿಗರೇಟ್ ಅನ್ನು ಹತ್ತಿಸಿಕೊಂಡು ''ನಾನು...ನಾನು ನಿನ್ನ ಅಕ್ಕನನ್ನು ಕೊಲೆ ಮಾಡಿದ್ನ?''

ಮಮತ ಕೋಪದಿಂದ ''ನಾಟಕ ಸಾಕು. ಈ ಬಾಮಯಗಿನಲ್ಲಿ ಹಾವನ್ನು ಇರಿಸಿದ್ದು ನೀವೇತಾನೆ? ನನಗೆ ಮೊದೇ ಯಾಕೆ ಹೇಳಿಲಿಲ್ಲ''

ಲಂಬೋದರ ಹತ್ತಿರ ಬಂದು ಅವಳ ಕೆನ್ನೆಯನ್ನು ಸವರುತ್ತಾ ''ನನ್ನ ಕೆಲಸ ಆಗುತಿರಲಿಲ''

ಮಮತ ಭಯದಿಂದ ''ಅಂದರೆ ನನ್ನ ಅಕ್ಕನನ್ನು ಸಾಯಿಸಲು ಈ ವಿಷ ಸರ್ಪವನ್ನು ನನ್ನ ಕೈಯಲ್ಲಿ ಕೊಟ್ಟು ನಾಟಕ ಆಡಿದ್ರ?''

ಲಂಬೋದರ ನಗುತ್ತಾ ತಲೆಯಾಡಿಸಿದನು.

ಮಮತ ಭಯ, ಅನುಮಾನದಿಂದ ''ಹಾಗಾದರೆ...ಹಾಗಾದರೆ ನರೇಂದ್ರ ಎಲ್ಲಿ?''

ಲಂಬೋದರ ನಗಲಾರಂಭಿಸಿದನು.

ಭಯವಾಗುತ್ತಿದೆ...ಕೋಪ ಬರುತ್ತಿದೆ ಅವಳಿಗೆ! ಅವಳು ''ಹೇಳಿ...ನಿಜ ಹೇಳಿ...ನನ್ನ ನರೇಂದ್ರ ಎಲ್ಲಿ?'' ಎಂದು ಅವನ ತೋಳನ್ನು ಹಿಡಿದು ಎಳೆದಳು.

ಲಂಬೋದರ ಅವಳ ಕೈಯನ್ನು ಹಿಡಿದುಕೊಂಡು ''ನಿನ್ನರೇಂದ್ರ ಇಲ್ಯಾಕೆ ಬರುತ್ತಾನೆ? ಅವನು ಬೆಂಗಳೂರಿನಲ್ಲಿ ಹಾಯಾಗಿ ಮಲಗಿದ್ದಾನೆ''

''ನೀನ್ಯಾಕೆ ಸುಳ್ಳು ಹೇಳಿದೆ?''

ಲಂಬೊದರ ನಗುತ್ತಾ ''ನಿನ್ನನ್ನು ಮನೆಯಿಂದ ಕರೆಸಿಕೊಳ್ಳಲು ನರೇಂದ್ರನ ಹೆಸರನ್ನು ಹೇಳಿದೆ. ಇಲ್ಲದಿದ್ದರೆ ನೀನು ಬರುತ್ತಿದ್ದೆಯ?''

ಮಮತ ಕೋಪದಿಂದ ಹಲ್ಲು ಕಡಿಯುತ್ತಾ ''ನೀನು...ನೀನು ಸಾಮಾನ್ಯನಲ್ಲ. ಯಾವುದೋ ದುರುದ್ದೇಶದಿಂದ ದೊಡ್ಡ ನಾಟಕವನ್ನೇ ಆಡಿದ್ದೀಯ! ಹೇಳು...ಹೇಳು ನನ್ನ ಅಕ್ಕನನ್ನು ನೀನ್ಯಾಕೆ ಕೊಲೆ ಮಾಡಿದೆ'' ಎಂದು ಅರಚಿದಳು.

ಅವನು ''ಬೀ ಕಾಮ್...ಬೀ ಕಾಮ್ ಡಿಯರ್. ಅದು ಸರಿ...ನಿನ್ನ ಅಕ್ಕನನ್ನು ನಾನೆಲ್ಲಿ ಕೊಲೆ ಮಾಡಿದೆ?''

ಕೆಂಗಣ್ಣನ್ನು ಬೀರಿದಳು ಅವನತ್ತ!

''ಕೊಲೆ ಮಾಡಿದ್ದು ನೀನು...ನೀನು...!''

ಹೌಹಾರಿದಳು! ಅದುರಿ ಬಿದ್ದಳು ಕರೆಂಟ್ ಹೊಡೆದವರಂತೆ! ದೇಹ ತೂರಾಡಿತು!

ಲಂಬೋದರ ''ನಿನ್ನ ಅಕ್ಕನನ್ನು ನೀನೇ ಕೊಲೆ ಮಾಡಿ ಈಗ ನನ್ನ ಮೇಲೆ ಆರೋಪ ಹೋರಿಸುತ್ತಿದ್ದೀಯ ಇದನ್ನು ಯಾರೂ ಸಹ ನಂಬೊಲ್ಲ.''

ಮಮತ ಅವನತ್ತ ವಿಚಿತ್ರವಾಗಿ ನೋಡುತ್ತಾ ''ನಿಮಗೆಲ್ಲಾ ತಲೆ ಕೆಟ್ಟಿರಬೇಕು''

ಲಂಬೋದರ ನಗುತ್ತಾ ''ತಲೆ ನನಗೆ ಕೆಟ್ಟಿಲ್ಲ ಈಗ ನಾನು ಹೇಳುವುದನ್ನು ಕೇಳಿದರೆ ನಿನ್ನ ತಲೆ ಕೆಡುತ್ತದೆ ಮಮತ'' ಎಂದನು.

ಭಯವಾಗುತ್ತಿದೆ...ಅದೇನೋ ಸಂದೇಹ! ಈ ದುಷ್ಟ ಏನನ್ನೋ ಮಾಡಿದ್ದಾನೆ!

ಲಂಬೋದರ ''ಬ್ಯಾಗಿನಲ್ಲಿದ್ದ ಹಾವನ್ನು ತಂದು ನಿನ್ನ ಅಕ್ಕನ ಎದೆಯ ಮೇಲೆ ಇರಿಸಿ ಗಂಟನ್ನು ಸಡಿಲಿಸಿದವರು ಯಾರು?''

ಮಮತ ಭಯ, ಗಾಭರಿ, ಆತುರದಿಂದ '4ಆದರೆ ಅದರಲ್ಲಿ ಹಾವು ಇದೆ ಅಂತ ಗೊತ್ತಿರಲಿಲ್ಲ''

ಲಂಬೋದರ ''ಗೊತ್ತಿತ್ತೋ ಇಲ್ಲವೋ ಅನ್ನೋದು ಮುಖ್ಯ ಅಲ್ಲ. ನೀನು ಈ ಕೆಲಸ ಮಾಡಿದ್ದು ನಿಜ ತಾನೆ?''

''ಹಾವನ್ನು ಕೊಟ್ಟಿದ್ದು ನೀನೇ ತಾನೆ?''

ಲಂಬೋದರ ನಗುತ್ತಾ ''ಅದಕ್ಕೆ ಸಾಕ್ಷಿ ಎಲ್ಲದೆ?'' ನಾನು ನಿನಗೆ ಹಾವನ್ನು ಕೊಟ್ಟಿದ್ದನ್ನು ಯಾರು...ಯಾರು ನೋಡಿದ್ದಾರೆ ಮಮತ''

ಮಮತ ಧೈರ್ಯದಿಂದಲೇ ''ಅದೆ ರೀತಿ ನೀವು ನನಗೆ ಹಾವನ್ನು ಕೊಟ್ಟಿರುವುದಕ್ಕೆ ಸಾಕ್ಷಿ ಏನಿದೆ? ಇದನ್ನು ಯಾರು ನೋಡಿದ್ದಾರೆ''

ಲಂಬೋದರ ನಗಲಾರಂಭಿಸಿದನು. ಮಮತಳಿಗೆ ಭಯವಾಗುತ್ತಿದೆ.

ಲಂಬೋದರ ''ನಿನ್ನಂತಹ ಕಿಲಾಡಿ ಹೆಣ್ಣನ್ನು ನಾನು ಎಲ್ಲಾ ರೀತಿಯಿಂದಲೂ ಮೋಸಗೊಳಿಸಿದ್ದೇನೆ''

ಮಮತ ಗಾಬರಿಯಿಂದ ''ಅಂದರೆ...''

ಲಂಬೋದರ ತನ್ನ ಏರ್ ಬ್ಯಾಗಿನಲ್ಲಿದ್ದ ಕ್ಯಾಮರಾವನ್ನು ತೆಗೆದು ತೋರಿಸುತ್ತಾ ''ನೀನು ಬ್ಯಾಗನ್ನು ತೆಗೆದುಕೊಂಡು ನಿನ್ನ ಅಕ್ಕನ ರೂಮಿಗೆ ಬಂದು ಎದೆಯ ಮೇಲೆ ಇರಿಸಿ ಗಂಟನ್ನು ಸಡಿಲಿಸಿದೆ. ಹಾವು ಹೆಡೆಯಾಡಿಸುತ್ತಾ ಅಪ್ಪಳಿಸಿತು. ನೀನು ಆಗ ಇದೇ ರೂಮಿನಲ್ಲಿ ನಿಂತಿದ್ದೆ ಈ ಎಲ್ಲಾ ದೃಶ್ಯಗಳನ್ನು ನನ್ನ ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದೇನೆ ಮಮತ. ಹಾವನ್ನು ಉಪಯೋಗಿಸಿ ನೀನು ಕೊಲೆ ಮಾಡಿದ್ದೀಯ ಅನ್ನೋದಿಕ್ಕೆ ಬಲವಾದ ಸಾಕ್ಷಿ ಆಧಾರ ಇದೆ''

ಮಮತ ಗಡಗಡನೆ ನಡುಗುತ್ತಿದ್ದಾಳೆ. ಭಯ...ಭಯ ಆವರಿಸಿದೆ ಅವಳನು! ಮುಂದೆ...ಮುಂದೇನು ಗತಿ? ಅಕ್ಕನನ್ನು ಕೊಂದಿರುವ ಅಪರಾಧ ಹೇತ್ತು ನಾನು ಜೈಲಿಗೆ ಹೋಗಬೇಕಾಗುತ್ತದೆ ಅಲ್ಲಿಗೆ ನನ್ನ ಬದುಕು ಮುಗಿದಂತೆ!

ಅವಳಿಗೆ ತಡೆಯಲಾಗಲಿಲ್ಲ. ದುಃಖ, ಕೋಪದಿಂದ ಅಬ್ಬರಿಸುತ್ತಾ ''ಹೇಳಿ...ಹೇಳಿ ಈ ರೀತಿ ಯಾಕೆ ಮಾಡಿದ್ರಿ. ಈ ಮೋಸದ ಬಲೆ ಯಾಕೆ ಬಿಸೀಸಿದ್ರಿ? ನಾನೇನು ನಿಮಗೆ ಅನ್ಯಾಯ ಮಾಡಿದ್ದೆ. ನನ್ನ ಬದುಕನ್ನು ಯಾಕೆ ಹಾಳು ಮಾಡಿದ್ರಿ?''

ಲಂಬೋದರ ನಗುತ್ತಲೇ ''ನಿನ್ನ ಬದುಕು ಖಂಡಿತಾ ಹಾಳಾಗಿಲ್ಲ ಅದು ನಿನ್ನಿಂದ ಅರಳುತ್ತದೆ''

ಕೋಪದಿಂದ ದುರದುರನೆ ನೋಡಿದಳು.

ಲಂಬೋದರ ''ನನಗೆ ಮೊದಲಿನಿಂದಲೂ ನಿನ್ನ ಮೇಲೆ ಆಸೆಯಿತ್ತು. ನಿನ್ನನ್ನು ಮದುವೆ ಮಾಡಿಕೊಂಡು ನಿನ್ನ ಅಕ್ಕನ ಆಸ್ತಿಯನ್ನು ಅನುಭವಿಸುವ ಆಸೆಯಿಂದ ಈ ರೀತಿ ತಂತ್ರಹೂಡಿದೆ...''

ಮಮತ ಕೋಪ, ಅಸಹ್ಯ, ತಿರಸ್ಕಾರದಿಂದ ''ಏನಂದ್ರಿ....ಏನಂದ್ರಿ...ನಾನು...ನಾನು ನಿಮ್ಮನ್ನು ಮದುವೆ ಮಾಡಿಕೊಳ್ಳುವುದೆ? ಕನಸು ಕಾಣಬೇಡಿ. ನಾನು ನರೇಂದ್ರನನ್ನು ಅಲ್ಲದೆ...''

ಲಂಬೋದರ ಗಡುಸಾಗಿ ''ನರೇಂದ್ರ...ಇನ್ನು ಎಲ್ಲಿಯ ನರೇಂದ್ರ? ಕೊಲೆ ಆಪಾದನೆಯಿಂದ ನೀನು ಜೈಲಿಗೆ ಹೋಗಬಾರದು ಅಂತಿದ್ದರೆ ನೀನು ನಾನು ಹೇಳಿದಂತೆ ಕೇಳಲೇ ಬೇಕು''

ಮಮತ ಭಯದಿಂದ ನೋಡಿದಳು.

ಲಂಬೋದರ ''ಇದೇನಾದರೂ ಕೊಲೆ ಅಂತ ಪೋಲೀಸರಿಗೆ ಗೊತ್ತಾದರೆ. ನಾನು ತೆಗೆದಿರುವ ಫೋಟೋಗಳನ್ನು ತೋರಿಸಿದರೆ ಕೂಡಲೇ ನಿನ್ನನ್ನು ಅರೆಸ್ಟ್ ಮಾಡುತ್ತಾರೆ. ಈ ಕೊಲೆಯಿಂದ ಲಾಭ ಆಗೋದು ನಿನಗೆ!''

ಮಮತ ಬೆಚ್ಚಿ ಬಿದ್ದು ನೋಡಿದಳು.

ಲಂಬೋದರ ನಗುತ್ತಾ ''ನನ್ನ ಹೆಂಡತಿಯ ತಾಯಿ ಮತ್ತು ತಾತ ವಿಲ್ ಮಾಡುವಾಗ ಕರುಣೆ ತೋರಿಸಿ ಅದರಲ್ಲಿ ನಿನ್ನ ಹೆಸರನ್ನು ಸೇರಿಸಿದರು. ತಲೆಯಲ್ಲಿ ಸ್ವಲ್ಪ ಬುದ್ಧಿ ಇದ್ದವರು ಯಾರೇ ಆದರೂ ಸಹ ಈ ರೀತಿ ಪೆದ್ದು ಪೆದ್ದಾಗಿ ವಿಲ್ ಮಾಡುತ್ತಿರಲಿಲ್ಲ. ಅದರಿಂದ ನನಗೆ ಉಪಯೋಗವಾಯಿತು'' ಎಂದು ನಗಲಾರಂಭಿಸಿದನು.

ವಿಲ್ ಪ್ರಕಾರ ಗಜಲಕ್ಷ್ಮಿ ಮದುವೆಯಾದ ಒಂದು ವರ್ಷದ ನಂತರ ಆಸ್ತಿ ಬರುತ್ತದೆ!

ಅದಕ್ಕೆ ಮೊದಲೇ ಸತ್ತರೆ ಆಸ್ತಿಯೆಲ್ಲಾ ಮಲತಾಯಿಯ ಮಗಳು ಮಮತಳಿಗೆ ಸೇರುತ್ತದೆ! ಅಂದರೆ ಈಗ ವಿಲ್ ಪ್ರಕಾರ ಆಸ್ತಿಯೆಲ್ಲಾ ಮಮತಳಿಗೆ ಸೇರುತ್ತದೆ ಕೊಲೆ ಮಾಡಲು ಮಮತಳಿಗೆ ಕಾರಣ ಇದೆ! ಲಂಬೋದರ ಕೊಲೆ ಮಾಡಿದ್ದಾನೆ ಅಂದರೆ ಯಾರೂ ಸಹ ನಂಬುವುದಿಲ್ಲ. ಒಂದು ವರ್ಷಕ್ಕೆ

ಮೊದಲೇ ಹೆಂಡತಿ ಸತ್ತರೆ ಆಸ್ತಿ ಅವನಿಗೆ ಸಿಗುವುದಿಲ್ಲ! ಲಂಬೋದರ ನಗುತ್ತಿದ್ದಾನೆ.

ಮಮತ ಭಯದಿಂದ ನೋಡುತ್ತಿದ್ದಾಳೆ. ಅವನು ಅವಳ ಕೆನ್ನೆ ಸವರುತ್ತಾ ''ಮಮತ ನೀನು ನನ್ನನ್ನು ಮದುವೆಯಾಗುವುದರ ವಿನಹ ಬೇರೆ ದಾರಿ ಇಲ್ಲ. ಈ ಆಸ್ತಿಯನ್ನು ಅನುಭವಿಸುತ್ತಾ ಸುಖವಾಗಿರೋಣ. ನಿನ್ನನ್ನು ಮಹಾರಾಣಿಯಂತೆ ನೋಡಿಕೊಳ್ಳುತ್ತೇನೆ. ಹಾವು ಕಡಿದು ಸತ್ತಿರೋದ್ರಿಂದ ಇದು ಕೊಲೆ ಅಂತ ಯಾರಿಗೂ ಸಹ ಅನುಮಾನ ಬರುವುದಿಲ್ಲ. ನೀನು ನಾನು ಹೇಳಿದಂತೆ ಕೇಳಿದರೆ ತೆಗೆದಿರುವ ಫೋಟೋಗಳನ್ನು ಯಾರಿಗೂ ಸಹ ಕೊಡುವುದಿಲ್ಲ. ಜೈಲು ಸೇರುತ್ತೀಯೋ ಅಥವಾ ನನ್ನನ್ನು ಮದುವೆ ಮಾಡಿಕೊಂಡು ಸುಖವಾಗಿರುತ್ತೀಯೋ ಅಂತ ನೀನೇ ನಿರ್ಧರಿಸು'' ಎಂದು ಅಲ್ಲಿಂದ ಬಚ್ಚಲ ಮನೆಗೆ ಹೋದನು.

ಲಂಬೋದರನಿಗೆ ಗಂಟೆಗೊಂದು ಸಲ ಯೂರಿನ್ ಪಾಸ್ ಮಾಡದಿದ್ದರೆ ಆಗುವುದಿಲ್ಲ! ಮಮತ ಎರಡು ಕೈಗಳಿಂದ ಮುಖ ಮುಚ್ಚಿಕೊಂಡು ಅಳುತ್ತಿರುವಾಗ ಹಿಂದಿನಿಂದ ಯಾರೋ ಸದ್ದಾಗದಂತೆ ಹತ್ತಿರ ಬಂದು ಅವಳ ಭುಜದ ಮೇಲೆ ಕೈ ಇಟ್ಟರು! ಮಮತ ಬೆಚ್ಚಿ ಬಿದ್ದು ಹಿಂತಿರುಗಿದಳು. ಇಲ್ಲಿ..ಇಲ್ಲಿ ನಂಬಿಕೆಯೇ ಬರುತ್ತಿಲ್ಲ! ಸಂತೋಷ...ಪರಮಾಶ್ಚರ್ಯ!

ಸಂತೋಷ, ಉದ್ವೇಗದಿಂದ ''ನರೇಂದ್ರ...ನರೇಂದ್ರ'' ಎಂದು ಕೂಗುತ್ತಾ ಪ್ರಿಯತಮನನ್ನು ಬಿಗಿಯಾಗಿ ತಬ್ಬಿಕೊಂಡು ಅಳಲಾರಂಭಿಸಿದಳು

ನೀರು ಕುದಿಯುತ್ತಿರುವ ಶಬ್ದ! ಒಂದು ನಿಮಿಷದ ನಂತರ ಬಚ್ಚಲಿನ ಕೋಣೆಯಿಂದ ಗಡಬಿಡಿಸಿ ಓಡಿಬಂದನು ಲಂಬೋದರ! ಸ್ಟನ್ ಆಗಿ ನಿಂತನು!

''ನೀನು...ನೀನು...ನೀನು ಹೇಗೆ ಬಂದೆ?'' ಎಂದು ಗಾಬರಿಯಿಂದ ಕೇಳಿದನು

ನರೇಂದ್ರ ಕೋಪದಿಂದ ''ಅದೃಷ್ಟ ಮತ್ತು ದೈವಬಲ ನನ್ನ ಕಡೆ ಇತ್ತು. ಹಾಗಾಗಿ ನೀನು ಬಂಧಿಸಿದ್ದ ಜಾಗದಿಂದ ತಪ್ಪಿಸಿಕೊಂಡು ಬಂದೆ. ಮಮತ ಈ ನಿನ್ನ ಚಾಂಡಾಲ ಭಾವ ಏನು ಮಾಡಿದ್ದ ಗೊತ್ತೆ...'' ಎಂದು ತನ್ನ ಬಂಧನದ ಪ್ರಕರಣ ತಿಳಿಸಿದನು.

ಮಮತ ಕೋಪ, ಆವೇಶದಿಂದ ಅವನ ಮುಖಕ್ಕೆ ಕ್ಯಾಕರಿಸಿ ಉಗಿದಳು.

ಲಂಬೋದರ ಕೋಪದಿಂದ ''ಮಮತ...ನಿನ್ನ ಪಿರ್ಯತಮ ಬಂದ

ಮಾತ್ರಕ್ಕೆ ನೀನು ನನ್ನ ತಂತ್ರದ ಹಿಡಿತದಿಂದ ಪಾರಾಗಲು ಸಾಧ್ಯವಿಲ್ಲ''

ಈಗ ನರೇಂದ್ರ ನಗಲಾರಂಭಿಸಿದನು! ಲಂಬೋದರನಿಗೆ ಅನುಮಾನ ಬರುತ್ತಿದೆ!

ನರೇಂದ್ರ ''ಅಯ್ಯೋ ಮಂಕೆ...ನಿನ್ನ ತಂತ್ರಕ್ಕೆ ನಾನು ಪ್ರತಿ ತಂತ್ರ ಹೂಡಿ ಮಮತಳನ್ನು ನಿನ್ನ ಕಪಿ ಮುಷ್ಟಿಯಿಂದ ಪಾರು ಮಾಡಿದ್ದೇನೆ'' ಮಮತಳ ಮುಖ ಅರಳಿತು. ಅವಳು ತನ್ನ ಪ್ರಿಯತಮನನ್ನು ತಬ್ಬಿಕೊಂಡಳು.

ನರೇಂದ್ರ ಈಗ ತಾನು ತಂದಿದ್ದ ಕ್ಯಾಮರ ಮತ್ತು ಟೇಪ್ ರೆಕಾರ್ಡರನ್ನು ತೋರಿಸುತ್ತಾ ''ಇದರಲ್ಲಿ ಇದೆ ನಿನ್ನನ್ನು ಜೈಲಿಗೆ ಕಳಿಸುವ ಆಧಾರಗಳು''

ಭಯ, ಗಾಬರಿಯಿಂದ ನೋಡಿದನು.

''ಬಂಧನದಿಂದ ನಾನು ರಾತ್ರಿ ಏಳು ಗಂಟೆಗೆ ಬಿಡಿಸಿಕೊಂಡು ಪಾರಾಗಿ ಈ ಊರಿಗೆ ನಿನಗಿಂತ ಮೊದಲೇ ಬಂದೆ. ನನಗೆ ವಿಲ್ ಬಗ್ಗೆ ತಿಳಿದಿತ್ತು. ನೀನು ಏನಾದರೂ ದುಷ್ಟ ತಂತ್ರ ಉಪಯೋಗಿಸಬಹುದು ಅಂತ ನಾನು ಕ್ಯಾಮರ, ಟೇಪ್ ರೆಕಾರ್ಡರ್‌ನೊಂದಿಗೆ ಮರೆಯಲ್ಲಿ ನಿಂತುಕೊಂಡಿದ್ದೆ. ನೀನು ಹಾವು ಇದ್ದ ಬ್ಯಾಗನ್ನು ಮಮತಳಿಗೆ ಕೊಟ್ಟು ಅವಳಿಂದ ಕೊಲೆಮಾಡಿಸಿದೆ. ಮಮತ ನಿರಪರಾಧಿ ನೀನು ಹಾವಿನ ಬ್ಯಾಗನ್ನು ಅವಳಿಗೆ ಕೊಡುತ್ತಿರುವಾಗ ಫೋಟೋ ತೆಗೆದಿದ್ದೇನೆ. ಅಲ್ಲಿದೆ ನೀನು ಆಡಿರುವ ಪ್ರತಿಯೊಂದು ಮಾತುಗಳನ್ನೂ ಸಹ ನಾನು ರೆಕಾರ್ಡ್ ಮಾಡಿದ್ದೇನೆ''

ಮಮತಳಿಗೆ ವಿಪರೀತ ಸಂತೋಷ!

ಲಂಬೋದರನ ಮುಖ ಬಿಳುಚಿಕೊಂಡಿತು. ಬೋಳು ತಲೆಯಲ್ಲಿ ಬೆವರು ಜಿನುಗಲಾರಂಭಿಸಿತು.

ನರೇಂದ್ರ ''ನೀನು ತರ್ಲೆ ಮಾಡದೆ ಸೈಲೆಂಟ್ ಆಗಿ ಇದ್ದರೆ ಈ ಪ್ರಕರಣವನ್ನು ನಾನು ಇಲ್ಲಿಗೇ ಮರೆತು ಬಿಡುತ್ತೇನೆ. ಇಲ್ಲದಿದ್ದರೆ ನೀನೇ ನಿನ್ನ ಹೆಂಡತಿಯನ್ನು ಕೊಲೆ ಮಾಡಿದ್ದೀಯ ಅನ್ನೋದನ್ನು ನಾನು ನನ್ನ ಹತ್ತಿರ ಇರೋ ಆಧಾರಗಳಿಂದ ನಿರೂಪಿಸಬಲ್ಲೆ''

ಲಂಬೋದರ ಮಂಕು ಹಿಡಿದವನಂತೆ ನಿಂತಿದ್ದಾನೆ. ತೀವ್ರ ನಿರಾಸೆ!

ಅದರೊಂದಿಗೆ ಭಯ! ಇವನ ತಂತ್ರಕ್ಕೆ ನರೇಂದ್ರ ಸರಿಯಾದ ಪ್ರತಿ ತಂತ್ರ ಉಪಯೋಗಿಸಿದ ಬುದ್ಧಿ ಕಲಿಸಿದ್ದನು!

★★★

ಸುದ್ದಿ ಎಲ್ಲಾ ಹರಡಿತು. ಯಕ್ಷಗಾನ ನೋಡಿಕೊಂಡು ಬಂದವರಿಗೆ

ಗಜಲಕ್ಷ್ಮಿ ಹಾವು ಕಚ್ಚಿ ಸತ್ತಿದ್ದಾಳೆ ಅಂತ ಗೊತ್ತಾಯಿತು!

ಹಾವು ಅಲ್ಲೇ ಸತ್ತು ಬಿದ್ದಿತ್ತಲ್ಲ! ಶವ ಸಂಸ್ಕಾರ ಮುಗಿಯಿತು. ಹೆಂಡತಿ ಸತ್ತರೂ ಸಹ ಆಸ್ತಿ ಲಂಬೋದರನಿಗೆ ಸಿಗಲಿಲ್ಲ. ಆಸ್ತಿಯ ಆಸೆಯಿಂದ ಗಜಲಕ್ಷ್ಮಿಯ ಗಂಡ ಅವಳನ್ನು ಸಾಹಿಸಬಹುದು ಅಂತ ಈ ರೀತಿ ವಿಲ್ ಮಾಡಲಾಗಿತ್ತು.

ಆಸ್ತಿಯೆಲ್ಲಾ ಈಗ ಮಮತಳಿಗೆ ಬಂದಿದೆ! ಎರಡು ತಿಂಗಳಿನ ನಂತರ ವಿಜೃಂಭಣೆಯಿಂದ ನರೇಂದ್ರ ಮತ್ತು ಮಮತಳ ಮದುವೆ ನಡೆಯಿತು.

ಲಂಬೋದರ ಮಂಕಾಗಿದ್ದಾನೆ!

ಬಯಸಿದ್ದ ಹೆಣ್ಣೂ ಸಿಗಲಿಲ್ಲ! ಹೆಂಡತಿಯ ಆಸ್ತಿಯೂ ಸಿಗಲಿಲ್ಲ!

★★★

ಪ್ರಸ್ತದ ಕೊಠಡಿಯಲ್ಲಿ!

ನರೇಂದ್ರ - ಮಮತ ಸಂತೋಷದಿಂದ ಮೊದಲ ರಾತ್ರಿಯ ಸುಖವನ್ನು ಅನುಭವಿಸಿದರು.

ಎಲ್ಲಾ ಮುಗಿದ ನಂತರ ನರೇಂದ್ರ ಹೆಂಡತಿಯ ಬೆತ್ತಲೆ ಎದೆಯಲ್ಲಿ ಮುಖ ಇರಿಸುತ್ತಾ ''ಮಮತ...ನಿನಗೊಂದು ರಹಸ್ಯವನ್ನು ನಾನು ಹೇಳಬೇಕು''

''ರಹಸ್ಯವೆ...ಏನದು?''

''ನಿನ್ನ ಅಕ್ಕ ಸತ್ತಿದ್ದು ಹೇಗೆ?''

ಮಮತ ಕೋಪದಿಂದ ''ಈಗ್ಯಾಕೆ ಅವಳ ವಿಷಯ''

''ಕೇಳಿದ್ದಕ್ಕೆ ಉತ್ತರಿಸು''

''ಹಾವು ಕಚ್ಚಿದ್ದರಿಂದ''

ನರೇಂದ್ರ ನಗುತ್ತಾ ''ನಿನ್ನ ಅಕ್ಕನಿಗೆ ಹಾವು ಕಚ್ಚಿದಾಗ ಅವಳು ಕೂಗಿಕೊಂಡಳೆ? ನರಳಿದಳೆ? ಒದ್ದಾಡಿದಳೆ?''

ಮಮತ ನೆನಪು ಮಾಡಿಕೊಳ್ಳುತ್ತಾ ''ಇಲ್ಲ...ಇಲ್ಲ...ಅವಳು ಕೊರಡಿನಂತೆ ಬಿದ್ದಿದ್ದಳು ನನಗೆ...ನನಗೆ ಈಗ ಸಂದೇಹ ಬರುತ್ತಿದೆ''

ನರೇಂದ್ರ ''ಯಾಕೆ ಅಂದರೆ ನಿನ್ನ ಅಕ್ಕ ಹಾವು ಕಚ್ಚುವುದಕ್ಕೆ ಮೊದಲೇ ಸತ್ತಿದ್ದಳು''

ಮಮತ ಬೆಚ್ಚಿಬೀಳುತ್ತಾ ''ಏನಂದೆ...ಅಕ್ಕ ಮೊದಲೇ ಸತ್ತಿದ್ದಳೆ? ಹೇಗೆ...ಹೇಗ?''

''ಪಾಯಸದಲ್ಲಿ ಬೆರೆಸಿದ್ದ ವಿಷದಿಂದ!''

''ವಿಷಯ ಯಾರು ಬೆರೆಸಿದರು?''

''ನಾನೇ...ನಾನೇ ಮಮತ!''

ಮಮತ ಭಯದಿಂದ ನಡುಗುತ್ತಾ ''ನೀನು...ನೀನು ಈ ಕೊಲೆ ಮಾಡಿದೆಯ ಯಾಕೆ?''

ನರೇಂದ್ರ, ''ನಿನ್ನನ್ನು ಲಂಬೋದರನ ಹಿಡಿತದಿಂದ ಪಾರು ಮಾಡಲು ಅಲ್ಲಿದ್ದ ವಿಲ್ ಬಗ್ಗೆ ನನಗೆ ಗೊತ್ತಿತ್ತು. ನಿನ್ನ ಅಕ್ಕ ಸತ್ತರೆ ಆಸ್ತಿಯೆಲ್ಲಾ ನಿನಗೇ ಬರುತ್ತದೆ ಅಂತ ಗೊತ್ತಿದ್ದರಿಂದ ಈ ಕೆಲಸ ಮಾಡಿದೆ. ನಿನ್ನ ಅಕ್ಕ ಹಾವು ಕಚ್ಚಿ ಸತ್ತಿದ್ದಾಳೆ ಅಂತ ಎಲ್ಲರೂ ತಿಳಿದುಕೊಂಡಿದ್ದಾರೆ'' ಎಂದು ನಗಲಾರಂಭಿಸಿದನು.

ಮಮತ ಭಯದಿಂದ ನೋಡಿದಳು. ನಾನು ಪ್ರೀತಿಸಿ ಮದುವೆಯಾಗಿರುವ ನರೇಂದ್ರ ಮಹಾ ದುಷ್ಟ ಕ್ರೂರಿ ಎನಿಸಿತು. ನರೇಂದ್ರ ನಗುತ್ತಿದ್ದರೆ ಇವಳು ಭಯದಿಂದ ನೋಡುತ್ತಿದ್ದಳು!

# ತನಿಖೆ!?

ರಾತ್ರಿ ಹತ್ತು ಗಂಟೆಯ ಸಮಯ.

ವಿದ್ಯುತ್ ದೀಪಗಳ ಬೆಳಕು ಇದ್ದರೂ ಸಹ ರಸ್ತೆಯ ನಿರ್ಮಾಣುಷತೆ ಅವಳಿಗೆ ಭಯಉಂಟುಮಾಡಿದೆ.

ಬೇಗ ಬೇಗ ನಡೆಯುತ್ತಿದ್ದಾಳೆ.

ಗಾಳಿ 'ಬರೋ' ಎಂದು ಬೀಸುತ್ತಿದೆ.

ಈ ರಭಸಕ್ಕೆ ಅವಳ ತಲೆಯ ಕೂದಲು, ಮುಖದ ತುಂಬಾ ಹರಿಡಿಕೊಂಡಿದೆ. ಅದನ್ನು ಅವಳು ಆಗಾಗ ಕೈಯಿಂದ ತೀಡಿಕೊಳ್ಳುತ್ತಾ ನಡೆಯುತ್ತಿದ್ದಾಳೆ.

ಅವಳು ತಲೆಯೆತ್ತಿ ನೋಡಿದಳು.

ಕಡುಗಪ್ಪು ಆಕಾಶ!

ಮೋಡಗಳ ಹಿಂಡು!

'ಛೇ...ನಾನು ಈಗ ಬರಲೇಬಾರದಿತ್ತು' ಎಂದುಕೊಂಡು ಅವಳು ಗೊಣಗುತ್ತಲೇ ನಡಿಗೆಯ ವೇಗ ಹೆಚ್ಚಿಸಿದಳು.

ಚಟಪಟನೆ ತುಂತುರು ಮಳೆಯ ಹನಿಗಳು ಬೀಳಲಾರಂಭಿಸಿತು.

ಮಳೆಯ ತೀವ್ರತೆ ಜಾಸ್ತಿಯಾಯಿತು!

ಹತ್ತು ಹೆಜ್ಜೆ ಇಡುವುದರಲ್ಲಿ ಅವಳಲು ಪೂರ್ತಿಯಾಗಿ ನೆನೆದು ತೊಪ್ಪೆಯಾದಳು.

ಅನಿವಾರ್ಯ ಈಗ ಮರವೊಂದರ ಕೆಳಗೆ ನಿಲ್ಲಲೇಬೇಕಾಯಿತು.

ಹಾಲಿನ ಕೆನೆಯ ಬಣ್ಣದ ಆಕರ್ಷಕ ಮೈಕಟ್ಟಿನ ತುಂಬು ಪ್ರಾಯದ ಚೆಲುವೆ ಅವಳು!

ಅದೃಷ್ಟ ಅನ್ನುವುದು ಬಾಳಿನಲ್ಲಿ ಕೆಲವರಿಗೆ ಅನಿರೀಕ್ಷಿತ ರೀತಿಯಲ್ಲಿ ಬರುತ್ತದೆ ಅನ್ನುತ್ತಾರೆ. ಅದು ಅವಳ ಪಾಲಿಗಂತೂ ನಿಜವಾಗಿತ್ತು.

ಇವಳ್ಯಾರು? ಕುಚೇಲನ ಮಗಳು. ಕುಡುಕ ತಂದೆ, ರೋಗಿಷ್ಟೆತಾಯಿಯ ಏಕೈಕ ಸಂತಾನ ಇವಳು. ಪುಣ್ಯಕ್ಕೆ ಇವಳ ಬೆನ್ನಿನ ಹಿಂದೆ ಕಾಡಲು ತಮ್ಮ - ತಂಗಿ ತರಲಿಲ್ಲ.

ಇವಳು ಕೆಲಸಕ್ಕೆ ಸೇರಿಕೊಂಡು ನಂತರವೇ ಸಂಸಾರದಲ್ಲಿ ಎರಡು ಹೊತ್ತು ಅನ್ನ ತಿನ್ನಲು ಸಾಧ್ಯವಾಗಿತ್ತು. ಅವಳು ತನ್ನ ತಾಯಿಯ ಹೃದಯ ಚಿಕಿತ್ಸೆಯನ್ನು ಮಾಡಿಸಿದ್ದಳು. ಒಂದು ಲಕ್ಷ ಖರ್ಚಾಗಿತ್ತು.

ಕೆಲಸಕ್ಕೆ ಸೇರಿ ಮೂರು ತಿಂಗಳಲ್ಲೇ ಇವಳು ತನ್ನ ತಾಯಿಗೇ ಆಪರೇಷನ್ ಮಾಡಿಸಿದ್ದಳು ಸಂಬಳದಿಂದ ಅಲ್ಲ. ತಿಂಗಳಿಗೆ ಇವಳಿಗೆ ಬರುತ್ತಿದ್ದದ್ದೇ ಎರಡು ಸಾವಿರ. ಇನ್ನು ಪ್ರೈವೇಟ್ ಕಂಪನಿಯವರು ಇವಳಿಗೆ ಒಂದು ಲಕ್ಷ ಸ್ಯಾಲರಿ ಅಡ್ವಾನ್ಸ್ ಕೊಡಲು ಸಾಧ್ಯವೇ ಇಲ್ಲ.

ಮತ್ತೇ...ಮತ್ತೇ...ಲಕ್ಷ ಹೇಗೆ ಬಂತು?

ಹೇಗೋ ಭಗವಂತ ದಾರಿ ತೋರಿಸಿದ್ದ!?

ಇವಳು ತನ್ನ ತಾಯಿಗೆ ಪುನರ್ ಜನ್ಮ ನೀಡಿದ್ದಳೆಂದೇ ಹೇಳಬೇಕು!

ಇವಳಿಗೆ ಅದೃಷ್ಟ ಅಂದಿದ್ದು!

ಕೇವಲ ಎರಡು ಸಾವಿರ ರೂಪಾಯಿ ಸಂಬಳದಲ್ಲಿ ಕೆಲಸ ಮಾಡುತ್ತಿದ್ದ ಇವಳನ್ನು ಶ್ರೀಮಂತ ಯುವಕನೊಬ್ಬ ಮೆಚ್ಚಿಕೊಂಡಿದ್ದ.

ಲಗ್ನಪತ್ರಿಕೆ ಸಹ ಆಗಿತ್ತು.

ಮುಂದಿನ ವಾರವೇ ಮದುವೆ!

ಅದೂಷ್ಟ ಇದ್ದರೂ ಅದನ್ನು ಅನುಭವಿಸಲು ಹಣೆಯಲ್ಲಿ ಬರೆದಿರಬೇಕಂತೆ.

ಅನಿರೀಕ್ಷಿತ ರೀತಿಯಲ್ಲಿ ಮುಂದೆ ನಡೆಯಲಿರುವ ಘಟನೆ ಇವಳ ಪಾಲಿನ ಅದೃಷ್ಟವನ್ನು ಅಪಹರಿಸಿಕೊಂಡು ಹೋಗುವುದರಲ್ಲಿತ್ತು.

ಅಂತಹ ಘಟನೆ ಯಾವುದು?

ಮಳೆಯ ತೀವ್ರತೆ ಕಡೋಮೆಯಾಯಿತು. ಅವಳು ತಲೆಯಿಂದ ಜಾರಿ ಮುಖದ ಮೇಲೆ ಹರಿಯುತ್ತಿದ್ದ ನೀರನ್ನು ಸೆರಗಿನಿಂದ ಒರೆಸಿಕೊಂಡಳು.

ಸೆರಗನ್ನು ಹಿಂಡಿ ನೀರನ್ನು ತೆಗೆದಳು.

ಆಗ ಕತ್ತಲನ್ನು ಸೀಳಿಕೊಂಡು ಕಾರೊಂದು ಬರುತ್ತಿರುವುದು ಹೆಡ್‌ಲೈಟ್‌ನ ಬೆಳಕಿನಿಂದ ಗೊತ್ತಾಯಿತು. ಆ ಕಾರು ಇವಳು ನಿಂತಿದ್ದ ಸ್ಥಳದಿಂದ ಎದುರಿಗೆ ಇದ್ದ ಸರ್ಕಲ್‌ನಲ್ಲಿ ನಿಂತಿತು.

ಹೆಡ್‌ಲೈಟ್ ಬೆಳಗುತ್ತಿದೆ.

ಇವಳಿಗೆ ಭಯವಾಯಿತು. ಕಾರಿನಲ್ಲಿ ಯಾರಿದ್ದಾರೆ. ಎಷ್ಟು ಮಂದಿ ಇದ್ದಾರೋ ಗೊತ್ತಿಲ್ಲ. ತನ್ನಂತಹ ಒಂಟಿ ಹೆಣ್ಣು ಅಪರಾತ್ರಿಯ ಏಕಾಂತದಲ್ಲಿ ಸಿಕ್ಕಿದರೆ ಖಂಡಿತಾ ಬಿಡಲಾರರು.

ಕುಂಟ ಅಥವಾ ಅಂಗವಿಕಲನೇ ಆಗಿದ್ದರೂ ಸಹ ರುಚಿ ನೋಡೋಣ ಅಂತ ಒಂದು ಸಲ ಟ್ರೈ ಮಾಡುತ್ತಾನೆ.

ಆಗ ಮತ್ತೊಂದು ಜೀಪು ಎದುರುಗಡೆಯ ರಸ್ತೆಯಿಂದ ತುಂಬಾ ವೇಗವಾಗಿ ಬಂದಿತು.

ಮಳೆ ಈಗ ಬರುತ್ತಿರಲಿಲ್ಲ.

ಕಾರು, ಜೀಪು ಎದುರು ಬದರಾಗಿ ನಿಂತಿದೆ. ಹೆಡ್‌ಲೈಟ್‌ಗಳು ಬೆಳಕು ಬೆಳಗುತ್ತಿವೆ.

ಕಾರಿನಿಂದ ಇಬ್ಬರು ಇಳಿದರು.

ಜೀಪಿನಿಂದ ಒಬ್ಬ ಬಂದನು.

ಮೂವರಲ್ಲಿ ಒಬ್ಬ ವ್ಯಕಿ-ತಯನ್ನು ಅವಳು ಗುರುತೇಸಿದಳು ಭಯ, ಸಂದೇಹ ಕಾಡುತ್ತಿದೆ.

ಜೀಪಿನಿಂದ ಇಳಿದ ವ್ಯಕ್ತಿ ಸೂಟ್‌ಕೇಸ್ ಅನ್ನು ಅವರ ಕೆಎಗೆ ನೀಡಿದ. ತೆಗೆದು ನೋಡಿದರು.

ಅದರಲ್ಲಿ ಹಣವಿತ್ತು!

ಇವಳಿಗೆ ಪರಿಚಯ ಇದ್ದ ವ್ಯಕ್ತಿ ಈಗ ಕಾರಿನಲ್ಲಿ ಇರಿಸಿದ್ದ ಪ್ಯಾಕೇಟ್ ಅನ್ನು ತಂದುಕೊಟ್ಟನು. ಅದು ಕೊಡುವಾಗ ಕೈಯಿಂದ ಜಾರಿತು!

'ದೊಪ್' ಅಂತ ನೆಲಕ್ಕೆ ಬಿತ್ತು.

ಅವರಿಬ್ಬರು ಬಾಯಿಗೆ ಬಂದಂತೆ ಗೊಣಗುತ್ತಾ ಅದನ್ನು ಎತ್ತಿ ಜೀಪಿನ ವ್ಯಕ್ತಿಗೆ ನೀಡಿದರು.

ಜೀಪು ಹೊರಟಿತು.

ಅವಳ ಗಮನಕ್ಕೆ ಜೀಪಿನ ನಂಬರ್ ಬಂದಿತು. ಅವಳಿಗೆ ಅದೇನೋ ಸಂದೇಹ ಬಂದಿದ್ದರಿಂದ ಕಾರಿನ ನಂಬರ್‌ಅನ್ನು ಸಹ ಗುರುತಿಸಿಕೊಂಡಳು.

ಕಾರು ಬರ್‍ರ್ ಅಂತ ಹೊರಟಿತು. ಈಗವಳು ಆ ವೆಹಿಕಲ್‌ಗಳು ನಿಂತಿದ್ದ ಸ್ಥಳಕ್ಕೆ ಬಂದಳು ಕೊಚ್ಚೆಯಲ್ಲಿ ಜೀಪು, ಕಾರಿನ ಚಕ್ರದ ಗುರುತುಗಳು ಸ್ಪಷ್ಟವಾಗಿ ಮೂಡಿದೆ.

ಅವಳ ಗಮನ ಅತ್ತ ಹರಿಯಿತು.

ಹುಲ್ಲಿನ ಮೇಲೆ ಏನೋ ಬಿದ್ದಿದೆ.

ಅದನ್ನು ಎತ್ತಿಕೊಂಡಳು. ಐವತ್ತು ಗ್ರಾಂನಷ್ಟು ಪುಡಿ ಇದ್ದ ಪ್ಲಾಸ್ಟಿಕ್ ಕವರ್‌ನ ಪ್ಯಾಕೇಟ್!

ಅದೇನೆಂದು ಅವಳಿಗೆ ಗೊತ್ತಾಗಲಿಲ್ಲ. ಪರಿಶೀಲಿಸಿ ನೋಡಿದಳು ಅವಳ ಮುಖ ಬಿಳುಚಿಕೊಂಡಿತು.

ಅದು...ಅದು...ಬ್ರೌನ್‌ಶುಗರ್!

ಈ ವಿಷಯವಾಗಿ ಮಾತಾಡಿದಳು!

ಬಾಯಿಗೆ ಬಂದಂತೆ ಬೈದು ಜಗಳ ಆಡಿದಳು!

ಬೆದರಿಕೆಯ ಬಾಂಬ್ ಹಾಕಿದಳು!

ಇದೇ ಘಟನೆ ಮುಂದೆ ಅವಳ ಜೀವನದಲ್ಲಿ ನಡೆಯಲಿರುವ ದುರಂತಕ್ಕೆ ಕಾರಣ ಆಗುವುದರಲ್ಲಿತ್ತು!

ನಿಗೂಢಮಯ ಅನಾಹುತ!

ಚಿದಂಬರ ರಹಸ್ಯವೊಂದಕ್ಕೆ ಬುನಾದಿ!

ಇದೇ ಈ ಕಾದಂಬರಿಯ ಪೀಠಿಕೆ!

★★★

ರಾತ್ರಿ ಒಂಭತ್ತು ಗಂಟೆ!

ಮುಕುಂದನ ಮುಖದಲ್ಲಿ ನಗು ಮೂಡಿತು. ಅದಕ್ಕೆ ಕಾರಣ ರಂಗು ರಂಗಾದ ಕಲ್ಪನೆ!

ಅವಳ ಫೋಟೋ ನೋಡಿದನು. ಅವಳ ಮುದ್ದು ಮುಖದ ಮೋಹಕ ಭಂಗಿ. ಎಷ್ಟು ನೋಡಿದರೂ ಸಹ ಇವನಿಗೆ ತೃಪ್ತಿಯಾಗುತ್ತಿಲ್ಲ.

ಅವಳ ಚೆಲುವಿನ ಬಗ್ಗೆ ಹೆಮ್ಮೆಯೆನಿಸುತ್ತಿದೆ. ಈ ಅಪ್ಸರೆ ನನ್ನ ಹೆಂಡತಿ ಆಗಲಿರುವ ಹೆಣ್ಣು!

ಲಗ್ನಪತ್ರಿಕೆಯತ್ತ ಗಮನ ಹರಿಯಿತು. ಮೈ ರೋಮಾಂಚನವಾಯಿತು. ಮುಂದಿನವಾರ ಇಷ್ಟು ಹೊತ್ತಿಗೆ ಮದುವೆ ಮುಗಿದು ಅವಳು ನನ್ನ ತೋಳಿನಲ್ಲಿರುತ್ತಾಳೆ.

ಜೀವಂತ ಶಿಲಾಬಾಲಿಕೆ!

ಅಪರೂಪದ ಚೆಲುವೆ.

ಅವಳ ದೇಹದ ಪ್ರತಿಯೊಂದು ಅಂಗವೂ ಕೂಡಾ ಸೌಂದರ್ಯಕ್ಕೆ

ಇಂಬುಕೊಡುವಂತೆ ಇತ್ತು.

ತುಂಬಾ ಪುರುಸೊತ್ತು ಮಾಡಿಕೊಂಡು ಅಪರೂಪಕ್ಕೆ ಒಂದೊಂದು ಸಲ ಬ್ರಹ್ಮಕಾರ್ಯದಲ್ಲಿ ರಸಿಕತನವನ್ನು ತೋರಿಸುತ್ತಾನೆ.

ಬ್ರಹ್ಮನಿಗೆ ಸೌಂದರ್ಯ ಪ್ರಜ್ಞೆ ಇದೆ ಎಂಬುದಕ್ಕೆ ಇವಳೇ ಸಾಕ್ಷಿ! ಇವನ ಭಾವೀ ಪತೀ!

ಫೋನಾ ರಿಂಗ್ ಆಯಿತು.

ಅವಳ ಕೆಂದುಟಿಗಳ ಮೇಲೆ ಮೂಡಿದ್ದ ನಗುವಿನ ಲಾಸ್ಯವನ್ನು ಫೋಟೋದಲ್ಲಿ ಅದ್ಭುತವಾಗಿ ಸೆರೆಹಿಡಿಯಲಾಗಿತ್ತು. ಈ ತುಟಿಗಳನ್ನು ಚುಂಬಿಸಿ ತನಿರಸ ಹೀರುವ ಅದೃಷ್ಟವಂತ ನಾನು!

ಫೋನ್ ತರ್ಲೆ ಮಾಡಲಾರಂಭಿಸಿತು.

ಗೊಣಗುತ್ತಲೇ ರಿಸೀವರ್ ಎತ್ತಿಕೊಂಡವನು ಅತ್ತ ಕಡೆಯಿಂದ ಕೇಳಿಬಂದ ಹೆಣ್ಣು ಧ್ವನಿಯ ಮಾದಕತೆಯಿಂದ ಅವಳ್ಯಾರು ಅಂತ ಗುರುತಿಸಿದ, ಮುಕುಂದ ಬೆಚ್ಚಿಬಿದ್ದ!

ಸ್ವೀಟ್ ಸಿಕ್ಸ್‌ಟೀನ್!

ಸೆಕ್ಸ್‌ಗೆ ಸಿಂಬಲ್‌ನಂತಿರೋ ಲೇಡಿ!

ಅವಳ ಮಾದಕತೆಯ ಧ್ವನಿ!

ಇವನ ತಂದೆಯ ತಂಗಿಯ ಮಗಳು ಮೋನಿಕ!

ಉದ್ವೇಕಕಾರಿ ಸೌಂದರ್ಯದ ಬೆಡಗಿ!

ಇವನನ್ನು ಮದುವೆಯಾಗಲು ಕಲಿತಿರುವ ಬುದ್ಧಿಯನ್ನೆಲ್ಲಾ ಖರ್ಚು ಮಾಡಿದ್ದಳು.

ಸರ್ಕಸ್ ಮಾಡಿದ್ದಳು!

ನೋ ಯೂಸ್, ಬಿಲ್‌ಕುಲ್ ನಿನ್ನನ್ನು ಮದುವೆ ಆಗಲಾರೆ ಅಂತ ಆಫರ್ ಅನ್ನು ರಿಜೆಕ್ಟ್ ಮಾಡಿದ್ದ.

ಇಲ್ಲದೆ ಇದ್ದರೆ ಏನಾಗುತ್ತಿತ್ತು?

ಮದುವೆಯಾಗಿ ನಂತರ ಬರುವ ಮೊದಲ ರಾತ್ರಿಯ ತನಕ ಮೋನಿಜ ಕಾಯುತ್ತಲೇ ಇರಲಿಲ್ಲ!

ವಾತ್ಸಾಯನನ ಕಾಮಸೂತ್ರದ ಅರವತ್ತನಾಲ್ಕು ಭಂಗಿಗಳನ್ನು ಹಸೆಮಣೆಯ ಮೇಲೆ ಕೂರುವ ಮೊದಲೇ ಇವನ ಮೇಲೆ ಪ್ರಯೋಗಿಸಿರುತ್ತಿದ್ದಳು.

ಈಗೇಕೆ ಇವಳು ಫೋನ್ ಮಾಡಿದ್ದಾಳೆ?

ಮುಕುಂದನಿಗೆ ಮುಜುಗರ ಆಗುತ್ತಿದೆ.

ತುಂಬಾ ದ್ರಾಕ್ಷಿ, ಗೋಡಂಬಿ ಹಾಕಿ ಮಾಡಿರುವ ಪಾಯಸದಲ್ಲಿ ಜಿರಳೆಯನ್ನು ಕಂಡಂತೆ!

ಹೂರಣದೊಂದಿಗೆ ಸಣ್ಣ ಹಲ್ಲಿ ಸಹ ಒಬ್ಬಟ್ಟಿನಲ್ಲಿ ಬೆಂದಿರುವ ದೃಶ್ಯ ಕಂಡಂತೆ!

''ಮುಕುಂದ...ಕನಸು ಕಾಣುತ್ತಿರುವೆಯ?''

''ಹ್ಯಾಗಿದ್ದೀಯ ಮೋನಿಕ?''

''ತುಂಬಾ ಡಲ್ ಆಗಿದ್ದೇನೆ. ಲೈಫ್‌ನಲ್ಲಿ ಥ್ರಿಲ್ ಹೊರಟುಹೋಗಿದೆ ನಿರಾಸೆ ಕವಿದಿದೆ''

ಲವ್ ಡಿಸ್‌ಪಾಯಿಂಟ್‌ನ ಡೈಲಾಗ್ಸ್!

ಮುಕುಂದ ಉತ್ತರಿಸಲಿಲ್ಲ.

ಮೋನಿಕ ದುಃಖ, ಕೋಪದಿಂದ, ''ಮುಕುಂದ...ನಿಜ ಹೇಳು ನನ್ನನ್ನು ಯಾಕೆ ತಿರಸ್ಕರಿಸಿದೆ? ನಾನು ನೋಡಲು ಚೆನ್ನಾಗಿಲ್ಲವೆ? ಶ್ರೀಮಂತಿಕೆ ಇಲ್ಲವೆ? ಕಮಾನ್ ಟೆಲ್‌ಮೀ ವೈ?''

ಮುಕುಂದ ಮೆಲ್ಲಗೆ, ''ನನಗೆ ನನ್ನದೇ ಆದ ಟೇಸ್ಟ್‌ಗೆ ನಾನು ಸರಿಗೋಗಲಿಲ್ಲವೇ?''

ಮೋನಿಕ ಕೋಪದಿಂದ ಹಲ್ಲುಕಡಿಯುತಾ-ತ, ''ನನಗೆ ಗೊತ್ತು ಅವಳು ಮಂಕುಬೂದಿ ಎರಚಿದ್ದಾಳೆ ಆ ಕುಚೇಲನ ಹೆಣ್ಣಿನಲ್ಲಿ ಅದೇನು ಕಂಡು ಅವಳನ್ನೇ ಮದುವೆಯಾಗಬೇಕು ಅಂತ ಹಟ ಮಾಡುತ್ತಿದ್ದೀಯ? ನನ್ನಲ್ಲಿ ಇಲ್ಲದ್ದು ಅವಳಲ್ಲಿ ಏನಿದೆ?''

ಮುಕುಂದ ಕೋಪದಿಂದ ''ಕಂಪಾರೆಟಿವ್ ಎಕ್ಸ್‌ಪ್ಲನೇಷನ್ ಕೊಡಲು ಬಿಸಿನಲಸ್ ಅಲ್ಲ. ಯಾವುದೋ ಆ್ಯಂಗಲ್‌ನಲ್ಲಿ, ಅಪಿಯರೆನ್ಸ್‌ನಲ್ಲಿ, ಅಭಿರುಚಿಯಲ್ಲಿ, ಗುಣದಲ್ಲಿ ಮನೋಹರಿ ನನ್ನ ಮನಸ್ಸನ್ನು ಗೆದ್ದಿದ್ದಾಳೆ. ಮುಂದಿನ ವಾರ ಮದುವೇಂತ ಲಗ್ನಪತ್ರಿಕೆ ಆಗಿದೆ. ನೀನು ಈಗ ಈ ರೀತಿ ಮಾತಾಡೋದು ಸರಿಯಲ್ಲ ಮೋನಿಕ''

ಮೋನಿಕ ದುಃಖದಿಂದ, ''ನಿನ್ನನ್ನು ನಾನು ಎಷ್ಟು ಪ್ರೀತಿಸಿದ್ದೇ ಅಂತ ನಿನಗೆ ಹೆಗೋ ಗೊತಾಗಬೇಕು. ನೋ...ನೋ...ಐ ಕಾಂಟ್ ಲೀವ್ ವಿತ್‌ಔಟ್

ಯೂ! ನೀನು ನನಗೆ ಬೇಕು!''

ಮುಕುಂದ ಕೋಪದಿಂದ, ''ಹುಚ್ಚು ಹುಚ್ಚಾಗಿ ಮಾತಾಡಬೇಡ ಮೋನಿಕ''

ಮೋನಿಕ ಗಡುಸಾಗಿ, ''ಪ್ರೋಲಾಂಗ್ ಮಾಡೋಲ್ಲ. ನಿನ್ನನ್ನು ಕಳೆದುಕೊಂಡು ನಾನು ಮ್ಯಾಡ್ ಆಗಲಾರೆ ಅದಕ್ಕಿಂತ ನಿನ್ನನ್ನು ಪಡೆಯಲು ಕೊನೆಯ ತನಕ ಟ್ರೈ ಮಾಡುತ್ತೇನೆ''

ಫೋನ್ ಡಿಸ್‌ಕನೆಕ್ಟ್ ಆಯಿತು.

''ಹಲೋ...ಹಲೋ ಮೋನಿಕ!'' ಎಂದು ಜೋರಾಗಿ ಕೂಗಿಕೊಂಡನು.

ನೋ ರೆಸ್ಪಾನ್ಸ್!

ಮುಕುಂದನಿಗೆ ಬೇಸರದೊಂದಿಗೆ ಭಯ ಸಹ ಆಯಿತು. ತುಂಬಾ ವರ್ಷಗಳಿಂದ ನನ್ನನ್ನೇ ಮದುವೆಯಾಗಬೇಕು ಅಂತ ಕನಸು ಕಾಣುತ್ತಿದ್ದ ಮೋನಿಕ ಖಂಡಿತಾ ಸುಮ್ಮನೆ ಇರಲಾರಳು.

ಅವಳೇನು ಮಾಡಬಹುದು?

★★★

ಕೋದಂಡರಾವ್! ಐವತ್ತರ ಪ್ರಾಯದ ಶ್ರೀಮಂತ ಮುದುಕ!

ಬಾಂಡಲಿಯಂತೆ ಇದ್ದ ತಲೆಯಲ್ಲಿ ಉಳಿದುಕೊಂಡಿದ್ದ ನಾಲ್ಕು ಬಿಳಿಯ ಕೂದಲಿಗೆ ಡೈ ಮಾಡಿಕೊಂಡಿದ್ದರು. ಹೊಟ್ಟೆ ಮುಂದೆ ಬಂದಿದ್ದ ಕುಳ್ಳನೆಯ ಆಕಾರ!

ಲಗ್ನಪತ್ರಿಕೆಗಳು ಟೀಪಾಯಿಯ ಮೇಲೆ ಹರಡಿಕೊಂಡಿವೆ. ಮುಂದಿನ ವಾರವೇ ಮಗನ ಮದುವೆ.

ಒಬ್ಬನೇ ಮಗನ ಮದುವೆಗೆ ಬಂಧು ಬಳಗದವರನ್ನು, ಸ್ನೇಹಿತರವನ್ನು ಕರೆಯಬೇಕು ಕೆಲವು ಆತ್ಮೀಯರ ಮನೆಗೆ ತಾವೇ ಖುದ್ದಾಗಿ ಹೋಗಿ ಕರೆಯಬೇಕು ಅಂತ ಅಂದುಕೊಂಡಿದ್ದಾರೆ.

ನಾಲ್ಕು ದಿನಗಳ ಕಾರ್ಯಕ್ರಮ!

ಈ ಶೋಕಿಲಾಲ ಮುದುಕ ಈ ವಯಸ್ಸಿನಲ್ಲೂ ಸಹ ದಿನಕ್ಕೆ ಎರಡು ಸೆಟ್ ಡ್ರೆಸ್ ಚೇಂಜ್ ಮಾಡುತ್ತಾನೆ. ನಾಲ್ಕು ದಿನಕ್ಕೆ ಅಂದರೆ ಎಂಟು ಬಟ್ಟೆ ಮತ್ತು ಇನ್ನಿತರ ಮೇಕಪ್ ಸಾಮಾನುಗಳನ್ನು ಇಡಬೇಕು.

ಎಲ್ಲವನ್ನೂ ದೊಡ್ಡಸೂಟ್‌ಕೇಸ್‌ಗೆ ಹಾಕಿ ಕಾರಿನ ಡಿಕ್ಕಿಯಲ್ಲಿ ಇಡಬೇಕು ಅಂತಹ ದೊಡ್ಡ ಸೂಟ್‌ಕೇಸ್ ಕೊಳ್ಳಲೇಬೇಕಾಗಿದೆ, ಬಜಾರ್‌ಗೆ ಹೋಗಬೇಕು ಎಂದು ರೆಡಿಯಾದರು.

ಫೋನ್ ರಿಂಗ್ ಆಯಿತು.

ತಂಗಿಯ ಮಗಳು ಮೋನಿಕ!

''ಮೋನಿಕ ಚೆನ್ನಾಗಿದ್ದೀಯ?''

ಮೋನಿಕ ಕೋಪದಿಂದ, ''ಮಾವ...ಮುಕುಂದನಿಣ್ಣೆ ಬೇರೆ ಹೆಣ್ಣಿನ ಜೊತೊ ಮದುವೆ ಗೇತ್ತಾಗಿರುವಾಗ ನಾನು ಚೆನ್ನಾಗಿರಲು ಹೇಗೆ ಸಾಧ್ಯ?''

ಕೋದಂಡರಾವ್‌ಗೆ ಬೇಸರವಾಯಿತು.

ಮೋನಿಕ, ''ನಿಮಗೆ ಈಗ ಸಂತೋಷವೇ?''

ಕೋದಂಡರಾವ್, ''ಮೋನಿಕ...ನಿನ್ನನ್ನೇ ನನ್ನ ಮಗನಿಗೆ ತಂದುಕೊಳ್ಳಬೇಕು ಅಂತ ಆಸೆಯಿತ್ತು. ನಾನು ಅದಕ್ಕಾಗಿ ಎಷಙೂಟ ಪ್ರಯತ್ನಿಸಿದೆ ಅಂತ ನಿನಗೂ ಸಹ ಗೊತ್ತಿದೆ. ಅವನು ಬೇರೆ ಹೆಣ್ಣನ್ನು ಮೆಚ್ಚಿಕೊಂಡರೆ ಅದಕ್ಕೆ ನಾನೇನು ಮಾಡಲಮ್ಮ?''

ಮೋನಿಕ ''ಅಂತಹ ಸ್ಪೆಷಾಲಿಟಿಯನ್ನು ಆ ಮನೋಹರಿಯಲ್ಲಿ ಅವನೇನು ಕಂಡ?''

ಕೋದಂಡರಾವ್, ''ಬರೀ ಸೌಂದರ್ಯವಲ್ಲ, ಬಡವರ ಮನೆಯ ಹೆಣ್ಣು ಜೀವನದ ಕಷ+ಟಗಳನ್ನು ಅರಿತಿರುತ್ತಾಳೆ. ಕ್ಯಾರೆಕ್ಟರ್ ಚೆನ್ನಾಗಿರುತ್ತದೆ ಅಂತ...''

ಮೋನಿಜ ಕೋಪದಿಂದ, ''ಶ್ರೀಮಂತರ ಮನೆಯ ಹೆಣ್ಣುಮಕ,ಕಳಿಗೆ ಕ್ಯಾರೆಕ್ಟರ್ ಚೆನ್ನಾಗಿರೋಲ್ಲ ಅಂತ ಮುಕುಂದನ ಅಭಿಪ್ರಾಯವೇ?''

ಕೋದಂಡರಾವ್ ಗಾಬರಿಯಿಂದ, ''ಛೇ...ಛೇ ಹಾಗಲ್ಲ ಕಣಮ್ಮ, ನನಗೆ ಅನಿಸುತ್ತೆ ಮನೋಹರಿ ಅವನನ್ನು ಮರುಳು ಮಾಡಿದ್ದಾಳೆ. ಬಹುಶಃ ಅವಳು ಅವನ ಜೀವನದಲ್ಲಿ ಬರದೆ ಇದ್ದಿದ್ದರೆ ಮುಕುಂದ ನಿನ್ನನ್ನೇ ಮದುವೆ ಆಗುತ್ತಿದ್ನೋ ಏನೋ. ಈಗ ಕಾಲ ಮಿಂಚಿ ಹೋಗಿದೆ. ಅದರ ಬಗ್ಗೆ ಚಿಂತಿಸಿ ಫಲವಿಲ್ಲ. ನೀನು ಮದುವೆಗೆ ಬರುತ್ತೀಯ ತಾನೆ?''

ಮೋನಿಕ ಕೋಪದಿಂದ ''ಮದುವೆಯ ಹೆಣ್ಣಾಗಿ ಅವನ ಪಕ್ಕದಲ್ಲಿ ಹಸೆಮಣೆಯ ಮೇಲೆ ಕೂರಬೇಕಾಗಿದ್ದ ನಾನು ನೂರು ಜನಗಳ ಜೊತೆ ಬೆರೆದು ಚಿರೋಟಿ ಊಟ ಮಾಡಲು ಬರಬೇಕೆ?''

''ಮೋನಿಕ?''

''ಈ ಮೋನಿಕ ಎಂದೂ ನಿರಾಸೆಯನ್ನು ಸಹಿಸೋಲ್ಲ. ಸುಲಭವಾಗಿ ಸೋಲನ್ನು ಒಪ್ಪೋಲ್ಲ''

ಕೋದಂಡರಾಯರು ಗಾಬರಿಯಿಂದ ''ಅರೆ ಮೋನಿಕ ನೀನು ಏನು ಮಾತಾಡ್ತ ಇದ್ದೀಯ?''

ಮೋನಿಕ ಉತ್ತರಿಸಲಿಲ್ಲ.

ಫೋನ್ ಡಿಸ್‌ಕನೆಕ್ಟ್ ಆಗಿತ್ತು.

ಕೋದಂಡರಾಯರಿಗೆ ಇತ್ತೀಚೆಗೆ ತಾನೇ ಸತ್ತು ಹೋಗಿದ್ದ ಪ್ರೀತಿಯ ತಂಗಿಯ ನೆನಪಾಯಿತು.

ತಂಗಿಗೆ ಸಾಯುವ ಮುನ್ನ ಮಾತು ನೀಡಿದ್ದರು. ಮೋನಿಕಳನ್ನು ಮುಕುಂದನಿಗೆ ತಂದು ಕೊಳ್ಳುತ್ತೇನೆ ಅಂತ. ಈಗದು ಅಸಾಧ್ಯವಾಗಿದೆ.

ಕೋದಂಡರಾಯರು ನಿಟ್ಟುಸಿರು ಚೆಲ್ಲಿದರು ಈ ಮನೋಹರಿ ಇಲ್ಲದೆ ಇದ್ದಿದ್ದರೆ ಮುಕುಂದ ಮೋನಿಕಳನ್ನೇ ಮದುವೆಯಾಗುತ್ತಿದ್ದನೋ, ಏನೋ?

ಈಗೇನು ಮಾಡಲು ಸಾಧ್ಯ ಕೋದಂರಾಯರು ಕಾರಿನಲ್ಲಿ ಬಜಾರ್‌ಗೆ ಬಂದರು. ಅವರ ಮುಖ ಸಂತೋಷದಿಂದ ಅರಳಿತು.

ಆನಂದರಾವ್ ಮತ್ತು ಆತನ ಪತ್ನಿ ಸುಮಿತ್ರ ಅಲ್ಲಿಗೆ ಬಂದಿದ್ದಾರೆ.

ಆನಂದರಾವ್ ಕ್ಲೋಸ್ ಫ್ರೆಂಡ್ ಇವರಿಬ್ಬರು ಹಿಂದೆ ಒಂದೇ ಕಾಲೇಜಿನಲ್ಲಿ ಓದಿದ್ದರು. ಅಂದಿನ ಗೆಳೆತನ ಮುಂದುವರೆದಿತ್ತು. ಅದೇ ಬೀದಿಯಲ್ಲೇ ಕೋದಂಡರಾವ್ ಸಹ ಇದ್ದುದರಿಂದ ಇವರಿಬ್ಬರು ಆಗಾಗ ಭೇಟಿ ಮಾಡುತ್ತಲೇ ಇದ್ದರು.

ಈಗ ಪರಸ್ಪರ ಕೈಕುಲುಕುತ್ತಾ ಸಂತೋಷದಿಂದ ಮಾತಾಡುತ್ತಿದ್ದಾರೆ.

ಕೋದಂಡರಾವ್ ಸ್ನೇಹಿತನ ಕೈಹಿಡಿದುಕೊಂಡೇ ಬಜಾರ್‌ಗೆ ಬಂದರು. ಅವರು ಅಗತ್ಯವಾಗಿ ಸೂಟ್‌ಕೇಸ್ ಕೊಳ್ಳಲೇಬೇಕಾಗಿತ್ತು.

ತುಂಬಾ ಕಡೆ ಹುಡುಕಾಡಿ ಎರಡು ದೊಡ್ಡ ಸೂಟ್‌ಕೇಸ್‌ಗಳನ್ನು ಆರಿಸಿದರು.

ಒಂದೇ ತರಹದ ಬಣ್ಣ, ಆಕಾರ! ಒಂದು ಚೂರು ಸಹ ವ್ಯತ್ಯಾಸ ಇರಲಿಲ್ಲ.

ಆನಂದರಾವ್ ನಗುತ್ತಾ. ''ಇದೇನಯ್ಯ ಇಷ್ಟೊಂದು ದೊಡ್ಡ ಸೂಟ್‌ಕೇಸ್ ತಗೊಂಡಿದ್ದೀಯ? ನೀನು ಏನಾದರೂ ಇದರಲ್ಲಿ ಹೆಣ ಸಾಗಿಸಬೇಕೆ?''

ಸುಮಿತ್ರಮ್ಮ ಭಯಗೊಂಡರು.

ಕೋದಂಡರಾವ್ ಬೇಸರದಿಂದ, ''ಛೇ...ಛೇ ಎಂತಹ ಅಮಂಗಳದ ಮಾತಾಡುತ್ತಿದ್ದೀಯ, ಮದುವೆಗೆ ಬೆಂಗಳೂರಿನಲ್ಲಿರೋ ನನ್ನವರನ್ನೆಲ್ಲಾ ಕರೆಯಲು ಹೋಗಬೇಕು. ನಾಲ್ಕು ದಿನಗಳ ಪ್ರೋಗ್ರಾಂ ನನ್ನ ಬಟ್ಟೆಗಳಿಗೇ ಇದು ಸಾಕಾಗೋಲ್ಲ ಕಣಯ್ಯ''

ಆನಂದರಾವ್ ನಗುತ್ತಾ ''ಅಂತೂ ಗ ಮದುವೆಗೆ ಬಂದರೂ ಸಹ ಇನ್ನೂ ಶೋಕಿ ಮಾಡುವುದನ್ನು ಬಿಟ್ಟಿಲ್ಲ ಅನ್ನು''

ಕೋದಂಡರಾವ್, ''ನಾವು ಎಂತಹ ಪರಿಸ್ಥಿತಿಯಲ್ಲೂ ಸಹ ಜೀವನದಲ್ಲಿ ಅಭಿರುಚಿ. ಮುಖ್ಯವಾಗಿ ಆಸಕ್ತಿಯನ್ನು ಕಳೆದುಕೊಳ್ಳಲೇಬಾರದು ಕಣಯ್ಯ''

ಸುಮಿತ್ರಮ್ಮ, ''ನಿಮ್ಮ ತಂಗಿಯ ಮಗಳನ್ನೇ ಮುಕುಂದನಿಗೆ ತಂದುಕೊಳ್ಳುತ್ತಿದ್ದೀರ?''

ಕೋದಂಡರಾವ್, ''ಇಲ್ಲ ಕಣಮ್ಮ ನನ್ನ ಮಗ ಬೇರೆ ಹೆಣ್ಣನ್ನು ಮೆಚ್ಚಿಕೊಂಡಿದ್ದಾನೆ''

''ಯಾರಯ್ಯ ಆ ಅದೃಷ್ಟವಂತೆ?''

ಕೋದಂಡರಾವ್ ನಗುತ್ತಾ, ''ಏ ಬ್ಲಡಿಫೂಲ್ ನನ್ನ ಸೊಸೆ ಆಗೋ ಹೆಣ್ಣುನನಗಿಂತ ಚೆನ್ನಾಗಿ ನಿನಗೆ ಗೊತ್ತಿದ್ದಾಳೆ ಕಣಯ್ಯ''

''ಹೌದಾ...ಯಾವುದು?''

ಕೋದಂಡರಾವ್, ''ಆನಂದ...ಅವಳು ನಿನ್ನ ಕೊಲೀಗ್ ಮನೋಹರಿ ಕಣಯ್ಯ. ನಿನ್ನ ಜೊತೆ ಆಫೀಸ್‌ನ ಕೆಲಸ ಮಾಡುತ್ತಿದ್ದಾಳಂತೆ''

ಆನಂದರಾವ್ ಬೆಚ್ಚಿಬಿದ್ದನು. ಮನೋಹರಿ ಎಂಬ ಹೆಸರನ್ನು ಕೇಳಿದ ಕೂಡಲೇ ಅವನ ಮುಖದ ಚಹರೆಯೇ ಬದಲಾಗಿಹೋಯಿತು!

ಸುಮಿತ್ರಮ್ಮ ನಗುತ್ತಾ, ''ಮನೋಹರಿನಾ...ನನಗೆ ಗೊತ್ತು. ಅವಳು ಆಗಾಗ ನಮ್ಮ ಮನೆಗೆ ಬರುತ್ತಿರುತ್ತಾಳೆ. ನಮ್ಮ ಮನೊಯ ಪಕ್ಕದಲ್ಲೇ ಅವಳ ಮನೆ ಇರೋದು. ತುಂಬಾ ಒಳ್ಳೆಯ ಹುಡುಗಿ. ಬಡವರ ಮನೆಯ ಹುಡುಗಿ ಜೀವನದ ಕಷ್ಟಗಳನ್ನೆಲ್ಲಾ ಈಗಲೇ ಅನುಭವಿಸಿದ್ದಾಳೆ. ನಿಜ ಹೇಳಬೇಕು ಅಂದರೆ ನಿಮ್ಮ ಮಗ ಅವಳನ್ನು ಮದುವೆಯಾಗಲು ಪುಣ್ಯ ಮಾಡಿದ್ದಾನೆ ಅಂತಲೇ ಹೇಳಬೇಕು.

ಎಲ್ಲಾ ಸರಿ, ಆದರೆ ಆನಂದರಾವ್ ಮಾತ್ರ ಗರಬಡಿದವನಂತೆ ನಿಂತಿದ್ದಾನೆ.

ಮುಖದಲ್ಲಿ ಬೆವರು!

ಸಣ್ಣಗೆ ದೇಹ ನಗುಡುತ್ತಿದೆ!

ನಿಂತಲ್ಲೇ ಚಡಪಡಿಸುತ್ತಿದ್ದಾನೆ.

ಸುಮಿತ್ರಮ್ಮ ಗಂಡನನ್ನು ನೋಡುತ್ತಾ, ''ನೀವ್ಯಾಕೆ ಜಿರಳೆ ಬಟ್ಟೆಯೊಳಗೆ ಸೇರಿಕೊಂಡಿರುವವರಂತೆ ಪರಮಾಡುತ್ತಿದ್ದೀರ, ಏನಾಯ್ತು?''

ಆನಂದರಾವ್ ಕರ್ಚೀಫ್‌ನಿಂದ ಬೆವರನ್ನು ಒರೆಸಿಕೊಳ್ಳುತ್ತಾ ''ಛೇ...ಛೇ...ಹಾಗೇನಿಲ್ಲ''

ಕೋದಂಡರಾವ್ ಒಂದೇ ಸರಹ ಇದ್ದ ಎರಡು ದೊಡ್ಡ ಸೂಟ್‌ಕೇಸ್‌ಗಳಲ್ಲಿ ಒಂದನ್ನು ತನ್ನ ಗೆಳೆಯ ಆನಂದರಾವ್‌ಗೆ ನೀಡುತ್ತಾ ''ನಿಮ್ಮಿಬ್ಬರ ಸ್ನೇಹದ ನೆನಪಾಗಿ ಇದನ್ನು ನಿನಗೆ ಕೊಡುತ್ತಿದ್ದೇನೆ, ಅದಕ್ಕೆ ಒಂದೇ ತರಹ ಇರುವ ಎರಡು ಸೂಟ್‌ಕೇಸ್ ಅನ್ನು ಕೊಂಡುಕೊಂಡೆ''

ಸುಮಿತ್ರಮ್ಮನ ಮುಖ ಅರಳಿತು.

ಆನಂದರಾವ್ ಸ್ನೇಹಿತನ ಕೈ ಅದುಮುತ್ತಾ, ''ಥ್ಯಾಂಕ್ ಯೂ ಮೈ ಡಿಯರ್ ಫ್ರೆಂಡ್. ಇವೆರಡೂ ಒಂದೇ ತರಹ ಇರೋದ್ರಿಂದ. ಅವುಗಳನ್ನು ನೋಡಿದಾಗ ನಮ್ಮಿಬ್ರಿಗೆ ಪರಸ್ಪರ ನೆನಪಾಗುತ್ತದೆ''

ಕೋದಂಡರಾವ್ ನಗುತ್ತಾ ತಲೆಯಾಡಿಸಿ, ''ನನ್ನ ಮಗನ ಮದುವೆಗೆ ಕರೆಯಲು ಬರುತ್ತೇನೆ''

''ಯೂ ಆರ್ ವೆಲ್ ಕಮ್''

ಸ್ನೇಹಿತರಿಬ್ಬರು ಪರಸ್ಪರ ವಿಶ್ ಮಾಡುತ್ತಾ ಬೇರೆ ಬೇರೆ ಕಡೆ ಹೊರಟರು.

ಇಬ್ಬರು ಹತ್ತಿರವೂ ಈಗ ಒಂದೇ ತರಹ ಇದ್ದ ಸೂಟ್‌ಕೇಸ್ ಇದೆ!

ತುಂಬಾ ಗಾತ್ರ ಇದ್ದ ಸೂಟ್‌ಕೇಸ್!

★★★

ಆನಂದರಾವ್ ಪ್ರೈವೇಟ್ ಕಂಪನಿಯಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದನು. ಮಹಾ ಸೋಮಾರಿ.ಆದರೆ ಹೆಂಡತಿಗೂ ಸಹ ತಿಳಿಯದಂತೆ ಆಫೀಸ್‌ನಲ್ಲಿ ಗೋಲ್‌ಮಾಲ್ ಮಾಡಿ ಹಣ ಸಂಪಾದಿಸುತ್ತಿದ್ದನು.

ಹೆಂಡತಿಗೆ ಆಭರಣಗಳನ್ನು ಮಾಡಿಸುತ್ತಿರಲಿಲ್ಲ. ಜಾಸ್ತಿ ದುಡ್ಡಿನ ಸೀರೆ ಕೊಡಿಸುತ್ತಿರಲಿಲ್ಲ.

ಸಂಸಾರಕ್ಕೆ ಖರ್ಚು ಮಾಡುತ್ತಿರಲಿಲ್ಲ ತುಂಬಾ ಅಪರೂಪಕ್ಕೆ ಹೆಂಡತಿ

ಒಂದು ಮೊಳ ಮಲ್ಲಿಗೆ ಹೂವನ್ನು ಕೊಡಿಸಿ ಅಂತ ಗೋಗರೆದರೆ ಹತ್ತು ಸಲ ತರ್ಲೆ ಮಾಡಿ ಕೊಡಿಸುತ್ತಿದ್ದನು.

ಬಹು ವರ್ಷಗಳ ದಾಂಪತ್ಯ ಜೀವನದಲ್ಲಿ ಇದು ಸುಮಿತ್ರಳಿಗೆ ಕಹಿ ಅನುಭವ ಆಗಿತ್ತು.

ಗಂಡ ಕೈ ತುಂಬಾ ಸಂಪಾದಿಸುತ್ತಾನೆ. ಹೆಂಡತಿಗಾಗಿ, ಸಂಸಾರಕ್ಕಾಗಿ ಕೈ ಬಿಚ್ಚಿ ಖರ್ಚು ಮಾಡೋಲ್ಲ. ಹಾಗಾದರೆ ಹಣ ಏನು ಮಾಡುತ್ತಾನೆ?

ಕೇಳಲು ಧೈರ್ಯ ಇಲ್ಲ. ಕೇಳಿದರೆ ಮುಖ ಹನುಮಂತನ ಮೂರ್ತಿ ತರಹ ಆಗುತ್ತೆ ಅಂತ ಅನುಭವದಿಂದ ಗೊತ್ತಾಗಿತ್ತು.

ಹೀಗೆ ಮಾಡಲು ಕಾರಣ ಅವನ ವೀಕ್‌ನೆಸ್! ಏನದು?

ಯೌವನ ತುಂಬಿರುವ ಮಿಂಚಿನ ಬಳ್ಳಿಯಂತಹ ಚೆಲುವೆಯನ್ನು ಅನುಭವಿಸಬೇಕು!

ಅವಳು ತೆಳ್ಳಗೆ, ಬೆಳ್ಳಗಿರಬೇಕು!

ಸಿನಿಮಾ ಹೀರೋಯಿನ್ ತರಹ ಇರಬೇಕು!

ತುಂಬಾ ದಿನಗಳಿಂದ ಈ ಚಪಲ ಇತ್ತು. ಆನಂದರಾವ್‌ಗೆ ಕಾಮನ್‌ಸೆನ್ಸ್ ಇತ್ತು!

ಮಿಂಚಿನ ಬಳ್ಳಿಯಂತಹ ಚೆಲುವೆ ಸೇಗುತ್ತಾಳೆ. ಆದರೆ ಅವಳೇಕೆ ದಡೂತಿ ದೇಹದ, ತಲೆಯ ಕೂದಲು ಉದುರಿರುವ ಮುದುಕನ ಜೊತೆ ಮಲಗಲು ಒಪ್ಪುತ್ತಾಳೆ? ಅವಳಿಗ್ಯಾಕೆ ಈ ಕರ್ಮ!

ಹೆಂಡತಿಗೆ ಕಾಣದಂತೆ ರೂಪಸಿರಾದ ವೇಶ್ಯಯಯರ ಹತ್ತಿರ ಹೋಗಬಹುದು. ಹಣ...ತುಂಬಾ ಹಣ ಇರೋದ್ರಿಂದ ಸಿನಿಮಾ ನಟಿಯರಂತಹ ಚೆಲುವು ಇರುವ ವೇಶ್ಯೆಯರನ್ನೇ ಅನುಭವಿಸಬಹುದು.

ಆದರೆ ತನ್ನ ಜೀವಿತದ ಅವಧಿಯಲ್ಲಿ ಆನಂದರಾವ್ ಇದಕ್ಕೆ ಮನಸ್ಸು ಮಾಡಿರಲಿಲ್ಲ. ಅದಕ್ಕೆ ಕಾರಣ ಕೆಲವು ಭಯಗಳು!

ವೇಶ್ಯೆಯ ಹತ್ತಿರ ಹೋಗುವುದನ್ನು ಯಾರಾದರೂ ನೋಡಿದರೇನು ಎಂಬ ಭಯ!

ವೇಶ್ಯೆ ಬ್ಲಾಕ್‌ಮೆಲ್ ಮಾಡಬಹುದೆಂಬ ಭಯ! ಇನ್ನೊಂದು ತುಂಬಾ ಭಯ ಇತ್ತು!

ವೇಶ್ಯೆಗೆ ಏಡ್ಸ್ ಇರಬಹುದೆಂಬ ಭಯ!

ಆದರೆ ಇತ್ತೀಚೆಗೆ ಆನಂದರಾವ್‌ನ ಬಹುದಿನಗಳ ಬಯಕೆ ಈಡೇರಿತ್ತು!

ಅವನು ತಾನು ಪ್ರತಿ ರಾತ್ರಿ ಮಲಗುವ ಮುನ್ನ ಕಲ್ಪನೆ ಮಾಡಿಕೊಳ್ಳುತ್ತಿದ್ದ ಸುಂದರಿಗಿಂತ ತುಂಬಾ...ತುಂಬಾ ಚೆನ್ನಾಗಿರುವ ಮಿಂಚಿನ ಬಳ್ಳಿಯಂತಹ ಹೆಣ್ಣನ್ನೇ ಅನುಭವಿಸಿದ್ದನು!

ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಅಪ್ಸರೆಯಂತಹ ಚೆಲುವೆಯನ್ನು ಐದು ರಾತ್ರಿಗಳ ಕಾಲ ತೃಪ್ತಿಯಾಗುವ ತನಕ ರಹಸ್ಯವಾಗಿ ಅನುಭವಿಸಿದ್ದನು.

ಅವನ ಬಹುದಿನಗಳ ಬಯಕೆ ತೀರಿತ್ತು.

ಅದಕ್ಕಾಗಿ ಕೊಡಿಟ್ಟ ಹಣ ಸಹ ಖಾಲಿಯಾಗಿತ್ತು!

ಈ ಮುದಯಕನಿಗೆ ಐದು ರಾತ್ರಿ ಸುಖ ನೀಡಿದ್ದ ಬ್ಯುಟಿ ಕ್ವೀನ್ ಯಾರು?

ಸಸ್ಪೆನ್ಸ್...ಈಗ ಹೇಳೋಲ್ಲ!

ಮುಂದೆ ತಿಳಿದೇ ತಿಳಿಯುತ್ತದೆ!

★★★

ಆನಂದರಾಯನ ಹೆಂಡತಿ ಸುಮಿತ್ರಮ್ಮನಿಗೆ ಒಂದು ಆಸೆ ಇತ್ತು.

'ಓ...ಈಕೆಗೂ ಸಹ ಆಸೆಯೇ' ಅಂತ ಸಂದೇಹದಿಂದ ಹುಬ್ಬೇರಿಸಬೇಡಿ ಅದು ಈಕೆಯ ಗಂಡನಾಗಿದ್ದ ತವರಿನ ಆಸೆ ಅಲ್ಲ!

ಹೆಣ್ಣಿನ ಸಹಜ ಆಸೆ!

ಮಾಂಗಲ್ಯದ ವಿನ ಕತ್ತಿನಲ್ಲಿ ಬೇರೆ ಏನೂ ಇರಲಿಲ್ಲ. ಇವಳ ಗಂಡ ಇದುವರೆಗೂ ಮಾಡಿಸಿಲ್ಲ. ಮುಂದೆ ಮಾಡಿಸಿಕೊಡುತ್ತಾನೆ ಅನ್ನೋ ನಂಬಿಕೆ ಇಲ್ಲ. ಆದರೆ ಆಸೆ ಮಾತ್ರ ಕಾಡುತ್ತಲೇ ಇದೆ!

ಚಿನ್ನದ ಸರ, ನೆಕ್‌ಲೇಸು, ಬಳೆಗಳು ಮತ್ತು ವಜ್ರದುಂಗುರ ಹಾಕಿಕೊಳ್ಬೇಕೆಂಬ ಆಸೆ!

ತಿರುಕನ ಕನಸಾಯ್ತು ಬಿಡಿ!

ತನ್ನ ಈಡೇಡುವುದೇನೊ ಅಂತ ಅವಳು ಕನಸು ಕಾಣುತ್ತಲೇ ಇದ್ದಾಳೆ.

ಅವಳ ಕನಸು ಈಡೇರುವ ಅವಕಾಶ ಈಗ ಅನಿರೀಕ್ಷಿತವಾಗಿ ಬರುವುದರಲ್ಲಿತ್ತು!

ಹೌವ್ ಈಸ್ ಇಟ್ ಪಾಸಿಬಲ್?

ಅವಳ ಗಂಡ ಏನಾದರೂ ಒಡವೆಗಳನ್ನೂ ಮಾಡಿಸಿಕೊಡುವ ಮನಸ್ಸ ಮಾಡಿರುವನೆ?

ಹಾಗೇನಾದರೂ ಆನಂದರಾಯರ ಹೆಂಡತಿಗೆ ಆಭರಣಗಳನ್ನು ಮಾಡಿಸುತ್ತಾನೆ ಅಂದರೆ ಅದು ಪ್ರಪಂಚದ ಎಂಟನೇ ಅದ್ಭುತ ಆಗುತ್ತದೆ.

ಆನಂದರಾಯ ಮಾಡಿಸೋಲ್ಲ ಬಿಡಿ!

ಹಾಗಾದರೆ ಸುಮಿತ್ರಳ ಈ ಆಸೆ ಈಡೇರುವ ಬಗೆ ಹೇಗೆ? ಸಂದೇಹ ಬರುತ್ತದೆ.

ಅದೃಷ್ಟ ಗುದ್ದಿಕೊಂಡು ಬಂದರೆ ಮನದಾಸೆ ಈಡೇರಲು ಎಷ್ಟು ಸಮಯ ಬೇಕು?

ಸುಮಿತ್ರಳ ಅದೃಷ್ಟ ಅವಳ ಬೆಡ್‌ರೂಮಿನ ಮಂಚದ ಮೇಲೆ ಕಂಡಿತು!

ಬಿಳಿಯ ಬಣ್ಣದ ಕರ್ಚಿಫ್‌ನಲ್ಲಿ ಸುತ್ತಿದ್ದ ವಸ್ತು! ಸುಮಿತ್ರ ಅದನ್ನು ತೆರೆದು ನೋಡಿದಳು.

ನೋಟಿನ ಕಂಡತೆಗಳು!

ಸುಮಿತ್ರಳಿಗೆ ನಂಬಿಕೆಯೇ ಬರುತ್ತಿಲ್ಲ. ಕಡಿಮೆ ಅಂದರೂ ಇಪ್ಪತ್ತು ಸಾವಿರ ರೂಪಾಯಿಗಳಿದೆ!

ಕರ್ಚಿಫ್ ನೋಡಿದರೆ ಅದು ಗಂಡಸರದ್ದಲ್ಲ ಅಂತ ಅನಿಸುತ್ತದೆ. ಅದಕ್ಕೆ ಸೆಂಟ್ ಪೂಸಲಾಗಿದೆ.

ಈ ಹಣ ಯಾರದ್ದು? ಇಲ್ಲಿಗೆ ಹೇಗೆ ಬಂದಿತು ಎಂದು ಅವಳ ಚಿಂತಿಸಲಾರಂಭಿಸಿದಳು.

ಮಂಚದ ಮೇಲೆ ಸಣ್ಣ ಸೀಸೆ ಸಹ ಬಿದ್ದಿರುವುದನ್ನು ಕಂಡು ಭಯಾಶ್ಚರ್ಯದಿಂದ ಎತ್ತಿಕೊಂಡಳು.

ನೀಲಿಬಣ್ಣದ ದ್ರವ ಇದೆ!

ಅದರ ಮೇಲೆ ಇಂಗ್ಲೀಷಿನಲ್ಲಿ ಖಡ್ಟಟ್ಟಟಞಟ್ಝ್ಞಿ ಎಂದು ಬರೆಯಾಗಿದೆ. ಅದೇನೆಂದು ಅರ್ಥವಾಗಲಿಲ್ಲ.

ಸುಮಿತ್ರಳಿಗೆ ಒಂದಂತೂ ಖಾತ್ರಿಯಾಯಿತು. ಈ ಹಣ ಖಂಡಿತಾ ಗಂಡನದ್ದಲ್ಲ! ಸಗಣಿಯ ಮೇಲೆ ರೂಪಾಯಿನ ಬಿಲ್ಲೆ ಬಿದ್ದಿದ್ದರೂ ಸಹ ಅದನ್ನು ಎತ್ತಿತೊಳೆದುಕೊಂಡು ಜೇಬಿಗೆ ಸೇರಿಸುವ ಜಿಪುಣ ನೋಟಿನ ಕಂತೆಗಳನ್ನು ನಿರ್ಲಕ್ಷ್ಯವಾಗಿ ಬಿಡಲು ಸಾಧ್ಯವಿಲ್ಲ.

ಸುಮಿತ್ರ ಸರ್ರನೆ ಬಾಗಿಲನ್ನು ಹಾಕಿ ಹಣ ಮತ್ತು ಸೀಸೆ ಎರಡನ್ನೂ ಸಗ ಈಗ ರಹಸ್ಯವಾದ ಸ್ಥಳದಲ್ಲಿ ಇರಿಸಿದಳು.

ಈ ಹಣ ಗಂಡನಿಗೆ ಕಂಡರೆ ಕಿತ್ತುಕೊಳುಳ್ತಾನೆ ಎಂಬ ಭಯ ಕಾಡಿತುದ

ಈ ಹಣದಲ್ಲಿ ಚಿನ್ನದ ಸರ ಮಾಡಿಸಿಕೊಳ್ಳಬೇಕು ಅಂತ ಅಂದುಕೊಂಡಳು.

ಹಾಲ್‌ನಲ್ಲಿ ಇದ್ದ ಫೋನ್ ರಿಂಗ್ ಆಯಿತು.

ಸುಮಿತ್ರ ರೂಮಿನಿಂದ ಹೊರಬಂದು ರಿಸೀವರನ್ನು ಎತ್ತಿಕೊಂಡು ''ಹಲೋ...''

''ಹಲೋ ಆಂಟಿ''

ಅಪರಿಚಿತ ಯುವತಿಯ ಮಧುರವಾದ ಧ್ವನಿಯನ್ನು ಕೇಳಿ ''ಯಾರು...ಯಾರದು?''

''ಹಣ ತೆಗೆದುಕೊಂಡಿರ?''

ಸುಮಿತ್ರ ಬೆಚ್ಚಿಬಿದ್ದಳು. ನಂತರ ಗಾಬರಿಯಿಂದಲೇ, ''ಅಂದರೆ...ಅಂದರೆ ಈ ಹಣ...''

''ನನ್ನದು ನಾನೇ ವಿಂಡೋ ಮೂಲಕ ನಿನ್ನ ಬೆಡ್‌ರೂಮಿನ ಹಾಸಿಗೆಯ ಮೇಲೆ ಹಾಕಿದೆ''

ಸುಮಿತ್ರ ಭಯದಿಂದ ''ನೀನು...ನೀನು...''

ಅವಳು ನಗುತ್ತಾ ''ನಿನ್ನ ಎನಿಮಿ ಅಂತೂ ಅಲ್ಲ, ಯಾಕೆ ಅಂದರೆ ಹಣ ಕೊಟ್ಟಿದ್ದೇನಲ್ಲ ಆಂಟಿ''

ಸುಮಿತ್ರ ಭಯಾಶ್ಚರ್ಯದಿಂದಲೇ, ''ನೀವ್ಯಾಕೆ ನನಗೆ ಹಣ ಕೊಟ್ಟಿದ್ದೀಯ?''

''ಕಾರಣ ಇದೆ ಆಂಟಿ''

''ಏನದು?''

''ನೀವು ನನಗೆ ಸಹಾಯ ಮಾಡಬೇಕು''

''ಸಹಾಯ...ನನ್ನಿಂದಲೇ?''

''ಹೌದು ಆಂಟಿ. ನಿನ್ನ ಹತ್ತಿರ ಈಗ ಇಪ್ಪತ್ತು ಸಾವಿರ ಇದೆ. ಅಲ್ಲವೆ?''

''ಇರಬಹುದು''

''ಅದು ಬರೀ ಅಡ್ವಾನ್ಸ್. ನಿನಗೆ ಇನ್ನು ಮುವತ್ತು ಸಾವಿರ ಕೊಡುತ್ತೇನೆ''

ನಂಬಲಾಗುತ್ತಿಲ್ಲ ಕನಸೋ, ನನಸೋ ಅರ್ಥವಾಗುತ್ತಿಲ್ಲ. ಇನ್ನೂ ಮುವತ್ತು ಸಾವಿರ ಕೊಡುತ್ತಾಳೆ ಅಂದರೆ ಅದೃಷ್ಟವಲ್ಲವೆ? ಅಬ್ಬ...ಐವತ್ತು ಸಾವಿರಕ್ಕೆ ಎಷ್ಟೊಂದು ಒಡವೆಗಳನ್ನು ಮಾಡಿಸಿಕೊಳ್ಳಬಹುದು ಎಂದುಕೊಂಡಳು.

''ಆಂಟಿ...ಕನಸು ಕಾಣುತ್ತಿದ್ದೀರ?'' ಎಂದು ಕಿಲಕಿಲನೆ ನಗುತ್ತಾ ಕೇಳಿದಳು.

ಸುಮಿತ್ರ, ''ಐವತ್ತು ಸಾವಿರ ಕೊಡಲು ಕಾರಣ ಏನು ಅಂತ ಹೇಳುತ್ತೀಯ?''

ಅವಳು, ''ಅದೇ ಹೇಳಿದೆನಲ್ಲ ಸಣ್ಣ ಸಹಾಯ ಅಂತ. ಹಣದ ಜೊತೆ ಒಂದು ಸೀಸೆ ಸಹ ಇತ್ತು. ಅಲ್ಲವೆ?''

''ಹೌದು''

''ಅದನ್ನು ನೀವು ಇವತ್ತು ರಾತ್ರಿ ನಾನು ಕೇಳುವ ವ್ಯಕ್ತಿ ಕುಡಿಸಬೇಕು''

ಸುಮಿತ್ರಮ್ಮನ ಭಯದಿಂದ ನಡುಗಿದಳು.

''ಯಾಕೆ ಸುಮ್ಮನಾದ್ರಿ?''

ಸುಮಿತ್ರಮ್ಮ ಭಯದಿಂದಲೇ, ''ನೀನ್ಯಾರು? ಇದೆಲ್ಲ? ಸೀಸೆಯಲ್ಲಿ ಏನಿದೆ?''

ಅವಳು ವಿವರಿಸಿದಳು.

ಸುಮಿತ್ರಮ್ಮ ನಡುಗುತ್ತಿದ್ದಾರೆ.

''ಇದು ನಿಮ್ಮಿಂದ ಸಾಧ್ಯವೆ?''

ಸುಮಿತ್ರಮ್ಮ ಕೂಡಲೇ ಉತ್ತರಿಸಲಿಲ್ಲ. ಯಾಕೆ ಅಂದರೆ ಭಯದಿಂದ ಧ್ವನಿ ಉಡುಗಿತ್ತು.

ಅವಳು ಗಂಭೀರವಾಗಿ, ''ಧೈರ್ಯದಿಂದ ಬುದ್ಧಿ ಉಪಯೋಗಿಸಿ ಮಾಡುವ ಒಂದು ನಿಮಿಷದ ಕೆಲಸಕ್ಕೆ ಐವತ್ತು ಸಾವಿರ ಸಿಗುತ್ತೆ''

ಕಣ್ಣಿನ ಮುಂದೆ ನೋಟಿನ ಕಂತೆಗಳು!

ಚಿನ್ನದ ಸರ...ಬಳೆಗಳು!

ರಂಗು - ರಂಗಿನ ಕನಸು!

''ನಿಮಗೆ ಒಪ್ಪಿಗೆ ತಾನೆ?''

ಸುಮಿತ್ರಮ್ಮ ಉಗುಳುನುಂಗುತ್ತಾ ಕಂಪಿಸುವ ಸ್ವರದಿಂದಲೇ, ''ಇದನ್ನು ಯಾರಿಗೆ ಕುಡಿಸಬೇಕು?''

''ನಿಮಗೆ ಪರಿಚಯ ಇರುವ ಯುವತಿ ಇನ್ನು ಸ್ವಲ್ಪ ಹೊತ್ತಿಗೆ ನಿಮ್ಮ ಮನೆಗೆ ಬರುತ್ತಾಳೆ. ಒಬ್ಬಳೇ ಬರುತ್ತಾಳೆ ಅಂಟ''

''ಯಾ...ಯಾ...ಯಾರವಳು?''

''ನಿಮ್ಮ ಬೀದಿಯಲ್ಲೇ ವಾಸ ಮಾಡಿಕೊಂಡಿರುವ ಮನೋಹರಿ ಮದುವೆಗೆ ಕರೆಯಲು ಬರುತ್ತಾಳೆ...!''

★★★

ರಾತ್ರಿ ಒಂಭತ್ತೂವರೆ!

ಕೋದಂಡರಾವ್ ಈಗ ಹೊಸದಾಗಿ ಕೊಂಡುಕೊಂಡಿದ್ದ ದೊಡ್ಡ ಸೂಟ್‌ಕೇಸ್‌ಗೆ ಎಂಟು ಸೆಟ್ ಬಟ್ಟೆಗಳನ್ನು ತಮ್ಮ ಮಗನ ಹೆಂಡತಿಗೆ ಮಾಡಿಸಿರುವ ಚಿನ್ನದ ಆಭರಣಗಳನ್ನು, ಮದುವೆಗೆ ತೆಗೆದಿರುವ ಸೀರೆಗಳನ್ನು ಇದರಲ್ಲಿ ನೀಟಾಗಿ ಜೋಡಿಸಿದರು.

ಫೋನ್ ರಿಂಗ್ ಆಯಿತು.

ಕೋದಂಡರಾವ್ ಅಟೆಂಡ್ ಮಾಡಿದರು.

''ಡ್ಯಾಂಡಿ...ಇನ್ನೂ ಹೊರಟಿಲ್ಲವೆ?''

''ರೆಡಿಯಾಗುತ್ತಿದ್ದೇನೆ ಮುಕುಂದ''

ಬೆಂಗಳೂರಿನಲ್ಲಿದ್ದ ಮಗ ತನ್ನ ತಂದೆಯ ಜೊತೆ ಈಗ ಫೋನಿನಲ್ಲಿ ಮಾತಾಡ್ತು ''ನೀವು ರೆಡಿಯಾಗಿ ಹೊರಡುವುದರಲ್ಲಿ ನನ್ನ ಮದುವೆ ಮುಗಿದಿರುತ್ತದೆ. ಮದುವೆ ಆಗ್ತಾ ಇರೋದು ನಾನು ಡ್ಯಾಡಿ''

''ನನಗೆ ಗೊತ್ತಿದೆ ಕಣೋ ಮುಕುಂದ''

''ಮಾವ ಆಗಿರುವ ನೀವೇ ಮೇಕಪ್ ಮಾಡಿಕೊಳ್ಳಲು ಇಷ್ಟೊಂದು ಟೈಮ್ ತೆಗೆದುಕೊಂಡರೆ ನಾನು...ಮದುವೆ ಗಂಡು ಎಷ್ಟು ಹೊತ್ತು ಕನ್ನಡಿಯ ಮುಂದೆ ನಿಂತುಕೊಳ್ಳಲಿ''

ಕೋದಂಡರಾವ್ ಗಹಗಹಿಸಿ ನಕ್ಕರು.

''ಎಷ್ಟು ಹೊತ್ತಿಗೆ ಹೊರಡುತ್ತೀರ?''

''ಈಗ ಹೊರಡುತ್ತಿದ್ದೇನೆ. ರಾತ್ರಿ ಎರಡು ಗಂಟೆಗೆ ಬೆಂಗಳೂರನ್ನು ತಲುಪುತ್ತೇನೆ. ಮೊದಲು ನಿನ್ನ ಮನೆಗೆ ಬಂದು ನಂತರ ಬೇರೆ ಕಡೆ ಹೊರಡುತ್ತೇನೆ. ಮದುವೆಗೆ ತೆಗೆದಿರೋ ಬಟ್ಟೆಗಳು, ಒಡವೆಗಳನ್ನು ತುರತ್ತೇನೆ''

ಮುಕುಂದ, ''ಅಯ್ಯೋ ಡ್ಯಾಡಿ...ಅದನ್ನೆಲ್ಲಾ ಯಾಕೆ ಹೊತ್ತುಕೊಂಡು ಬರುತ್ತೀರ?'' ನಿಮ್ಮ ಬಟ್ಟೆಗ್ಳೇ ಕಡಿಮೆ ಅಂದರೂ ಡಜನ್ ಸೆಟ್ ಇರುತ್ತೆ''

ಕೋದಂಡರಾವ್ ನಗುತ್ತಾ ''ಯೂ ನಾಟಿ ಬಾಯ್! ನನ್ನನ್ನು ರೇಗಿಸಟತ್ತಿದ್ದೀಯ?''

''ರೇಗಿಸುತ್ತಿಲ್ಲ ದಿಸ್ ಈಸ್ ಫ್ಯಾಕ್ಟ್''

ಪುನಃ ಗಹಗಹಿಸಿ ನಕ್ಕರು.

ಮುಕುಂದನಿಗೆ ಈ ನಗು ಹಿಡಿಸುತ್ತಿರಲಿಲ್ಲ.

''ಡ್ಯಾಡೀ...''

''ಓ...ಸಾರಿ ಮೈ ಸನ್. ಮೊದಲು ನಿನ್ನ ಮನೆಗೆ ಬಂದು ಮದುವೆಗೆ ತಂದಿರೋ ಸೀರೆಗಳು, ಆಭರಣಗಳನ್ನು ನಿನಗೆ ತೋರಿಸುತ್ತೇನೆ. ನಾಳೆ ಬೆಳಿಗ್ಗೆಯಿಂದಲೇ ಮದುವೆಗೆ ಕರೆಯಲು ಹೋಗೋಣ.''

''ಓ.ಕೆ. ಡ್ಯಾಡಿ''

''ಮಲಗಿ ಬಿಡಬೇಡ ಕಣಯ್ಯ''

ಮುಕುಂದ, ''ಒಬ್ಬ ಮನುಷ+ಯನ ತೂಕದಷ್ಟೇ ಲಗೇಜ್ ಅನ್ನು ಸೂಟ್‌ಕೇಸ್‌ನಲ್ಲಿ ಹೊತ್ತುಕೊಂಡು ತರುವಾಗ ನಾನು ನಿದ್ದೆ ಮಾಡಲು ಸಾಧ್ಯವೇ? ಮನೆಯ ಹತ್ತಿರ ಬಂದ ಕೂಡಲೇ ಹಾರ್ನ್ ಹೊಡೆಯಿರಿ''

''ಓ.ಕೆ. ಮೈ ಡಿಯರ್ ಸನ್''

ಫೋನ್ ಡಿಸ್‌ಕನೆಕ್ಟ್ ಆಯಿತು.

ಕೋದಂಡರಾವ್ ಸೂಟ್‌ಕೇಸ್ ಅನ್ನು ಲಾಕ್ ಮಾಡಿ ಅದನ್ನು ಬಂಗಲೆಯ ಕೆಲಸದ ಆಳಿನ ಸಹಾಯದಿಂದ ಹೊರೆಸಿಕೊಂಡು ಬಂದು ಕಾರಿನ ಡಿಕ್ಕಿಯಲ್ಲಿ ಇರಿಸಿದರು. ತುಂಬಾ ತೂಕ ಇತ್ತು.

ಕೆಲಸದ ಆಳು ಸುಸ್ತಾಗಿದ್ದನು.

ಕೋದಂಡರಾವ್ ತಾನೇ ಕಾರನ್ನು ಡ್ರೈವ್ ಮಾಡಿಕೊಂಡು ಬೆಂಗಳೂರಿನಲ್ಲಿರುವ ಮಗನ ಮನೆಗೆ ಹೊರಟರು.

ಆಗ ರಾತ್ರಿ ಹತ್ತೂವರೆ!

★★★

ಎರಡೂವರೆ ಗಂಡೆಗಳ ಮೊದಲು! ಅಂದರೆ ರಾತ್ರಿ ಎಂಟು ಗಂಟೆಯ ಸಮಯದಲ್ಲಿ!

ಮುಕುಂದನ ಮನಸ್ಸನ್ನು ಗೆದ್ದು ಕಂಕಣ ಭಾಗ್ಯ ಪಡೆಯುತ್ತಿರುವ ಚೆಲುವೆ ಮನೋಹರಿಯ ಮನೆಯಲ್ಲಿ ಅವಳ ತಂದೆ - ತಾಯಿ ಮುಂಭಾಗದ ಹಾಲ್‌ನಲ್ಲಿ ಕುಳಿತುಕೊಂಡಿದ್ದರು.

ಮನೋಹರಿಯ ಮದುವೆಗೆ ಇನ್ನು ಆರು ದಿನಗಳು ಮಾತ್ರ ಇದೆ. ಆದರೆ ಈ ದಂಪತಿಗಳು ಆರಾಮವಾಗಿ ಮೈಚಾಚಿಕೊಂಡು ಕುಳಿತಿದ್ದಾರೆ.

ಮಗಳ ಮದುವೆಯ ಸಿದ್ಧತೆಗಳ ಬಗ್ಗೆ ಅವರು ತಲೆಯನ್ನೇ ಕೆಡಿಸಿಕೊಂಡಿಲ್ಲ.

ಅದರ ಅಗತ್ಯವೇ ಇಲ್ಲ!

ಯಾಕೆ ಅಂದರೆ ಮನೋಹರಿಯನ್ನು ಮೆಚ್ಚಿಕೊಂಡಿರುವ ಮುಕುಂದ

ಅವ ಬಡತನ ಅರಿತು ತಾನೇ ಎರಡೂ ಖರ್ಚುಗಳನ್ನೂ ಹಾಕಿಕೊಂಡು ಮದುವೆಯಾಗುತ್ತಿದ್ದಾನೆ. ಆಲ್ ಕಾಂಟ್ರಾಕ್ಟ್ ನೀಡಿರುವುದರಿಂದ ಇವರುಗಳಿಗೆ ಯಾವ ಕೆಲಸವೂ ಇಲ್ಲ.

ಮನೋಹರಿಯ ತಂದೆ ಕುಡುಕ. ಅವನಿಗೆ ಕುಡಿತವೇ ಪ್ರಪಂಚ.

ಇನ್ನು ತಾಯಿ, ಈ ತಾನೇ ಆಪರೇಷನ್ ಆಗಿರುವುದರಿಂದ ಹೆಚ್ಚು ಕೆಲಸ ಮಾಡುವ ಹಾಗಿಲ್ಲ.

ಆಪರೇಷನ್‌ಗೆ ಒಂದು ಲಕ್ಷ ಖರ್ಚಾಗಿತ್ತು! ಮನೋಹರಿಯೇ ಅದನ್ನು ಹೊಂದಿಸಿದ್ದಳು. ಕುಡುಕ ತಂದೆಗೆ ಇದೇ ಪರಮಾಶ್ಚರ್ಯ!

ಕೆಲಸಕ್ಕೆ ಸೇರಿ ಕೇವಲ ಮೂರು ತಿಂಗಳು ಮಾತ್ರ ಆಗಿದೆ. ಬರ್‍ತಾ ಇರೋ ಸಂಬಳ ಎರಡು ಸಾವಿರ! ನಗರದಲ್ಲಿ ಜೀವನಕ್ಕೇ ಸಾಕಗೋಲ್ಲ ಅಂದಮೇಲೆ ಲಕ್ಷ ಹೇಗೆ ಹೊಂದಿಸಿದಳುಐ

ಇವಳು ಕೆಲಸ ಮಾಡುತ್ತಿರುವ ಕಡೆ ಅಡ್ವಾನ್ಸ್ ಕೊಡಲು ಸಾಧ್ಯವೇ ಇಲ್ಲ. ಕೆಲಸಕ್ಕೆ ಸೇರಿ ಮೂರು ತಿಂಗಳು ಮಾತ್ರ ಆಗಿದೆ. ಇದು ಅವಳಿಂದ ಹೇಗೆ ಸಾಧ್ಯವಾಯಿತು?

ಗಂಡನಾಗಿ, ತಂದೆಯಾಗಿ ತನ್ನ ಜವಾಬ್ದಾರಿಯನ್ನು ಮರೆತಿರುವ ಈ ಕುಡುಕ ಮಗಳ ಹಣದಲ್ಲೇ ಕುಡಿದು ಇದರ ಬಗ್ಗೆ ತುಂಬಾ ತಲೆ ಕೆಡಿಸಿಕೊಂಡಿದ್ದಾನೆ.

ಲಗ್ನಪತ್ರಿಕೆಗಳು ಹರಡಿವೆ!

ಕಾಲಿಂಗ್ ಬೆಲ್ ಶಬ್ದ ಮಾಡಿತು!

ಮನೋಹರಿಯ ತಾಯಿ ಎದ್ದು ಹೋಗಿ ಬಾಗಿಲನ್ನು ತೆರೆದಾಗ ಅಲ್ಲಿ ಅಪರಿಚಿತ ಮುದುಕ ನಿಂತಿದ್ದ.

ಮುಖದ ತುಂಬಾ ಗಡ್ಡ ಬೆಳೆದಿದೆ. ಸೋಡಾಗ್ಲಾಸಿನ ಕನ್ನಡಕ ಹಾಕಿಕೊಂಡಿದ್ದಾನೆ.

ಸಿಲ್ಕ್ ಜುಬ್ಬಾ, ಪೈಜಾಮ ಧರಿಸಿದ್ದಾನೆ. ಆ ಮುದುಕ, ''ಮನೋಹರಿ ಇದ್ದಾಳ?''

''ಇಲ್ಲ ನೀವ್ಯಾರು?''

ಮುದುಕ ಎಲೆ - ಅಡಿಕೆ ರಸವನ್ನು ಚರಂಡಿಗೆ ಉಗಿಯುತ್ತಾ ''ನನ್ನ ಹೆಸರು ರಂಗಯ್ಯ ಅಂತ. ಮನೋಹರಿಗೆ ತುಂಬಾ ಬೇಕಾಗಿರುವ ವ್ಯಕ್ತಿ''

''ಒಳಗೆ ಬನ್ನಿ''

''ಮನೋಹರಿ ಎಲ್ಲಿ?''

''ಅವಳು ಈಗ ತಾನೇ ಮದುವೆಗೆ ಕರೆಯಲು ಹೋದಳು ಒಳಗೆ ಬನ್ನಿ''

''ಪರವಾಗಿಲ್ಲ ಅಂದಹಾಗೆ ಮನೋಹರಿ ಈಗ ಯಾರ ಮನೆಯಲ್ಲಿ ಇರುತ್ತಾಳೆ?''

''ಈ ಬೀದಿಯ ಕೊನೆಯಲ್ಲಿ ಆನಂದರಾವ್ ಅಂತ ನಮಗೆ ಬೇಕಾದವರು ಇದ್ದಾರೆ. ಮನೋಹರಿ ಅವರ ಮನೆಯಲ್ಲಿ ತುಂಬಾ ಹೊತ್ತು ಇರುತ್ತಾಳೆ''

ಮುದಕ ಎಲೆ - ಅಡಿಕೆಯ ರಸವನ್ನು 'ಪಿಚಕ್' ಎಂದು ಉಗುಳುತ್ತಾ ''ನಾನು ಅಲ್ಲಿಗೇ ಹೋಗಿ ಅವಳನ್ನು ನೋಡುತ್ತೇನೆ'' ಎಂದು ಉತ್ತರಕ್ಕೂ ಸಹ ಕಾಯದೆ ಹೊರಟನು.

ಈ ಮುಕುದ ಯಾರು?

ಬಿರುಬಿರನೆ ನಡೆದುಕೊಂಡು ಬಂದ ಮುದುಕ ಆನಂದರಾವ್ ಮನೆಗೆ ಬಂದನು!

ಒಂದೇ ಸಲ ಒಳಗೆ ನುಗ್ಗಲಿಲ್ಲ. ಸುತ್ತಲೂ ನಿಧಾನವಾಗಿ ಒಳಗೆ ಅಡಿಯಿರಿಸಿದನು.

ಮನೋಹರಿ ಹಾಲ್‌ನಲ್ಲಿ ಕುಳಿತಿದ್ದಳ. ಅಲ್ಲಿ ಬೇರೆ ಯಾರೂ ಸಹ ಕಂಡು ಬರಲಿಲ್ಲ!

ಆಗ ರಾತ್ರಿ ಒಂಭತ್ತೂವರೆ ಗಂಟೆ!

★★★

ಬೆಂಗಳೂರಿಗೆ ಹೋಗುವ ರಸ್ತೆ!

ಆಗ ರಾತ್ರಿ ಹನ್ನೊಂದು ಗಂಟೆ!

ಕಾರನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿ ಬಾನೆಟ್ ತೆಗೆದು ಎಂಜಿನ್ ಅನ್ನು ಮುದುಕ ಈ ಪರೀಕ್ಷಿಸುತ್ತಿದ್ದ.

ಕಾರು ಕೈ ಕೊಟ್ಟಿದೆ!

ಇನ್ನು ಬೆಂಗಳೂರನ್ನು ತಲುಪುವುದು ಹೆಗೆ? ತಾನು ಬರುತ್ತೇನೆ ಅಂತ ಮಗ ರಾತ್ರಿಯೆಲ್ಲಾ ಕಾದಿರುತ್ತಾನೆ. ಹೋಗದಿದ್ದರೆ ಬೈದುಕೊಳ್ಳುತ್ತಾನೆ. ಅಲ್ಲದೆ ಪ್ರೋಗ್ರಾಂ ಅಪ್‌ಸೆಟ್ ಆಗುತ್ತದೆ.

ಈ ಕಾರನ್ನು ತನ್ನಿಂದ ರಿಪೇರಿ ಮಾಡಲು ಸಾಧ್ಯವೇ ಇಲ್ಲ. ಯಾರಾದರೂ ಮೆಕ್ಯಾನಿಕ್ ಅನ್ನು ಕಳಿಸಬೇಕು.

ದೂರದಲ್ಲಿ ಕಾರೊಂದು ಬರುವುದು ಕಂಡಿತು. ಕೋದಂಡರಾವ್ ರಸ್ತೆಯ ಮಧ್ಯ ಭಾಗಕ್ಕೆ ಬಂದು ಕೈಯಾಡಿಸಲಾರಂಭಿಸಿದನು. ಕಾರಿನ ನಂಬರ್ ನೋಡಿದ ಕೂಡಲೇ ಮುಖ ಅರಳಿತು.

ಆನಂದರಾಯನ ಕಾರು!

ಕಾರು ಗಕ್ಕನೆ ನಿಂತುಕೊಂಡಿತು. ಕಾರಿನಲ್ಲಿ ಆನಂದರಾವ್ ಮತ್ತು ಸುಮಿತ್ರ ಕುಳಿತ್ತಿದ್ದಾರೆ.

ಅಂತಹ ಸಮಯದಲ್ಲಿ ಅವರು ಅಲ್ಲಿ ಖಂಡಿತಾ ಈ ಬೇಡದ ಗೆಳೆಯನನ್ನು ನಿರೀಕ್ಷಿಸಿರಲಿಲ್ಲ!

ದಂಪತಿಗಳು ಗಾಬರಿಯಾದರು. ಭಯದಿಂದ ಮುಖ ಬಿಳುಚಿಕೊಂಡಿತು.

ಅವರಿಬ್ಬರು ಚಡಪಡಿಸುತ್ತಿದ್ದಾರೆ.

ಕೋದಂಡರಾವ್ ನಗುತ್ತಾ, ''ಅಪರಾತ್ರಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ತರಹ ಕಾರಿಗೆ ಅಡ್ಡ ಬಂದನಲ್ಲ ಅಂತ ಗಾಬರಿಯಾಗಿದ್ದೀಯ ಫ್+ರಂಡ್''

ಸುಮಿತ್ರಮ್ಮ ಭಯಗೊಂಡಿದ್ದಾರೆ. ಆಕೆಯ ದುಂಡನೆಯ ಮುಖದಲ್ಲಿ ಬೆವರಿನ ಹನಿಗಳು!

ಆನಂದರಾವ್ ಉಗುಳುನುಂಗುತ್ತಾ ''ನೀನು...ನೀನು ಇದೇನು ಇಲ್ಲಿ...ಈ ಹೊತ್ತಿನಲ್ಲಿ?''

ಕೋದಂಡರಾವ್ ನಗುತ್ತಾ ''ನನ್ನ ವಿಷಯ ಆಮೇಲೆ ಹೇಳುತ್ತೇನೆ. ಅದು ಸರಿ...ನೀನೇನಯ್ಯ ದೆವ್ವಗಳು ರೊಮ್ಯಾನ್ಸ್ ಮಾಡುವ ಹೊತ್ತಿನಲ್ಲಿ ಹೆಂಡತಿಯ ಜೊತೆ ವಿಹಾರಕ್ಕೆ ಹೊರಗಿದ್ದೀಯ?''

ಸುಮಿತ್ರಮ್ಮ ತಲೆ ತಗ್ಗಿಸಿದರು.

ಆನಂದರಾವ್ ತೆಳು ನಗೆ ಬೀರಿದರು. ಕೋದಂಡರಾವ್, ''ಯಾಕಯ್ಯ ಮಾಲು ಸಮೇತ ಸಿಕ್ಕಿಬಿದ್ದರೋ ಕಳ್ಳನ ತರಹ ಗಾಬರಿಯಾಗಿದ್ದೀಯ?''

ದಂಪತಿಗಳು ಹೌಹಾರಿದರು. ಆನಂದರಾವ್ ಪೆದ್ದು, ಪೆದ್ದಾಗಿ ನಗುತ್ತಾ ''ಅದು... ಅದು...''

ಕೋದಂಡರಾವ್, ''ನೀನು ಕಾರಣ ಹೇಳಲು ತಿಣುಕಾಡುವುದನ್ನು ನಾನು ನೋಡಲಾರೆ. ನಿಮ್ಮಿಬ್ಬರ ಪರ್ಸನಲ್ ಏನಿರುತ್ತೋ ಯಾರಿಗೆ ಗೊತ್ತು?''ದಂಪತಿಗಳು ಬೆಚ್ಚಿಬಿದ್ದರು.

"ನೀವೀಗ ಯಾವ ಕಡೆ ಹೋಗುತ್ತಿದ್ದೀರ?"

ಉತ್ತರಿಸಲು ಪರದಾಡುತ್ತಿದ್ದಾರೆ.

ಕೋದಂಡರಾವ್, "ಇದು ಬೆಂಗಳೂರಿನ ರಸ್ತೆ, ಇಂತಹ ಹೊತ್ತಿನಲ್ಲಿ ಇನ್ನೆಲ್ಲಿಗೆ ಹೋಗಲು ಸಾಧ್ಯ? ನೋ ಡವಟ್ ನೀವು ಬೆಂಗಳೂರಿಗೆ ಹೋಗುತ್ತಿದ್ದೀರ. ಯಾಮ್ ಐ ರೈಟ್ ಡಿಯರ್ ಫ್ರೆಂಡ್"

ಆನಂದರಾವ್ ಗಾಬರಿಯಿಂದಲೇ, "ಹಾಂ...ಹಾಂ...ಬೆಂಗಳೂರಿಗೆ ಹೋಗುತ್ತಿದ್ದೇನೆ"

"ಥ್ಯಾಂಕ್ ಎರ ಫೆ+ರಂಡ್"

ಆನಂದರಾವ್ ಗಲಿಬಿಲಿಯಿಂದಲೇ, "ನಾನು ಬೆಂಗಳೂರಿಗೆ ಹೋದರೆ ನೀವ್ಯಾಕೆ ಥ್ಯಾಂಕ್ಸ್ ಹೇಳುತ್ತಿಲಯ?"

ಕೋದಂಡರಾವ್ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದ ಕಾರನ್ನು ತೋರಿಸುತ್ತಾ, "ಅಲ್ಲಿನೋಡಯ್ಯ...ನನ್ನ ಮೆಕ್ಯಾನಿಕ್ ಬರಬೇಕು. ನನ್ನ ಮಗ ಕಾಯುತ್ತಿರುತ್ತಾನೆ. ನಾನು ಬೆಂಗಳೂರಿಗೆ ಹೋಗಲೇಬೇಕು ಕಣಯ್ಯ ಹೇಗಿದ್ದರೂ ನೀನು ಅಲ್ಲಿಗೇ ಹೋಗುತ್ತಿದ್ದೀಯ. ನನ್ನನ್ನೂ ಸಹ ನಿನ್ನ ಕಾರಿನಲ್ಲಿ ಎತ್ತಿ ಹಾಕಿಕೊಂಡು ಹೋಗಿ ಬೆಂಗಳೂರಿನಲ್ಲಿ ಬಿಸಾಕಯ್ಯ ಸ್ನೇಹಿತ"

ದಂಪತಿಗಳು ಭಯ, ಗಾಬರಿಯಿಂದಲೇ ಪರಸ್ಪರ ಮುಖ ನೋಡಿಕೊಂಡರು. ಇಂತಹ ಸನ್ನಿವೇಶ ಎದುರಾಗುತ್ತದೆ ಅಂತ ಅವರು ಅಂದುಕೊಂಡೇ ಇರಲಿಲ್ಲ!

"ಬೆಂಗಳೂರಿಗೆ ಕರೆದುಕೊಂಡು ಹೋಗಲು ಈ ರೀತಿ ಮೀನಾ, ಮೇಷ ಎಣಿಸುತ್ತಿದ್ದೀಯ?"

ಆನದದರಾವ್ ಎಚ್ಚೆತ್ತು "ಛೇ...ಛೇ...ಹಾಗೆನಿಲ್ಲ. ಬಾರಯ್ಯ ಧಾರಾಳವಾಗಿ ಬಾ"

ಕೋದಂಡರಾವ್ "ಸದ್ಯ...ಬೇಡಾ ಅಂತ ಅನ್ನಲಿಲ್ಲವಲ್ಲ. ಬಾ ಅಂತ ಕರೆದರೆ ಆಗೋಲ್ಲ ಕಾರಿನಿಂದ ಇಳಿದು ಬಂದು ಸಹಾಯ ಮಾಡಯ್ಯ"

ಆನಂದರಾವ್ ಕಾರಿನಿಂದ ಇಳಿದನು.

ಕೋದಂಡರಾವ್ ಕಾರಿನ ಡಿಕ್ಕಿಯನ್ನು ತೆರೆದು ತುಂಬಾ ಕಷ್ಟದಿಂದ ದೊಡ್ಡ ಸೂಟ್‌ಕೇಸ್ ಅನ್ನು ನೆಲದ ಮೇಲೆ ಇರಿಸಿ ಪುನಃ ಲಾಕ್ ಮಾಡಿದನು.

ಆನಂದರಾವಾ ಬೆಚ್ಚಿಬಿದ್ದನು.

ಆನಂದರಾವ್ ಈಗ ಸೂಟ್‌ಕೇಸ್ ಅನ್ನು ಬೆರಗು ಕಣ್ಣುಗಳಿಂದ ನೋಡುತ್ತಿದ್ದಾನೆ.

ಮೈ ಚಳಿ ಬಂದವರಂತೆ ನಡುಗುತ್ತಿದ್ದಾನೆ.

ಕೋದಂಡರಾವ್, ''ಹೆಲ್ಪ್ ಮಾಡಯ್ಯ ಗೆಳೆಯ ಈ ಸೂಟ್‌ಕೇಸ್ ಅನ್ನು ನಿನ್ನ ಕಾರಿನ ಡಿಕ್ಕಿಗೆ ಹಾಕೋಣ''

ಬೇರೆ ದಾರಿಯೇ ಇಲ್ಲ. ಅವರಿಬ್ಬರು ಸೇರಿಕೊಂಡು ಈಗ ಆ ಸೂಟ್‌ಕೇಸ್ ಅನ್ನು ಕಾರಿನ ಹತ್ತಿರ ತಂದರು. ಆನಂದರಾವ್ ಡಿಕ್ಕಿ ತೆರೆದನು.

ಕೋದಂಡರಾಯನ ಮುಖ ಅರಳಿತು. ಯಾಕೆ ಅಂದರೆ ಡಿಕ್ಕಿಯಲ್ಲಿ ಅದೇ ತರಹ ಇದ್ದ ಮತ್ತೊಂದು ಸೂಟ್‌ಕೇಸ್ ಗುಮ್ಮನೆ ಕುಳಿತಿದೆ.

ಅದು ಕೋದಂಡರಾವ್ ಗೆಳೆಯನಿಗೆ ಅಂತ ಅದೇ ದಿನ ಬೆಳಿಗ್ಗೆ ಕೊಡಿಸಿದ್ದನು.

ಇಬ್ಬರ ಸೂಟ್‌ಕೇಸ್‌ಗಳು ಬಣ್ಣ, ಆಕಾರ, ಗಾತ್ರ, ಪ್ರತಿಯೊಂದರಲ್ಲೂ ಒಂದೇ ತರಹ ಇದೆ.

ಕೋದಂಡರಾವ್ ನಗುತ್ತಾ, ''ಏನಯ್ಯ...ನೀನೂ ಸಹ ಭಾರೀ ಲಗೇಜ್ ಇದ್ದ ಸೂಟ್‌ಕೇಸ್ ಅನ್ನು ಕಾರಿನ ಡಿಕ್ಕಿಯಲ್ಲಿ ಇರಿಸಿದರು.

ಒಂದೇ ತರಹ ಇದ್ದ ಎರಡು ಸೂಟ್‌ಕೇಸ್‌ಗಳು!

ಈಗ ಕಾರು ಚಲಿಸುತ್ತಿದೆ.

ಕೋದಂಡರಾವ್ ತನ್ನ ಮಗನ ಮದುವೆಯ ಬಗ್ಗೆ ಹೇಳುತ್ತಿದ್ದಾನೆ. ನಂತರ, ''ಆನಂದ...ನನಗೂ ಸಹ ಈ ಮದುವೆಗೆ ಪೂರ್ಣ ಒಪ್ಪಿಗೆ ಇಲ್ಲ. ನನ್ನ ಮಗ ಮನೋಹರಿಯನ್ನು ಇಷ್ಟಪಟ್ರಿದ್ದಾನಲ್ಲ ಅಂತ ಒಪ್ಪಿಕೊಂಡಿದ್ದೇನೆ''

ಆನಂದರಾವ್ ಹೂಂಗುಟ್ಟಿದನು. ಅವನ ತಲೆಯ ತುಂಬಾ ಬೇರೆ ಆಲೋಚನೆಗಳು ತುಂಬಿದ್ದವು.

ಭಯ, ಗಾಬರಿ, ಆತಂಕ!

ಆಗಾಗ ದಂಪತಿಗಳು ಬೆಚ್ಚಿಬೀಳುತ್ತಿದ್ದರು.

ಕೋದಂಡರಾವ್ ''ಇದೊಂದು ವಿಚಾರದಲ್ಲಿ ನನ್ನ ಮಗ ನನಗೆ ತುಂಬಾ ನಿರಾಸೆ ಮಾಡಿದ ಕಣಯ್ಯ. ನನಗೆ ನನ್ನ ತಂಗಿ ಮಗಳು ಮೋನಿಕಳನ್ನು ತಂದುಕೊಳ್ಳಬೇಕು ಅಂತ ಆಸೆಯಿತು. ನನ್ನ ತಂಗಿ ಸಾಯುವ ಮುನ್ನ ಪ್ರಯಾಣ ಸಹ ಮಾಡಿದ್ದೆ. ಈಗಿನ ಕಾಲದ ಹುಡುಗರು ನಮ್ಮ ಮಾತು ಎಲ್ಲಿ ಕೇಳುತ್ತಾರೆ ಹೇಳು'' ಎಂದು ಜೋರಾಗಿ ನಿಟ್ಟುಸಿರು ಚೆಲ್ಲಿದನು.

ಆನಂದರಾವ್ ಉತ್ತರಿಸಲಿಲ್ಲ.

ಕೋದಂಡರಾವ್, ''ಇದೆನಯ್ಯ...ನಾನು ಒಂದೇ ಸಮನೆ ವಟಗುಟ್ಟುತ್ತಲೇ ಇದ್ದೇನೆ ನೀನು ನೋಡಿದರೆ ಕಪ್ಪೆನುಂಗಿರೋ ಹಾವಿನ ತರಹ ಬಿಗಿದುಕೊಂಡು ಕುಳಿತಿದ್ದೀಯ. ಏನಾಗಿದೆ ನಿನಗೆ?''

ಆನಂದರಾವ್ ಪೇಲವ ನಗೆ ಬೀರುತ್ತಾ ''ಇಂತಹ ಅಪರಾತ್ರಿಯ ಹೊತ್ತಿನಲ್ಲಿ ದೆವ್ವ, ಪ್ರೇತಗಳು ಮಾತ್ರ ಮಾತಾಡುತ್ತವೆ. ಮನುಷ್ಯರಲ್ಲ''

ಕೋದಂಡರಾವ್ ಗಹಗಹಿಸಿ ನಕ್ಕನು. ಕೂಡಲೇ ತನ್ನ ಬಾಯಿಯನ್ನು ಮುಚ್ಚಿಕೊಂಡನು.

''ಯಾಕಯ್ಯ ನಗು ನಿಲ್ಲಿಸಿದೆ?''

''ನನ್ನ ಮಗನ ಮಾತು ನೆನಪಾಯಿತು''

''ಏನದು?''

ಕೋದಂಡರಾವ್, ''ನಾನು ಈ ರೀತಿ ಗಹಗಹಿಸಿ ನಕ್ಕನೆ ನನ್ನ ಬೋಳುತಲೆ ಕುಣಿಯುತ್ತದೆ. ನೋಡಲು ಚೆನ್ನಾಗಿರೋಲ್ಲ ಅಂತ ಅಂದಿದ್ದಾನೆ''

ಆನಂದರಾವ್, ''ಹಾಗಾದರೆ ಬಾಯಿ ಮುಚ್ಚಿಕೊಂಡು ತೆಪ್ಪಗೆ ಕೂರಯ್ಯ ಗೆಳೆಯ''

ಕಾರು ಬೆಂಗಳೂರನ್ನು ತಲುಪಿತು.

ಜೋರಾಗಿ ಹಾರನ್ ಮಾಡಿದ್ದರಿಂದ ಕೋದಂಡರಾಯನ ಮಗ ಮುಕುಂದ ಹೊರಗೆ ಬಂದನು.

''ಡ್ಯಾಡಿ...ನಿಮ್ಮ ಕಾರು ಎಲ್ಲಿ?'' ಎಂದು ಕೇಳುತ್ತಾ ಹತ್ತಿರ ಬಂದನು.

''ನನ್ನ ಕಾರಿನ ಕತೆ ಆಮೇಲೆ ಹೇಳುತ್ತೇನೆ ಬಾ...ಡಿಕ್ಕಿಯಲ್ಲಿರೋ ಲಗೇಜ್ ಕೆಳಗೆ ಇಳಿಸೋಣ'' ಎಂದು ಅಲ್ಲಿಗೆ ಬಂದರು.

ಡಿಕ್ಕಿ ತೆರೆಯಲಾಯಿತು.

ಮುಕುಂದ ''ಇದೇನ್ ಡ್ಯಾಡಿ...ಎರಡು ಸೂಟ್‌ಕೇಸುಗಳು ಒಂದೇ ತರಹ ಇದೆ''

ಕೋದಂಡರಾವ್ ವಿವರಿಸಿದನು.

''ನಿಮ್ಮ ಲಗೇಜ್ ಯಾವುದು?''

ಕೋದಂಡರಾವ್ ಕೆಲವು ಸೆಕೆಂಡುಗಳ ಕಾಲ ಎರಡನ್ನೂ ನೋಡಿ ನಂತರ ಒಂದನ್ನು ಎತ್ತಿಕೊಂಡನು.

ದಂಪತಿಗಳು ಭಯಗೊಂಡಿದ್ದಾರೆ. ಹೇಳಿಕೊಳ್ಳಲಾರದ ಗಾಬರಿಯಿಂದ ಚಡಪಡಿಸುತ್ತಿದ್ದಾರೆ.

ಮುಕುಂದ ಏದುಸಿರು ಬಿಡುತ್ತಾ ''ಅಬ್ಬಬ್ಬ...ಹೆಣಭಾರ ಇದರಲ್ಲಿ ಏನು ತುಂಬಿದ್ದೀಯ ಡ್ಯಾಡಿ?''

ಕೋದಂಡರಾವ್ ಕೋಪದಿಂದ ''ಅಮಂಗಳ ನುಡಿಯಬೇಡ ಅದರಲ್ಲಿ ನಿನ್ನ ಹೆಂಡತಿ ಆಗೋ ಮನೋಹರರಿಗೆ ತಂದಿರೋ ಸೀರೆಗಳು, ಒಡವೆಗಳು ಮತ್ತು ನನ್ನ ಬಟ್ಟೆಗಳು ಸಹ ಇದೆ''

ಮುಕುಂದ ನಗುತ್ತಾ ''ನಿಮ್ಮ ಬಟ್ಟೆಗಳು ಸಹ ಇದೆ ಅಂದಮೇಲೆ ಇಷ್ಟು ತೂಕ ಇರಲೇಬೇಕು ಬಿಡಿ'' ಎಂದು ತಂದೆಯ ಸಹಾಯದಿಂದ ಸೂಟ್‌ಕೇಸ್ ಅನ್ನು ತನ್ನ ಮನೆಯೊಳಗೆ ತೆಗೆದುಕೊಂಡು ಹೋಗಿ ಇರಿಸಿದನು.

ದಂಪತಿಗಳು ಕಾರಿನಲ್ಲೇ ಇದ್ದಾರೆ.

ಕೋದಂಡರಾವ್ ''ಇದೇನಮ್ಮ...ದಸರ ಮೆರವಣಿಗೆಯ ಟ್ಯಾಬ್ಲೋ ತರಹ ಕಾರಿನಲ್ಲಿ ಅಲ್ಲಾಡದೆ, ಕೆಳಗೆ ಇಳಿಯದೆ ಒಂದೇ ರೀತಿ ಪೋಸ್ ಕೊಡುತ್ತಾ ಆಗಿನಿಂದ ಕುಳಿತೇ ಇದ್ದೀಯ''

ಮುಕುಂದ ''ಬನ್ನಿ ಅಂಕಲ್ ಸ್ವಲ್ಪ ಟೀ ಕುಡಿದು ಹೋಗುವಿರಂತೆ''

ನಿರಾಕರಿಸುವ ಹಾಗಿಲ್ಲ ಕೋದಂಡರಾವ್ ಒಂದು ರೀತಿ ಜಿಗಣೆಯ ತರಹ ಅಂಟಿಕೊಂಡರೆ ಬಡಪಟ್ಟಿಗೆ ಬಿಡುವ ಆಸಾಮಿ ಅಲ್ಲ.

ದಂಪತಿಗಳು ಮನೆಯೊಳಗೆ ಹೋಗಿ ಟೀ ಕುಡಿದು ಕಾರಿನಲ್ಲಿ ಹಿಂತಿರುಗಿದರು.

ಮನೆಯ ಹಾಲ್‌ನಲ್ಲಿ!

ಸೂಟ್‌ಕೇಸ್ ನೆಲದ ಮೇಲೆ ಇದೆ. ತಂದೆ - ಮಗ ಈಗ ಎದುರು - ಬದಿರಾಗಿ ಕುಳಿತಿದ್ದಾರೆ.

ಕೋದಂಡರಾವ್ ''ಮುಕುಂದ...ನಿನ್ನ ಹೆಂಡತಿಗೆ ಆರು ಸೀರೆ ತಂದಿದ್ದೇನೆ ನನಗೆ ತಿಳಿದಿರುವಂತೆ ಒಡವೆಗಳನ್ನು ಮಾಡಿಸಿದ್ದೇನೆ. ಅದನ್ನೆಲ್ಲಾ ನೀನೊಂದು ಸಲ ನೋಡಿ ಬಿಡು''

ಮುಕುಂದ ಅದಕ್ಕೆ ಏನು ಅವಸರ ಡ್ಯಾಡಿ ಬೆಳಿಗ್ಗೆ ನೋಡಿದರಾಯಿತು ಬಿಡಿ''

ಕೋದಂಡರಾವ್ ಕೋಪದಿಂದ, ''ನೀನು ನೋಡಲಿ ಅಂತ ನಾನು

ಅಲ್ಲಿಂದ ಹೊತ್ತುಕೊಂಡು ಬಂದಿದ್ದರೆ ಉದಾಸೀನ ಮಾಡುತ್ತಿದ್ದಿಯಲ್ಲ ಮುಕುಂದ!''

ಮುಕುಂದು ಆಕಳಿಸುತ್ತಾ ''ಮಿಸ್ಟೇಕ್ ಮಾಡಿಕೊಳ್ಳಬೇಡಿ ಡ್ಯಾಡಿ. ಈಗ ಮಧ್ಯರಾತ್ರಿ ಎರಡೂವರೆ ಗಂಟೆ. ನಿದ್ದೆ ಬರ್‍ತಾ ಇದೆ. ಬೆಳಿಗ್ಗೆ ಬೇಗ ಎದ್ದು ನೋಡಿದರಾಯಿತು'' ಎಂದು ಎದ್ದು ನಿಂತುಕೊಂಡನು.

ಕೋದಂಡರಾವ್ ''ನಾನು ಬೆಳಿಗ್ಗೆ ಬೇಗ ಹೊರಡಬೇಕು. ಆತುರದಲ್ಲಿ ಸರಿಯಾಗಿ ನೋಡಲು ಆಗುವುದಿಲ್ಲ ಹತ್ತು ನಿಮಿಷದಲ್ಲಿ ಏನೂ ಆಗೋಲ್ಲ. ಈಗಲೇ ನೋಡಿಬಿಡು'' ಎಂದರು.

ಮುಕುಂದ ಮನಸ್ಸಿನಲ್ಲೇ ಬೈದುಕೊಳ್ಳುತ್ತಲೇ ಸೂಟ್‌ಕೇಸ್ ಹತ್ತಿರ ಬಂದು ನೆಲದ ಮೇಲೆ ಕುಳಿತುಕೊಂಡು ಲಾಕ್ ತೆರೆದನು.

ಅಲ್ಲಿ ಚಿನ್ನದ ಆಭರಣಗಳು ಇರಲಿಲ್ಲ!

ಮದುವೆ ಹೆಣ್ಣಿನ ಸೀರೆಗಳಿರಲಿಲ್ಲ!

ಮುಕುಂದ ಕಿಟಾರನೆ ಕಿರುಚಿಕೊಂಡು ಒಂದು ಮಾರು ಹಿಂದೆ ಹಾರಿದನು.

ಮುಕುಂದ ಗಡಗಡನೆ ನಡುಗುತ್ತಿದ್ದಾನೆ. ಈಗ ಅವನ ಮುಖ ಭಯದಿಂದ ಬಿಳುಚಿಕೊಂಡಿದೆ!

★★★

ಕಾರು ಚಲಿಸುತ್ತಿದೆ.

ಸುಮಿತ್ರಮ್ಮ ಕಂಪಿಸುವ ಸ್ವರದಿಂದ, ''ನಿಮ್ಮ ಸ್ನೇಹಿತ ಬಂದಿದ್ದರಿಂದ ತುಂಬಾ ತೊಂದರೆಯಾಯಿತು.

''ಬೇಗ ಅದನ್ನು ಎಸೆದು ಬಿಡಿ''

ಆನಂದರಾವ್ ''ಹಾಗೆಲ್ಲಾ ಎಲ್ಲೆಲ್ಲೋ ಬಿಸಾಡಿದರೆ ಮುಂದೆ ತೊಂದರೆಯಾಗುತ್ತೆ''

''ಹಾಗಾದರೆ ಇನ್ನೆಲ್ಲಿ ಎಸೆಯುತ್ತೀರ?''

''ಇನ್ನು ಹತ್ತು ಮೈಲಿ ಹೋದರೆ ಮುಂದೆ ಹೊಳೆ ಸಿಗುತ್ತೆ. ಅಲ್ಲಿ ಎಸೆಯೋಣ. ತುಂಬಾ ತೂಕವಾಗಿರೋದ್ರಿಂದ ನೀರಿನಲ್ಲಿ ಮುಳುಗಿ ಹೋಗುತ್ತೆ''

ಸುಮಿತ್ರಮ್ಮ ಉತ್ತರಿಸಲಿಲ್ಲ.

ಕಾರು ಈಗ ಹೊಳೆಯ ಹತ್ತಿರ ಬಂದಿತು. ರಸ್ತೆಯ ಬದಿಯಲ್ಲಿ ನಿಲ್ಲಿಸಿದರು.

ಅದು ಸೇತುವೆ ಕೆಳಗೆ ಹೊಳೆಯ ನೀರು ಭೋರ್ಗರೆಯುತ್ತಾ ಹರಿಯುತ್ತಿದೆ.

ಆನಂದರಾವ್ ಗಂಭೀರವಾಗಿ ''ನಾನು ಒಬ್ಬನೇ ಅದನ್ನು ಹೊರಲಾರೆ. ಹೊರಗೆ ಬಂದು ಸಹಾಯ ಮಾಡು ಸುಮಿತ್ರ'' ಎಂದನು.

ದಂಪತಿಗಳು ಸುತ್ತಲೂ ನೋಡಿದರು.

ಆಗ ರಾತ್ರಿ ಮೂರು ಗಂಟೆ!

ಜನಗಳು ತಿರುಗುತ್ತಿರಲಿಲ್ಲ. ವಾಹನಗಳ ಓಡಾಟ ಇರಲಿಲ್ಲ. ದಂಪತಿಗಳು ಕಾರಿನ ಡಿಕ್ಕಿ ತೆರೆದರು.

ಅಲ್ಲಿ ದೊಡ್ಡ ಸೂಟ್‌ಕೇಸ್ ಇತ್ತು!

ದಂಪತಿಗಳು ಅದನ್ನು ತುಂಬಾ ಕಷ್ಟದಿಂದ ಎತ್ತಿಕೊಂಡು ಬಂದು ಸೇತುವೆಯೊಂದರ ಎಸೆದರು.

'ದಡಾಲ್' ಎಂಬ ಶಬ್ದ!

ಅದು ಬಿದ್ದ ರಭಸಕ್ಕೆ ನೀರು ಆಳೆತ್ತರ ಮೇಲಕ್ಕೆ ಹಾರಿತು. ಸೂಟ್‌ಕೇಸ್ ನೀರಿನ ತಳ ಸೇರಿತು!

ದಂಪತಿಗಳು ಜೋರಾಗಿ ಉಸಿರುಬಿಡುತ್ತಾ ಈಗ ಕಾರಿನಲ್ಲಿ ಕುಳಿತರು. 'ಅಬ್ಬ...ದೊಡ್ಡ ಸಮಸ್ಯೆ ಮುಗಿಯಿತು!' ಅಂದುಕೊಂಡರು.

ಸಮಸ್ಯೆ ಪ್ರಾರಂಭವಾಗುವುದೇ ಇನ್ನು ಮುಂದೆ ಅಂತ ಈ ದಂಪತಿಗಳಿಗೆ ಗೊತ್ತಿರಲಿಲ್ಲ!

★★★

ಏನಾಯಿತು ಮಗನಿಗೆ?

ಇದ್ಯಾಕೆ ಹೀಗೆ ಬೊಂಬ್ಡಿ ಬಚಾಯಿಸುತ್ತಿದ್ದಾನೆ ಎಂದುಕೊಂಡು ಎದ್ದು ಕೋದಂಡರಾವ್ ಮಗನ ಹತ್ತಿರ ಬಂದನು.

ಮುಕುಂದ ಗಡಗಡನೆ ನಡುಗುತ್ತಿದ್ದಾನೆ. ಅವನ ಕಣ್ಣುಗಳು ಅಗಲವಾಗಿ ತೆರೆದುಕೊಂಡಿವೆ.

ಕೋದಂಡರಾವ್ ಕತ್ತನ್ನು ಹೊರಳಿಸಿ ನೋಡಿದ ಮರುಕ್ಷಣವೇ ಫ್ರೀಝ್ ಆಗಿಬಿಟ್ಟ ಮಾತುಗಳು ಹೊರಬರಲಿಲ್ಲ ಅವನ ಬಾಯಿಂದ.

'ಅರೆ...ಇದೇನು ಹೀಗಾಗಿದೆ? ಮಾಯಬಜಾರ್ ದೃಶ್ಯದಂತೆ ಕಾಣುತ್ತಿದೆಯಲ್ಲ!'

ನೆನಪಿದೆ ನನಗೆ ಚೆನ್ನಾಗಿ ನೆನಪಿದೆ.

ಎರಡು ಗಂಟೆಗಳ ಕಾಲ ಎಲ್ಲಾ ಬಟ್ಟೆಗಳನ್ನು ಮತ್ತು ಒಡವೆಗಳನ್ನು ನೀಟಾಗಿ ಸೂಟ್‌ಕೇಸ್‌ನಲ್ಲಿ ಜೋಡಿಸಿದ್ದೇ! ಹೆಂಗಸರೇ ನಾಚಿಕೊಳ್ಳುವಂತೆ ಎಲ್ಲವನ್ನೂ ಅಚ್ಚುಕಟ್ಟಾಗಿ ಜೋಡಿಸಿದ್ದೆ!

'ಈಗ ನಾನು ನೋಡುತ್ತಿರುವುದೇನು?'

'ಸೀರೆಗಳು, ಒಡವೆಗಳು ಎಲ್ಲಿ?'

'ಮಾಂಗಲ್ಯ ಎಲ್ಲಿ?'

'ನನ್ನ ಬಟ್ಟೆಗಳು ಎಲ್ಲಿ?'

'ಮಾಯವಾಗಿ ಈ ಹೆಣ...ಹೆಂಗಸಿನ ಹೆಣ ಈ ಸೂಟ್‌ಕೇಸ್‌ನಲ್ಲಿ ಹೇಗೆ ಬಂದಿತು?'

'ಹೌದು...! ಸೂಟ್‌ಕೇಸಾನಲ್ಲಿ ಹೆಣ ಇತ್ತು! ಕೈಕಾಲುಗಳನ್ನು ಮಡಚಿ, ಮುದುರಿ, ಗುಪ್ಪೆ ಮಾಡಿ ನೈಲಾನ್ ದಾರದಿಂದ ಬಿಗಿದು ಕಟ್ಟಲಾಗಿತ್ತು! ಹೆಣದ ಸುತ್ತಲೂ ತೆಳ್ಳನೆಯ ಬಿಳಿಯ ಬಣ್ಣದ ಪ್ಲಾಸ್ಟಿಕ್ ಸುತ್ತಲಾಗಿದೆ.

'ಮಂಡಿಗಳ ಹತ್ತಿರ ತಲೆ ಇದೆ!'

'ಜಡೆ ತುಸು ಜಾರಿಕೊಂಡಿದೆ'

'ಹೆಣದ ಕಣ್ಣುಗಳು ತೆರೆದುಕೊಂಡಿದ್ದು ನೋಡಲು ತುಂಬಾ ಭಯಾನಕವಾಗಿ ಕಾಣುತ್ತಿದೆ'

'ಗೊಂಬೆಯಂತೆ ನಿಂತಿದ್ದ ಮುಕುಂದನ ಭುಜದ ಮೇಲೆ ಬಾರವಾದ ಕೈವ ಬಿದ್ದೀತು'

'ಬೆಚ್ಚಿಬಿದ್ದು ತಂದೆಯ ಕಡೆ ನೋಡಿದ. ಇಬ್ಬರೂ ಸೇರಿ ಪ್ಲಾಸ್ಟಿಕ್ ಕವರ್ ಎಳೆದರು.'

'ಮುಖ ಸ್ಪಷ್ಟವಾಗಿ ಕಂಡಿತು!'

'ಮನೋಹರಿ...!'

★★★

ತಂದೆ - ಮಗನ ನಡುವೆ ಹೆಣ ಇದೆ! ಅವರಿಬ್ಬರ ನಡುವೆ ಮೌನ ಆವರಿಸಿದೆ.

ಮುಕುಂದನ ಕಣ್ಣುಗಳು ಹನಿಗೂಡುತ್ತಿವೆ. ಅವನು ದುಃಖ

ತಡೆಯಲಾರದೆ ತನ್ನೆರಡು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಅಳಲಾರಂಭಿಸಿದ.

ಇವನ ಕನಸಿನ ಹೆಣ್ಣು!

ಅವಳನ್ನು ಕಂಡ ದಿನದಿಂದಲೇ ಅವಳಿಂದ ಆಕರ್ಷಿತನಾಗಿ ಅವಳನ್ನು ಒಲಿಸಿಕೊಳ್ಳಲು ಇವನೇನು ಕಡಿಮೆ ಸರ್ಕಸ್ ಮಾಡಿರಲಿಲ್ಲ!

ಮನೋಹರಿ ರಿಸರ್ವ್ಡ್ ಹೇಡಿ!

ಇವನ ಪ್ರೇಮಕ್ಕೆ ಗ್ರೀನ್ ಸಿಗ್ನಲ್ ನೀಡಲು ಒಂದು ವಾರ ಸತಾಯಿಸಿದ್ದಳು.

ನಂತರ ಸೋದರತ್ತೆಯ ಮಗಳ ಮೋನಿಕಳ ಕಾಟ...ಪ್ರತಿಭಟನೆ!

ತಂದೆಯ ಅರೆ ಮನಸ್ಸಿನ ಒಪ್ಪಿಗೆ!

ಅಂತೂ ಇಂತೂ ಮದುವೆಯ ತನಕ ಇವನ ಪ್ರಯತ್ನ ಫಲ ನೀಡಿತ್ತು. ಹೃದಯ ಬಯಸಿದ್ದ ಹೆಣ್ಣು ಹತ್ತಿರವಾಗುವ ಮೊದಲೇ ದೂರ ಸರಿದಿದ್ದಳು.

ಇನ್ನೆಂದೂ ಬಾರದ ಲೋಕಕ್ಕೆ!

ದುಃಖ, ನಿರಾಸೆ, ಹತಾಶೆ ಈಗ ಕೋಪವಾಗಿ ಬದಲಾಗಿ ಹಲ್ಲುಗಳು ಕರಕರ ಶಬ್ದ ಮಾಡಿತು.

ಮುಷ್ಟಿ ಮಿಗಿಯಿತು.

ಕಣ್ಣಾಲಿಗಳು ಕೆಂಪೇರಿದವು.

ಕೋದಂಡರಾವ್ ಇದನ್ನು ಗಮನಿಸಿ ತುಸು ಭಯಗೊಂಡರು. ಮುಕುಂದ ''ಡ್ಯಾಡಿ...ನಿಮ್ಮ ಮಾತನ್ನು ನಾನು ಕೇಳಲಿಲ್ಲ ಅಂತ ಇಷ್ಟೊಂದು ಕ್ರೂರವಾಗಿ ನಡೆದುಕೊಳ್ಳಬಾರದಿತ್ತು. ತಂಗಿಯ ಮಗಳಿಗೋಸ್ಕರ ಮಾನವ ಸಹವಾದ ಅನುಕಂಪ ಮರೆತು ಬೇರೊಂದು ಹೆಣ್ಣನ್ನು ಕೊಲ್ಲುವಂತಹ ಕಟುಕ ನನ್ನ ತಂದೆ ಅಂತ ಗೊತ್ತಿರಲಿಲ್ಲ''

ಕೋದಂಡರಾವ್ ಹೌಹಾರಿದರು. ಬೋಳುತಲೆಯಲ್ಲಿದ್ದ ನಾಲಕ್ಕೇ ಕೂದಲುಗಳು ಸಹ ಅಲ್ಲಾಡಿದವು. ಗಾಬರಿ, ಆತುರದಿಂದ ''ಅರೆ...ಅರೆ...ನೀನು ಏನು ಹೇಳ್ತಾ ಇದ್ದೀಯ ಮುಕುಂದ?''

ಮುಕುಂದ ಆವೇಶದಿಂದ, ''ಮನೋಹರಿಯನ್ನು ಕೊಲೆ ಮಾಡಿದ್ದೀರ ಅಂತ!''

ಕೋದಂಡರಾವ್ ''ಲೋ...ಲೋ...ನಮ್ಮ ಕುಲದೇವರಾಣೆ...ನಾನು ತುಂಬಾ ಪ್ರೀತಿಸುತ್ತಿದ್ದ ನಿನ್ನ ತಾಯಿಯ ಆಣೆ ನಾನು ಕೊಲೆ ಮಾಡಿಲ್ಲ ಕಣೋ''

ಮುಕುಂದ ಕೋಪ, ತಿರಸ್ಕಾರದಿಂದ ''ದನ ತಿನ್ನೋವ್ನು ಗೊಬ್ಬರದ ಮೇಲೆ ಆಣೆ ನುಡಿದಂತೆ ಮಾತಾಡಬೇಡಿ ಡ್ಯಾಡಿ!''

ಕೋದಂಡರಾವ್ ಕೋಪದಿಂದ ''ಮುಕುಂದ...ಎಲ್ಲವನ್ನು ಕಣ್ಣಲ್ಲಿ ಕಂಡವನಂತೆ ಮಾತಾಡಬೇಡ ನನಗೂ ಸಹ ಮಾತಾಡಲು ಅವಕಾಶ ಕೊಡು''

ಮುಕುಂದ ದುಃಖ, ಕೋಪದಿಂದ ''ಮಾತಾಡಲು ಇನ್ನು ಏನು ಉಳಿದುಕೊಂಡಿದೆ. ಮೋನಿಕಳನ್ನು ಮದುವೆಯಾಗಲು ನನ್ನ ಪ್ರೀತಿಯ ಹೆಣ್ಣು ಅಡ್ಡಿಯಾಗಿದ್ದಳು. ಅವಳನ್ನು ಮುಗಿಸಿ ಸ್ವರ್ಗದಲ್ಲಿರೋ ನಿಮ್ಮ ತಂಗಿಯ ಆತ್ಮಕ್ಕೆ ಶಾಂತಿ ಕೊಡುವ ಪ್ರಯತ್ನ ಇದು ಅಂತ ನನಗೆ ಗೊತ್ತಿದೆ''

ಕೋದಂಡರಾವ್ ಈಗ ಮಗನ ಭುಜಗಳನ್ನು ಹಿಡಿದು ಗಡುಸಾಗಿ, ''ನಾನು ಕೊಲೆ ಮಾಡೋದನ್ನ ನೀನೇನಾದರೂ ನೋಡಿದ್ದೀಯ?''

ಮುಕುಂದ ವ್ಯಂಗ್ಯವಾಗಿ ''ಅಂಗೈ ಹುಣ್ಣು ನೋಡಲು ಕನ್ನಡಿ ಬೇಕಿಲ್ಲ ಡ್ಯಾಡಿ!''

ಕೋದಂಡರಾವ್ ರೇಗುತ್ತಾ ''ಸತ್ಯ ಅನ್ನೋದು ಅಂಗೈ ಹುಣ್ಣಿನಂತೆ ಸುಲಭವಾಗಿ ಕಾಣೋಲ್ಲ. ಸತ್ಯ ಹಲವಾರು ಪದರಗಳ ಹಿಂದೆ ಮುಚ್ಚಿಹೋಗಿರತ್ತೆ. ಅದನ್ನು ತಾಳ್ಮೆಯಿಂದ ಹುಡುಕಬೇಕು''

ಮುಕುಂದ ಕೋಪದಿಂದ, ''ಕೊಲೆ ಮಾಡಿ ಹೆಣವನ್ನು ಈ ರೀತಿ ಸೂಟ್‌ಕೇಸ್‌ನಲ್ಲಿ ತುಂಬಿಕೊಂಡು ಬಂದಿರುವಾಗ ಸತ್ಯವನ್ನು ಹುಡುಕಲು ಬೇರೆ ಎಲ್ಲಿಗೋ ಯಾಕೆ ಹೋಗಬೇಕು?''

ಕೋದಂಡರಾವ್ ''ನೀನು ಕಾಣುತ್ತಿರುವುದೇ ಸತ್ಯವಲ್ಲ ಇದು ಬರೀ ಭ್ರಮೆ!''

ಮುಕುಂದ ವಿಷಾದದಿಂದ ನಗುತ್ತಾ, ''ನೀವು ಮಾಡಿರುವ ಘನಕಾರ್ಯವನ್ನು ಮುಚ್ಚಿಕೊಳ್ಳಲು ನಂತರ ಪ್ರಯತ್ನಿಸುವಿರಂತೆ ಈಗಾಗಲೇ ಹೊತ್ತು ಮೀರುತ್ತಿದೆ. ಮುಂದೇನು ಮಾಡಬೇಕು ಅಂತ ಆಲೋಚಿಸಿ ಡ್ಯಾಡಿ''

ಕೋದಂಡರಾವ್ ಗಂಭೀರವಾಗಿ, ''ಆಲೋಚಿಸಲು ಏನಿದೆ? ಪೋಲೀಸರಿಗೆ ತಿಳಿಸೋದು''

ಮುಕುಂದ ಬೆಚ್ಚಿಬೀಳುತ್ತಾ ''ಈ ರೀತಿ ಹೆಣವನ್ನು ಹೊತ್ತು ತಂದಿರುವ ನಿಮ್ಮನ್ನು ಪೋಲೀಸರು ಸುಮ್ಮನೆ ಬಂದು ತನಿಖೆ ನಡೆಸಲಿ''

ಮುಕುಂದ ಉತ್ತರಿಸಲಿಲ್ಲ. ಹೆಣವನ್ನೇ ತದೇಕ ದೃಷ್ಟಿಯಿಂದ ನೋಡುತ್ತಿರುವಾಗ ಎರಡು ಹನಿ ಕಂಬನಿ ಜಾರಿ ಬಿದ್ದತು.

ಕೋದಂಡರಾವ್ ಮಗನ ಭುಜ ಅದುಮುತ್ತಾ "ಐ ಯಾಮ್ ಸಾರಿ ಮೈ ಸನ್ ನಿನಗಾಗಿರೋ ನಿರಾಸೆಗೆ ನನಗೆ ಬೇಸರವಾಗುತ್ತಿದೆ. ಮಗ ಪ್ರೀತಿಸಿರೋ ಹೆಣ್ಣನ್ನು ಕೊಂದು ಸತ್ತಿರೋ ತಂಗಿಗೆ ಕೊಟ್ಟಿರೋ ಮಾತನ್ನು ಉಳಿಸಿಕೊಳ್ಳುವ ಅವಿವೇಕಿ ನಾನಲ್ಲ. ಎಂತಹ ಪರಿಸ್ಥಿತಿಯೇ ಬಂದರೂ ಸಹ ನಾನು ಎದುರಿಸುತ್ತೇನೆ. ತನಿಖೆ ನಡೆದು ಸತ್ಯ ಹೊರಬರಬೇಕು. ನಿನ್ನ ಮನಸ್ಸಿನಲ್ಲಿ ನನ್ನ ಬಗ್ಗೆ ಇರೋ ಸಂಶಯ ದೂರವಾಗಬೇಕು" ಎಂದು ಅಲ್ಲೇ ಇದ್ದ ಫೋನಿನ ಹತ್ತಿರ ಬಂದರು.

ತಂದೆ ಪೋಲೀಸರಿಗೆ ಫೋನ್ ಮಾಡುತ್ತಿದ್ದರೆ ಮುಕುಂದ ಕಣ್ಣುಗಳನ್ನು ಮುಚ್ಚಿಕೊಂಡಿದ್ದನು ಕಣ್ಣೀರು ಜಿನುಗುತ್ತಿತ್ತು.

ಪೋಲೀಸ್ ಸೈರನ್ ಕೇಳಿಸಿತು.

ಎಸ್. ಐ. ಪೊನ್ನಪ್ಪ ಮತ್ತು ಪಿ.ಸಿ.ಗಳು ದಡದಡನೆ ಮನೆಯೊಳಗೆ ಬಂದರು.

ಆಗ ಬೆಳಗಿನ ಆರು ಗಂಟೆ!

ಇನ್‌ವೆಸ್ಟಿಗೇಷನ್ ಪ್ರಾರಂಭವಾಯಿತು!

★★★

ಪೋಲೀಸ್ ಇಲಾಖೆಯಲ್ಲಿ ಪೊನ್ನಪ್ಪ ಹತ್ತು ವರ್ಷಗಳ ಕಾಲ ಸರ್ವಿಸ್ ಮಾಡಿದ್ದಾನೆ.

ಈ ತರಹದ ಕೇಸನ್ನು ಕಂಡಿರಲಿಲ್ಲ!

ಸೂಟ್‌ಕೇಸ್‌ನಲ್ಲಿ ಹಣ ತುಂಬಿಕೊಂಡು ಬಂದಿರುವ ವ್ಯಕ್ತಿಯೇ ಪೋಲೀಸರಿಗೆ ಫೋನ್ ಮಾಡಿ ಕರೆಸಿಕೊಂಡು ತನಿಖೆ ನಡೆಸಲು ಆದೇಶಿಸಿದ್ದಾನೆ.

ಹೆಣವನ್ನು ಸೂಟ್‌ಕೇಸ್‌ನಿಂದ ಹೊರತೆಗೆದು ನೆಲದ ಮೇಲೆ ಮಲಗಿಸಿ ಡಿಫರೆಂಟ್ ಆ್ಯಂಗಲ್‌ನಲ್ಲಿ ಫೋಟೋಗಳನ್ನು ತೆಗೆಯಲಾಯಿತು.

ಡಾಕ್ಟರ್ ಹೆಣವನ್ನು ಪರಿಶೀಲಿಸಿದರು ಕತ್ತಿನ ಹತ್ತಿರ ಕೆಂಪಲನೆಯ ಗುರುತುಗಳು ಮೂಡಿದ್ದವು!

ಕಣ್ಣುಗಳು ತೆರೆದುಕೊಂಡಿದೆ.

ಡಾಕ್ಟರ್ "ಇನ್ಸ್‌ಪೆಕ್ಟರ್ ಕೊಲೆ ರಾತ್ರಿ ಒಂಭತ್ತೂವರೆಯಿಂದ ಹತ್ತೂವರೆಯ ಅವಧಿಯಲ್ಲಿ ಸಂಭವಿಸಿದೆ. ಕತ್ತು ಹಿಸುಕಿ ಸಾಯಿಸಿರಬಹುದು

ಅಂತ ಮೇಲುನೋಟಕ್ಕೆ ಕಂಡುಬರುತ್ತಿದೆ. ಹೆಚ್ಚಿನ ವಿವರಗಳಿಗೆ ಪೋಸ್ಟ್‌ಮಾರ್ಟಮ್ ಮಾಡಬೇಕು''

ಎಸ್. ಐ. ಪೋನ್ನಪ್ಪ ಈಗ ಹೆಣವನ್ನು ತದೇಕ ದೃಷ್ಟಿಯಿಂದ ನೋಡುತ್ತಿದ್ದಾನೆ. ಅವನ ಗಮನ ಈಗ ಹೆಣದ ಕೈಗಳ ಕಡೆ ಹರಿಯಿತು. ಮೊದಲು ಹೆಣದ ಬಲದ ಕೈ ಹಿಡಿದುಕೊಂಡು ನೋಡಿದನು.

ಮುಷ್ಟಿ ಬಿಗಿದಿತ್ತು!

ಮುಷ್ಟಿಯನ್ನು ಬಿಡಿಸಲಾಯಿತು. ಅಲ್ಲಿ ನಾಲ್ಕು ಕೂದಲುಗಳು ಅಂಟಿಕೊಂಡಿದ್ದವು!

ಅದನ್ನು ಪೇಪರ್ ಪ್ಯಾಕ್ ಮಾಡಿದನು.

ಎಡದ ಕೈನ ಉಗುರುಗಳ ಸಂದಿಯಲ್ಲಿ ರಕ್ತದ ಮೇಲೆ ಕಲೆ ಕಂಡಿತು. ಅದು ಈಗ ಒಣಗಿದೆ.

ತರ್ಜನಿ ಬೆರಳ ಉಗುರು ತುದಿಗೆ ಎರಡೆಳೆ ದಾರ ಸುತ್ತಿಕೊಂಡಿತ್ತು. ದಾರ ನೀಲಿ ಬಣ್ಣದಾಗಿದೆ.

ಅದನ್ನು ಸಹ ಪೇಪರ್ ಪೇಕ್ ಮಾಡಿದನು. ಇದು ಬಹುಮುಖ ಆಧಾರ ಅನಿಸಿತು.

ಕೊಲೆಗಾರ ಕತ್ತನ್ನು ಹಿಸುಕಿ ಕೊಲೆ ಮಾಡುವಾಗ ಇವಳು ಕೊಸರಾಡಿದ್ದಾಳೆ. ಕೊಲೆಗಾರನನ್ನು ಪರಚಿರುವುದರಿಂದ ಉಗುರುಗಳಲ್ಲಿ ರಕ್ತದ ಕಲೆ ಅಂಟಿದೆ. ಕೊಸರಾಟದಲ್ಲಿ ಕೂದಲು ಕಿತ್ತುಬಂದಿದೆ.

ಈ ನೀಲಿದಾರ ಯಾವುದು?

ಕೊಲೆಗಾರನ ಬಟೆ-ಟಯದ್ದೇ ಇರಬೇಕು!

ಪೋಲೀಸ್ ಇನ್‌ವೆಸ್ಟಿಗೇಷನ್ ಸಮಯದಲ್ಲಿ ಅಲ್ಲಿ ಬೇರೆ ಯಾರೂ ಸಹ ಇರಲಿಲ್ಲ.

ಮಹಜರನ್ನು ಮುಗಿಸಿ ಹೆಣವನ್ನು ಈಗ ಆಸ್ಪತ್ರೆಗೆ ಕಳುಹಿಸಲಾಯಿತು.

ಕೊಲೆ ನಡೆದಿರುವುದು ಸರಗೂರಿನಲ್ಲಿ ಹಾಗಾಗಿ ಅಲ್ಲಿಯ ಪೋಲೀಸ್ ಅಧಿಕಾರಿಗಳು ಸಹ ಈ ತನಿಖೆಗಳಲ್ಲಿ ಪಾಲ್ಗೊಂಡಿದ್ದರು.

ಪ್ರತ್ಯೇಕ ಕೊಠಡಿಯಲ್ಲಿ...

ಎಸ್. ಐ. ಪೋನ್ನಪ್ಪ ಈಗ ತಂದೆ - ಮಗನನ್ನು ಕೂರಿಸಿಕೊಂಡು ಮೃತಳ ಬಗ್ಗೆ ಪ್ರಾಥಮಿಕ ವಿವರಣೆಗಳನ್ನು ಸಂಗ್ರಹಿಸಿದನು.

ಪಿ.ಸಿ.ಯೊಬ್ಬ ಬರೆದುಕೊಳ್ಳುತ್ತಿದ್ದಾನೆ.

ಪೊನ್ನಪ್ಪ ''ಕೋದಂಡರಾವ್ ನಡೆದಿರುವುದನ್ನು ಕನ್‌ಫ್ಯೂಸ್ ಆಗದಂತೆ ಹೇಳದೆ ಇದ್ದರೆ ಮುಂದೆ ನಿಮಗೇ ತೊಂದರೆಯಾಗುತ್ತದೆ''

ಕೋದಂಡರಾವ್ ಗಂಭೀರವಾಗಿ ''ಕನ್ ಫ್ಯೂಷನ್‌ಗೆ ಅವಕಾಶವೇ ಇಲ್ಲ. ನಡೆದಿರುವುದು ನನಗೆ ಚೆನ್ನಾಗಿ ನೆನಪಿದೆ. ನೀವು ಪ್ರಶ್ನೆಗಳನ್ನು ಕೇಳಿ''

ಪೊನ್ನಪ್ಪ ಮೆಚ್ಚುಗೆಯಿಂದ ನೋಡುತ್ತಾ ''ಗುಡ್...ಐ ಅಪ್ರಿಷಿಯೇಟ್ ಯುವರ್ ಬಿಹೇವಿಯರ್ ಈ ಸೂಟ್‌ಕೇಸ್‌ನಲ್ಲಿ ಹಣ ಇದೆ ಅಂತ ಗೊತ್ತಾಗಿದ್ದು ಯವಾಗ?''

''ನನ್ನ ಮಗ ತೆರೆದು ನೋಡಿದಾಗ''

ಪೊನ್ನಪ್ಪ ''ಏನು ನಡೆಯಿತು ಅಂತ ಹೇಳಿ''

ಕೋದಂಡರಾವ್ ಈಗ ಪ್ರಾರಂಭಿಸಿದರು. ತನ್ನ ಸ್ನೇಹಿತ ಆನಂದರಾವ್‌ಗೆ ಇದೇ ತರಹ ಇರುವ ಸೂಟ್‌ಕೇಸ್ ಕೊಡಿಸಿದ್ದು ರಾತ್ರಿ ಬೆಂಗಳೂರಿಗೆ ಬರುವಾಗ ತನ್ನ ಕಾರು ಮಧ್ಯದಲ್ಲಿ ಕೆಟ್ಟುಹೋಗಿದ್ದು ಅದೇ ಸಮಯಕ್ಕೆ ಆನಂದ ತನ್ನ ಹೆಂಡತಿಯ ಜೊತೆ ಕಾರಿನಲ್ಲಿ ಬಂದಿದ್ದು ತನ್ನ ಸೂಟ್‌ಕೇಸನ್ನು ಅವನ ಕಾರಿನ ಡಿಕ್ಕಿಯಲ್ಲಿ ಇರಿಸಿದ್ದು ಅಲ್ಲಿ ಅದೇ ತರಹದ ಇನ್ನೊಂದು ಸೂಟ್‌ಕೇಸ್ ಇದ್ದದ್ದನ್ನು ಹೇಳಿದನು.

ಪೊನ್ನಪ್ಪ ''ನಿಮ್ಮ ಹೇಳಿಕೆಯ ಪ್ರಕಾರ ನೀವು ತಂದಿದ್ದ ಸೂಟ್‌ಕೇಸ್‌ನಲ್ಲಿ ಬಟ್ಟೆ ಒಡವೆಗಳಿದ್ದವು. ಸ್ನೇಹಿತನಿಗೆ ನೀವೇ ಕೊಡಿಸಿದ್ದ ಅದೇ ತರಹದ ಮತ್ತೊಂದು ಸೂಟ್‌ಕೇಸ್‌ನಲ್ಲಿ ಈ ಹಣ ಇತ್ತು ಅಂತ ತಾನೇ ನೀವು ಹೇಳೋದು?''

''ಹೌದು ಸಾರ್''

''ಅಂದರೆ ಮನೋಹರಿಯನ್ನು ಆನಂದರಾವ್ ದಂಪತಿಗಳು ಕೊಂದು ಹಣವನ್ನು ಸೂಟ್‌ಕೇಸ್‌ನಲ್ಲಿ ತುಂಬಿಕೊಂಡು ಎಸೆಯಲು ಕಾರಿನಲ್ಲಿ ಹೋಗುತ್ತಿದ್ದರು. ನೀವು ದಾರಿಯಲ್ಲಿ ಸಿಕ್ಕಿ ನಿಮ್ಮ ಸೂಟ್‌ಕೇಸನ್ನು ಡಿಕ್ಕಿಯಲ್ಲಿ ಇರಿಸಿದಿ.ಇದ್ರಿ. ಎರಡೂ ಸಹ ಒಂದೇ ತರಹ ಇದ್ದುದರಿಂದ ಅದಲುಬದಲಾಗಿದೆ ಅಂತ ನಿಮ್ಮ ಅಭಿಪ್ರಾಯವೇ?''

ಕೋದಂಡರಾವ್ ''ಸಂದೇಹವೇ ಇಲ್ಲ ದ್ರೋಹಿ ಆನಂದರಾವ್ ಈ ಕೊಲೆ ಮಾಡಿದ್ದಾನೆ'' ಎಂದು ಕೋಪ ಆವೇಶದಿಂದ ಹೇಳಿದರು.

ಮುಕುಂದನಿಗೆ ದುಃಖದಲ್ಲೂ ಸಹ ಭಯದೊಂದಿಗೆ ಕುತೂಹಲ ಉಂಟಾಗುತಿದೆ.

ಪೋನ್ನಪ್ಪ ''ಬೀ ಕಾಮ್ ಕೋದಂಡರಾವ್ ಈ ಮನೋಹರಿಗೂ ಆನಂದರಾವ್‌ಗೂ ಹೇಗೆ ಸಂಬಂಧ?''

ಕೋದಂಡರಾವ್ ''ಮನೋಹರಿ ಅವನ ಜೊತೆಯಲ್ಲೇ ಪ್ರೈವೇಟ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಅಲ್ಲದೇ ಮನೋಹರಿಯ ಮನೆ ಅದೇ ಬೀದಿಯಲ್ಲಿತ್ತು ಅವಳು ಆಗಾಗ ಮನೆಗೆ ಬರುತ್ತಿದ್ದಳು''

ಪೋನ್ನಪ್ಪ ತಲೆಯಾಡಿಸುತ್ತಾ ''ಎಲ್ಲಾ ಸರಿ, ಆದರೆ ಮನೋಹರಿಯನ್ನು ಆನಂದರಾವ್ ದಂಪತಿಗಳು ಕೊಲೆ ಮಾಡಲು ಕಾರಣವೇನು?''

ಕೋದಂಡರಾವ್ ''ಅದೇ ನನಗೂ ಅರ್ಥವಾಗುತ್ತಿಲ್ಲ ಇನ್ಸ್‌ಪೆಕ್ಟರ್ ಗಂಡ - ಹೆಂಡತಿ ಸೇರಿಕೊಂಡ ಯಾವ ಉದ್ದೇಶದಿಂದ ಅವಳನ್ನು ಕೊಂದರು ಅಂತ ನನಗೆ ಅರ್ಥವಾಗುತ್ತಿಲ್ಲ''

ಪೊನ್ನಪ್ಪ ''ಒದಕೆ. ನಾನು ಎನ್‌ಕ್ವೈಯರಿ ಮಾಡ್ತೇನೆ. ಮನೋಹರಿ ಬಡವರ ಮನೆಯ ಹೆಣ್ಣು. ಅಂತಹವನನ್ನು ಸೊಸೆ ಮಾಡಿಕೊಳ್ಳಲು ನೀವು ಮನಪೂರ್ವಕವಾಗಿ ಒಪ್ಪಿಕೊಂಡಿದ್ರಾ?''

ಕೋದಂಡರಾವ್ ಗಲಿಬಿಲಿಯಿಂದಲೇ ಮಗನ ಮುಖ ನೋಡಿದರು. ಆಗ ಮುಕುಂದ ''ಡ್ಯಾಡಿ...ಸತ್ಯ ಹೊರಬೇಕಾದರೆ ಏನನ್ನೋ ಸಹ ಮುಚ್ಚಿಡಬಾರದು ಎಲ್ಲಾ ಹೇಳಿಬಿಡಿ''

ಕೋದಂಡರಾವ್ ತಲೆಯಾಡಿಸುತ್ತಾ ತಮ್ಮ ತಂಗಿಯ ಮಗಳು ಮೋನಿಕಳ ಬಗ್ಗೆ ತಿಳಿಸಿದರು.

ಮುಕುಂದ ''ರಾತ್ರಿ ಮೋನಿಕ ಫೋನ್ ಮಾಡಿ ನನ್ನ ಜೊತೆ ತುಂಬಾ ಒರಟಾಗಿ ಮಾತಾಡಿದ್ದಳು. ಅವಳಿಗೆ ನನ್ನ ಮೇಲೆ ವಿಪರೀತ ಕೋಪ ಬಂದಿದೆ''

''ಒರಟಾಗಿ ಅಂದರೆ ಯಾವ ರೀತಿ?''

''ಒಂದು ರೀತಿ ಚಾಲೆಂಜ್ ಮಾಡುವ ರೀತಿಯಲ್ಲಿ ನಿರಾಸೆ, ಸೋಲನ್ನು ಸುಲಭವಾಗಿ ಒಪ್ಪಿಕೊಳ್ಳಲಾರೆ ಅನ್ನುವ ಅರ್ಥದಲ್ಲಿ ಫೋನ್ ಮಾಡಿದ್ದಳು''

''ಎಷ್ಟು ಹೊತ್ತಿನಲ್ಲಿ?''

''ರಾತ್ರಿ ಏಳೂವರೆಯಲ್ಲಿ''

''ಆಗ ನೀವೆಲ್ಲಿ ಇದ್ರಿ?''

''ಮನೆಯಲ್ಲಿ''

ಪೊನ್ನಪ್ಪ ಗಂಭೀರವಾಗಿ ''ಮಿಸ್ಟರ್ ಕೋದಂಡರಾವ್...ನಿಮ್ಮನ್ನು ಅರೆಸ್ಟ್ ಮಾಡುತ್ತಿಲ್ಲ ಆದರೆ ಶನಿಖೆ ಪೂರ್ತಿಯಾಗುವ ತನಕ ನೀವು ನಮ್ಮ

ಜೊತೆಯೇ ಇರಬೇಕು. ಯಾಕೆ ಅಂದರೆ ನೀವು ಅನುಮಾನಾಸ್ಪದ ರೀತಿಯಲ್ಲಿ ಸಿಕ್ಕಿಕೊಂಡಿದ್ದೀರ''

''ಬೈ ಆಲ್ ಮೀನ್ಸ್ ಇನ್ಸ್‌ಪೆಕ್ಟರ್''

ಈಗ ಪೊನ್ನಪ್ಪ ಸಹ ಸೊರಗೂರಿನ ಪೋಲೀಸ್ ಅಧಿಕಾರಿಗಳೊಂದಿಗೆ ತನಿಖೆಗಾಗಿ ಹೊರಟನು.

ಸೊರಗೂರಿನಲ್ಲಿ!

ಊರಿನಿಂದ ಹತ್ತು ಮೈಲಿ ದೂರವಿರುವ ಬಾನಂಪಾಡಿ ಹೊಳೆಯಲ್ಲಿ ಈಜುತ್ತಿದ್ದ ವ್ಯಕ್ತಿಯೊಬ್ಬನಿಗೆ ನೀರಿನ ತಳದಲ್ಲಿ ಸೂಟ್‌ಕೇಸ್ ಸಿಕ್ಕಿತು! ಅದನ್ನು ಆತ ಪೋಲೀಸರಿಗೆ ಒಪ್ಪಿಸಿದ್ದನು.

ಅದರಲ್ಲಿ ಮದುವೆಗೆಂದು ತಂದಿದ್ದ ಸೀರೆಗಳು, ಮಾಂಗಲ್ಯ, ಚಿನ್ನದ ಆಭರಣಗಳು ಮತ್ತು ಕೋದಂಡರಾವ್‌ನ ಬಟ್ಟೆಗಳಿದ್ದವು!

ಕೋದಂಡರಾವ್ ನೀಡಿದ್ದ ಹೇಳಿಕೆಯಲ್ಲಿ ನಿಜಾಂಶ ಇದೆ ತುಂಬ ನಂಬಿಕೆ ಬಂದಿತು.

ಆದರೆ ಸತ್ಯ ಎನ್ನುವುದು ಗುಪ್ತವಾಗಿ ಎಲ್ಲೋ ಒಂದು ಕಡೆ ಅಡಗಿಕೊಂಡಿತ್ತು!

ಅದನ್ನು ತನಿಖೆ ನಡೆಸಿ ಹೊರತೆಗೆಯಬೇಕಿತ್ತು ಮುಂದಿನ ತನಿಖೆ ಸೊರಗೂರಿನಲ್ಲಿ!

★★★

ಬೆಳಗಿನ ಹನ್ನೊಂದರ ಸಮಯ.

ಪೋಲೀಸ್ ವೆಹಿಕಲ್‌ಗಳಲ್ಲಿ ಬಂದವರನ್ನು ಕಂಡು ಆನಂದರಾವ್, ಸುಮಿತ್ರ ಭಯ, ಗಾಬರಿಯಿಂದ ತತ್ತರಿಸಿ ಹೋದರು. ಮುಖ ಬಿಳುಚಿಕೊಂಡಿತು.

ಕೋದಂಡರಾವ್ ಈ ದಂಪತಿಗಳನ್ನು ಕೆಕ್ಕರಿಸಿಕೊಂಡು ನೋಡಿ ಮುಷ್ಟಿಬಿಗಿದನು.

ಮುಕುಂದ ದುರುದುರು ನೋಡುತ್ತಿದ್ದಾನೆ.

ಪೊನ್ನಪ್ಪ ಇಬ್ಬರು ಪಿ.ಸಿಗಳನ್ನು ಕರೆದು ಮನೆಯ ಸುತ್ತಾ ಹುಡುಕಲು ಹೇಳಿದನು.

ತಾನು ಸೊರಗೂರಿನ ಪೋಲೀಸ್ ಅಧಿಕಾರಿಗಳೊಂದಿಗೆ ಮನೆಯ ಒಳಭಾಗವನ್ನೆಲ್ಲಾ ಹುಡುಕಿದನು.

ಹಾಸಿಗೆಯ ತಳದಲ್ಲಿ ಬಿಳಿಯ ಬಣ್ಣದ ಕರ್ಚೀಫ್‌ನಲ್ಲಿ ಸುತ್ತಿದ್ದ ನೋಟಿನ ಕಂತೆಗಳು ಮತ್ತು ಸೀಸೆಯೊಂದು ದೊರೆಯಿತು.

ಸೀಸೆಯ ಮೇಲೆ ಖಡ್ಡಟ್ಟಟಅಞಟ್ಟಜ್ಞ ಎಂದು ಮುದ್ರಿತ ಸ್ಲಿಪ್ ಅಂಟಿಸಲಾಗಿತ್ತು!

ಅದೇನೆಂದು ಪೋಲೀಸ್ ಅಧಿಕಾರಿಗೆ ಗೊತ್ತಾಗಿಹೋಯಿತು. ಅದು ಡಲಡ್ಲಿ ಪಾಯಿಸನ್!

ಬಲಿಯ ಬಣ್ಣದ ಕರ್ಚೀಫ್‌ನ ಮೇಲೆ 'ಐ' ಎಂಬ ಕಸೂತಿ ಬರಹ ಇತ್ತು.

ಅದಕ್ಕೆ ಸೆಂಟ್ ಹಾಕಲಾಗಿತ್ತು.

ಅದೇ ಸಮಯಕ್ಕೆ ಮನೆಯ ಸುತ್ತಾ ಹುಡುಕಲು ಹೋಗಿದ್ದ ಪಿ.ಸಿಗಳು ಎರಡು ವಸ್ತುಗಳನ್ನು ಪೇಪರ್ ಪ್ಯಾಕ್ ಮಾಡಿ ತಂದರು.

''ಇದು ಎಲ್ಲಿ ಸಿಕ್ಕಿತು?''

''ಬೆಡ್‌ರೂಮಿನ ಕಿಟಕಿಯ ಹತ್ತಿರ ಬಿದ್ದಿತ್ತು ಸಾರ್'' ಎಂದು ಪಿ.ಸಿ. ಉತ್ತರಿಸಿದನು.

ಅವರೆಡನ್ನೂ ನೋಡಿದನು. ಈಗಿನ ಕಾಲದ ಯುವತಿಯರು ಉಪಯೋಗಿಸುವ ತುಂಬಾ ಬೆಲೆಯ ರೋಸ್ ಕಲರ್ ಹೇರ್‌ಕ್ಲಿಪ್!

ಮತ್ತೊಂದು ಕರ್ಚೀಫ್!

ಅದೂ ಸಹ ಬಿಳಿಯ ಬಣ್ಣದಿಂದ ಕೂಡಿದ್ದು ಅದರ ಮೇಲೆ 'ಐ' ಎಂಬ ಅಕ್ಷರದ ಕಸೂತಿ ಬರಹ ಇತ್ತು!

ಆ ಕರ್ಚೀಫ್‌ನಲ್ಲಿ ಸೆಂಟ್‌ನೊಂದಿಗೆ ಬೆವರಿನ ವಾಸನೆ ಸಹ ಸೇರಿಕೊಂಡಿತ್ತು.

ಪೋಲೀಸ್ ಅಧಿಕಾರಿಗಳು ಹಾಲ್‌ಗೆ ಬಂದರುದ

ದಂಪತಿಗಳು ಭಯಗೊಂಡಿದ್ದಾರೆ.

ಪೊನ್ನಪ್ಪ ''ಮಿಸ್ಟರ್ ಆನಂದರಾವ್...ಸುಳ್ಳು ಹೇಳಬೇಡಿ. ಈಗಾಗಲೇ ನಮಗೆ ಎಲ್ಲಾ ವಿಷಯ ಗೊತ್ತಾಗಿದೆ. ನಿನ್ನೆ ರಾತ್ರಿ ನೀವು ಸೂಟ್‌ಕೇಸ್‌ನಲ್ಲಿ ಮನೋಹರಿಯ ಹೆಣ ತುಂಬಿ ಕಾರಿನ ಡಿಕ್ಕಿಯಲ್ಲಿ ಹಾಕಿಕೊಂಡು ಸಾಗಿಸುತ್ತಿದ್ದದ್ದು ನಿಜ ತಾನೆ?''

ಆನಂದರಾವ್ ಭಯ, ಗಾಬರಿಯಿಂದಲೇ ಹೆಂಡತಿಯ ಮುಖ ನೋಡಿದರು.

ಕ್ಷೀಣ ಸ್ವರದಲ್ಲಿ ''ಹೆಣ ಸಾಗಿಸುತ್ತಿದ್ದುನಿಜ''

''ಮನೋಹರಿ ನೀವು ಕೆಲಸ ಮಾಡುತ್ತಿರುವ ಆಫೀಸ್‌ನಲ್ಲೇ ಸೇರಿಕೊಂಡಿದ್ದಳು. ಇದೇ ಬೀದಿಯಲ್ಲೇ ಅವಳ ಮನೆ ಇರೋದ್ರಿಂದ ನಿಮ್ಮ ಹೆಂಡತಿಗೂ ಸಹ ಪರಿಚಯ ಆಯಿತು. ಆತ್ಮೀಯತೆ ಬೆಳೆಯಿತು ಅವಳು ಆಗಾಗ ಈ ಮನೆಗೆ ಬರುತ್ತಿದ್ದಳು ಅಲ್ಲವೆ?'' ಒಂದು ದಂಪತಿಗಳನ್ನು ತೀಕ್ಷ್ಣವಾಗಿ ನೋಡಿದನು.

ಅವರಿಬ್ಬರು ಹೆದರುತ್ತಲೇ ತಲೆಯಾಡಿಸಿದರು ಭಯ...ಭಯದ ಛಾಯೆ ಅಡಗಿತ್ತು.

ಪೊನ್ನಪ್ಪ ''ಮನೋಹರಿ ಇಲ್ಲಿಗೆ ಬಂದಾಗ ರಾತ್ರಿ ಎಷ್ಟು ಹೊತ್ತಾಗಿತ್ತು?''

''ಎಂಟೂವರೆ ಇರಬೇಕು''

ಪೊನ್ನಪ್ಪ ''ಮದುವೆ ಪತ್ರಿಕೆ ನೀಡಿ ಕರೆಯಲು ಬಂದಿದ್ದ ಅವಳನ್ನು ನೀವು ಕೊಲೆ ಮಾಡಿದ್ದೀರ. ನಿಮ್ಮನ್ನು ಮನುಷ್ಯರು ಅಂತ ಯಾರೂ ಸಹ ಕರೆಯೊಲ್ಲ'' ಎಂದು ಕೋಪದಿಂದ ಹೇಳಿದನು.

ಆನಂದರಾವ್ ಭಯ, ಗಾಬರಿ, ಆತುರದಿಂದ ''ಇಲ್ಲ...ಇಲ್ಲ...ಈ ಕೊಲೆಯನ್ನು ನಾವು ಮಾಡಿಲ್ಲ''

ಪೊನ್ನಪ್ಪ ''ಜೀವಂತವಾಗಿ ಮನೋಹರಿ ನಿಮ್ಮ ಮನೆಗೆ ಅವಳ ಹೆಣವನ್ನು ನೀವೇ ಸಾಗಿಸಿದ್ದೀರ ಅಂದಮೇಲೆ ನಿಮ್ಮ ಮನೆಗೆ ಬೇರೆ ಯಾರೋ ಬಂದು ಕೊಲೆ ಮಾಡಲು ಸಾಧ್ಯವೆ?''

ಆನಂದರಾವ್ ಉತ್ತರಿಸಲು ತಡಕಾಡುತ್ತಿರುವಾಗ ಸುಮಿತ್ರಮ್ಮ ಗಂಭೀರವಾಗಿ ''ನನ್ನ ಗಂಡನಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲ ಹಣದ ಆಸೆಗೆ ಬಲಿ ಬಿದ್ದು ನಾನು ಈ ಕೊಲೆ ಮಾಡಲು ಪ್ರಯತ್ನಿಸಿದೆ!''

ಇದನ್ನು ಕೇಳಿ ಅಲ್ಲಿದ್ದವರೆಲ್ಲಾ ಭಯಾಶ್ಚರ್ಯದಿಂದ ತತ್ತರಿಸಿಹೋದರು. ಮನೋಹರಿಗೆ ಯಾವ ರೀತಿಯಲ್ಲೂ ಸಂಬಂಧ ಪಡದ ಸುಮಿತ್ರಮ್ಮ ಹಣದ ಆಸೆಯಿಂದ ಈ ಕೊಲೆಗೆ ಕೈ ಹಾಕಿದ್ದಾರೆ.

ಆನಂದರಾವ್ ಗಾಬರಿಯಿಂದ ''ಲೇ...ಲೇ ಸುಮಿತ್ರ...ಬಾಯಿಗೆ ಬಂದಂತೆ ಹೇಳಿಕೆ ನೀಡಬೇಡ. ಇದು ಕೊಲೆಯ ವಿಚಾರ''

ಪೊನ್ನಪ್ಪ ಕೆಂಗಣ್ಣು ಬೀರಿದನು.

ಸುಮಿತ್ರಮ್ಮ ''ನಡೆದಿರುವ ಸಂಗತಿ ಹೇಳದೆ ಇದ್ದರೆ ಎಲ್ಲಾ ಗೋಜಲು, ಗೋಜಲಾಗಿ ನಿಮ್ಮ ಮೇಲೂ ಸಹ ಪೋಲೀಸರಿಗೆ ಸಂದೇಹ ಬರುತ್ತದೆ ಹಾಗಾಗಕೂಡದು ಕಣ್ರಿ''

ಎಲ್ಲರೂ ಈಗ ಕುತೂಹಲಗೊಂಡಿದ್ದಾರೆ.

ಸುಮಿತ್ರ ಗಂಭೀರವಾಗಿ ''ನಿನ್ನೆ ಮಧ್ಯಾಹ್ನ ಮನೆಗೆ ಬಂದಾಗ ಮಂಚದ ಮೇಲೆ ಕರ್ಚಿಫ್‌ನಲ್ಲಿ ಇಪ್ಪತ್ತು ಸಾವಿರ ಹಣ ಸುತ್ತಿ ಎಸೆದಿದ್ದರು. ಅದರೊಂದಿಗೆ ಈ ವಿಷದ ಸೀಸೆ ಸಹ ಇತ್ತು''

ಆ ಮನೆಯಲ್ಲಿ ದೊರೆತಿದ್ದ ನೋಟಿನ ಕಂತೆಗಳು ಮತ್ತು ವಿಷದ ಸೀಸೆ, ರೋಸ್ ಕಲರ್ ಹೇರ್‌ಕ್ಲಿಪ್, ಮತ್ತೊಂದು ಕರ್ಚಿಫ್ ಸಹ ಆಗ ಟೀಪಾಯ ಮೇಲೆ ಇತ್ತು.

ಸುಮಿತ್ರಮ್ಮ ಮುಂದುವರೆಸುತ್ತಾ ''ಆಗ ಮನೆಗೆ ಯುವತಿಯೊಬ್ಬಳು ಫೋನ್ ಮಾಡಿದಳು''

''ಯಾರವಳು?''

''ಗೊತ್ತಿಲ್ಲ''

''ಧ್ವನಿಯನ್ನು ಹಿಂದೆ ಕೇಳಿಲ್ಲವೆ?''

''ಇಲ್ಲ...ಕೇಳಿಲ್ಲ''

''ಅವಳೇನು ಹೇಳಿದಳು?''

''ಮನೋಹರಿ ರಾತ್ರಿ ಮನೆಗೆ ಬರುತ್ತಾಳೆ. ಅವಳಿಗೆ ಹೇಗಾದರೂ ಮಾಡಿ ಈ ಸೀಸೆಯಲ್ಲಿರೋ ವಿಷ ಕುಡಿಸು. ಅದು ಕೆಲಸ ಮಾಡಲು ಒಂದು ಗಂಟೆಯ ಸಮಯ ಬೇಕಾಗುತ್ತೆ. ಕೂಡಲೇ ಮನೋಹರಿಯನ್ನು ಅವಳ ಮನೆಗೆ ಕಳುಹಿಸು. ಅವಳು ಸತ್ತರೂ ಸಹ ನಿನ್ನ ಮೇಲೆ ಅನುಮಾನ ಬರೋಲ್ಲ. ಇಪ್ಪತ್ತು ಸಾವಿರ ಅಡ್ವಾನ್ಸ್ ಇದೆ. ಕೆಲಸ ಆದ ಕೂಡಲೇ ಉಳಿದ ಮುವತ್ತು ಸಾವಿರ ತಲುಪಿಸುತ್ತೇನೆ ಅಂತ ಹೇಳಿದಳು''

''ಆಮೇಲೆ ಏನು ಮಾಡಿದ್ರಿ?''

''ನಾನು ಹಾಲಿಗೆ ತುಂಬಾ ಕೇಸರಿ, ಸಕ್ಕರೆ ಹಾಕಿ ಈ ವಿಷ ಬೆರೆಸಿ ಮನೋಹರಿಗೆ ತಂದುಕೊಟ್ಟೆ''

''ಆಗ ಅಲ್ಲಿ ಬೇರೆ ಯಾರಿದ್ದರು?''

''ಯಾರೂ ಇರಲಿಲ್ಲ''

''ನಿಮ್ಮ ಗಂಡ''

''ಅವರು ಹೊರಗೆಲ್ಲೋ ಹೋಗಿದ್ದರಟ''

ಪೊನ್ನಪ್ಪ ಕೋಪ ಸಹಿಸಿಕೊಳ್ಳುತ್ತಾ ''ಅಂದರೆ ನೀವು ಕೊಟ್ಟ ವಿಷದ ಹಾಲನ್ನು ಮನೋಹರಿ ಕುಡಿದು ಸತ್ತಳು ಅಲ್ಲವೆ?''

''ಅದೇನೂ ನನಗೆ ಗೊತ್ತಿಲ್ಲ''

ಪೊನ್ನಪ್ಪ ಕೋಪದಿಂದ. ''ಎಲ್ಲಾ ಮಾಡಿ ಈಗ ಗೊತ್ತಿಲ್ಲ ಅಂದರೆ ಯಾರು ಕೇಳುತ್ತಾರೆ?''

ಸುಮಿತ್ರಮ್ಮ ''ನನಾ ವಿಷ ಇದ್ದ ಹಾಲನ್ನು ಅವಳಿಗೆ ತಂದುಕೊಟ್ಟೆ. ನನಗೆ ವಿಪರೀತ ಭಯವಾಗಿದ್ದರಿಂದ ಅಲ್ಲಿ ನಿಲ್ಲದೆ ಅಡುಗೆ ಕೋಣೆಗೆ ಹೋಗಿ ಬಾಗಿಲನ್ನು ಹಾಕಿಕೊಂಡೆ. ಗಾಬರಿ, ಭಯ, ಆತಂಕದಿಂದ ನನಗೆ ಪ್ರಜ್ಞೆ ಹೋಗಿತ್ತು. ನನ್ನ ಗಂಡ ಒಳಗೆ ಬಂದು ನನ್ನ ಮುಖಕ್ಕೆ ನೀರು ಚಿಮುಕಿಸಿದಾಗೇ ನನಗೆ ಪ್ರಜ್ಞೆ ಬಂದಿದ್ದು'' ಎಂದು ಗಂಡನ ಕಡೆ ನೋಡಿದರು.

ಆನಂದರಾವ್ ತಲೆಯಾಡಿಸಿದರು.

ಪೊನ್ನಪ್ಪ '4ಆನಂದರಾವ್...ನೀವು ರಾತ್ರಿ ಮನೆಗೆ ಬಂದಿದ್ದು ಎಷ್ಟು ಹೇತ್ತಾಗಿತ್ತು?''

''ರಾತ್ರಿ ಒಂಭತ್ತುವರೆ ಇರಬೇಕು''

''ಮನೋಹರಿ ಬದುಕಿದ್ದಾಳೆ?''

''ಇಲ್ಲ''

ಪೊನ್ನಪ್ಪ ''ಮಿಸೆಸ್ ಆನಂದರಾವ್...ಮನೋಹರಿ ನೀವು ಕೊಟ್ಟಿದ್ದ ಹಾಲನ್ನು ಕುಡಿದಿದ್ದಳೆ? ನಿಜ ಹೇಳಿ. ಸುಳ್ಳು ಹೇಳಿದರೆ ಪೋಸ್ಟ್‌ಮಾರ್ಟಮ್ ರಿಪೋರ್ಟ್ ಬಂದಾಗ ಸತ್ಯ ಗೊತ್ತಾಗುತ್ತೆ''

ಸುಮಿತ್ರಮ್ಮ ''ಕುಡಿದಿರಬೇಕು ಅಂತ ಕಾಣುತ್ತೆ! ನಾನು ನೋಡಿದಾಗ ಲೋಟದಲ್ಲಿ ಹಾಲು ಇರಲಿಲ್ಲ ಇನ್ಸ್‌ಪೆಕ್ಟರ್''

ಆನಂದರಾವ್ ಕುಳಿತಲ್ಲೇ ವಿಪರೀತ ಭಯ, ಗಾಬರಿಯಿಂದ ಚಡಪಡಿಸುತ್ತಿದ್ದಾನೆ.

ಪೊನ್ನಪ್ಪ ''ಈ ವಿಷದ ಸೀಸೆ, ಹಣ ನಿಮ್ಮ ಮಂಚದ ಮೇಲಿದ್ದ ಹಾಸಿಗೆಯ ಮೇಲೆ ಹೇಗೆ ಬಂತು?''

ಸುಮಿತ್ರಮ್ಮ ''ನಾನು ಮನೆಗೆ ಬರುವುದಕ್ಕೆ ಸ್ವಲ್ಪ ಮೊದಲು ನನಗೆ ಮನೋಹರಿಯನ್ನು ಕೊಲೆ ಮಾಡಲು ಹೇಳಿದ್ದ ಯುವತಿಯೇ ಬಂದು ರೂಮಿನ ಕಿಟಕಿಯ ಮೂಲಕ ಹಾಕಿದಳಂತೆ ಹಾಗಂತ ಅವಳೇ ಫೋನಿನಲ್ಲಿ ಹೇಳಿದ್ದಳು''

ಪೊನ್ನಪ್ಪನ ಮುಖ ಅರಳಿತು ರೂಮಿನ ಕಿಟಕಿಯ ಹತ್ತಿರ ದೊರೆತಿರುವ ಹೇರ್‌ಕ್ಲಿಪ್ ಮತ್ತು ಈ ಕರ್ಚಿಫ್ ಆ ಯುವತಿಯದ್ದು!

ಹಣದಾಸೆ ತೋರಿಸಿ ಮನೋಹರಿಯನ್ನು ಕೊಲೆ ಮಾಡಲು ಸುಮಿತ್ರಮ್ಮನನ್ನು ಉಪಯೋಗಿಸಿಕೊಂಡಿದ್ದಾಳೆ. ಮುಕುಂದನನ್ನು ಮದುವೆಯಾಗಲು ಮತ್ತೊಂದು ಹೆಣ್ಣು ಬಯಸಿತ್ತು!

ಆ ಹೆಣ್ಣು ಮೋನಿಕ!

ರಾಯರ ತಂಗಿಯ ಮಗಳು!

★★★

ಹೇರ್ ಕ್ಲಿಪ್ ಮೋನಿಕಳದ್ದು!

ಸೀಸೆಯ ಮೇಲೆ, ನೋಟಿನ ಕಂತೆಗಳ ಮೇಲೆ ಮೂಡಿರುವ ಬೆರಳು ಗುರುತುಗಳಲ್ಲಿ ಮೊನಿಕಳದ್ದು ಸಹ ಮೂಡಿದೆ ಅಂತ ಫಿಂಗರ್ ಪ್ರಿಂಟ್ ರಿಪೋರ್ಟ್ ಹೇಳುತ್ತಿತ್ತು!

ಎರಡು ಕರ್ಚಿಫ್‌ಗಳು ಸಹ ಮೋನಿಕಳದ್ದು ಅಂತ ಪರಿಶೀಲನೆಯಿಂದ ಗೊತ್ತಾಗಿತ್ತು.

ಕೊಲೆಗೆ ಕಾರಣ ಇತ್ತು!

ಎಸ್. ಐ. ಪೊನ್ನಪ್ಪ ಮೋನಿಕಳನ್ನು ತನಿಖೆ ಮಾಡುವ ಮುನ್ನ ಸೊರಗೂರಿಗೆ ಫೋನ್ ಮಾಡಿದ್ದನು.

ಸೊರಗೂರಿನ ಆಸ್ಪತ್ರೆಯಲ್ಲಿ ಬಾಡಿಯ ಪೋಸ್ಟ್‌ಮಾರ್ಟಮ್ ಪ್ರಾರಂಭವಾಗಿತ್ತು.

ಡಾಕ್ಟರ್ ''ಮಿಸ್ಟರ್ ಪೊನ್ನಪ್ಪ...ಮೃತಳ ದೇಹದಲ್ಲಿ) ಅನ್ನುವ ಪಾಯ್ಸನ್ ಸೇರಿದೆ. ಫೈನಲ್ ರಿಪೋರ್ಟ್ ಅನ್ನು ಇನ್ನೊಂದು ಗಂಟೆಯಲ್ಲಿ ಕಳಿಸುತ್ತೇನೆ''

''ಥ್ಯಾಂಕ್ ಯು ಡಾಕ್ಟರ್''

ಫೋನ್ ಡಿಸ್‌ಕನೆಕ್ಟ್ ಆಯಿತು.

ಈಗ ಈ ಪೋಲೀಸ್ ಅಧಿಕಾರಿಗಳ ಎಲುರು ಉದ್ರೇಕಕಾರಿ ಸೌಂದರ್ಯವತಿ ಮೊನಿಕ ಕುಳಿತುಕೊಂಡಿದ್ದಾಳೆ. ಅವಳ ಮುಖದಲ್ಲಿ ಈಗ ಭಯ, ಗಾಬರಿ ತುಂಬಿದೆ.

ಮುಕುಂದ, ಕೋದಂಡರಾವ್ ಅವಳನ್ನು ಕೋಪ, ತಿರಸ್ಕಾರದಿಂದ ನೋಡುತ್ತಿದ್ದಾರೆ.

ಈ ಚೆಲುವೆಯೇ ತನಗೆ ಹಣದಾಸೆ ತೋರಿಸಿ ಕೊಲೆಗೆ ಪ್ರಚೋದಿಸಿರೋದು ಎಂಬ ಭಾವದಿಂದ ಸುಮಿತ್ರಮ್ಮ ಬೆರಗುಗಣ್ಣುಗಳಿಂದ ನೋಡುತ್ತಿದ್ದಾರೆ.

ಎಸ್. ಐ. ಪೊನ್ನಪ್ಪ ''ಮೋನಿಕ...ನೀನು ಇಲ್ಲಿಗೆ ಬಂದಿರೋದಕ್ಕೆ ವಿಷಯ ಕುಡಿಸಲು ಸುಮಿತ್ರಮ್ಮನನ್ನು ಪ್ರಚೋದಿಸಿರುವುದಕ್ಕೆ ಬಲವಾದ ಸಾಕ್ಷಿ. ಆಧಾರಗಳು ದೊರೆತಿವೆ. ಮನೋಹರಿಯ ದೇಹದಲ್ಲಿ ನೀನು ಕೊಟ್ಟಿರುವ ಸೈನೋಕಾಸ್‌ಮೋಲೀನ್ ಎಂಬ ವಿಷ ಬೆರೆತಿದೆ ಅಂತ ಗೊತ್ತಾಗಿದೆ ಕೊಲೆ ಮಾಡಲು ಪ್ರಚೋದಿಸಿದಕ್ಕೆ ಮತ್ತು ಕೊಲೆ ಮಾಡಲು ಪ್ರಯತ್ನಿಸಿದ್ದಕ್ಕೆ ಸುಮಿತ್ರಮ್ಮ ಹಾಗೂ ನಿನ್ನನ್ನು ಅರೆಸ್ಟ್ ಮಾಡುತ್ತಿದ್ದೇವೆ''

ಸುಮಿತ್ರಮ್ಮ ಭಯ, ಗಾಬರಿಯಿಂದ ಗಂಡನ ಕಡೆ ನೋಡಿದರು. ಮೋನಿಕ ಈಗ ತನ್ನ ತಾಯಿಯ ಅಣ್ಣ ಕೋದಂಡರಾವ್ ಕಡೆ ನೋಡಿದಳು.

ಕೋದಂಡರಾವ್ ತಲೆ ತಗ್ಗಿಸಿದರು. ಮುಕುಂದ ಈಗ ಮೋನಿಕಳನ್ನು ಕೆಕ್ಕರಿಸಿಕೊಂಡು ನೋಡಿದನು.

ಅಲ್ಲಿಗೆ ಈ ಕೊಲೆಯ ಕೇಸು ಮುಕ್ತಾಯವಾಯಿತು ಅಂತ ತೀರ್ಮಾನಿಸುವ ಹಾಗಿರಲಿಲ್ಲ!

ಡಾಕ್ಟರ್ ರಿಪೋರ್ಟ್ ಬಂದಿತು!

ಬೇರೊಂದು ತಿರುವನ್ನು ನೀಡಿತು!

★★★

ಸೈನೋಕಾಸ್‌ಮೋಲಿನ್ ಎಂಬ ವಿಷ ಹಾಲಿನ ಜೊತೆ ಮೃತಳ ದೇಹ ಸೇರಿರೋದು ನಿಜ.

ಈ ಪಾಯ್ಸನ್ ರಕ್ತದಲ್ಲಿ ಬೆರೆತ ಒಂದು ಗಂಟೆಯ ನಂತರ ಪರಿಣಾಮ ಬೀರುತ್ತದೆ!

ವ್ಯಕ್ತಿ ಕೆಲವೇ ನಿಮಿಷಗಳ ಯಮಯಾತನೆ ಅನುಭವಿಸಿ ಸಾಯುತ್ತಾನೆ.

ಆದರೆ ಕೊಲೆ ರಾತ್ರಿ ಒಂಭತ್ತೂವರೆಯಿಂದ ಕೇವಲ ಹತ್ತು ನಿಮಿಷಗಳ ಅವಧಿಯಲ್ಲಿ ನಡೆದಿದೆ.

ಕತ್ತಿನ ಸುತ್ತಲೂ ಬೆರಳಿನ ಗುರುತುಗಳು ಸ್ಪಷ್ಟವಾಗಿ ಕೆಂಪು ಗುರುತು ಮೂಡಿಸಿದೆ.

ವಿಷ ಕುಡಿದ ಹತ್ತು ನಿಮಿಷಗಳಲ್ಲಿ ಕತ್ತನ್ನು ಹಿಸುಕಿ ಕೊಲೆ ಮಾಡಲಾಗಿದೆ. ಬೇಗ ಪ್ರಾಣ ಹೋಗಿರುವುದರಿಂದ ರಕ್ತದಲ್ಲಿ ಬೆರೆತಿರುವ ವಿಷಯ ತನ್ನ ಪ್ರಭಾವ ಬೀರಿಲ್ಲ.

ವ್ಯಕ್ತಿ ಮೃತನಾಗಿ ಆರು ಗಂಟೆಗಳ ಕಾಲ ದೇಹದಲ್ಲಿ ಬಿಸಿಯಿದ್ದರೂ ಸಹ ಎಲ್ಲಾ ರೀತಿಯ ಮೂಲ ಕ್ರೀಯೆಗಳು ನಿಂತುಹೋಗುತ್ತವಲ!

ರಕ್ತದಲ್ಲಿ ಬೆರೆತಿರುವ ಪಾಯ್ಸನ್ ಹ್ಯಾಮೋಲಿನ್ ಆಗಿ ಬದಲಾದರೆ ಮಾತ್ರ ಅದರಿಂದ ಸಾವು ಸಂಭವಿಸಿದೆ ಅಂತ ಹೇಳಬಹುದು.

ಮೃತಳ ದೇಹದಲ್ಲಿ ಹ್ಯಾಮೋಲಿನ್ ರಿಯಾಕ್ಷನ್ ನಡೆದಿಲ್ಲ. ಅದಕ್ಕೆ ಕಾರಣ ರಕ್ತದಲ್ಲಿ ವಿಷ ಸೇರಿದ ಕೂಡಲೇ ವ್ಯಕ್ತಿ ಬೇರೊಂದು ರೀತಿಯಲ್ಲಿ ಸತ್ತುಹೋಗಿರುವುದು.

ಈ ಅನಾಲಿಸಿಸ್ ಪ್ರಕಾರ ಮೃತಳ ಸಾವಿಗೆ ಕಾರಣ ಉಸಿರು ನಿಂತುಹೋಗಿರುವುದು.

ಕತ್ತನ್ನು ಹಿಸುಕಿ ಸಾಯಿಸಲಾಗಿದೆ!

ಇದನ್ನೇ ಡಾಕ್ಟರ್ ರಿಪೋರ್ಟ್ ಹೇಳುತ್ತಿತ್ತು.

★★★

ಮೋನಿಕ ವಿಷ ಕುಡಿಸಲು ಸುಮಿತ್ರಮ್ಮನನ್ನು ಪ್ರಚೋದಿಸಿದ್ದಾಳೆ.

ಸುಮಿತ್ರಮ್ಮ ಹಾಲಿನ ಮೂಲಕ ಈ ವಿಷಯವನ್ನು ಮನೋಹರಿಗೆ ಕುಡಿಸಿದ್ದಾರೆ.

ಆದರೆ ಸವಿಗೆ ಕಾರಣ ವಿಷ ಅಲ್ಲ!

ಎಸ್. ಐ. ಪೊನ್ನಪ್ಪ ಮತ್ತು ಸೊರಗೂರಿನ ಪೋಲೀಸ್ ಅಧಿಕಾರಿಗಳು ಚರ್ಚೆ ನಡೆಸುತ್ತಿದ್ದಾರೆ.

ಹೆಣದ ಮುಷ್ಟಿಯನ್ನು ಬಿಡಿಸಿದ್ದಾಗ ಅದರಲ್ಲಿ ನಾಲ್ಕು ಕೂದಲುಗಳು ಮತ್ತು ಉಗುರುಗಳು ಸಂದಿಯಲ್ಲಿ ರಕ್ತದ ಕಲೆಗಳಿದ್ದವು!

ಹೆಬ್ಬೆರಳಿನ ಉಗುರಿನ ತುದಿಯಲ್ಲಿ ಎರಡು ಎಳೆ ನೀಲಿ ದಾರದ ಎಳೆಗಳಿದ್ದವು!

ಅದರ ಬಗ್ಗೆ ಚರ್ಚಿಸುತ್ತಿದ್ದಾರೆ.

ಕೊಲೆಗಾರ ಮನೋಹರಿಯನ್ನು ಕತ್ತನ್ನು ಹಿಸುಕುತ್ತಿರುವ ಸಂದರ್ಭದಲ್ಲಿ ಅವಳು ತನ್ನ ಪ್ರಾಣ ಉಳಿಸಿಕೊಳ್ಳಲು ಹೋರಾಡಿದ್ದಾಳೆ.

ಆಗ ಇವುಗಳು ಅವಳ ಕೈ ಸೇರಿವೆ!

ಎಸ್. ಐ. ಪೊನ್ನಪ್ಪ ಈಗ ಇಬ್ಬರು ಬುದ್ಧಿವಂತರಾದ ಪೋಲೀಸ್ ಅಧಿಕಾರಿಗಳನ್ನು ಕಳುಹಿಸಿ ರಹಸ್ಯ ತನಿಖೆಗೆ ಏರ್ಪಾಡು ಮಾಡಿದನು.

ಮನೋಹರಿ ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಅವಳ ಫ್ಯಾಮಿಲಿ ಬ್ಯಾಕ್ ಗ:ರಂಡ್ ಬಗ್ಗೆ ಸಮಗ್ರ ಮಾಹಿತಿ ತರಿಸಿಕೊಂಡನು.

ಪೊನ್ನಪ್ಪ ಸಿಗರೇಟನ್ನು ಸೇದುತ್ತಾ ನಡೆದಿರುವ ಘಟನೆಗಳ ಬಗ್ಗೆ ಆಲೋಚಿಸಲಾರಂಭಿಸಿದನು.

ಮನೋಹರಿ ರಾತ್ರಿ ಎಂಟೂವರೆಯ ಸಮಯದಲ್ಲಿ ಆನಂದರಾವ್ ಮನೆಗೆ ಬಂದಿದ್ದಾಳೆ.

ಆಗಗ ಆನಂದರಾವ್ ಇರಲಿಲ್ಲ!

ಸುಮಿತ್ರಮ್ಮ ಮನೋಹರಿಯ ಜೊತೆ ಮಾತಾಡಿ ನಂತರ ವಿಷ ಬೆರೆಸಿದ್ದ ಹಾಲನ್ನು ತಂದುಕೊಟ್ಟಿದ್ದಾರೆ ಕೊಲೆಯ ಪ್ರಯತ್ನ ಮಾಡುತ್ತಿರುವುದರಿಂದ ಮಾನಸಿಕ ಆಘಾತವಾಗಿ ಆಕೆಗೆ ಪ್ರಜ್ಞೆ ಹೋಗಿದೆ. ಆಗ ತುಮಿತ್ರಮ್ಮ ಅಡುಗೆ ಮನೆಯಲ್ಲಿದ್ದರು.

ನಂತರ ಏನು ನಡೆಯಿತೋ ಗೊತ್ತಿಲ್ಲ. ಆಕೆಯ ಗಂಡ ಆನಂದರಾವ್ ಒಳಗೆ ಬಂದು ನೀರನ್ನು ಚಿಮುಕಿಸಿದಾಗಲೇ ಆಕೆಗೆ ಪ್ರಜ್ಞೆ ಬಂದಿದೆ.

ಆನಂದರಾವ್ ಮನೆಗೆ ಬಂದು ನೋಡಿದಾಗ, ಹೆಂಡತಿಯ ಹತ್ತಿರ ಹೋಗುವ ಮುನ್ನ ಸೋಫಾದಲ್ಲಿ ಕುಳಿತಿದ್ದ ಮನೋಹರಿ ಸತ್ತಿದ್ದಳು ಅಂತ ಅವರು ಹೇಳಿಕೆ ನೀಡಿದ್ದಾರೆ.

ಈ ಹೇಳಿಕೆಯನ್ನು ಎಷ್ಟರಮಟ್ಟಿಗೆ ನಂಬಬಹುದು? ಒಂದು ವೇಳೆ ಆನಂದರಾವ್ ತಾವೇ ಅವಳನ್ನು ಕತ್ತು ಹಿಸುಕಿ ಕೊಂದಿರಬಾರದೇಕೆ? ಸಾಧ್ಯತೆಗಳಿವೆ.

ಇವರ ಮನೆಯಲ್ಲಿದ್ದ ಮನೋಹರಿಯನ್ನು ಬೇರೆ ಯಾರೋ ಬಂದು ಕತ್ತು ಹಿಸುಕಿ ಕೊಲೆ ಮಾಡುವಂತಹ ಅವಿವೇಕದ ಧೈರ್ಯ ತೋರಿಸಲಾರರು.

ಆನಂದರಾವ್ ಅವಳನ್ನು ಕೊಲೆ ಮಾಡಲು ಏನು ಕಾರಣ ಇರಬಹುದು?

ಮನೋಹರಿ ಅವರ ಆಫೀಸ್‌ನಲ್ಲೇ ಕೆಲಸ ಮಾಡುತ್ತಿದ್ದಳು. ಇವರ ಮನೆಗೆ ಆಗಾಗ ಬರುತ್ತಿದ್ದಳು ಕ್ಲೋಸ್ ಫ್ರೆಂಡ್‌ಶಿಪ್ ಇತ್ತು.

ಸಿಗರೇಟುಗಳು ಫ್ಯಾಮಿಲಿ ಬ್ಯಾಕ್‌ಗ್ರೌಂಡ್ ಬಗ್ಗೆ ರಹಸ್ಯ ಪೋಲೀಸ್ ಅಧಿಕಾರಿಗಳು ಸಂಗ್ರಹಿಸಿದ್ದ ಇನ್‌ಫರ್‌ಮೇಷನ್ ಈ ರೀತಿ ಇತ್ತು.

ಮನೋಹರಿಯ ತಂದೆ ಕುಡುಕ. ಸಂಸಾರದ ಜವಾಬ್ದಾರಿ ಇಲ್ಲದಿರುವ ಸೋಮಾರಿ.

ತಾಯಿ ಗೋರಿಷ್ಠೆ!

ಮನೋಹರಿಗೆ ತಿಂಗಳಿಗೆ ಎರಡು ಸಾವಿರ ಮಾತ್ರ ಸಂಬಳ ಬರುತ್ತಿತ್ತು.

ಅವಳು ಕೆಲಸಕ್ಕೆ ಸೇರಿ ಕೇವಲ ಮೂರು ತಿಂಗಳಾಗಿತ್ತು!

ಮನೋಹರಿಯ ತಾಯಿಗೆ ಇತ್ತೀಚೆಗೆ ಹಾರ್ಟ್ ಆಪರೇಷನ್ ಆಗಿತ್ತು. ಅದಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಹಣ ಖರ್ಚಾಗಿತ್ತು.

ಹಣ ಹೇಗೆ ಹೊಂದಿಸಿದಳು?

ಆಫೀಸಾನಲ್ಲಿ ಲೋನ್ ಕೊಟ್ಟಿಲ್ಲ. ಇವರು ಬಡವರಾಗಿದ್ರಿಂದ ಬಂಧು ಬಳಗದವರ್‍ಯಾರೂ ಸಹ ಸಾಲ ನೀಡಿಲ್ಲ. ಅಂದಮೇಲೆ ಹಣ ಹೇಗೆ ದೊರೆಯಿತು?

ಪೊನ್ನಪ್ಪನಿಗೆ ಎಲ್ಲೋ ಒಂದು ಕಡೆ ಅಂಶಯ ಬರುತ್ತಿದೆ. ಆದರೆ ಸರಿಯಾದ ಲಿಂಕ್ ಸಿಗದೆ ಅದು ಜಾರಿಹೋಗುತ್ತಿದೆ.

ಹೊಸ ಆಲೋಚನೆಯೊಂದು ಬಂದಿತು. ಅದೇ ಸರಿ ಎನಿಸಿ ಜೀಪಿನಲ್ಲಿ ಈಗ ಮನೋಹರಿಯ ಮನೆಗೆ ಬಂದನು.

ಕೊಲೆಯ ನಿಗೂಢತೆಯ ಮೇಲೆ ಬೆಳಕನ್ನು ಚೆಲ್ಲುವಂತಹ ಕ್ಲೂ ದೊರೆಯುವುದರಲ್ಲಿತ್ತು!

★★★

ಅದು ನಾಡಹೆಂಚಿನ ಮನೆ!

ಪೋಲೀಸ್ ಜೀಪ್ ಸೈರನ್ ಮೊಳಗಿಸುತ್ತಾ ಮನೆಯ ಮುಂದೆ ನಿಂತುಕೊಂಡಿತುದ

ಒಳಗೆ ಬಂದ ಪೋಲೀಸ್ ಅಧಿಕಾರಿಯನ್ನು ಕಂಡು ದುಃಖಿತಪ್ತರಾಗಿದ್ದ ವೃದ್ಧ ದಂಪತಿಗಳು ಭಯ, ಗಾಬರಿಯಿಂದಲೇ ನೋಡಿದರುದ

ಎಸ್. ಐ. ಪೊನ್ನಪ್ಪ ಈಗ ಮನೋಹರಿಯ ತಂದೆ, ತಾಯಿಗಳನ್ನು ಸಂತೈಸಿ, ಧೈರ್ಯನೀಡಿ ''ನಿಮ್ಮ ಮಗಳ ರೂಮನ್ನು ನಾನೊಂದು ಸಲ ನೋಡಬೇಕಲ್ಲ''

ದಂಪತಿಗಳು ಸಮ್ಮತಿಸಿದರು. ಮನೋಹರಿಯ ತಾಯಿ ಒಳಗೆ ಹಿಗಿ ಕೀ ತಂದು ಮಗಳ ಕೊಠಡಿಗೆ ಹಾಕಿದ್ದ ಬೀಗವನ್ನು ತೆರೆದರು.

ಪೊನ್ನಪ್ಪ ರೂಮಿನೊಳಗೆ ಬಂದನು.

ಅದು ಸಣ್ಣ ಕೊಠಡಿ ಬಲಭಾಗದಲ್ಲಿ ಮಂಚ ಇತ್ತು. ಅದರ ಮೇಲೆ ಇದ್ದ ಹಾಸಿಗೆಯನ್ನು ಸುತ್ತಲಾಗಿತ್ತು.

ಗೋಡೆಗೆ ನೈಲಾನ್ ಹಗ್ಗವನ್ನು ಮೊಳೆಗಳ ಸಹಾಯದಿಂದ ಕಟ್ಟಲಾಗಿತ್ತು. ಮನೋಹರಿಯ ಸೀರೆ, ರವಿಕೆ ಇತ್ತು. ಬಲಭಾಗದಲ್ಲಿ ಮರದ ಟೇಬಲ್ ಇತ್ತು.

ಅದರ ಮೇಲೆ ಕನ್ನಡಿ ಇತ್ತು. ಪಎಡರ್, ಸ್ನೋ, ಬಾಚಣಿಗೆ ಮಾತ್ರ ಇತ್ತು. ಈ ಕುಟುಂಬ ಬಡತನದಲ್ಲಿ ಜೀವನ ನಡೆಸುತ್ತಿತ್ತು ಎಂದು ವಾತಾವರಣದಿಂದ ಗೊತ್ತಾಗುತ್ತಿತ್ತು.

ಗೋದ್ರೆಜ್ ಬೀರು ಇರಲಿಲ್ಲ.

ಮಂಜದ ಅಡಿ ಮಂಡಿಯೂರಿ ಕುಳಿತು ನೋಡಿದನು. ಅಡಿಯಲ್ಲಿ ದೊಡ್ಡ ಟ್ರಂಕ್ ಇತ್ತು.

ಅದನ್ನು ಹೊರಗೆಳೆದನುದ

ಅದಕ್ಕೆ ಹಾಕಿದ್ದ ಬೀಗವನ್ನು ಎಸ್. ಐ. ಪೊನ್ನಪ್ಪ ಜೋರಾಗಿ ಎಳೆದಾಗ ಕಿತ್ತುಬಂದಿತು. ಅದು ಅಂತಹ ತರಕಲಾಂಡಿ ಬೀಗ.

ಟ್ರಂಕಿನಲ್ಲಿ ಸೀರೆಗಳ ನಡುವೆ ಸಣ್ಣ ಪರ್ಸ್ ಇತ್ತು. ಅದರಲ್ಲಿ ನೂರರ ಎರಡು ನೋಟುಗಳಿದ್ದವು. ಪೊನ್ನಪ್ಪ ಪ್ರತಿಯೊಂದು ಸೀರೆಯನ್ನು ಎತ್ತಿ ಕೊಡವಿ ನೋಡುತ್ತಿದ್ದಾನೆ. ಕೊನೆಯ ಸೀರೆಯ ಮಡಿಕೆಯಿಂದ ಅದೇನೊ ಜಾರಿ ಬಿದ್ದಿತು.

ಅದು ಕೆಂಪು ರ್‍ಯಾಪರ್ ಹೊಂದಿದ್ದ ಡೈರಿ. ಕುತೂಹಲದಿಂದ ತೆರೆದು ನೋಡಿದನು.

ಕೆಲವು ಕಡೆ ಕೈಬರಹ ಕಂಡಿತು. ಇದನ್ನು ಈ ರೀತಿ ರಹಸ್ಯವಾಗಿ ಇರಿಸಿರಬೇಕಾದರೆ ಏನೋ ಇರಲೇಬೇಕು ಅಂತ ಅನಿಸಿತು.

ಅಲ್ಲಿ ಓದುತ್ತಾ ಕೂರುವುದು ಸರಿಯಲ್ಲ ಎನಿಸಿ ಟ್ರಂಕನ್ನು ಮತ್ತೊಂದು ಸಲ ನೋಡಿ ಮೊದಲಿನಂತೆ ಅದಕ್ಕೆ ನೀಗ ಸಿಗಿಸಿ ಹೊರಬಂದನುದ

ಈಗವನ ಹತ್ತಿರ ಡೈರಿ ಇತ್ತು. ಪೊನ್ನಪ್ಪ ಸ್ಟೇಷನ್ನಿಗೆ ಬಂದ ಕೂಡಲೇ ಡೈರಿಯನ್ನು ಓದಲಾರಂಭಿಸಿದನು.

ಮನೋಹರಿಯ ಡೈರಿ!

ಪುಟ ಒಂದರಲ್ಲಿ -

ನನಗೆ ಅಪ್ಪಯ್ಯನನ್ನು ಕಂಡರೆ ಮೈಯೆಲ್ಲಾ ಉರಿದುಹೋಗುತ್ತದೆ. ದುಡಿದು ಸಂಸಾರ ಸಾಕುವುದು ಹಾಗಿರಲಿ ಅಮ್ಮನನ್ನೇ ಪೀಡಿಸಿ ಹಣ ಕಿತ್ತುಕೊಂಡು ಹೋಗಿ ಕುಡಿಯುತ್ತಾರೆ. ಕುಡಿದು ಗಲಾಟೆ ಮಾಡುತ್ತಾರೆ. ಅಮ್ಮ ಅಳುತ್ತಾಳೆ. ಮದುವೆಯಾದಾಗಿಲಿಂದ ಕುಡುಕ ಗಂಡನ ಜೊತೆ ಜೀವನವನ್ನು ತೇಯ್ದು ಮೂಳೆಯ ಹಂದರ ಆಗಿದ್ದಾಳೆ. ಅಮ್ಮನಿಗೆ ಹಾರ್ಟ್ ಪ್ರಾಬ್ಲಂ ಇದೆ ಆಪರೇಷನ್ ಮಾಡಬೇಕು ಅಂತ ಡಾಕ್ಟರ್ ಹೇಳಿದ್ದಾರೆ.

ಮತ್ತೊಂದು ಪುಟದಲ್ಲಿ -

ದುಃಖದ ನಡುವೆಯೇ ನನಗೆ ಮತ್ತೊಂದು ಆಘಾತ ಎದುರಾಗಿದೆ. ಅಮ್ಮನಿಗೆ ಇನ್ನು ಹದಿನೈದು ದಿವಸಗಳಲ್ಲಿ ಹಾರ್ಟ್ ಆಪರೇಷನ್ ಮಾಡಿಸದೆ ಇದ್ದರೆ ಅಮ್ಮ ಬದುಕಲಾರಳು. ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ ಅಂತ ಡಾಕ್ಟರ್ ಇವತ್ತು ಹೇಳಿದರು. ಅಪ್ಪನನ್ನು ಕೇಳಿದೆ. ಅವರು ಆಕಾಶದ ಕಡೆ ಕೈ ತೋರಿಸಿದ್ದರು.

ಇನ್ನೊಂದು ಪುಟದಲ್ಲಿ -

ನಾನು ಸಾಲಕ್ಕೆ ಎಲ್ಲಾ ಕಡೆ ಪ್ರಯತ್ನ ನಡೆಸಿದೆ. ನಮಗೆ ಏನಿದೆ ಅಂತ ಸಾಲ ಕೊಡುತ್ತಾರೆ? ನನಗೆ ಬರೋದು ಪುಟಗೊಸಿ ಎರಡು ಸಾವಿರ ಸಂಬಳ. ಅದೂ ಪ್ರೈವೇಟ್ ಕೆಲಸ ಬೇರೆ. ಯಾವಗಳಿಗೆಯಲ್ಲಿ ಕಿತ್ತು ಹಾಕುತ್ತಾರೋ ಗೊತ್ತಿಲ್ಲ.

ಮತ್ತೊಂದು ಪುಟದಲ್ಲಿ -

ಅಮ್ಮನ ನರಳಾಟ ನಾನು ನೋಡಲಾರೆ. ಇನ್ನೆರಡು ದಿನಗಳಲ್ಲಿ ಆಪರೇಷನ್ ಮಾಡಿಸಲೋಬೇಕು. ಹಣಕ್ಕಾಗಿ ಕಂಡ ಕಂಡಲ್ಲಿ ಪರದಾಡಿ ನಿರಾಸೆಯಿಂದ ಹಿಂತಿರುಗುತ್ತಿದ್ದೆ. ಅಂಗೈತೋರಿಸಿ ಅವಲಕ್ಷಣ ಅಂತ ಯಾಕೆ ಅನಿಸಿಕೊಳ್ಳಬೇಕು? ಸಾಲ ಕೇಳುವುದನ್ನೇ ನಿಲ್ಲಿಸಿದೆ. ಸಂಜೆ ಆಫೀಸ್‌ನಿಂದ ಸಪ್ಪೆ ಮುಖ ಮಾಡಿಕೊಂಡು ಹಿಂತಿರುಗುತ್ತಿದ್ದಾಗ ನನ್ನ ಜೊತೆ ಕೆಲಸ ಮಾಡುತ್ತಿರುವ ಆನಂದರಾವ್ ನನ್ನನ್ನು ಏಕಾಂತ ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದರು. ನನಗೆ ಮೊದಲು ನಂಬಿಕೆಯೇ ಬರಲಿಲ್ಲ. ಆಪರೇಷನ್‌ಗೆ ಬೇಕಾಗುವ ಹಣವನ್ನು ತಾವೇ ಕೊಡುತ್ತೇವೆ ಅಂತ ಆನಂದರಾವ್ ಹೇಳಿದ್ದರು.

ಇನ್ನೊಂದು ಪುಟದಲ್ಲಿ -

ಗಾಳಿ ಊದಿ ಬೆಲೂನ್‌ನನ್ನು ತುಂಬಿ ದಪ್ಪ ಮಾಡಿ ಸೂಜಿಯಿಂದ ಚುಚ್ಚಿದ್ದರು. ಹಣ ಕೊಡುತ್ತಾರಂತೆ ಹಿಂತಿರುಗಿಸುವ ಅವಶ್ಯಕತೆ ಇಲ್ಲವಂತೆ. ಅಂದರೆ ಅವರೇನು ದಾನ ಮಾಡುತ್ತಿಲ್ಲ ನಾನು ಸಹ ಪ್ರತಿಯಾಗಿ ನನ್ನ ಮೈಯನ್ನು ಅವರ ಸುಖಕ್ಕೆ ದಾನ ಮಾಡಬೇಕಂತೆ.

ಕೇವಲ ಐದು ರಾತ್ರಿ! ಪ್ರತಿ ರಾತ್ರಿಗೆ ಇಪ್ಪತ್ತು ಸಾವಿರದಂತೆ ಒಂದು ಲಕ್ಷ ಕೊಡುತ್ತಾರಂತೆ.

ನಾನು ಅವರನ್ನು ಬೈಯಲಿಲ್ಲ. ಒಂದು ಲಕ್ಷ ರೂಪಾಯಿ ಹಣವನ್ನು ಇಡೀ ಗಂಟಿನಲ್ಲಿ ಪುಕ್ಕಟೆಯಾಗಿ ಕೊಡಲು ಸಾಧ್ಯವೆ?

ಮಧ್ಯದ ಪುಟದಲ್ಲಿ -

ಅಮ್ಮನ ಪರಿಸ್ಥಿತಿ ಕೈಮೀರಿದ್ದರಿಂದ ಕೂಡಲೇ ಆಸ್ಪತ್ರೆಗೆ ಸೇರಿಸಲಾಯಿತು. ನಾಳೆ ಬಲಳಗ್ಗೆ ಆಪರೇಷನ್ ಮಾಡಿಸಬೇಕು. ಮೊದಲು ಐವತ್ತು ಸಾವಿರ ಕಟ್ಟಬೇಕು. ನನಗೆ ಬೇರೆ ದಾರಿ ತೋಚಲಿಲ್ಲ. ನನ್ನ ಶೀಲದ ಬೆಲೆ ಒಂದು ಲಕ್ಷ ರೂಪಾಯಿ. ಅದರಿಂದ ನನ್ನ ತಾಯಿಯ ಪ್ರಾಣ ಉಳಿಯುತ್ತದೆ. ಮಾತೃ ಋಣವನ್ನು ಯಾವುದರಿಂದಲೂ ಸಹ ತೀರಿಸಲು ಸಾಧ್ಯವಿಲ್ಲವಂತೆ. ನಾನು ಶೀಲ ಕೊಟ್ಟು ಅದನ್ನು ತಿರಿಸುತ್ತಿದ್ದೇನೆ.

ಇನ್ನೊಂದು ಪುಟದಲ್ಲಿ.

ಆನಂದರಾವ್‌ಗೆ ವಿಷಯ ತಿಳಿಸಿದೆ. ಅವರು ಒಂದು ಲಕ್ಷ ರೂಪಾಯಿಯ ಇಡೀ ಗಂಟನ್ನು ನನಗೆ ನೀಡಿದರು. ಅವರು ನನ್ನ ಮೈ ಸಹ ಮುಟ್ಟಿರಲಿಲ್ಲ. ಹಣ ತೆಗೆದುಕೊಂಡು ಮೋಸಮಾಡಿದರೇನು ಮಾಡುತ್ತೀರ ಅಂತ ಕೇಳಿದ್ದೆ. ಆನಂದರಾವ್ ನಗುತ್ತಲೇ - ಈ ಹಣ ನಾನು ಕೊಡ್ತಾ ಇರೋದು ಯಾಕೆ? ನಿನ್ನ ಶೀಲದಿಂದ ನನಗೆ ಸುಖ ಕೊಡುತ್ತೀಯ ಅಂತ. ಅದಕ್ಕೆ ಒಪ್ಪಿಕೊಂಡು ನೀನು ಹಣ ತೆಗೆದುಕೊಂಡಿರುವುದರಿಂದ ಮಾನಸಿಕವಾಗಿ ನಿನ್ನ ಶೀಲವನ್ನು ನೀನು ಈಗಾಗಲೇ ಕಳೆದುಕೊಂಡಿದ್ದೀಯ ಅಂದಿದ್ದರು.

ಮತ್ತೊಂದು ಪುಟದಲ್ಲಿ -

ಅಮ್ಮನನ್ನು ನೋಡಿಕೊಳ್ಳಲು ಹೆಂಗಸೊಬ್ಬಳನ್ನು ನೇಮಿಸಿದೆ. ಆಪರೇಷನ್ನಿಗೆ ಹಣವನ್ನು ಕಟ್ಟಿದ್ದೆ. ಈಗ ನನ್ನ ಮಾತಿನಂತೆ ಆನಂದರಾವ್ ಇದ್ದ ಜಾಗಕ್ಕೆ ಹೋದೆ. ಆನಂದರಾವ್ ನನ್ನನ್ನು ಅನುಭವಿಸಿದರು. ನನ್ನ ಬೆತ್ತಲೆ ಎದೆಯನ್ನು ಸವರುತ್ತಲೇ ಅವರ ಬಹು ದಿನಗಳ ಕನಸನ್ನು ಹೇಳಿಕೊಂಡಿದ್ದರು ತುಂಬಾ, ತುಂಬಾ ಚೆನ್ನಾಗಿರುವ ಸುಂದರಿಯನ್ನು ಅನುಭವಿಸಬೇಕು ಅಂತ ಅವರ ಆಸೆ. ಅದಕ್ಕಾಗಿ ಹೆಂಡತಿಗೂ ಹೇಳದೆ ಹಣ ಉಳಿಸಿದ್ದರು. ನನ್ನನ್ನು ಕಂಡ ಮೇಲೆ ನಾನೇ ಅವರ ಕಲ್ಪನೆಯ ನಾಯಕಿ ಅಂತ ಅನಿಸಿದ್ದರಿಂದ ನನಗಾಗಿ ಪ್ರಯತ್ನಿಸಿದ್ದರು. ಕೇವಲ ಐದು ರಾತ್ರಿಯ ಸುಖಕ್ಕೆ ಒಂದು ಲಕ್ಷ ರೂಪಾಯಿ ಯಾರು ಕೊಡುತ್ತಾರೆ?

ಇನ್ನೊಂದು ಪುಟದಲ್ಲಿ -

ಅಮ್ಮನ ಆಪರೇಷನ್ ಸಕ್ಸಸ್ ಆಗಿದೆ. ಅವಳು ಆರೋಗ್ಯವಾಗಿದ್ದಾಳೆ. ಅಪ್ಪಯ್ಯ ಯಾವಾಗಲೋ ಒಂದು ಸಲ ಬಂದು ನೋಡಿಕೊಂಡು ಹಿಗಿದ್ದರಂತೆ ನನಗೆ ಇದು ಎರಡನೆಯ ರಾತ್ರಿ. ರಸಿಕ ಆನಂದರಾಯರ ರಾತ್ರಿಯಲ್ಲೆ ನನ್ನ

ಬೆತ್ತಲೆ ದೇಹದೊಂದಿಗೆ ಶೃಂಗಾರ ಚೇಷ್ಟೆ ನಡೆಸುತ್ತಾ ತಮ್ಮ ಆಸೆಗಳನ್ನು ತೀರಿಸಿಕೊಳ್ಳುತ್ತಿದ್ದರು.

ಮತ್ತೊಂದು ಪುಟದಲ್ಲಿ -

ಐದನೇ ರಾತ್ರಿ ನನ್ನ ದೇಹ ಒಪ್ಪಿಸುವಾಗ ಅವರಿಗೆ ಹೇಳಿದ್ದೆ. ಇದೇ ಕೊನೆ ಇನ್ನ್ಯಾವತ್ತೂ ನನ್ನನ್ನು ಬಯಸಬಾರದು ಅಂತ ಅವರು ಒಪ್ಪಿಕೊಂಡು ಯವ್ವನ ತುಂಬಿರುವ ನನ್ನ ಮೋಹಕ ತುಂಬಿರುವ ನನ್ನ ದೇಹದ ಮೇಲೆ ಧಾಳಿ ನಡೆಸಿದ್ದರು.

ಇನ್ನೊಂದು ಪುಟದಲ್ಲಿ -

ಅಮ್ಮ ಈಗ ಪೂರ್ಣ ಆರೋಗ್ಯವಂತಳಾಗಿದ್ದಾಳೆ. ನಾನು ಮಾಮೂಲಿನಂತೆ ಆಫೀಸ್ ಕೆಲಸಕ್ಕೆ ಹೋಗುತ್ತಿದ್ದೇನೆ. ಆನಂದರಾವ್ ಸಿಕ್ಕಿದರೂ ಸಹ ನಾನವನ ಕಡೆ ನೋಡುವುದಿಲ್ಲ. ಅವರೂ ಸಹ ನನ್ನನ್ನು ವಿಭಿನ್ನ ರೀತಿಯಲ್ಲಿ ನೋಡುವುದಿಲ್ಲ.

ಮತ್ತೊಂದು ಪುಟದಲ್ಲಿ -

ತುಂಬಾ ದಿನಗಳ ನಂತರ ನನ್ನ ಡೈರಿ ಬರೆಯಬೇಕು ಅನಿಸಿದೆ. ಶ್ರೀಮಂತರ ಮನೆಯ ಯುವಕ ಮುಕುಂದ ಎರಡು ತಿಂಗಳಿನಿಂದ ಮದುವೆಗಾಗಿ ನನ್ನನ್ನು ಪೀಡಿಸುತ್ತಿದ್ದರು. ನಾನು ಅವರನ್ನು ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ ಆ ರಹಸ್ಯ ಹೇಳಿದ್ದೆ. ತಾಯಿಯನ್ನು ಉಳಿಸಿಕೊಳ್ಳಲು ಆನಂದರಾವ್‌ಗೆ ಐದು ರಾತ್ರಿ ಶೀಲ ಒಪ್ಪಿಸಿದ್ದ ವಿಷಯ ತಿಳಿಸಿದ್ದೆ ಈ ವೀಕ್‌ನೆಸ್ ಉಪಯೋಗಿಸಿಕೊಂಡು ಆನಂದರಾವ್ ಮುಂದೆ ಬ್ಲಾಕ್‌ಮೇಲ್ ಮಾಡಬಾರದು. ಗಂಡನಾಗುವ ವ್ಯಕ್ತಿಗೆ ಇದನ್ನು ತಿಳಿಸದೆ ಇದ್ದರೆ ಮುಂದೆ ತೊಂದರೆ ಅನುಭವಿಸಬೇಕಾಗುತ್ತದೆ. ಇದು ತಿಳಿದ ಮೇಲೂ ಮುಕುಂದ ಬದಲಾಗಲಿಲ್ಲ. ನನ್ನ ಬಗ್ಗೆ ಅವನಿಗಿರುವ ಪ್ರೀತಿ ಕಡಿಮೆಯಾಗಲಿಲ್ಲ. ಅವರು ತಾಯಿಯಾಗಿ ಶೀಲ ತ್ಯಾಗ ಮಾಡಿರುವ ನನ್ನನ್ನು ಹೃದಯದಿಂದ ಪ್ರಶಂಸಿಸಿದರು.

ಇನ್ನೊಂದು ಪುಟದಲ್ಲಿ -

ಮುಕುಂದ ನನ್ನನ್ನು ಮದುವೆಯಾಗುವ ಸುದ್ದಿ ಎಲ್ಲರಿಗೂ ತಿಳಿಯಿತು. ಒಂದು ದಿನ ಆನಂದರಾವ್ ನನ್ನ ಹತ್ತಿರ ಬಂದು ಏಕಾಂತದಲ್ಲಿ ಮಾತಾಡ್ದಿದ್ದರು. ನಾನು ಇದನ್ನು ಅವರಿಂದ ನಿರೀಕ್ಷಿಸಿರಲಿಲ್ಲ. ಆನಂದರಾವ್‌ಗೆ ಪುನಃ ನನ್ನ ಮೇಲೆ ಆಸೆಯಾಗಿದೆ. ಹೇಗಿದ್ದರೂ ಮದುವೆಯಾಗುತ್ತಿದ್ದೀಯ. ಆಮೇಲೆ ನಿನ್ನ ತಂಟೆಗೆ ನಾನು ಬರಲಾರೆ. ಒಂದೇ ಒಂದು ಸಲ ನನಗೆ ಸುಖ ಕೊಡು. ಐದು ರಾತ್ರಿ ನನ್ನ ಜೊತೆ ಮಲಗಿರುವ ನೀನು ಆರನೇ ರಾತ್ರಿ ಮಲಗಿದರೂ ಸಹ ಹೊಸದಾಗಿ

ಶೀಲವನ್ನು ಕಳೆದುಕೊಳ್ಳಲಾರೆ ಅಂತ. ಆನಂದರಾವ್‌ಗೆ ಬಾಯಿಗೆ ಬಂದಂತೆ ಬೈದು ಎಚ್ಚರಿಕೆ ನೀಡಿ ಅವರಿಂದ ದೂರವಾಗಿದ್ದೆ.

ಡೈರಿಯ ಬರಹ ಮುಕ್ತಾಯವಾಗಿತ್ತು.

ಪೊನ್ನಪ್ಪ ಉರಿಯುತ್ತಿದ್ದ ಸೀಗರೇಟನ್ನು ಎಸೆದು ಈಗ ಸೊರಗೂರಿನ ಪೋಲೀಸ್ ಅಧಿಕಾರಿಗಳೊಂದಿಗೆ ಆನಂದರಾವ್‌ನ ಮನೆಗೆ ಜೀಪಿನಲ್ಲಿ ಹೊರಟನು.

ಕೊಲೆಗಾರ ಯಾರೆಂದು ಬಹುಪಾಲು ಗೊತ್ತಾಗಿತ್ತು. ಪೋಲೀಸ್ ಜೀಪ್ ಮನೆಯ ಮುಂದೆ ನಿಂತಿತು.

★★★

ದಡದಡನೆ ಒಳಗೆ ಬಂದ ಪೋಲೀಸ್ ಅಧಿಕಾರಿಗಳನ್ನು ಕಂಡು ಸುಮಿತ್ತಮ್ಮ ಗಾಬರಿಯಾದರು.

ಆನಂದರಾವ್‌ನ ಮುಖ ಬಿಳುಚಿಕೊಂಡು ಎಸ್. ಐ. ಪೊನ್ನಪ್ಪನಿಗೆ ಈ ಅನೈತಿಕ ಸಂಬಂಧದದ ಬಗ್ಗೆ ಬಹಿರಂಗಪಡಿಸಲು ಮನಸ್ಸಿರಲಿಲ್ಲ. ಅವನು ಗಂಭೀರವಾಗಿ ''ಮನೋಹರಿ ಡೈರಿ ಬರೆದಿದ್ದಾಳೆ. ಅಂದ ಮೇಲೆ ಅವಳ ಜೀವನದಲ್ಲಿ ನಡೆದಿರುವುದನ್ನೆಲ್ಲಾ ಬರೆದಿರುತ್ತಾಳೆ ಅಂತ ಪ್ರತೆ+ಯೇಲಕವಾಗಿ ನಿಮಗೆ ಹೇಳಬೇಕಾಗಿಲ್ಲ ಅಲ್ಲವೆ?''

ಆನಂದರಾವ್ ಗಾಬರಿಯಿಂದಲೇ ಹೆಂಡತಿಯ ಕಡೆ ನೋಡಿದರು. ಆಕೆ ಪಿಳಿಪಿಳಿ ಕಣ್ಣು ಬಿಡುತ್ತಿದ್ದರು. ಪೊನ್ನಪ್ಪ ಗಡುಸಾಗಿ ''ಇಲ್ಲೇ ಹರಿಕಥೆ ಪ್ರಾರಂಭಿಸಬೇಕೊ ಅಥವ ಮರ್‍ಯಾದೆಯಿಂದ ಬರ್ತೀರೋ?''

ಆನಂದರಾವ್ ತಲೆತಗ್ಗಿಸಿದರು.

ಸುಮಿತ್ರಮ್ಮ ''ಇನ್ಸ್‌ಪೆಕ್ಟರ್...ನನ್ನ ಗಂಡನಿಗೆ ಈ ಕೊಲೆಯ ಬಗ್ಗೆ ಏನೂ ಗೊತ್ತಿಲ್ಲ ಅವರು ಇನ್ನೋಸೆಂಟ್ ಕೊಲೆಯ ಬಗ್ಗೆ ನಾನು ನೆನ್ನೆಯೇ ಹೇಳಿದೆಯಲ್ಲ''

ಪೊನ್ನಪ್ಪ ''ನೂರಕ್ಕೆ ಎಪ್ಪತ್ತು ಮಂದಿ ಮಹಿಳೆಯರು ತಮ್ಮ ಗಂಡನನ್ನು ಇನೊಸೆಂಟ್ ಅಂತ ತಿಳಿದುಕೊಂಡಿರುತ್ತಾರೆ''

ಸುಮಿತ್ರಮ್ಮ ಗಾಬರಿಯಿಂದ ''ಅರೆ...ಅರೆ...ನೀವು ಏನು ಹೇಳ್ತಾ ಇದ್ದೀರ? ನನ್ನ ಗಂಡ...''

ಪೊನ್ನಪ್ಪ ''ಕೊಲೆಗಾರ ಅಂತ ಹೇಳುತ್ತಿದ್ದೇನೆ. ನೀವು ಪ್ರಜ್ಞೆ ತಪ್ಪಿ

ಬಿದ್ದಿದ್ದಾಗ ನಿಮ್ಮ ಗಂಡ ಮನೆಗೆ ಬಂದರು. ಆಗ ಹಾಲ್‌ನಲ್ಲಿ ಮನೋಹರಿ ಇದ್ದಳು ಕೊಲೆ ಮಾಡಲು ಆ ಗ್ಯಾಪ್ ಸಾಕು''

ಸುಮಿತ್ರಮ್ಮ ''ಮನೋಹರಿ ಸತ್ತಿದ್ದು ವಿಷದಿಂದ ಅಲ್ಲವೆ?'' ಆತುರದಿಂದ ಕೇಳಿದರು.

''ನೀವು ಕುಡಿಸಿದ ವಿಷ ಆಕೆಯ ದೇಹ ಸೇರಿದೆ. ಅಂದರೆ ಅದು ರಕ್ತದಲ್ಲಿ ಬೆರೆತು ಪರಿಣಾಮ ಬೀರಲು ಕಡಿಮೆ ಅಂದರೂ ಒಂದು ಗಂಟೆಯ ಕಾಲವಾಕಾಶ ಬೇಕಾಗುತ್ತದೆ ಆದರೆ ಕೊಲೆ ನಡೆದಿರೋದು ರಾತ್ರಿ ಒಂಭತ್ತೂವರೆಯಿಂದ ಹತ್ತು ನಿಮಿಷಗಳ ಅಂತರದಲ್ಲಿ ಕತ್ತು ಹಿಸುಕಿರುವುದರಿಂದ ಪ್ರಾಣ ಹೋಗಿದೆ ಅಂತ ಡಾಕ್ಟರ್ ರಿಪೋರ್ಟ್ ಹೇಳುತ್ತಿದೆ''

ಸುಮಿತ್ರಮ್ಮ ಈಗ ಭಯ, ಸಂದೇಹದಿಂದ ಗಂಡನ ಕಡೆ ನೋಡಿದರು. ನಾನು ಪ್ರಜ್ಞೆತಪ್ಪಿಬಿದ್ದಿದ್ದಾಗ ಇವರು ಮನೆಯೊಳಗೆ ಬಂದಿದ್ದಾರೆ. ಅವಳ ಕತ್ತನ್ನು ಹಿಸುಕಿ ಕೊಂದು ನಂತರ ನನ್ನ ಮುಖಕ್ಕೆ ನೀರನ್ನು ಚಿಮುಕಿಸಿದ್ದಾರೆ. ಅದಕ್ಕೆ ಹೆಣ ಸಾಗಿಸುವಾಗ ಮನೋಹರಿಯ ಸಾವಿನ ಬಗ್ಗೆ ಒಂದೇ ಒಂದು ಪ್ರಶ್ನೆ ಸಹ ಕೇಳಿರಲಿಲ್ಲ.

ಆದರೆ ಇವರ್‍ಯಾಕೆ ಕೊಲೆ ಮಾಡಿದರು? ಮುಗ್ಧನಂತೆ ಕಾಣುವ ಇವರು ಕೊಲೆ ಮಾಡಿದ್ದಾರೆ ಅಂದರೆ ನಂಬಲು ಸಾಧ್ಯವೇ? ಆದರೆ ನಂಬಲೇಬೇಕಾದ ಪರಿಸ್ಥಿತಿ ಬಂದಿದೆ.

ಆನಂದರಾವ್‌ನನ್ನು ಈಗ ಜೀಪಿನಲ್ಲಿ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಲಾಯಿತು.

ಆನಂದರಾವ್‌ನ ತಲೆಯ ಕೂದಲನ್ನು ಕತ್ತರಿಸಿ ಪರಿಶೀಲನೆಗೆ ಕಳುಹಿಸಲಾಯಿತು.

ಹೆಣದ ಮುಷ್ಟಿಯಲ್ಲಿ ಗಂಡಸಿನ ತಲೆಯ ಕೂದಲುಗಳು ಸಿಕ್ಕಿದ್ದವು!

ಮನೋಹರಿಯನ್ನು ಕೊಲೆಗಾರ ಕತ್ತು ಹಿಸುಕಿ ಸಾಯಿಸುವಾಗ ಅವಳು ಕೊಲೆಗಾರನನ್ನು ಪರಚಿದ್ದಾಳೆ. ತಲೆಯನ್ನು ಹಿಡಿದು ಎಳೆದಿದ್ದಾಳೆ.

ಆಗ ತಲೆಯ ಕೂದಲುಗಳು ಮುಷ್ಟೀಯಲ್ಲಿ ಉಳಿದುಕೊಂಡುಬಿಟ್ಟಿತ್ತು!

ಆನಂದರಾವ್‌ನನ್ನು ಕರೆದುಕೊಂಡು ಹೋಗುವಾಗ ಮುಕುಂದ ತನ್ನ ತಂದೆ ಕೋದಂಡರಾವ್ ಜೊತೆ ಬಂದಿದ್ದನು. ಈ ಕೊಲೆಯ ಕೇಸು ಇನ್ನು ಎಲ್ಲಿಗೆ ಹೋಗಿ ಮುಟ್ಟುತ್ತದೋ ಎಂದು ಭಯಗೊಂಡರು.

ಆನಂದರಾವ್‌ನ ಮುಖ ಬಿಳುಚಿಕೊಂಡಿತ್ತು. ವಿಪರೀತ ಭಯ, ಗಾಬರಿ ಉಂಟಾಗಿತ್ತು!

★★★

ಅದು ಪೋಲೀಸ್ ಲಾಕಪ್!

ಸುತ್ತಲೂ ಪೋಲೀಸ್ ಅಧಿಕಾರಿಗಳು ಸೇರಿದ್ದಾರೆ. ಈಗ ಎಸ್. ಐ. ಪೊನ್ನಪ್ಪ ''ಮಿಸ್ಟರ್ ಆನಂದರಾವ್...ನಿಮಗೂ ಮನೋಹರಿಗೂ ಅನೈತಿಕ ಸಂಬಂಧ ಇದ್ದುದ್ದು ನಿಜ ಅಂತ ಒಪ್ಪಿಕೊಳ್ಳುತ್ತೀರ?''

ಆನಂದರಾವ್ ತಲೆಯಾಡಿಸಿದರು.

''ಕೇವಲ ಐದು ರಾತ್ರಿಗಳು ಮಾತ್ರ ನಿಮ್ಮ ಜೊತೆ ಸೇರಲು ಮನೋಹರಿ ಒಪ್ಪಿಕೊಂಡಿದ್ದಳು ಆದರೆ ನೀವು ಆರನೇ ರಾತ್ರಿ ಸಹ ಬಯಸಿದಿರಿ''

ಆನಂದರಾವ್ ಉತ್ತರಿಸಲಿಲ್ಲ.

''ಮನೋಹರಿ ನಿಮ್ಮ ಬೇಡಿಕೆ ನಿರಾಕರಿಸಿದಳು. ಅವಳಿಗೆ ಮದುವೆ ಫಿಕ್ಸ್ ಆಗಿತ್ತು. ಅವಳು ನೆನ್ನೆ ರಾತ್ರಿ ನಿಮ್ಮ ಮನೆಗೆ ಬಂದಳು''

ಪೊನ್ನಪ್ಪ ಗಡುಸಾಗಿ ''ಸುಳ್ಳು ಹೇಳಿದರೂ ಸಹ ನಂಬುವಂತೆ ಹೇಳಬೇಕು ಮನೋಹರಿಯ ಹತ್ತಿರ ಬಂದು ಅವಳನ್ನು ಅನುಭವಿಸಲು ಹತ್ತಿರ ಹೋದ್ರಿ. ಅವಳು ಇದನ್ನು ಪ್ರತಿಭಟಿಸಿದಳು. ಕೂಗಾಡಿ ನಿಮ್ಮ ಹೆಂಡತಿಗೆ ಕಳಿಸಲು ಪ್ರಯತ್ನಿಸಿದ್ದಳು. ನೀವು ಭಯ, ಗಾಬರಿಯಿಂದ ಅವಳ ಕತ್ತನ್ನು ಹಿಸುಕಿ ಕೊಲೆ ಮಾಡಿದ್ದೀರ. ಯಾಕೆ ಅಂದರೆ ಮನೋಹರಿ ಆವೇಶದಿಂದ ಅನೈತಿಕ ಸಂಬಂಧದ ಬಗ್ಗೆ ನಿಮ್ಮ ಹೆಂಡತಿಗೆ ಹೇಳಲು ಹೊರಟಿದ್ದಳು''

ಆನಂದರಾವ್ ಭಯಾತುರದಿಂದ ''ಸಾರ್...ಸಾರ್...ನಾನು ಸತ್ಯ ಹೇಳುತ್ತಿದ್ದೇನೆ ನಾನು ಈ ಕೊಲೆ ಮಾಡಿಲ್ಲ ನನ್ನ ಮಾತನ್ನು ನಂಬಿ''

ಪೊನ್ನಪ್ಪ ಕೋಪದಿಂದ ''ನಿಮ್ಮ ಮನೆಯಲ್ಲಿದ್ದ ಮನೋಹರಿಯನ್ನು ಅನುಭವಿಸಲು ಪ್ರಯತ್ನಿಸಲಿಲ್ಲವೆ?'' ಎಂದು ಗಡುಸಾಗಿ ಕೇಳಿದನು.

ಆನಂದರಾವ್ ''ಸಾರ್...ನಾನು ಮನೆಗೆ ಬಂದಾಗ ಹಾಲ್‌ನಲ್ಲಿ ಮನೋಹರಿ ಮಾತ್ರ ಇದ್ದಳು. ಒಳಗೆ ಬಂದು ನೋಡಿದೆ. ನನ್ನ ಹೆಂಡತಿ ಪ್ರಜ್ಞೆ ಇಲ್ಲದೆ ಬಿದ್ದಿದ್ದಳು. ಈ ಅವಕಾಶ ಬಿಡಬಾರದು ಅಂತ ನಾನು ಮನೋಹರಿಯನ್ನು ಅನುಭವಿಸುವ ಆಸೆಯಿಂದ ಹತ್ತಿರ ಬಂದೆ ಆದರೆ...ಆದರೆ...''

ಪೊನ್ನಪ್ಪ ಗಡುಸಾಗಿ ''ಮನೋಹರಿ ಅದಕ್ಕೆ ಅವಕಾಶ ಕೊಡಲಿಲ್ಲ. ಅವಳನ್ನು ಕತ್ತು ಹಿಸುಕಿ ಸಾಯಿಸಿದ್ರಿ ನಿಜ ತಾನೆ?''

ಆನಂದರಾವ್ ಆತುರದಿಂದ ''ಸುಳ್ಳು ಸಾರ್. ನಾನು ಹತ್ತಿರ ಹೋಗೇದ್ದಾಗ ಮನೋಹರಿ ಬದುಕಿಯೇ ಇರಲಿಲ್ಲ''

''ವಾಟ್...!''

''ಮುದುರಿಕೊಂಡು ಸೋಫಾಕ್ಕೆ ಒರಗಿಕೊಂಡಿದ್ದಳು ನಾನು ಹತ್ತಿರ ಹೋಗಿ ಟಚ್‌ಮಾಡಿದಾಗ ಅವಳ ದೇಹ ಸೋಫಾದಿಂದ ನೆಲಕ್ಕೆ ಉರುಳಿತು''

ಆನಂದರಾವ್ ಹೇಳುತ್ತಿದ್ದರೆ ಅಲ್ಲಿದ್ದವರೆಲ್ಲಾ ಬೆರಗಾಗಿ ಕೇಳುತ್ತಿದ್ದಾರೆ.

ಲ್ಯಾಬ್ ರಿಪೋರ್ಟ್ ಬಂದಿತು!

ಅವರ ಪ್ರಕಾರ ಹೆಣದ ಮುಷ್ಟಿಯಲ್ಲಿ ಸಿಕ್ಕಿರುವ ತಲೆಯ ಕೂದಲುಗಳು ಆನಂದರಾವ್‌ನದು ಅಲ್ಲ ಎಂದು ಗೊತ್ತಾಗಿತ್ತು!

★★★

ಈಗ ಉಳಿದಿರೋ ವ್ಯಕ್ತಿಗಳು ಇಬ್ಬರು.

ಮುಕುಂದ...ಕೋದಂಡರಾವ್!

ಮುಕುಂದನಿಗೆ ಕೊಲೆ ಮಾಡುವ ಉದ್ದೇಶ ಅಥವಾ ಅವಕಾಶ ಎರಡೂ ಸಹ ಇರಲಿಲ್ಲ.

ಮುಕುಂದ ಇರೋದು ಬೆಂಗಳೂರಿನಲ್ಲಿ ಕೊಲೆ ನಡೆದಿರೋದು ಸೊರಗೂರಿನಲ್ಲಿ.

ಮುಕುಂದ ಇವಳನ್ನು ಪ್ರೀತಿಸಿ ಎಲ್ಲರ ವಿರೋಧದ ನಡುವೆ ಮನೋಹರಿಯನ್ನು ಮದುವೆಯಾಗಲು ತೀವ್ರ ಪ್ರಯತ್ನ ನಡೆಸಿ ಯಶಸ್ವಿಯಾಗಿದ್ದನು.

ಮುಕುಂದನಿಗೆ ಮೃತಳಾಗಿರುವ ಮನೋಹರಿ ತಾನು ತನ್ನ ತಾಯಿಯ ಪ್ರಾಣ ಕಾಪಾಡಲು ಶೀಲ ಕಳೆದುಕೊಂಡಿರುವ ಸಂಗತಿಯನ್ನು ಮೊದಲೇ ತಿಳಿಸಿದ್ದಳು. ಅಂದಮೇಲೆ ಅವಳ ಬಗ್ಗೆ ಪ್ರೀತಿ, ಗೌರವ ಜಾಸ್ತಿಯಾಗಿತ್ತು. ಮುಕುಂದ ಈ ಕೇಸಿನಲ್ಲಿ ಬರಲಾರ ಎಂದು ಪೊನ್ನಪ್ಪನಿಗೆ ಅನಿಸಿತು.

ಈಗ ಉಳಿದಿರೋದು ಕೋದಂಡರಾವ್!

ಕೋದಂಡರಾವ್‌ಗೆ ತಮ್ಮ ತಂಗಿಯ ಮಗಳು ಮೊಳಿಕಳನ್ನೇ ಮಗನಿಗೆ ತಂದುಕೊಳ್ಳಬೇಕೆಂಬ ಆಸೆ ಇತ್ತು. ಮುಕುಂದ ಈ ಬಡವರ ಮನೆಯ ಹೆಣ್ಣನ್ನು ಪ್ರೀತಿಸಿದ. ಅವಳನ್ನೇ ಮದುವೆಯಾಗಲು ಹಟ ಹಿಡಿದಿದ್ದ. ಅರೆ ಮನಸ್ಸಿನಿಂದಲೇ ಒಪ್ಪಿಕೊಂಡಿದ್ದಾರೆ.

ಮನೋಹರಿ ಗೆಳೆಯ ಆನಂದರಾವ್ ಮನೆಗೆ ಹಿಗಿದ್ದನ್ನು ಕಂಡು

ಕೋದಂಡರಾವ್ ಅಲ್ಲಿಗೆ ಹೋಗಿದ್ದಾರೆ. ಯಾರೂ ಇಲ್ಲದಿರುವುದನ್ನು ಕಂಡು ಮನೋಹರಿಯ ಕತ್ತನ್ನು ಹಿಸುಕಿ ಕೊಲೆ ಮಾಡಿದ್ದಾರೆ!

ಇದು ಪೊನ್ನಪ್ಪನ ತರ್ಕ!

ಪೊನ್ನಪ್ಪ ರಹಸ್ಯವಾಗಿ ಪರಿಶೋಧನೆ ಮುಗಿಸಿ ತಲೆಯ ಕೂದಲುಗಳನ್ನು ಪರಿಶೀಲನೆಗೆಂದು ಲ್ಯಾಬ್‌ಗೆ ಕಳುಹಿಸಿದನು.

ಲ್ಯಾಬ್ ರಿಪೋರ್ಟ್ ಬಂದಿತು!

ಬೆಚ್ಚಿಬೀಳುವಂತಹ ವರದಿ!

ಕೋದಂಡರಾವ್‌ನ ಬೋಳುತಲೆಯಲ್ಲಿ ಉಳಿದುಕೊಂಡಿದ್ದೇ ನಾಲ್ಕು ಕೂದಲುಗಳು!

ಹೆಣದ ಮುಷ್ಟಿಯಲ್ಲಿ ಇದ್ದ ತಲೆಯ ಕೂದಲುಗಳೊಂದಿಗೆ ಹೊಂದಾಣಿಕೆ ಆಗುತ್ತಿರಲಿಲ್ಲ!

★★★

ಎಸ್. ಐ. ಪೊನ್ನಪ್ಪ ಸೊರಗೂರಿಗೆ ಹಿಂತಿರುಗಿ ತನ್ನ ರಸಹ್ಯ ಕಾರ್ಯಾಚರಣೆ ಮುಗಿಸಿದನು

ಕೊಲೆಯ ಕೇಸಿನೊಂದಿಗೆ ಮತ್ತೊಂದು ನಿಗೂಢಮಯ ಸಂಗತಿ ಬಯಲಾಗಿತ್ತು!

ಮಾದಕ ವಸ್ತುಗಳ ದಂಧೆ!

ಕೊಲೆಗಾರನ ಬಗ್ಗೆ ರಹಸ್ಯ ತನಿಖೆ ನಡೆಸುತ್ತಿದ್ದಾಗ ಅವನ ಮನೆಯಲ್ಲಿ ರಹಸ್ಯವಾಗಿ ಇರಿಸಿದ್ದ ಬ್ರೌನ್‌ಶುಗರ್ ಸಿಕ್ಕಿತ್ತು!

ಕೊಲೆಗಾರನನ್ನು ಬಂಧಿಸಿ ಸೊರಗೂರಿನಿಂದ ಬೆಂಗಳೂರಿಗೆ ಕರೆತರಲಾಯಿತು.

ಕೊಲೆ ನಡೆದದ್ದು ಬೆಂಗಳೂರಿನಲ್ಲಿ!

ಕೊಲೆಗಾರ ಸೊರಗೂರಿನವನು!

ಕೊಲೆಗಾರನನ್ನು ಕಂಡು ಎಲ್ಲರೂ ಭಯಾಶ್ಚರ್ಯದಿಂದ ತತ್ತರಿಸಿಹೋಗಿದ್ದರು.

ಕೊಲೆಯ ಪ್ರಯತ್ನಿಸಿದ ಆರೋಪದ ಮೇಲೆ ಸುಮಿತ್ರಮ್ಮನ ಜೊತೆ ಜೈಲು ಸೇರಿದ್ದ ಮೋನಿಕ ಸಹ ಬೆಕ್ಕಸ ಬೆರಗಾಗಿದ್ದಳು.

ಅವಳು ಯಾರನ್ನು ಮದುವೆಯಾಗಿರಬೇಕು ಅಂತ ಹಂಬಲಿಸಿದ್ದಳೋ ಅವನೇ ಕೊಲೆಗಾರ!

ಮುಕಂದು ಕೊಲೆಗಾರ!

ಕೋದಂಡರಾವ್ ಸ್ಟನ್ ಆಗಿ ನಿಂತಿದ್ದರು!

★★★

ಕೋದಂಡರಾವ್‌ನ ತಲೆಯ ಕೂದಲುಗಳು ಹೆಣದ ಮುಷ್ಟಿಯಲ್ಲಿದ್ದ ಕೂದಲುಗಳೊಂದಿಗೆ ಹೊಂದಾಣಿಯಾಗಲಿಲ್ಲ. ಹೇಗಾದರೂ ಆಗಲಿ ಅಂತ ಮುಕುಂದನ ತಲೆಯ ಕೂದಲನ್ನೂ ಸಹ ಪೋಲೀಸ್ ಅಧಿಕಾರಿ ಪರಿಶೀಲನೆಗೆ ಕಳುಹಿಸಿದ್ದನು ಹೊಂದಾಣಿಕೆಯಾಗಿತ್ತು!

ಈ ರಿಪೋರ್ಟ್ ಬಂದ ಕೂಡಲೇ ಸೆರಗೂರಿಗೆ ಹೋಗಿ ರಹಸ್ಯವಾಗಿ ತನಿಖೆ ನಡೆಸಿದನು.

ಆಗ ಮುಕುಂದನ ಮನೆಯಲ್ಲಿದ್ದ ಮಾದಕ ವಸ್ತು ಬ್ರೌನ್‌ಶುಗರ್ ಸಿಕ್ಕಿತ್ತು!

ಮುಕುಂದ ಡ್ರಗ್ಸ್ ಡೀಲರ್.

ಸೊರಗೂರಿನಲ್ಲಿದ್ದುಕೊಂಡು ಈ ದಂಧೆಯಿಂದ ಕೈತುಂಬಾ ಹಣ ಸಂಪಾದಿಸುತ್ತಿದ್ದನು. ಇದು ಸ್ವತಃ ಅವನ ತಂದೆಗೇ ಗೊತ್ತಿರಲಿಲ್ಲ.

ಪೊನ್ನಪ್ಪ ಗಡುಸಾಗಿ ''ಮುಕುಂದ...ನೀನು ರಾತ್ರಿ ಏಳು ಗಂಟೆಯಿಂದ ಹನ್ನೆರಡು ತನಕ ಸೊರಗೂರಿನಲ್ಲಿ ಇರಲಿಲ್ಲ. ಈ ಅವಧಿಯಲ್ಲಿ ನೀನು ಬೆಂಗಳೂರಿನಲ್ಲಿ ಇದ್ದೇ ಅನ್ನೋ ಅಂಶ ಸಾಕ್ಷಿ, ಆಧಾರಗಳಿಂದ ರುಜುವಾತಾಗಿದೆ''

ಮುಕುಂದ ಉತ್ತರಿಸಲಿಲ್ಲ.

ಪೊನ್ನಪ್ಪ ಕೋಪದಿಂದ ''ಹೆಣದ ಮುಷ್ಟಿಯಲ್ಲಿದ್ದ ತಲೆಯ ಕೂದಲುಗಳು ನಿನ್ನವೇ ಅಂತ ಪ್ರೂವ್ ಆಗಿದೆ. ನೀನು ತಪ್ಪನ್ನು ಒಪ್ಪಿಕೊಳ್ಳಲೇಬೇಕು ಇಲ್ಲದಿದ್ದರೆ ಬಾಯಿ ಬಿಡಿಸಲು ನಮಗೆ ಗೊತ್ತಿದೆ''

ಮುಕುಂದ ಭಯದಿಂದಲೇ ''ನಿಜ...ಈ ಕೊಲೆ ಮಾಡಿರೋದು ನಾನೆ''

''ಯಾವ ರೀತಿ ಕೊಲೆ ಮಾಡಿದೆ?''

ಮುಕುಂದ ''ಮುದುಕನಂತೆ ವೇಷ ಬದಲಿಸಿಕೊಂಡು ಬೆಂಗಳೂರಿಗೆ ಬಂದು ಮನೋಹರಿ ಎಲ್ಲಿರುತಾಳೆ. ಅಂತ ಅವಳ ತಂದೆ - ತಾಯಿಯಿಂದ

ತಿಳಿದುಕೊಂಡೆ. ರಾತ್ರಿ ಒಂಭತ್ತೂವರೆ ಸಮಯದಲ್ಲಿ ಮನೋಹರಿ ಆನಂದರಾವ್ ಮನೆಯಲ್ಲಿದ್ದಳು. ಅಲ್ಲಿ ಬೇರೆ ಯಾರೂ ಕಂಡುಬರಲಿಲ್ಲ. ಅವಳ ಕತ್ತನ್ನು ಹಿಸುಕಿ ಕೊಲೆ ಮಾಡಿ ಅಲ್ಲಿಂದ ಕೂಡಲೇ ಬೆಂಗಳೂರಿಗೆ ಬಂದೆ''

ಪೊನ್ನಪ್ಪ ''ನೀವ್ಯಾಕೆ ಅವಳನ್ನು ಕೊಂದೆ? ಅವಳು ಆನಂದರಾವ್ ಜೊತೆ ಅನೈತಿಕ ಸಂಬಂಧ ಹೊಂದಿದ್ದಳು ಅನ್ನೋ ಕಾರಣದಿಂದಲೇ?''

ಮುಕುಂದ ಮೆಲ್ಲಗೆ ''ಅಲ್ಲ ಅದನ್ನು ಅವಳು ಮನೆಗೆ ಮೊದಲೇ ತಿಳಿಸಿದ್ದಳು. ಮನೋಹರಿ ದೇಹ ಒಪ್ಪಿಸಿದ್ದು ತನ್ನ ತಾಯಿಯ ಪ್ರಾಣ ಉಳಿಸಲು. ಶೀಲ ಅಂದರೆಒಳ್ಳೆಯ ನಡತೆ ಗುಣ ಅಂತ. ಅದರ ಪ್ರಕಾರ ಇವತ್ತಿಗೂ ಮನೋಹರಿ ಶೀಲ ಕಳೆದುಕೊಂಡಿಲ್ಲ''

ಪೊನ್ನಪ್ಪ ಕೋಪದಿಂದ '4ಅವಳ ಬಗ್ಗೆ ಇಷ್ಟೆಲ್ಲಾ ಹೇಳುವ ನೀನು ಅವಳನ್ನೇ ಯಾಕೆ ಕೊಂದೆ?''

''ಅದಕ್ಕೆ ಕಾರಣ ಮನೋಹರಿಯೇ...!''

''ಏನಂದೆ?''

ಮುಕುಂದ ''ಯಾರಿಗೂ ಗೊತ್ತಿರದೆ ಇದ್ದ ನನ್ನ ಮಾದಕ ವಸ್ತುಗಳ ದಂಧೆಯ ರಹಸ್ಯ ತೀರಾ ಆಕಸ್ಮಿಕ ರೀತಿಯಲ್ಲಿ ಮನೋಹರಿಗೆ ಗೊತ್ತಾಗಿಹೋಯಿತು''

ಎಲ್ಲರೂ ಬೆರಗಾಗಿ ಕೇಳುತ್ತಿದ್ದಾರೆ.

ಮುಕುಂದ ಮುಂದುವರೆಸುತ್ತಾ ''ನಾನು ಡ್ರಗ್ಸ್ ಡೀಲರ್ ಜತೆ ಇರುವ ರಹಸ್ಯ ಮೊನ್ನೆ ರಾತ್ರಿ ರಸ್ತೆಯಲ್ಲಿ ಮನೋಹರಿಗೆ ಗೊತ್ತಾಗಿಹೋಯಿತು. ನನಗೆ ಭಯವಾಯಿತು. ಯಾಕೆ ಅಂದರೆ ಮನೋಹರಿ ಇದರ ಬಗ್ಗೆ ಪೋಲೀಸರಿಗೆ ತಿಳಿಸುವುದಾಗಿ ಹಟ ಹಿಡಿದಳು. ಮಾದಕ ವಸ್ತುಗಳಿಂದ ಇಡೀ ಯುವ ಸಮೂಹದ ಭವಿಷ್ಯ ಹಾಳಾಗುತ್ತಿದೆ. ನನ್ನನ್ನು ಗ್ಯಾಂಗ್ ಸಮೇತ ಪೋಲೀಸರಿಗೆ ಹಿಡಿದುಕೊಡುತ್ತೇನೆ ಅಂತ ಫೋನ್ ಮಾಡಿದ್ದಳು. ನಾನು ಎಷ್ಟೆ ಹೇಳಿದರೂ ಸಹ ಕೇಳಲಿಲ್ಲ. ಲಕ್ಷಾಂತರ ರೂಪಾಯಿ ಸಂಪಾದನೆ ಹಾಳಾಗುತ್ತದೆ. ಅಲ್ಲದೆ ನನ್ನೊಬ್ಬನ ಕಾರಣದಿಂದಾಗಿ ನನ್ನ ಜೊತೆಗಾರರೆಲ್ಲಾ ಜೈಲನ್ನು ಸೇರಬೇಕಾಗುತ್ತದೆ. ಈ ಕಾರಣದಿಂದಲೇ ನಾನು ಮನೋಹರಿಯನ್ನು ಕೊಲೆ ಮಾಡಲು ನಿರ್ಧರಿಸಿ ಸೊರಗೂರಿನಿಂದ ಬೆಂಗಳೂರಿಗೆ ಬಂದೆ''

ಅವನು ಹೇಳುತ್ತಿದ್ದರೆ ಕೋದಂಡರಾವ್, ಮೋನಿಕ ಅಸಹ್ಯ, ತಿರಸ್ಕಾರದಿಂದ ಅವನನ್ನು ನೋಡುತ್ತಿದ್ದರು. ಡ್ರಗ್ಸ್ ಮಾರಿ ಹಣ ಸಂಪಾದಿಸುತ್ತಿರುವ ವ್ಯಕ್ತಿ ಮುಕುಂದ ಅಂತ ಯಾರೂ ಅಂದುಕೊಂಡಿರಲಿಲ್ಲ.


ಮುಕುಂದನಿಗೆ ಶಿಕ್ಷೆ ಆಯಿತು.

ಕೊಲೆಯ ಪ್ರಯತ್ನ ನಡೆಸಿದ್ದಕ್ಕಾಗಿ ಮೋನಿಕ ಮತ್ತು ಸುಮಿತ್ರಮ್ಮ ಸಹ ಜೈಲು ಸೇರಿದ್ದರು.

ಕಾದಂಬರಿ ಪ್ರಾರಂಭವಾಗುವ ಪೀಠಿಕೆಯಲ್ಲಿ ಮುಕುಂದನ ಮಾದಕ ವಸ್ತುಗಳ ದಂಧೆಯ ಬಗ್ಗೆ ಅದನ್ನು ಮನೋಹರಿ ಆಕಸ್ಮಿಕವಾಗಿ ಕಂಡ ಬಗ್ಗೆ ವಿವರಣೆ ನೀಡಲಾಗಿದೆ.

ಒಂದು ಘಟನೆ ಮನೋಹರಿಯ ಅದೃಷ್ಟವನ್ನೇ ಅಪಹರಿಸಿ ಅವಳ ಬದುಕನ್ನೇ ಬಲಿ ತೆಗೆದುಕೊಂಡಿತು!

ಇದು ಆಕಸ್ಮಿ!



## ಶ್ರೀ ಕೌಂಡಿನ್ಯ ರವರ ಕೃತಿಗಳು

ಉನ್ಮಾದ ಲಹರಿ

ದಿಗ್ಬಂಧನ

ಕಾವ್ಯಕನ್ನಿಕೆ

ಮಾನ್ಯ ವ.ಶದಾರರೇ

ವ್ಯೂಹ

ಹೃದಯದ ಹೆಣ್ಣು

ಸಂಗಾತಿ ನೀನಾಗು ಬಾ

ಆವರ್ತನ

ನಿರೀಕ್ಷೆ

ಪಂಜರದ ಪಕ್ಷಿಗಳು

ಸಾವಿನ ಕರೆ

ಅಂತರ

ಅನುರಾಗ ಸ್ಪಂದನ

ಗರುಡ ವ್ಯೂಹ

ಶುಭ ಘಳಿಗೆ

ಹೊಂಗಿರಣ ಹರಡಿತು

ತಿರುಗು ಬಾಣ

ನೀ ಮುಡಿದ ಮಲ್ಲಿಗೆ

ಒಂದು ಎರಡೂ ಕ್ಷಣಗಳು ಮೂ

ರತ್ನಚೂಡ

ಮಿಸ್ ಇಂಡಿಯ

ಚೇಧ